# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨sÁUÀ 4<br>Part – IV | ಬೆಂಗಳೂರು, ಮಂಗಳವಾರ, 20, ಮೇ, 2025(ವೈಶಾಖ, 30, ಶಕವರ್ಷ, 1947)<br>BENGALURU, TUESDAY, 20, MAY, 2025(VAISHAKHA, 30, SHAKAVARSHA, 1947) | ನಂ. 296<br>No. 296 |


## ಭಾಷಾಂತರ ನಿರ್ದೇಶನಾಲಯ

### ಅಧಿಸೂಚನೆ

ಸಂಖ್ಯೆ: ಭಾನಿ 10/ಆಮುಪ್ರಶಾ/ಇ-ಗೆಜೆಟ್/2025 ಬೆಂಗಳೂರು, ದಿನಾಂಕ:15-05-2025

ಭಾರತ ಸರ್ಕಾರದ Official Language Wing, Ministry of Law and Justice, Government of India ರವರ ಪತ್ರ ಸಂಖ್ಯೆ:F.No.10(iii)(IX)/Auth./Kannada/79-OL/33, ದಿನಾಂಕ:08-04-2025 ರ ಪತ್ರದಲ್ಲಿ ಸೂಚಿಸಿದಂತೆ The Authoritative Text (Central Laws) Act, 1973 (Central Act 50 of 1973)ರ ಪ್ರಕರಣ 2(ಎ)ರ ಅಡಿಯಲ್ಲಿ ದಿನಾಂಕ:26.03.2025 ರಂದು ಮಾನ್ಯ ರಾಷ್ಟ್ರಪತಿಯವರಿಂದ ಅನುಮೋದನೆಗೊಂಡ, ಕೇಂದ್ರ ಅಧಿನಿಯಮವಾದ **ಭಾರತೀಯ ನ್ಯಾಯ ಸಂಹಿತೆ, 2023 (2023ರ ಸಂಖ್ಯೆ 45)**ರ ಕನ್ನಡ ಆವೃತ್ತಿಯನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಲು ಆದೇಶಿಸಲಾಗಿದೆ,-

भारत का राजपत्र
The Gazette of India
ಭಾರತ ರಾಜಪತ್ರ

(Extraordinary)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, बुधवार, 26 मार्च, 2025 | फाल्गुन 27, 1946 (शक) | खंड.58 |
| No.1, New Delhi, Wednesday, March 26, 2025 | Phalguna 27, 1946 (saka) | Vol. 58 |
| ನಂ.1, ನವದೆಹಲಿ, ಬುಧವಾರ, ಮಾರ್ಚ್ 26, 2025 | ಫಾಲ್ಗುಣ 27, 1946 (ಶಕ) | ಸಂಪುಟ.58 |


**Ministry of Law and Justice**
(Legislative Department)
New Delhi, 26th March, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 26ನೇ ಮಾರ್ಚ್, 2025**

The Translation in Kannada of **THE BHARATIYA NYAYA SANHITA, 2023 (NO.45 OF 2023)** -is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

**ಭಾರತೀಯ ನ್ಯಾಯ ಸಂಹಿತೆ, 2023 (2023ರ ಸಂಖ್ಯೆ 45)-** ಇದರ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತೀಯ ನ್ಯಾಯ ಸಂಹಿತೆ, 2023

## (2023ರ ಸಂಖ್ಯೆ 45)

*[25ನೇ ಡಿಸೆಂಬರ್, 2023.]*

ಅಪರಾಧಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಭಾರತೀಯ ನ್ಯಾಯ ಸಂಹಿತೆ, 2023 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಸಂಹಿತೆಯ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(3) ಈ ಸಂಹಿತೆಯ ಉಪಬಂಧಗಳಿಗೆ ತದ್ವಿರುದ್ಧವಾದ ಯಾವುದೇ ಕೃತ್ಯದ ಅಥವಾ ಲೋಪದ ಬಗ್ಗೆ ಭಾರತದಲ್ಲಿ ತಪ್ಪಿತಸ್ಥನಾಗುವ ಪ್ರತಿಯೊಬ್ಬ ವ್ಯಕ್ತಿಯು ಈ ಸಂಹಿತೆಯ ಮೇರೆಗೆ ದಂಡನೆಗೆ ಗುರಿಯಾಗತಕ್ಕದ್ದು, ಅನ್ಯಥಾ ಅಲ್ಲ.

(4) ಭಾರತದ ಹೊರಗೆ ಮಾಡಿದ ಯಾವುದೇ ಅಪರಾಧಕ್ಕಾಗಿ, ಯಾವುದೇ ಭಾರತೀಯ ಕಾನೂನಿನ ಮೇರೆಗೆ ವಿಚಾರಣೆಗೆ ಗುರಿಯಾಗುವ ಯಾರೇ ವ್ಯಕ್ತಿಯ ಬಗ್ಗೆ, ಭಾರತದ ಹೊರಗೆ ಮಾಡಿದ ಆ ಯಾವುದೇ ಕೃತ್ಯವನ್ನು ಭಾರತದಲ್ಲಿ ಮಾಡಿದ್ದಿದ್ದರೆ ಹೇಗೆ ಈ ಸಂಹಿತೆಯ ಉಪಬಂಧಗಳ ಮೇರೆಗೆ ವ್ಯವಹರಿಸಲಾಗುತ್ತಿತ್ತೋ, ಹಾಗೆಯೇ ಭಾರತದ ಹೊರಗೆ ಮಾಡಿದ ಕೃತ್ಯದ ಬಗ್ಗೆಯೂ ಈ ಸಂಹಿತೆಯ ಉಪಬಂಧಗಳ ಮೇರೆಗೆ ವ್ಯವಹರಿಸತಕ್ಕದ್ದು.

(5) ಈ ಸಂಹಿತೆಯ ಉಪಬಂಧಗಳು,-

(ಎ) ಭಾರತದ ಹೊರಗೆ ಮತ್ತು ಆಚೆಗೆ ಇರುವ ಯಾವುದೇ ಸ್ಥಳದಲ್ಲಿ ಭಾರತದ ಯಾರೇ ನಾಗರಿಕನು;

(ಬಿ) ಭಾರತದಲ್ಲಿ ನೋಂದಣಿಯಾದ ಯಾವುದೇ ಹಡಗಿನಲ್ಲಿ ಅಥವಾ ವಿಮಾನದಲ್ಲಿ, ಅದು ಎಲ್ಲಿಯೇ ಇದ್ದರೂ ಅದರಲ್ಲಿರುವ, ಯಾರೇ ವ್ಯಕ್ತಿಯು;

(ಸಿ) ಭಾರತದ ಹೊರಗೆ ಮತ್ತು ಆಚೆಗೆ ಇರುವ ಯಾವುದೇ ಸ್ಥಳದಲ್ಲಿ ಇರುವ ಯಾರೇ ವ್ಯಕ್ತಿಯು ಭಾರತದಲ್ಲಿ ಇರುವ ಕಂಪ್ಯೂಟರ್ ಸಂಪನ್ಮೂಲದ ಮೇಲೆ ಗುರಿಯಿಟ್ಟುಕೊಂಡು

- ಮಾಡಿದ ಯಾವುದೇ ಅಪರಾಧಕ್ಕೂ ಅನ್ವಯವಾಗುತ್ತವೆ.

*ವಿವರಣೆ.-* ಈ ಪ್ರಕರಣದಲ್ಲಿ, ïಅಪರಾಧî ಎಂಬ ಪದವು, ಯಾವ ಕೃತ್ಯವನ್ನು ಭಾರತದ ಒಳಗೆ ಮಾಡಿದ್ದಿದ್ದರೆ ಈ ಸಂಹಿತೆಯ ಮೇರೆಗೆ ಅದು ದಂಡನೀಯವಾಗುತ್ತಿತ್ತೋ ಭಾರತದ ಹೊರಗೆ ಮಾಡಿದ ಅಂಥ ಪ್ರತಿಯೊಂದು ಕೃತ್ಯವನ್ನೂ ಒಳಗೊಳ್ಳುತ್ತದೆ;

*ದೃಷ್ಟಾಂತ*

ಭಾರತದ ನಾಗರಿಕನಾಗಿರುವ ಓನು, ಭಾರತದ ಹೊರಗೆ ಮತ್ತು ಆಚೆಗೆ ಇರುವ ಯಾವುದೇ ಸ್ಥಳದಲ್ಲಿ ಕೊಲೆ ಮಾಡುತ್ತಾನೆ. ಭಾರತದ ಯಾವ ಸ್ಥಳದಲ್ಲಿ ಅವನು ಸಿಗಬಹುದೋ ಅಲ್ಲಿ ಅವನನ್ನು ಆ ಕೊಲೆಯ ಬಗ್ಗೆ ಅಧಿವಿಚಾರಣೆ ಮಾಡಿ ಅಪರಾಧಿಯೆಂದು ನಿರ್ಣಯಿಸಬಹುದು.

(6) ಈ ಸಂಹಿತೆಯಲ್ಲಿರುವುದು ಯಾವುದೂ, ಭಾರತ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳ, ಸೈನಿಕರ, ನಾವಿಕರ ಅಥವಾ ವೈಮಾನಿಕರ ದಂಗೆಗೆ ಮತ್ತು ಅವರು ಸೇವೆಯನ್ನು ತ್ಯಜಿಸಿ ಹೋಗುವುದಕ್ಕೆ ದಂಡನೆಯನ್ನು ವಿಧಿಸುವ ಯಾವುದೇ ಅಧಿನಿಯಮದ ಉಪಬಂಧಗಳಿಗೆ ಅಥವಾ ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನಿನ ಉಪಬಂಧಗಳಿಗೆ ಯಾವ ಬಾಧಕವನ್ನೂ ಉಂಟುಮಾಡತಕ್ಕದ್ದಲ್ಲ.

**2. ಪರಿಭಾಷೆಗಳು.-** ಈ ಸಂಹಿತೆಯಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಕೃತ್ಯÎ ಒಂದು ಕೃತ್ಯವನ್ನು ಹಾಗೂ ಕೃತ್ಯಗಳ ಸರಣಿಯನ್ನು ಸೂಚಿಸುತ್ತದೆ;

(2) "ಪ್ರಾಣಿÎ ಎಂದರೆ, ಮನುಷ್ಯನ ಹೊರತು, ಇತರ ಜೀವಂತ ಪ್ರಾಣಿ;

(3) "ಮಗುÎ ಎಂದರೆ, ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿ;

(4) "ಖೋಟಾ ತಯಾರಿಕೆÎ.- ಒಂದು ವಸ್ತುವು ಇನ್ನೊಂದು ವಸ್ತುವನ್ನು ಹೋಲುವ ಹಾಗೆ ಮಾಡಿ, ಆ ಹೋಲಿಕೆಯ ಮೂಲಕ ವಂಚನೆ ಮಾಡುವ ಉದ್ದೇಶದಿಂದ ಅಥವಾ ಅದರಿಂದ ವಂಚನೆಯಾಗುವ ಸಂಭವವಿರುವುದೆಂದು ತಿಳಿದೂ ಅಂಥ ಹೋಲಿಕೆಯನ್ನು ಮಾಡಿದರೆ ಅವನು Ìಖೋಟಾ ತಯಾರಿಕೆ ಮಾಡಿದನುÎ ಎಂದು ಹೇಳಲಾಗುತ್ತದೆ.

*ವಿವರಣೆ 1.-* ಖೋಟಾ ತಯಾರಿಕೆ ಎನಿಸಿಕೊಳ್ಳಲು ಅಂಥ ಹೋಲಿಕೆಯು ಯಥಾವತ್ತಾಗಿ ಇರಬೇಕಾದುದು ಆವಶ್ಯಕವಾಗಿರುವುದಿಲ್ಲ.

*ವಿವರಣೆ 2.-* ಒಬ್ಬ ವ್ಯಕ್ತಿಯು ಒಂದು ವಸ್ತುವು ಇನ್ನೊಂದು ವಸ್ತುವನ್ನು ಹೋಲುವ ಹಾಗೆ ಮಾಡಿದರೆ ಮತ್ತು ಆ ಹೋಲಿಕೆಯು ಒಬ್ಬ ವ್ಯಕ್ತಿಯನ್ನು ವಂಚಿಸುವುದಾಗಿದ್ದರೆ ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಒಂದು ವಸ್ತುವು ಇನ್ನೊಂದು ವಸ್ತುವನ್ನು ಹೋಲುವ ಹಾಗೆ ಮಾಡಿದ ವ್ಯಕ್ತಿಯು ಆ ಹೋಲಿಕೆಯ ಮೂಲಕ ವಂಚನೆ ಮಾಡುವ ಉದ್ದೇಶ ಹೊಂದಿದ್ದನೆಂದು ಅಥವಾ ಆ ಮೂಲಕ ವಂಚನೆಯಾಗುವ ಸಂಭವವಿದೆಯೆಂದು ತಿಳಿದಿದ್ದನೆಂದು ಪೂರ್ವಭಾವನೆ ಮಾಡತಕ್ಕದ್ದು.

(5) "ನ್ಯಾಯಾಲಯÎ ಎಂದರೆ, ಯಾವ ನ್ಯಾಯಾಧೀಶನಿಗೆ ನ್ಯಾಯಿಕವಾಗಿ ಒಬ್ಬನೇ ಕಾರ್ಯನಿರ್ವಹಿಸಲು ಕಾನೂನಿನ ಮೂಲಕ ಅಧಿಕಾರ ನೀಡಲಾಗಿದೆಯೋ ಆ ನ್ಯಾಯಾಧೀಶನು ಅಥವಾ ಯಾವ ನ್ಯಾಯಾಧೀಶರ ನಿಕಾಯಕ್ಕೆ ಒಂದು ನಿಕಾಯವಾಗಿ ನ್ಯಾಯಿಕವಾಗಿ ಕಾರ್ಯನಿರ್ವಹಿಸಲು ಕಾನೂನಿನ ಮೂಲಕ ಅಧಿಕಾರ ನೀಡಲಾಗಿದೆಯೋ ಆ ನ್ಯಾಯಾಧೀಶರ ನಿಕಾಯವು, ನ್ಯಾಯಿಕವಾಗಿ ಕಾರ್ಯನಿರ್ವಹಿಸುವಂಥ ಸಮಯದಲ್ಲಿ ನ್ಯಾಯಾಲಯವಾಗಿರುತ್ತವೆ;

(6) "ಮರಣÎ ಎಂದರೆ, ಸಂದರ್ಭವಶಾತ್ ತದ್ವಿರುದ್ಧವಾಗಿ ತೋರಿದ ಹೊರತು ಮನುಷ್ಯನ ಮರಣ;

(7) "ಅಪ್ರಾಮಾಣಿಕವಾಗಿÎ ಎಂದರೆ, ಯಾರೇ ವ್ಯಕ್ತಿಯು, ಒಬ್ಬ ವ್ಯಕ್ತಿಗೆ ಅಕ್ರಮವಾಗಿ ಗಳಿಸಿಕೊಡುವ ಅಥವಾ ಇನ್ನೊಬ್ಬ ವ್ಯಕ್ತಿಗೆ ಅಕ್ರಮವಾಗಿ ನಷ್ಟವನ್ನು ಉಂಟುಮಾಡುವ ಉದ್ದೇಶದಿಂದ ಯಾವುದೇ ಕೃತ್ಯವನ್ನು ಮಾಡುವುದು;

(8) "ದಸ್ತಾವೇಜುÎ ಎಂದರೆ, ಯಾವ ವಿಷಯದ ಸಾಕ್ಷ್ಯವಾಗಿ ಬಳಸಲು ಉದ್ದೇಶಿಸಿದ ಅಥವಾ ಬಳಸಬಹುದಾದ ಅಕ್ಷರಗಳ, ಅಂಕಿಗಳ ಅಥವಾ ಗುರುತುಗಳ ಸಾಧನಗಳ ಮೂಲಕ ಅಥವಾ ಇವುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸಾಧನಗಳ

ಮೂಲಕ, ಯಾವುದೇ ವಸ್ತುವಿನ ಮೇಲೆ ವ್ಯಕ್ತಪಡಿಸಲಾದ ಅಥವಾ ವರ್ಣಿಸಲಾದ ಯಾವುದೇ ವಿಷಯ ಮತ್ತು ಇದರಲ್ಲಿ ವಿದ್ಯುನ್ಮಾನ ಹಾಗೂ ಡಿಜಿಟಲ್ ದಾಖಲೆಯು ಸೇರಿರುತ್ತದೆ;

*ವಿವರಣೆ 1.-* ಯಾವ ರೀತಿಯಲ್ಲಿ ಅಥವಾ ಯಾವ ವಸ್ತುವಿನ ಮೇಲೆ ಅಂಥ ಅಕ್ಷರಗಳನ್ನು, ಅಂಕಿಗಳನ್ನು ಅಥವಾ ಗುರುತುಗಳನ್ನು ರೂಪಿಸಲಾಗಿದೆಯೆಂಬುದು ಅಥವಾ ಆ ಸಾಕ್ಷ್ಯವನ್ನು ನ್ಯಾಯಾಲಯದಲ್ಲಿ ಬಳಸಲು ಅಥವಾ ಬಳಸಬಹುದಾದುದೆಂದು ಉದ್ದೇಶಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ.

*ದೃಷ್ಟಾಂತಗಳು*

(ಎ) ಯಾವ ಕರಾರಿನ ನಿಬಂಧನೆಗಳನ್ನು ವ್ಯಕ್ತಪಡಿಸುವ ಲಿಖಿತವನ್ನು ಆ ಕರಾರಿನ ಸಾಕ್ಷ್ಯವಾಗಿ ಉಪಯೋಗಿಸಬಹುದಾಗಿದೆಯೋ ಆ ಲಿಖಿತವು ಒಂದು ದಸ್ತಾವೇಜುವಾಗುತ್ತದೆ.

(ಬಿ) ಬ್ಯಾಂಕರನಿಗೆ ಬರೆದುಕೊಟ್ಟ ಚೆಕ್ಕು ಒಂದು ದಸ್ತಾವೇಜುವಾಗುತ್ತದೆ.

(ಸಿ) ಪವರ್-ಆಫ್-ಅಟಾರ್ನಿಯು ಒಂದು ದಸ್ತಾವೇಜುವಾಗುತ್ತದೆ.

(ಡಿ) ಸಾಕ್ಷ್ಯವಾಗಿ ಬಳಸಲು ಉದ್ದೇಶಿಸಿದ ಅಥವಾ ಬಳಸಬಹುದಾದ ಭೂಪಟವು ಅಥವಾ ನಕ್ಷೆಯು ಒಂದು ದಸ್ತಾವೇಜುವಾಗುತ್ತದೆ.

(ಇ) ನಿರ್ದೇಶನಗಳನ್ನು ಅಥವಾ ಸೂಚನೆಗಳನ್ನು ಒಳಗೊಂಡಿರುವ ಲಿಖಿತವು ಒಂದು ದಸ್ತಾವೇಜುವಾಗುತ್ತದೆ.

*ವಿವರಣೆ 2.-* ವಾಣಿಜ್ಯದ ಅಥವಾ ಇತರ ರೂಢಿಯ ಪ್ರಕಾರ ವಿವರಿಸಿರುವಂತೆ, ಅಕ್ಷರಗಳಿಂದ, ಅಂಕಿಗಳಿಂದ ಅಥವಾ ಗುರುತುಗಳಿಂದ ಏನನ್ನಾದರೂ ವ್ಯಕ್ತಪಡಿಸಿದ್ದರೆ, ಅದನ್ನು ಹಾಗೆ ವಾಸ್ತವಿಕವಾಗಿ ವ್ಯಕ್ತಪಡಿಸಿರದಿದ್ದರೂ ಈ ಪ್ರಕರಣದ ಅರ್ಥವ್ಯಾಪ್ತಿಯ ಪ್ರಕಾರ ಅಂಥ ಅಕ್ಷರಗಳಿಂದ, ಅಂಕಿಗಳಿಂದ ಅಥವಾ ಗುರುತುಗಳಿಂದ ವ್ಯಕ್ತಪಡಿಸಲಾಗಿದೆಯೆಂದು ಭಾವಿಸತಕ್ಕದ್ದು.

*ದೃಷ್ಟಾಂತ*

'ಎ'ನು ತನ್ನ ಆದೇಶಾನುಸಾರ ಸಂದಾಯ ಮಾಡಬಹುದಾದ ವಿನಿಮಯ ಪತ್ರದ ಹಿಂದೆ ತನ್ನ ಹೆಸರನ್ನು ಬರೆಯುತ್ತಾನೆ. ವಾಣಿಜ್ಯದ ರೂಢಿ ಪ್ರಕಾರ ವಿವರಿಸಿರುವಂತೆ, ಅದರ ಧಾರಕನಿಗೆ ಅದು ಸಂದಾಯವಾಗಬೇಕು ಎಂಬುದು ಆ ಹಿಂಬರಹದ ಅರ್ಥ. ಆ ಹಿಂಬರಹವು ಒಂದು ದಸ್ತಾವೇಜುವಾಗುತ್ತದೆ ಮತ್ತು ìಧಾರಕನಿಗೆ ಸಂದಾಯ ಮಾಡಿî ಅಥವಾ ಆ ಅರ್ಥದ ಪದಗಳನ್ನು ಸಹಿ ಹಾಕಿ ಬರೆದಿದ್ದರೆ ಹೇಗೆ ಅರ್ಥಾನ್ವಯ ಮಾಡಲಾಗುತ್ತಿತ್ತೋ ಹಾಗೆಯೇ ಅರ್ಥಾನ್ವಯ ಮಾಡತಕ್ಕದ್ದು.

(9) "ಮೋಸದಿಂದî ಎಂದರೆ, ಮೋಸಗೊಳಿಸುವ ಉದ್ದೇಶದಿಂದ ಏನನ್ನಾದರೂ ಮಾಡುವುದೇ ಹೊರತು ಅನ್ಯಥಾ ಅಲ್ಲ;

(10) ಲಿಂಗ.- "ಅವನುî ಎಂಬ ಸರ್ವನಾಮವನ್ನು ಮತ್ತು ಅದರ ವಿಭಕ್ತಿಗಳನ್ನು ಯಾರೇ ವ್ಯಕ್ತಿಯ ಬಗ್ಗೆ ಆ ವ್ಯಕ್ತಿಯು ಪುರುಷನಾಗಿರಲಿ ಅಥವಾ ಸ್ತ್ರೀಯಾಗಿರಲಿ ಅಥವಾ ತೃತೀಯಲಿಂಗಿಯಾಗಿರಲಿ;

*ವಿವರಣೆ.-* 'ತೃತೀಯಲಿಂಗಿ (ಲಿಂಗತ್ವ ಅಲ್ಪಸಂಖ್ಯಾತ)î ಎಂಬ ಪದವು ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಅಧಿನಿಯಮ, 2019 (2019ರ 40)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಲಾದ ಅರ್ಥವನ್ನು ಹೊಂದಿರತಕ್ಕದ್ದು.

(11) “ಸದ್ಭಾವನೆî.- ಯುಕ್ತ ಜಾಗರೂಕತೆ ಮತ್ತು ಗಮನವಹಿಸದೆ ಮಾಡಿರುವ ಅಥವಾ ನಂಬಿರುವ ಯಾವುದನ್ನೂ ìಸದ್ಭಾವನೆîಯಿಂದ ಮಾಡಲಾಗಿದೆಯೆಂದು ಅಥವಾ ನಂಬಲಾಗಿದೆಯೆಂದು ಹೇಳುವಂತಿಲ್ಲ;

(12) “ಸರ್ಕಾರ” ಎಂದರೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ;

(13) “ಆಶ್ರಯî ಎಂಬುದರಲ್ಲಿ ವ್ಯಕ್ತಿಗೆ ವಸತಿ, ಆಹಾರ, ಪಾನೀಯ, ಹಣ, ಬಟ್ಟೆಬರೆ, ಶಸ್ತ್ರಗಳು, ಮದ್ದುಗುಂಡು ಅಥವಾ ವಾಹನ ಸೌಕರ್ಯಗಳನ್ನು ಒದಗಿಸುವುದನ್ನು ಅಥವಾ ವ್ಯಕ್ತಿಗೆ ಅವನು ದಸ್ತಗಿರಿಯಾಗುವುದನ್ನು ತಪ್ಪಿಸಲು ಈ ಖಂಡದಲ್ಲಿ ಹೇಳಿರುವ ಅಥವಾ ಬೇರೆ ರೀತಿಯ ಯಾವುದೇ ಸಾಧನಗಳಿಂದ ಸಹಾಯ ಮಾಡುವುದನ್ನು ಒಳಗೊಳ್ಳುತ್ತದೆ;

(14) “ಕ್ಷತಿî ಎಂದರೆ, ಯಾರೇ ವ್ಯಕ್ತಿಯ ದೇಹಕ್ಕೆ, ಮನಸ್ಸಿಗೆ, ಖ್ಯಾತಿಗೆ ಅಥವಾ ಸ್ವತ್ತಿಗೆ ಕಾನೂನುಬಾಹಿರವಾಗಿ ಉಂಟುಮಾಡಿದ ಯಾವುದೇ ಬಗೆಯ ಹಾನಿ;

(15) ‘ಕಾನೂನುಬಾಹಿರî ಮತ್ತು ìಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವುದುî.- ìಕಾನೂನುಬಾಹಿರî ಪದವು, ಅಪರಾಧವೆನಿಸುವ ಅಥವಾ ಕಾನೂನಿನಿಂದ ನಿಷೇಧಿಸಿದ ಅಥವಾ ಸಿವಿಲ್ ಕ್ರಮಕ್ಕೆ ಆಧಾರವಾಗುವ ಪ್ರತಿಯೊಂದಕ್ಕೂ ಅನ್ವಯವಾಗುತ್ತದೆ ಮತ್ತು ವ್ಯಕ್ತಿಯು ಯಾವುದನ್ನು ಮಾಡಲು ತಪ್ಪಿದರೆ ಅದು ಕಾನೂನುಬಾಹಿರವೆಂದಾಗುವುದೋ ಅದನ್ನು ‘ಮಾಡಲು ಅವನು ಕಾನೂನುಸಮ್ಮತವಾಗಿ ಬದ್ಧನಾಗಿರುತ್ತಾನೆî ಎಂದು ಹೇಳಲಾಗುತ್ತದೆ;

(16) ‘ನ್ಯಾಯಾಧೀಶ” ಎಂದರೆ, ಯಾವ ವ್ಯಕ್ತಿಯನ್ನು ನ್ಯಾಯಾಧೀಶನೆಂದು ಅಧಿಕೃತವಾಗಿ ಪದನಾಮಗೊಳಿಸಲಾಗಿದೆಯೋ ಆ ವ್ಯಕ್ತಿ ಮತ್ತು ಇದರಲ್ಲಿ,-

(i) ಯಾವ ವ್ಯಕ್ತಿಗೆ ಯಾವುದೇ ಸಿವಿಲ್ ಅಥವಾ ಆಪರಾಧಿಕ ನ್ಯಾಯಿಕ ವ್ಯವಹರಣೆಯಲ್ಲಿ, ಒಂದು ಅಂತಿಮ ತೀರ್ಪನ್ನು ಅಥವಾ ಅಪೀಲು ಹೂಡದಿದ್ದರೆ ಅಂತಿಮವಾಗಬಹುದಾದ ತೀರ್ಪನ್ನು ಅಥವಾ ಇತರ ಯಾವುದೇ ಪ್ರಾಧಿಕಾರಿಯಿಂದ ದೃಢೀಕರಿಸಲ್ಪಟ್ಟರೆ ಅಂತಿಮವಾಗಬಹುದಾದ ತೀರ್ಪನ್ನು ಕೊಡಲು ಕಾನೂನು ಪ್ರಕಾರ ಅಧಿಕಾರ ಕೊಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯನ್ನು; ಅಥವಾ

(ii) ಅಂಥ ತೀರ್ಪನ್ನು ಕೊಡಲು ಯಾವ ವ್ಯಕ್ತಿಗಳ ಒಂದು ನಿಕಾಯಕ್ಕೆ ಕಾನೂನು ಮೂಲಕ ಅಧಿಕಾರ ಕೊಡಲಾಗಿದೆಯೋ ಆ ನಿಕಾಯದ ಪ್ರತಿಯೊಬ್ಬ ವ್ಯಕ್ತಿಯನ್ನು

-ಒಳಗೊಂಡಿರುತ್ತದೆ;

*ದೃಷ್ಟಾಂತ*

ಅಪೀಲಿನೊಂದಿಗೆ ಅಥವಾ ಅಪೀಲು ಇಲ್ಲದೆ ಯಾವ ಆರೋಪಕ್ಕೆ ಸಂಬಂಧಿಸಿದಂತೆ ಜುಲ್ಮಾನೆ ಅಥವಾ ಕಾರಾವಾಸದ ಶಿಕ್ಷೆಯನ್ನು ವಿಧಿಸುವ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ಮ್ಯಾಜಿಸ್ಟ್ರೇಟನು ನ್ಯಾಯಾಧೀಶನಾಗಿರುತ್ತಾನೆ.

(17) “ಪ್ರಾಣî ಎಂದರೆ, ಸಂದರ್ಭಾವಶಾತ್ ತದ್ವಿರುದ್ಧವಾಗಿ ತೋರಿದ ಹೊರತು ಮನುಷ್ಯನ ಪ್ರಾಣ;

(18) “ಸ್ಥಳೀಯ ಕಾನೂನುî ಎಂದರೆ, ಭಾರತದ ಯಾವುದೇ ನಿರ್ದಿಷ್ಟ ಭಾಗಕ್ಕೆ ಮಾತ್ರ ಅನ್ವಯವಾಗುವ ಕಾನೂನು;

(19) “ಪುರುಷ’ ಎಂದರೆ, ಯಾವುದೇ ವಯಸ್ಸಿನ ಪುರುಷ ವ್ಯಕ್ತಿ;

(20) ìತಿಂಗಳು” ಮತ್ತು ìವರ್ಷî.- ìತಿಂಗಳುî ಮತ್ತು ìವರ್ಷî ಪದಗಳನ್ನು ಬಳಸುವ ಕಡೆಯಲ್ಲೆಲ್ಲಾ ತಿಂಗಳು ಮತ್ತು ವರ್ಷವನ್ನು ಗ್ರೆಗೋರಿಯನ್ ಕ್ಯಾಲೆಂಡರಿಗನುಸಾರ ಲೆಕ್ಕ ಹಾಕತಕ್ಕದ್ದೆಂದು ತಿಳಿಯತಕ್ಕದ್ದು;

(21) "ಚರ ಸ್ವತ್ತುî ಭೂಮಿಯ ಹೊರತು ಮತ್ತು ಭೂಮಿಗೆ ಹೊಂದಿಕೊಂಡಿರುವ ಯಾವುದೇ ವಸ್ತುವಿನ ಅಥವಾ ಯಾವುದಾದರೂ ಭೂಮಿಗೆ ಖಾಯಂ ಆಗಿ ಲಗತ್ತಾಗಿದ್ದರೆ ಅದರ ಹೊರತು ಪ್ರತಿಯೊಂದು ವರ್ಣನೆಯ ಸ್ವತ್ತನ್ನು ಒಳಗೊಂಡಿರುತ್ತದೆ;

(22) "ವಚನ".- ಸಂದರ್ಭಾನುಸಾರ, ತದ್ವಿರುದ್ಧವಾಗಿ ಕಂಡುಬಂದ ಹೊರತು, ಏಕವಚನವನ್ನು ಸೂಚಿಸುವ ಪದಗಳಲ್ಲಿ ಬಹುವಚನವೂ, ಬಹುವಚನವನ್ನು ಸೂಚಿಸುವ ಪದಗಳಲ್ಲಿ ಏಕವಚನವೂ ಒಳಗೊಂಡಿರುತ್ತದೆ;

(23) "ಪ್ರಮಾಣî ಮಾಡಬೇಕೆಂದು ಕಾನೂನು ಗೊತ್ತುಪಡಿಸಿದ, ಶ್ರದ್ಧಾಪೂರ್ವಕವಾಗಿ ಮಾಡಬೇಕಾದ ಪ್ರತಿಜ್ಞಾವಚನವನ್ನು ಮತ್ತು ಲೋಕ ನೌಕರನ ಮುಂದೆ ಮಾಡತಕ್ಕದ್ದೆಂದು ಕಾನೂನಿನ ಮೂಲಕ ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಅಥವಾ ನ್ಯಾಯಾಲಯದಲ್ಲಿ ಅಥವಾ ಬೇರೆಡೆಯಲ್ಲಿ ರುಜುವಾತಿನ ಉದ್ದೇಶಕ್ಕಾಗಿ ಬಳಸಲಾಗುವ ಯಾವುದೇ ಘೋಷಣೆಯನ್ನು ಒಳಗೊಳ್ಳುತ್ತದೆ;

(24) "ಅಪರಾಧî.- (ಎ) ಮತ್ತು (ಬಿ) ಉಪಖಂಡಗಳಲ್ಲಿ ನಮೂದಿಸಿರುವ ಅಧ್ಯಾಯಗಳಲ್ಲಿ ಮತ್ತು ಪ್ರಕರಣಗಳಲ್ಲಿರುವುದರ ಹೊರತು, ಇತರೆ ಕಡೆಗಳಲ್ಲಿ ಬರುವ ìಅಪರಾಧî ಎಂಬ ಪದವು ಈ ಸಂಹಿತೆಯ ಮೇರೆಗೆ ದಂಡನೀಯವಾದ ಕಾರ್ಯವನ್ನು ಸೂಚಿಸುತ್ತದೆ ಆದರೆ,-

(ಎ) ಅಧ್ಯಾಯ III ಮತ್ತು ಮುಂದಿನ ಪ್ರಕರಣಗಳಲ್ಲಿ ಎಂದರೆ, 8ನೇ ಪ್ರಕರಣದ (2), (3), (4) ಮತ್ತು (5)ನೇ ಉಪಪ್ರಕರಣ, 9, 49, 50, 52, 54, 55, 56, 57, 58, 59, 60, 61, 119, 120, 123ನೇ ಪ್ರಕರಣಗಳು, 127ನೇ ಪ್ರಕರಣದ (7) ಮತ್ತು (8)ನೇ ಉಪಪ್ರಕರಣಗಳು, 222, 230, 231, 240, 248, 250, 251, 259, 260, 261, 262, 263ನೇ ಪ್ರಕರಣಗಳು, 308ನೇ ಪ್ರಕರಣದ (6) ಮತ್ತು (7)ನೇ ಉಪಪ್ರಕರಣಗಳು ಹಾಗೂ 330ನೇ ಪ್ರಕರಣದ (2)ನೇ ಉಪಪ್ರಕರಣಗಳಲ್ಲಿ, "ಅಪರಾಧî ಎಂದರೆ, ಈ ಸಂಹಿತೆಯ ಮೇರೆಗೆ ಅಥವಾ ಯಾವುದೇ ವಿಶೇಷ ಕಾನೂನು ಅಥವಾ ಸ್ಥಳೀಯ ಕಾನೂನಿನ ಮೇರೆಗೆ ದಂಡನೀಯವಾದ ಕಾರ್ಯ; ಮತ್ತು

(ಬಿ) 189ನೇ ಪ್ರಕರಣದ (1)ನೇ ಉಪಪ್ರಕರಣ, 211, 212, 238, 239, 249, 253ನೇ ಪ್ರಕರಣಗಳು ಮತ್ತು 329ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಬಂದಿರುವ ಅಪರಾಧ ಎಂಬ ಪದವು ಆ ವಿಶೇಷ ಕಾನೂನು ಅಥವಾ ಸ್ಥಳೀಯ ಕಾನೂನಿನ ಮೇರೆಗೆ ದಂಡನೀಯವಾದ ಕೃತ್ಯವು, ಅಂಥ ಕಾನೂನಿನ ಮೇರೆಗೆ ಜುಲ್ಮಾನೆ ಸಹಿತ ಅಥವಾ ಜುಲ್ಮಾನೆ ರಹಿತ ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ, ಅದೇ ಅರ್ಥವನ್ನು ಹೊಂದಿರತಕ್ಕದ್ದು;

(25) "ಲೋಪî ಒಂದು ಲೋಪವನ್ನು ಹಾಗೂ ಲೋಪಗಳ ಸರಣಿಯನ್ನು ಸೂಚಿಸುತ್ತದೆ;

(26) "ವ್ಯಕ್ತಿî ಎಂಬುದು ನಿಗಮಿತ ಅಥವಾ ನಿಗಮಿತವಾಗಿರದ ಯಾವುದೇ ಕಂಪನಿಯನ್ನು ಅಥವಾ ಸಂಘವನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು ಒಳಗೊಳ್ಳುತ್ತದೆ;

(27) "ಸಾರ್ವಜನಿಕî ಎಂಬುದು ಸಾರ್ವಜನಿಕರ ಯಾವುದೇ ವರ್ಗವನ್ನು ಅಥವಾ ಸಮುದಾಯವನ್ನು ಒಳಗೊಳ್ಳುತ್ತದೆ;

(28) "ಲೋಕ ನೌಕರî ಎಂದರೆ, ಕೆಳಕಂಡ ಯಾವುದೇ ವಿವರಣೆಯಲ್ಲಿ ಬರುವ ವ್ಯಕ್ತಿ, ಅಂದರೆ:-

(ಎ) ಭೂ ಸೇನೆ, ನೌಕಾಸೇನೆ ಅಥವಾ ವಾಯುಸೇನೆಗಳ ಪ್ರತಿಯೊಬ್ಬ ಕಮಿಷನ್ಡ್ ಆಫೀಸರ್;

(ಬಿ) ತಾನಾಗಿಯಾಗಲೀ ಅಥವಾ ವ್ಯಕ್ತಿಗಳ ನಿಕಾಯದ ಸದಸ್ಯನಾಗಿಯಾಗಲೀ ಯಾವುವೇ ನ್ಯಾಯನಿರ್ಣಯ ಪ್ರಕಾರ್ಯಗಳನ್ನು ನಿರ್ವಹಿಸಲು ಕಾನೂನಿನಿಂದ ಅಧಿಕಾರ ಪಡೆದಿರುವ ಯಾರೇ ವ್ಯಕ್ತಿಯೂ ಒಳಗೊಂಡಂತೆ ಪ್ರತಿಯೊಬ್ಬ ನ್ಯಾಯಾಧೀಶ;

(ಸಿ) ಲಿಕ್ವಿಡೇಟರ್, ರಿಸೀವರ್ ಅಥವಾ ಕಮೀಷನರ್ ಒಳಗೊಂಡಂತೆ ನ್ಯಾಯಾಲಯದ ಪ್ರತಿಯೊಬ್ಬ ಅಧಿಕಾರಿಯು ಕಾನೂನಿನ ಯಾವುದೇ ವಿಷಯ ಅಥವಾ ಸಂಗತಿಯ ಬಗ್ಗೆ ತನಿಖೆ ನಡೆಸುವುದು ಅಥವಾ ವರದಿ ಮಾಡುವುದು ಅಥವಾ ಯಾವುದೇ ದಸ್ತಾವೇಜನ್ನು ಬರೆದುಕೊಡುವುದು, ಅಧಿಪ್ರಮಾಣೀಕರಿಸುವುದು ಅಥವಾ ಇಟ್ಟುಕೊಳ್ಳುವುದು ಅಥವಾ ಯಾವುದೇ ಸ್ವತ್ತಿನ ಹೊಣೆಯನ್ನು ವಹಿಸಿಕೊಳ್ಳುವುದು ಅಥವಾ ಅದನ್ನು ವಿಲೆ ಮಾಡುವುದು ಅಥವಾ ಯಾವುದೇ ನ್ಯಾಯಿಕ ಆದೇಶಿಕೆಯನ್ನು ಕಾರ್ಯಗತಗೊಳಿಸುವುದು ಅಥವಾ ಯಾವುದೇ ಪ್ರಮಾಣ ಮಾಡಿಸುವುದು, ವ್ಯಾಖ್ಯಾನ ಮಾಡುವುದು ಅಥವಾ ನ್ಯಾಯಾಲಯದಲ್ಲಿ ಸುವ್ಯವಸ್ಥೆ ಕಾಪಾಡುವುದು ಕರ್ತವ್ಯವಾಗಿದೆಯೋ ಅಂಥ ಪ್ರತಿಯೊಬ್ಬ ಅಧಿಕಾರಿ ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸಲು ನ್ಯಾಯಾಲಯದಿಂದ ವಿಶೇಷವಾಗಿ ಅಧಿಕೃತಗೊಳಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿ;

(ಡಿ) ನ್ಯಾಯಾಲಯಕ್ಕೆ ಅಥವಾ ಲೋಕ ನೌಕರನಿಗೆ ಸಹಾಯ ಮಾಡುವ ಪ್ರತಿಯೊಬ್ಬ ಅಸೆಸರ್ ಅಥವಾ ಪಂಚಾಯತ್ ಸದಸ್ಯ;

(ಇ) ಯಾವ ಮಧ್ಯಸ್ಥಗಾರನಿಗೆ ಅಥವಾ ಇತರ ವ್ಯಕ್ತಿಗೆ ಯಾವುದೇ ವಿವಾದವನ್ನು ಅಥವಾ ವಿಷಯವನ್ನು ತೀರ್ಮಾನಕ್ಕಾಗಿ ಅಥವಾ ವರದಿಗಾಗಿ ಯಾವುದೇ ನ್ಯಾಯಾಲಯವು ಅಥವಾ ಇತರ ಯಾವುದೇ ಸಕ್ಷಮ ಸಾರ್ವಜನಿಕ ಪ್ರಾಧಿಕಾರವು ಉಲ್ಲೇಖ ಮಾಡಿದೆಯೋ ಆ ಯಾರೇ ಮಧ್ಯಸ್ಥಗಾರ ಅಥವಾ ಇತರ ವ್ಯಕ್ತಿ;

(ಎಫ್) ಯಾವ ಪದದ ಬಲದಿಂದ ಯಾರೇ ವ್ಯಕ್ತಿಯನ್ನು ಬಂಧನದಲ್ಲಿರಿಸಲು ಅಥವಾ ಇಟ್ಟುಕೊಳ್ಳಲು ಅಧಿಕಾರ ಕೊಡಲಾಗಿದೆಯೋ ಆ ಪದವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿ;

(ಜಿ) ಸರ್ಕಾರದ ಯಾರೇ ಅಧಿಕಾರಿಯ ಕರ್ತವ್ಯವು, ಅಂಥ ಅಧಿಕಾರಿಯಾಗಿ ಅಪರಾಧವನ್ನು ಪ್ರತಿಬಂಧಿಸುವುದು, ಅಪರಾಧಗಳ ಬಗ್ಗೆ ಮಾಹಿತಿಯನ್ನು ಕೊಡುವುದು, ಅಪರಾಧಿಗಳನ್ನು ನ್ಯಾಯಾಲಯದ ಮುಂದೆ ತರುವುದು ಅಥವಾ ಸಾರ್ವಜನಿಕ ಆರೋಗ್ಯ, ಸುರಕ್ಷತೆ ಅಥವಾ ಸೌಕರ್ಯಗಳನ್ನು ಕಾಪಾಡುವುದು ಆಗಿರುತ್ತದೆಯೋ ಅಂಥ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿ;

(ಹೆಚ್) ಸರ್ಕಾರದ ಯಾರೇ ಅಧಿಕಾರಿಯ ಕರ್ತವ್ಯವು, ಅಂಥ ಅಧಿಕಾರಿಯಾಗಿ ಸರ್ಕಾರದ ಪರವಾಗಿ ಯಾವುದೇ ಸ್ವತ್ತನ್ನು ತೆಗೆದುಕೊಳ್ಳುವುದು, ಪಡೆದುಕೊಳ್ಳುವುದು, ಇಟ್ಟುಕೊಳ್ಳುವುದು, ಬಳಸಿಕೊಳ್ಳುವುದು ಅಥವಾ ಸರ್ಕಾರದ ಪರವಾಗಿ ಯಾವುದೇ ಮೋಜಣಿ, ನಿರ್ಧಾರಣೆ ಮಾಡುವುದು ಅಥವಾ ಕರಾರನ್ನು ಮಾಡಿಕೊಳ್ಳುವುದು, ಯಾವುದೇ ರಾಜಸ್ವ-ಆದೇಶಿಕೆಯನ್ನು ಕಾರ್ಯಗತಗೊಳಿಸುವುದು ಅಥವಾ ಸರ್ಕಾರದ ಆರ್ಥಿಕ ಹಿತಾಸಕ್ತಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ತನಿಖೆ ನಡೆಸುವುದು ಅಥವಾ ವರದಿ ಮಾಡುವುದು ಅಥವಾ ಸರ್ಕಾರದ ಆರ್ಥಿಕ ಹಿತಾಸಕ್ತಿಗೆ ಸಂಬಂಧಿಸಿದ ಯಾವುದೇ ದಸ್ತಾವೇಜನ್ನು ಬರೆದುಕೊಡುವುದು, ಅಧಿಪ್ರಮಾಣೀಕರಿಸುವುದು ಅಥವಾ ಇಟ್ಟುಕೊಳ್ಳುವುದು ಅಥವಾ ಸರ್ಕಾರದ ಆರ್ಥಿಕ ಹಿತಾಸಕ್ತಿಯ ರಕ್ಷಣೆಗಾಗಿರುವ ಯಾವುದೇ ಕಾನೂನಿನ ಉಲ್ಲಂಘನೆಯನ್ನು ಪ್ರತಿಬಂಧಿಸುವುದು ಆಗಿರುತ್ತದೆಯೋ ಅಂಥ ಪ್ರತಿಯೊಬ್ಬ ಅಧಿಕಾರಿ;

(ಐ) ಯಾರೇ ಅಧಿಕಾರಿಯ ಕರ್ತವ್ಯವು, ಅಂಥ ಅಧಿಕಾರಿಯಾಗಿ ಯಾವುದೇ ಗ್ರಾಮದ, ಪಟ್ಟಣದ ಅಥವಾ ಜಿಲ್ಲೆಯ ಯಾವುದೇ ಧರ್ಮನಿರಪೇಕ್ಷ ಸಾರ್ವತ್ರಿಕ ಉದ್ದೇಶಕ್ಕಾಗಿ ಯಾವುದೇ ಸ್ವತ್ತನ್ನು ತೆಗೆದುಕೊಳ್ಳುವುದು, ಸ್ವೀಕರಿಸುವುದು, ಇಟ್ಟುಕೊಳ್ಳುವುದು ಅಥವಾ ಬಳಸಿಕೊಳ್ಳುವುದು ಅಥವಾ ಯಾವುದೇ ಮೋಜಣಿ ಅಥವಾ ನಿರ್ಧರಣೆ ಮಾಡುವುದು ಅಥವಾ ಯಾವುದೇ ದರವನ್ನು ಅಥವಾ ತೆರಿಗೆಯನ್ನು ವಿಧಿಸುವುದು ಅಥವಾ ಯಾವುದೇ ಗ್ರಾಮದ, ಪಟ್ಟಣದ ಅಥವಾ ಜಿಲ್ಲೆಯ ಜನರ ಹಕ್ಕುಗಳನ್ನು ನಿರ್ಧರಿಸುವುದಕ್ಕಾಗಿ ಯಾವುದೇ ದಸ್ತಾವೇಜನ್ನು ಬರೆದುಕೊಡುವುದು, ಅಧಿಪ್ರಮಾಣೀಕರಿಸುವುದು ಅಥವಾ ಇಟ್ಟುಕೊಳ್ಳುವುದು ಕರ್ತವ್ಯ ಆಗಿರುತ್ತದೆಯೋ ಅಂಥ ಪ್ರತಿಯೊಬ್ಬ ಅಧಿಕಾರಿ;

(ಜೆ) ಯಾವ ವ್ಯಕ್ತಿಗೆ, ಅವನು ಹೊಂದಿರುವ ಪದದ ಬಲದಿಂದ ಮತದಾರರ ಪಟ್ಟಿಯನ್ನು ತಯಾರಿಸಲು, ಪ್ರಕಟಿಸಲು, ನಿರ್ವಹಿಸಲು ಅಥವಾ ಪರಿಷ್ಕರಿಸಲು ಅಥವಾ ಒಂದು ಚುನಾವಣೆಯನ್ನು ಅಥವಾ ಚುನಾವಣೆಯ ಭಾಗವನ್ನು ನಡೆಸಲು ಅಧಿಕಾರ ಕೊಡಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿ;

(ಕೆ) ಯಾವ ವ್ಯಕ್ತಿಯು,-

(i) ಸರ್ಕಾರದ ಸೇವೆಯಲ್ಲಿರುವನೋ ಅಥವಾ ವೇತನವನ್ನು ಪಡೆಯುತ್ತಿರುವನೋ ಅಥವಾ ಯಾವುದೇ ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಸರ್ಕಾರದಿಂದ ಫೀಜು ಅಥವಾ ಕಮೀಷನ್ ರೂಪದಲ್ಲಿ ಸಂಭಾವನೆಯನ್ನು ಪಡೆಯುತ್ತಿರುವನೋ;

(ii) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 3ನೇ ಪ್ರಕರಣದ (31) ಖಂಡದಲ್ಲಿ ಪರಿಭಾಷಿಸಿರುವಂತೆ ಯಾವುದೇ ಸ್ಥಳೀಯ ಪ್ರಾಧಿಕಾರದ, ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿತವಾದ ನಿಗಮದ ಅಥವಾ ಕಂಪನಿಗಳ ಅಧಿನಿಯಮ, 2013 (2013ರ 18)ರ 2ನೇ ಪ್ರಕರಣದ (45)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಯಾವುದೇ ಸರ್ಕಾರಿ ಕಂಪನಿಯ ಸೇವೆಗಳಲ್ಲಿರುವನೋ ಅಥವಾ ವೇತನ ಪಡೆಯುತ್ತಿರುವನೋ,

- ಅಂಥ ಪ್ರತಿಯೊಬ್ಬ ವ್ಯಕ್ತಿ.

*ವಿವರಣೆ.-*

(ಎ) ಸರ್ಕಾರದಿಂದ ನೇಮಕಗೊಂಡಿರಲಿ ಅಥವಾ ನೇಮಕಗೊಂಡಿರದಿರಲಿ, ಈ ಖಂಡದಲ್ಲಿ ಮಾಡಲಾದ ಯಾವುದೇ ವಿವರಣೆಗಳಡಿಯಲ್ಲಿ ಬರುವ ವ್ಯಕ್ತಿಗಳು;

(ಬಿ) ಲೋಕ ನೌಕರನ ಸ್ಥಾನದಲ್ಲಿರುವ ವ್ಯಕ್ತಿಯು ಅದನ್ನು ಹಾಗೆ ಹೊಂದಿರುವ ಆತನ ಹಕ್ಕಿನ ವಿಚಾರದಲ್ಲಿ ಕಾನೂನು ಸಂಬಂಧವಾದ ಯಾವ ದೋಷವಿದ್ದರೂ ಸರಿಯೇ, ಆ ಲೋಕ ನೌಕರನ ಸ್ಥಾನವನ್ನು ವಾಸ್ತವವಾಗಿ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿ;

(ಸಿ) ‶ಚುನಾವಣೆ″ ಎಂದರೆ, ಯಾವುದೇ ವಿಧಾನಸಭೆ, ನಗರಪಾಲಿಕೆ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸದಸ್ಯರನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಅದು ಯಾವುದೇ ಸ್ವರೂಪದ್ದಾಗಿರಲಿ, ಅದರ ಸದಸ್ಯರ ಆಯ್ಕೆ ವಿಧಾನವನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಆಗಬೇಕೆಂದು ಗೊತ್ತುಪಡಿಸಿದ್ದರೆ, ಅದರ ಸದಸ್ಯರ ಆಯ್ಕೆಯ ಉದ್ದೇಶಕ್ಕಾಗಿ ನಡೆಸುವ ಚುನಾವಣೆ.

*ದೃಷ್ಟಾಂತ*

ನಗರಪಾಲಿಕಾ ಆಯುಕ್ತರು ಲೋಕ ನೌಕರನಾಗಿರುತ್ತಾರೆ;

(29) ‘ನಂಬಲು ಕಾರಣ’.- ಒಬ್ಬ ವ್ಯಕ್ತಿಯು ಒಂದು ಸಂಗತಿಯನ್ನು ನಂಬಲು ಸಾಕಷ್ಟು ಕಾರಣವನ್ನು ಹೊಂದಿದ್ದರೆ ಅವನು ‘ನಂಬಲು ಕಾರಣ’ವನ್ನು ಹೊಂದಿದ್ದಾನೆಂದು ಹೇಳಲಾಗುತ್ತದೆ ಹೊರತು ಅನ್ಯಥಾ ಅಲ್ಲ;

(30) “ವಿಶೇಷ ಕಾನೂನು” ಎಂದರೆ, ಒಂದು ನಿರ್ದಿಷ್ಟ ವಿಷಯಕ್ಕೆ ಅನ್ವಯವಾಗುವ ಕಾನೂನು;

(31) ‘ಮೌಲ್ಯವುಳ್ಳ ಭದ್ರತೆ’ ಎಂದರೆ, ಯಾವ ದಸ್ತಾವೇಜಿನ ಮೂಲಕ ಯಾವ ಕಾನೂನುಸಮ್ಮತವಾದ ಹಕ್ಕನ್ನು ಸೃಷ್ಟಿಸಲಾಗಿದೆಯೋ, ವಿಸ್ತರಿಸಲಾಗಿದೆಯೋ, ವರ್ಗಾಯಿಸಲಾಗಿದೆಯೋ, ನಿರ್ಬಂಧಿಸಲಾಗಿದೆಯೋ, ಕೊನೆಗೊಳಿಸಲಾಗಿದೆಯೋ ಅಥವಾ ಬಿಡುಗಡೆ ಮಾಡಲಾಗಿದೆಯೋ ಅಥವಾ ಯಾವುದರ ಮೂಲಕ ಒಬ್ಬ ವ್ಯಕ್ತಿಯು ತಾನು ಕಾನೂನುಸಮ್ಮತ ಹೊಣೆಗಾರಿಕೆಗೆ ಒಳಪಟ್ಟಿರುವನೆಂದು ಅಥವಾ ತನಗೆ ನಿರ್ದಿಷ್ಟ ಕಾನೂನುಸಮ್ಮತ ಹಕ್ಕು ಇಲ್ಲವೆಂದು ಒಪ್ಪಿಕೊಳ್ಳುತ್ತಾನೋ ಅಂಥ ದಸ್ತಾವೇಜು ಅಥವಾ ದಸ್ತಾವೇಜೆಂದು ತಾತ್ಪರ್ಯವಾಗುವ ದಸ್ತಾವೇಜು.

*ದೃಷ್ಟಾಂತ*

‘ಎ’ನು ವಿನಿಮಯ ಪತ್ರದ ಹಿಂದೆ ತನ್ನ ಹೆಸರನ್ನು ಬರೆಯುತ್ತಾನೆ. ಈ ಹಿಂಬರಹವು ಯಾವ ವ್ಯಕ್ತಿಯು ಅದರ ಕಾನೂನುಸಮ್ಮತ ಧಾರಕನಾಗಬಹುದಾಗಿದೆಯೋ ಆ ಯಾರೇ ವ್ಯಕ್ತಿಗೆ ವಿನಿಮಯ ಪತ್ರದ ಹಕ್ಕನ್ನು ವರ್ಗಾಯಿಸುವ ಪರಿಣಾಮವುಳ್ಳದ್ದಾಗುವುದರಿಂದ ಆ ಹಿಂಬರಹವು ‘ಮೌಲ್ಯವುಳ್ಳ ಭದ್ರತೆ’ಯಾಗಿರುತ್ತದೆ;

(32) “ನೌಕೆ” ಎಂದರೆ, ಮನುಷ್ಯರನ್ನು ಅಥವಾ ಅವರ ಸ್ವತ್ತನ್ನು ಜಲಮಾರ್ಗದ ಮೂಲಕ ಸಾಗಿಸಲು ರಚಿಸಿದ ಯಾವುದೇ ನೌಕೆ;

(33) ‘ಸ್ವಯಿಚ್ಛೆಯಿಂದ’.- ವ್ಯಕ್ತಿಯು ಒಂದು ಪರಿಣಾಮವನ್ನು ಯಾವ ಸಾಧನಗಳ ಮೂಲಕ ಉಂಟುಮಾಡಲು ಉದ್ದೇಶಿಸಿದ್ದನೋ ಅವುಗಳ ಮೂಲಕ ಆ ಪರಿಣಾಮವನ್ನುಂಟು ಮಾಡಿದರೆ ಅಥವಾ ಯಾವ ಸಾಧನಗಳನ್ನು ಬಳಸುವ ಸಮಯದಲ್ಲಿ, ಅವುಗಳಿಂದ ಆ ಪರಿಣಾಮವುಂಟಾಗುವುದೆಂದು ತಿಳಿದಿದ್ದೂ ಅಥವಾ ಉಂಟಾಗುವ ಸಂಭವವಿದೆಯೆಂದು ಅವನಿಗೆ ನಂಬಲು ಕಾರಣವಿದ್ದೂ ಅದನ್ನು ಉಂಟುಮಾಡಿದರೆ ಅವನು ‘ಸ್ವಯಿಚ್ಛೆಯಿಂದ’ ಪರಿಣಾಮವನ್ನುಂಟು ಮಾಡಿದ್ದಾನೆ ಎಂದು ಹೇಳಲಾಗುತ್ತದೆ.

*ದೃಷ್ಟಾಂತ*

‘ಎ’ನು ಸುಲಿಗೆ ಮಾಡುವ ಉದ್ದೇಶಕ್ಕಾಗಿ ಒಂದು ದೊಡ್ಡ ನಗರದಲ್ಲಿ ಜನರು ವಾಸಿಸುತ್ತಿರುವ ಮನೆಗೆ ರಾತ್ರಿ ಸಮಯದಲ್ಲಿ ಬೆಂಕಿ ಹಚ್ಚುತ್ತಾನೆ ಮತ್ತು ಅದರಿಂದ ಒಬ್ಬ ವ್ಯಕ್ತಿಯ ಮರಣವನ್ನು ಉಂಟುಮಾಡುತ್ತಾನೆ. ಇಲ್ಲಿ ‘ಎ’ನಿಗೆ ಮರಣವುಂಟುಮಾಡಬೇಕೆಂಬ ಉದ್ದೇಶವಿಲ್ಲದೆ ಇರಬಹುದು ಮತ್ತು ಅಲ್ಲದೆ ತನ್ನ ಕೃತ್ಯದಿಂದ ಮರಣವುಂಟಾದುದಕ್ಕೆ ಅವನಿಗೆ ವಿಷಾದವಾಗಿರಬಹುದು; ಆದಾಗ್ಯೂ, ಹಾಗೆ ತಾನು ಮರಣವನ್ನುಂಟು ಮಾಡುವ ಸಂಭವವಿದ್ದಿತ್ತೆಂದು ತಿಳಿದಿದ್ದಿದ್ದರೆ, ಅವನು ಸ್ವಯಿಚ್ಛೆಯಿಂದ ಮರಣವನ್ನು ಉಂಟು ಮಾಡಿದ್ದಾನೆಂದಾಗುತ್ತದೆ;

(34) ‘ಮರಣಶಾಸನ’ ಎಂದರೆ, ಯಾವುದೇ ಮರಣಶಾಸನದ ದಸ್ತಾವೇಜು;

(35) ‘ಮಹಿಳೆ’ ಎಂದರೆ, ಯಾವುದೇ ವಯಸ್ಸಿನ ಸ್ತ್ರೀ;

(36) “ಅಕ್ರಮ ಲಾಭ” ಎಂದರೆ, ಒಬ್ಬ ವ್ಯಕ್ತಿಯು ಯಾವ ಸ್ವತ್ತಿನಿಂದ ಕಾನೂನಾತ್ಮಕವಾಗಿ ಲಾಭ ಪಡೆಯಲು ಹಕ್ಕಿಲ್ಲವೋ ಆ ಸ್ವತ್ತಿನಿಂದ ಕಾನೂನುಬಾಹಿರ ರೀತಿಯಲ್ಲಿ ಪಡೆಯುವ ಲಾಭ;

(37) "ಅಕ್ರಮ ನಷ್ಟÎ ಎಂದರೆ, ಸ್ವತ್ತನ್ನು ಕಳೆದುಕೊಳ್ಳುವ ವ್ಯಕ್ತಿಗೆ ಅದರ ಬಗ್ಗೆ ಕಾನೂನುಸಮ್ಮತವಾದ ಹಕ್ಕಿದ್ದು, ಕಾನೂನು ವಿರೋಧವಾದ ರೀತಿಯಲ್ಲಿ ಉಂಟಾದ ಅದರ ನಷ್ಟ;

(38) "ಅಕ್ರಮವಾಗಿ ಲಾಭ ಪಡೆಯುವುದು" ಮತ್ತು Îಅಕ್ರಮವಾಗಿ ನಷ್ಟ ಹೊಂದುವುದು".- ಒಬ್ಬ ವ್ಯಕ್ತಿಯು ಅಕ್ರಮವಾಗಿ ಗಳಿಸಿದ್ದಾನೆಂದು ಯಾವಾಗ ಹೇಳಲಾಗುತ್ತದೆಯೆಂದರೆ, ಆ ವ್ಯಕ್ತಿಯು ಅಕ್ರಮವಾಗಿ ಇಟ್ಟುಕೊಂಡಾಗ ಮತ್ತು ಅಕ್ರಮವಾಗಿ ಆರ್ಜಿಸಿದಾಗ ಅವನು ಅಕ್ರಮವಾಗಿ ಗಳಿಸಿದನೆಂದು ಹೇಳಲಾಗುತ್ತದೆ. ವ್ಯಕ್ತಿಯು ಅಕ್ರಮವಾಗಿ ಕಳೆದುಕೊಂಡಿದ್ದಾನೆಂದು ಯಾವಾಗ ಹೇಳಲಾಗುತ್ತದೆಯೆಂದರೆ, ಆ ವ್ಯಕ್ತಿಯನ್ನು ಯಾವುದೇ ಸ್ವತ್ತಿನಿಂದ ಅಕ್ರಮವಾಗಿ ದೂರ ಇರಿಸಿದಾಗ ಮತ್ತು ಅಕ್ರಮವಾಗಿ ಆ ಸ್ವತ್ತನ್ನು ಅವನಿಂದ ವಂಚಿಸಿದಾಗ ಆ ವ್ಯಕ್ತಿಯು ಅಕ್ರಮವಾಗಿ ಕಳೆದುಕೊಂಡಿದ್ದಾನೆಂದು ಹೇಳಲಾಗುತ್ತದೆ; ಮತ್ತು

(39) ಈ ಸಂಹಿತೆಯಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಆದರೆ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ 21)ರಲ್ಲಿ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ 46)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮ ಮತ್ತು ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ಸಾಮಾನ್ಯ ವಿವರಣೆಗಳು.-** (1) ಈ ಸಂಹಿತೆಯಾದ್ಯಂತ ಹೇಳಿರುವ ಪ್ರತಿಯೊಂದು ಅಪರಾಧದ ಪರಿಭಾಷೆಯನ್ನು, ಪ್ರತಿಯೊಂದು ದಂಡದ ಉಪಬಂಧವನ್ನು ಮತ್ತು ಅಂಥ ಪ್ರತಿಯೊಂದು ಪರಿಭಾಷೆಯ ಅಥವಾ ದಂಡದ ಉಪಬಂಧದ ಪ್ರತಿಯೊಂದು ದೃಷ್ಟಾಂತವನ್ನು "ಸಾಮಾನ್ಯ ಅಪವಾದಗಳುÎ ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿರುವ ಅಪವಾದಗಳಿಗೆ ಒಳಪಟ್ಟು ಅಂಥ ಪರಿಭಾಷೆಯಲ್ಲಿ, ದಂಡದ ಉಪಬಂಧದಲ್ಲಿ ಅಥವಾ ದೃಷ್ಟಾಂತದಲ್ಲಿ ಆ ಅಪವಾದಗಳನ್ನು ಪುನಃ ಹೇಳಿರದಿದ್ದರೂ, ಅರ್ಥ ಮಾಡಿಕೊಳ್ಳತಕ್ಕದ್ದು.

*ದೃಷ್ಟಾಂತಗಳು*

(ಎ) ಈ ಸಂಹಿತೆಯಲ್ಲಿ ಅಪರಾಧಗಳ ಪರಿಭಾಷೆಗಳನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ಏಳು ವರ್ಷಗಳ ಕಡಿಮೆ ವಯಸ್ಸಿನ ಮಗುವು ಅಂಥ ಅಪರಾಧಗಳನ್ನು ಮಾಡಲಾಗದು ಎಂದು ಹೇಳಿಲ್ಲ; ಆದರೆ ಏಳು ವರ್ಷಗಳ ಕಡಿಮೆ ವಯಸ್ಸಿನ ಮಗುವು ಮಾಡಿರುವುದಾವುದೂ ಅಪರಾಧವೆಂದಾಗತಕ್ಕದ್ದಲ್ಲವೆಂದು ಉಪಬಂಧಿಸುವ ಸಾಮಾನ್ಯ ಅಪವಾದಕ್ಕೆ ಒಳಪಟ್ಟು ಆ ಪರಿಭಾಷೆಗಳನ್ನು ಅರ್ಥ ಮಾಡಿಕೊಳ್ಳತಕ್ಕದ್ದು.

(ಬಿ) ÌಎÎ ಎಂಬ ಪೊಲೀಸ್ ಅಧಿಕಾರಿಯು, ಕೊಲೆ ಮಾಡಿದ Ìಝೆಡ್Î ಎಂಬುವನನ್ನು ವಾರಂಟಿಲ್ಲದೆಯೇ ದಸ್ತಗಿರಿ ಮಾಡುತ್ತಾನೆ. ಇಲ್ಲಿ ÌಎÎನು ಅಕ್ರಮ ಬಂಧನದ ಅಪರಾಧದ ಬಗ್ಗೆ ತಪ್ಪಿತಸ್ಥನಾಗುವುದಿಲ್ಲ. ಏಕೆಂದರೆ ಕಾನೂನು ಪ್ರಕಾರ ಅವನು Ìಝೆಡ್Îನನ್ನು ದಸ್ತಗಿರಿ ಮಾಡಲು ಬದ್ಧನಾಗಿದ್ದನು; ಆದಕಾರಣ ಈ ಪ್ರಕರಣವು Îಕೃತ್ಯವನ್ನು ಮಾಡಲು ಕಾನೂನು ಪ್ರಕಾರ ಬದ್ಧನಾದ ವ್ಯಕ್ತಿಯು ಅದನ್ನು ಮಾಡಿದರೆ ಅದು ಅಪರಾಧವಾಗುವುದಿಲ್ಲÏ ಎಂಬುದು ಸಾಮಾನ್ಯ ಅಪವಾದದಲ್ಲಿ ಬರುತ್ತದೆ.

(2) ಈ ಸಂಹಿತೆಯ ಯಾವುದೇ ಭಾಗದಲ್ಲಿ ವಿವರಿಸಿರುವ ಯಾವುದೇ ಪದಾವಳಿಯನ್ನು, ಈ ಸಂಹಿತೆಯ ಪ್ರತಿಯೊಂದು ಭಾಗದಲ್ಲಿ ಅದೇ ವಿವರಣೆಗನುಗುಣವಾಗಿ ಬಳಸಲಾಗಿದೆ.

(3) ವ್ಯಕ್ತಿಯ ಸ್ವತ್ತು ಆ ವ್ಯಕ್ತಿಯ ಪರವಾಗಿ ಅವನ ಹೆಂಡತಿಯ ಅಥವಾ ಗಂಡನ, ಗುಮಾಸ್ತನ ಅಥವಾ ನೌಕರನ ಸ್ವಾಧೀನದಲ್ಲಿದ್ದರೆ, ಈ ಸಂಹಿತೆಯ ಅರ್ಥದಲ್ಲಿ ಅದು ಆ ವ್ಯಕ್ತಿಯ ಸ್ವಾಧೀನದಲ್ಲಿರುತ್ತದೆ.

*ವಿವರಣೆ.-* ಗುಮಾಸ್ತನಾಗಿ ಅಥವಾ ನೌಕರನಾಗಿ, ತಾತ್ಕಾಲಿಕವಾಗಿ ಅಥವಾ ಒಂದು ನಿರ್ದಿಷ್ಟ ಸಂದರ್ಭಕ್ಕಾಗಿ ನಿಯೋಜಿತನಾದ ವ್ಯಕ್ತಿಯು ಈ ಉಪಪ್ರಕರಣದ ಅರ್ಥದಲ್ಲಿ ಒಬ್ಬ ಗುಮಾಸ್ತ ಅಥವಾ ನೌಕರನಾಗುತ್ತಾನೆ.

(4) ಈ ಸಂಹಿತೆಯ ಪ್ರತಿಯೊಂದು ಭಾಗದಲ್ಲಿ ಸಂದರ್ಭಾವಶಾತ್ ಪ್ರತಿಕೂಲ ಉದ್ದೇಶವು ಕಂಡುಬಂದ ಹೊರತು, ಯಾವ ಪದಗಳು ಮಾಡಿದ ಕೃತ್ಯಗಳನ್ನು ಉಲ್ಲೇಖಿಸುತ್ತವೆಯೋ ಆ ಪದಗಳು ಕಾನೂನುಬಾಹಿರ ಲೋಪಗಳಿಗೂ ಅನ್ವಯವಾಗುತ್ತವೆ.

(5) ಅನೇಕ ವ್ಯಕ್ತಿಗಳು ತಮಗಿರುವ ಏಕೋದ್ದೇಶವನ್ನು ಮುಂದುವರಿಸಲು ಆಪರಾಧಿಕ ಕೃತ್ಯವನ್ನು ಮಾಡಿದ್ದರೆ ಅಂಥ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನೂ, ಆ ಕೃತ್ಯವನ್ನು ಅವನೊಬ್ಬನೇ ಒಂಟಿಯಾಗಿ ಮಾಡಿದ್ದಿದ್ದರೆ ಹೇಗೆ ಹೊಣೆಗಾರನಾಗುತ್ತಿದ್ದನೋ ಹಾಗೆಯೇ ಹೊಣೆಗಾರನಾಗಿರುತ್ತಾನೆ.

(6) ಯಾವ ಒಂದು ಕೃತ್ಯವು, ಅದನ್ನು ಆಪರಾಧಿಕ ತಿಳುವಳಿಕೆಯಿಂದ ಅಥವಾ ಉದ್ದೇಶದಿಂದ ಎಸಗುತ್ತಿರುವ ಕಾರಣ ಮಾತ್ರದಿಂದಲೇ ಆಪರಾಧಿಕ ಕೃತ್ಯ ಆಗುತ್ತದೆಯೋ ಆ ಕೃತ್ಯವನ್ನು ಅನೇಕ ವ್ಯಕ್ತಿಗಳು ಮಾಡಿದ್ದರೆ, ಅಂಥ ತಿಳುವಳಿಕೆಯಿಂದ ಅಥವಾ ಉದ್ದೇಶದಿಂದ ಆ ಕೃತ್ಯದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಪೈಕಿ ಪ್ರತಿಯೊಬ್ಬನೂ ಅಂಥ ತಿಳುವಳಿಕೆ ಅಥವಾ ಉದ್ದೇಶದಿಂದ ಅವನೊಬ್ಬನೇ ಆ ಕೃತ್ಯವನ್ನು ಮಾಡಿದ್ದಿದ್ದರೆ ಹೇಗೆ ಹೊಣೆಗಾರನಾಗುತ್ತಿದ್ದನೋ ಹಾಗೆಯೇ ಆ ಬಗ್ಗೆ ಹೊಣೆಗಾರನಾಗಿರುತ್ತಾನೆ.

(7) ಯಾವಾಗ ಒಂದು ಕೃತ್ಯದಿಂದ ಅಥವಾ ಲೋಪದಿಂದ ಕೆಲವೊಂದು ಪರಿಣಾಮ ಉಂಟುಮಾಡುವುದು ಅಥವಾ ಆ ಪರಿಣಾಮವನ್ನು ಉಂಟು ಮಾಡಲು ಪ್ರಯತ್ನಿಸುವುದು ಒಂದು ಅಪರಾಧವಾಗುವುದೋ, ಭಾಗಶಃ ಕೃತ್ಯದಿಂದ ಮತ್ತು ಭಾಗಶಃ ಲೋಪದಿಂದ ಆ ಪರಿಣಾಮವನ್ನು ಉಂಟು ಮಾಡುವುದೂ ಕೂಡ ಅದೇ ಅಪರಾಧವಾಗುತ್ತದೆಂದು ತಿಳಿಯತಕ್ಕದ್ದು.

*ದೃಷ್ಟಾಂತ*

‘ಎ’ನು, ‘ಜೆಡ್’ಗೆ ಭಾಗಶಃ ಕಾನೂನುಬಾಹಿರವಾಗಿ ಆಹಾರವನ್ನು ಕೊಡದಿರುವುದರಿಂದ ಮತ್ತು ಭಾಗಶಃ ಉದ್ದೇಶಪೂರ್ವಕವಾಗಿ ‘ಜೆಡ್’ನನ್ನು ಹೊಡೆಯುವುದರಿಂದ ‘ಜೆಡ್’ಗೆ ಮರಣವನ್ನುಂಟು ಮಾಡುತ್ತಾನೆ. ಹೀಗೆ ‘ಎ’ನು ಕೊಲೆ ಮಾಡಿರುತ್ತಾನೆ.

(8) ಹಲವಾರು ಕೃತ್ಯಗಳ ಮೂಲಕ ಅಪರಾಧವನ್ನು ಮಾಡಿದ್ದಾಗ, ಆ ಕೃತ್ಯಗಳಲ್ಲಿ ಯಾವುದಾದರೊಂದನ್ನು ಒಬ್ಬನೇ ಅಥವಾ ಯಾರೇ ವ್ಯಕ್ತಿಯೊಂದಿಗೆ ಜಂಟಿಯಾಗಿ ಮಾಡುವ ಮೂಲಕ ಆ ಅಪರಾಧವನ್ನು ಮಾಡುವುದರಲ್ಲಿ ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಸಹಕರಿಸಿದ್ದರೆ ಅವನು ಆ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

*ದೃಷ್ಟಾಂತಗಳು*

(ಎ) ‘ಎ’ ಮತ್ತು ‘ಬಿ’ ಪ್ರತ್ಯೇಕವಾಗಿ ಮತ್ತು ಬೇರೆ ಬೇರೆ ಸಮಯಗಳಲ್ಲಿ ‘ಜೆಡ್’ಗೆ ಸ್ವಲ್ಪ ಸ್ವಲ್ಪವಾಗಿ ವಿಷವನ್ನು ಕೊಡುವ ಮೂಲಕ ‘ಜೆಡ್’ನನ್ನು ಕೊಲೆ ಮಾಡಲು ಒಪ್ಪಿಕೊಳ್ಳುತ್ತಾರೆ. ‘ಜೆಡ್’ನನ್ನು ಕೊಲೆ ಮಾಡುವ ಉದ್ದೇಶದಿಂದ ಒಪ್ಪಿಕೊಂಡಂತೆ ‘ಎ’ ಮತ್ತು ‘ಬಿ’ ‘ಜೆಡ್’ಗೆ ವಿಷವನ್ನು ಕೊಡುತ್ತಾರೆ. ಹಾಗೆ ಹಲವಾರು ಬಾರಿ ಕೊಟ್ಟ ವಿಷದ ಪರಿಣಾಮದಿಂದ ‘ಜೆಡ್’ನು ಮರಣ ಹೊಂದುತ್ತಾನೆ. ಇಲ್ಲಿ ‘ಎ’ ಮತ್ತು ‘ಬಿ’ ಇಬ್ಬರೂ ಕೊಲೆ ಮಾಡಲು ಉದ್ದೇಶಪೂರ್ವಕವಾಗಿ ಸಹಕರಿಸುತ್ತಾರೆ. ಆದಕಾರಣ, ಅವರಿಬ್ಬರು ಮರಣಕ್ಕೆ ಕಾರಣವಾದ ಕೃತ್ಯವನ್ನು ಮಾಡುವುದರಿಂದ, ಅವರಿಬ್ಬರ ಕೃತ್ಯಗಳು ಪ್ರತ್ಯೇಕವಾಗಿದ್ದರೂ ಅವರಿಬ್ಬರೂ ಆ ಅಪರಾಧದ ತಪ್ಪಿತಸ್ಥರಾಗುತ್ತಾರೆ.

(ಬಿ) ‘ಎ’ ಮತ್ತು ‘ಬಿ’ ಜಂಟಿ ಜೈಲರುಗಳು, ಹಾಗಾಗಿ ಅವರು, ಒಬ್ಬರ ಅನಂತರ ಇನ್ನೊಬ್ಬರು ಆರು ಗಂಟೆಗಳಿಗೊಮ್ಮೆ ‘ಜೆಡ್’ ಕೈದಿಯ ಮೇಲ್ವಿಚಾರಣೆಯನ್ನು ಹೊಂದಿರುತ್ತಾರೆ. ‘ಎ’ ಮತ್ತು ‘ಬಿ’ಯು ‘ಜೆಡ್’ನನ್ನು ಮರಣವನ್ನುಂಟು ಮಾಡುವ ಉದ್ದೇಶದಿಂದ ಅವರ ಹಾಜರಾತಿಯಲ್ಲಿ ‘ಜೆಡ್’ಗೆ ಒದಗಿಸಿದ ಆಹಾರವನ್ನು ಕಾನೂನುಬಾಹಿರವಾಗಿ ಅವನಿಗೆ ಕೊಡದೆ ಮರಣದ ಪರಿಣಾಮವನ್ನು ಉಂಟುಮಾಡುವುದಕ್ಕೆ ತಿಳಿದೂ ತಿಳಿದೂ ಸಹಕರಿಸುತ್ತಾರೆ. ‘ಜೆಡ್’ ಹಸಿವಿನಿಂದ ಮರಣ ಹೊಂದುತ್ತಾನೆ. ಹೀಗೆ ‘ಎ’ ಮತ್ತು ‘ಬಿ’ ಇಬ್ಬರೂ ‘ಜೆಡ್’ನ ಕೊಲೆಯ ತಪ್ಪಿತಸ್ಥರಾಗುತ್ತಾರೆ.

(ಸಿ) ‘ಎ’ ಎಂಬ ಜೈಲರ್ ‘ಜೆಡ್’ ಎಂಬ ಕೈದಿಯ ಮೇಲ್ವಿಚಾರಣೆಯನ್ನು ಹೊಂದಿರುತ್ತಾನೆ. ‘ಎ’ನು ‘ಜೆಡ್’ಗೆ ಮರಣವನ್ನು ಉಂಟುಮಾಡುವ ಉದ್ದೇಶದಿಂದ ‘ಜೆಡ್’ಗೆ ಆಹಾರವನ್ನು ಕಾನೂನುಬಾಹಿರವಾಗಿ ತಪ್ಪಿಸಿರುತ್ತಾನೆ. ಆ ಪರಿಣಾಮವಾಗಿ ‘ಜೆಡ್’ನು ಬಹಳ ನಿಶ್ಶಕ್ತನಾಗುತ್ತಾನೆ. ಆದರೆ, ಆ ಹಸಿವು ಅವನಿಗೆ ಮರಣವನ್ನುಂಟು ಮಾಡುವಷ್ಟಿರುವುದಿಲ್ಲ. ‘ಎ’ನನ್ನು ಅವನ ಹುದ್ದೆಯಿಂದ ಪದಚ್ಯುತಗೊಳಿಸಲಾಗುತ್ತದೆ. ‘ಬಿ’ನು ಅವನ ಉತ್ತರಾಧಿಕಾರಿಯಾಗುತ್ತಾನೆ. ‘ಎ’ನೊಂದಿಗೆ ಒಳಸಂಚು ಮಾಡದೆ ಅಥವಾ ಸಹಕರಿಸದೆ

‘ಬಿ’ನು ‘ಜೆಡ್’ಗೆ ತಾನು ಮರಣವನ್ನುಂಟು ಮಾಡುವ ಸಂಭವವಿದೆಯೆಂದು ತಿಳಿದಿದ್ದೂ ಕಾನೂನುಬಾಹಿರವಾಗಿ ‘ಜೆಡ್’ಗೆ ಆಹಾರ ಕೊಡುವುದಿಲ್ಲ. ‘ಜೆಡ್’ ಹಸಿವಿನಿಂದ ಮರಣ ಹೊಂದುತ್ತಾನೆ. ‘ಬಿ’ನು ಕೊಲೆಯ ತಪ್ಪಿತಸ್ಥನಾಗುತ್ತಾನೆ. ಆದರೆ, ‘ಏ’ನು ‘ಬಿ’ನೊಂದಿಗೆ ಸಹಕರಿಸದಿದ್ದುದರಿಂದ ‘ಏ’ನು ಕೊಲೆಯ ಪ್ರಯತ್ನಕ್ಕಾಗಿ ಮಾತ್ರ ತಪ್ಪಿತಸ್ಥನಾಗುತ್ತಾನೆ.

(9) ಆಪರಾಧಿಕ ಕೃತ್ಯವನ್ನು ಮಾಡುವುದರಲ್ಲಿ ಹಲವು ವ್ಯಕ್ತಿಗಳು ತೊಡಗಿದ್ದರೆ ಅಥವಾ ಸಂಬಂಧಪಟ್ಟಿದ್ದರೆ, ಆ ಕೃತ್ಯದ ಕಾರಣದಿಂದಾಗಿ ಅವರು ಬೇರೆ ಬೇರೆ ಅಪರಾಧಗಳ ಬಗ್ಗೆಯೂ ತಪ್ಪಿತಸ್ಥರಾಗಬಹುದು.

*ದೃಷ್ಟಾಂತ*

‘ಏ’ನು ತೀವ್ರ ಉದ್ರೇಕದ ಸನ್ನಿವೇಶಗಳಲ್ಲಿ ‘ಜೆಡ್’ನ ಮೇಲೆರಗಿ ಆತನನ್ನು ಕೊಂದರೆ ಕೊಲೆಯೆನ್ನಲಾಗದ ಆಪರಾಧಿಕ ಮಾನವ ಹತ್ಯೆ ಮಾತ್ರವೆನಿಸುತ್ತದೆ ಹೊರತು ಕೊಲೆ ಎನಿಸುವುದಿಲ್ಲ. ‘ಬಿ’ನು ‘ಜೆಡ್’ ನ ಮೇಲಿನ ವೈಮನಸ್ಯದಿಂದ ಮತ್ತು ಅವನನ್ನು ಕೊಲೆ ಮಾಡುವ ಉದ್ದೇಶದಿಂದ ಮತ್ತು ಉದ್ರೇಕಕ್ಕೆ ಒಳಗಾಗದೆಯೇ ‘ಜೆಡ್’ನನ್ನು ಕೊಲೆ ಮಾಡಲು ‘ಏ’ನಿಗೆ ನೆರವಾಗುತ್ತಾನೆ. ಇಲ್ಲಿ ‘ಏ’ ಮತ್ತು ‘ಬಿ’ ಇಬ್ಬರೂ ‘ಜೆಡ್’ನ ಮರಣವುಂಟು ಮಾಡುವುದರಲ್ಲಿ ತೊಡಗಿದ್ದರೂ ‘ಬಿ’ನು ಕೊಲೆಯ ತಪ್ಪಿತಸ್ಥನಾಗುತ್ತಾನೆ. ‘ಏ’ನು ಕೇವಲ ಆಪರಾಧಿಕ ಮಾನವ ಹತ್ಯೆಯ ತಪ್ಪಿತಸ್ಥನಾಗುತ್ತಾನೆ.

## ಅಧ್ಯಾಯ II

## ದಂಡನೆಗಳು

**4. ದಂಡನೆಗಳು.-** ಈ ಸಂಹಿತೆಯ ಮೇರೆಗೆ ಅಪರಾಧಿಗಳಿಗೆ ವಿಧಿಸಬಹುದಾದ ದಂಡನೆಗಳು ಕೆಳಕಂಡಂತಿವೆ,-

(ಎ) ಮರಣದಂಡನೆ;

(ಬಿ) ಆಜೀವ ಕಾರಾವಾಸ;

(ಸಿ) ಎರಡು ವಿಧದ ಕಾರಾವಾಸ ಎಂದರೆ:-

(1) ಕಠಿಣ ಕಾರಾವಾಸ ಎಂದರೆ, ಕಷ್ಟಕರವಾದ ದುಡಿಮೆ ಸಹಿತ;

(2) ಸಾದಾ ಕಾರಾವಾಸ;

(ಡಿ) ಸ್ವತ್ತಿನ ಮುಟ್ಟುಗೋಲು;

(ಇ) ಜುಲ್ಮಾನೆ;

(ಎಫ್) ಸಮುದಾಯ ಸೇವೆ.

**5. ದಂಡನೆಯನ್ನು ಕಡಿಮೆ ಮಾಡುವುದು.-** ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ**,** 2023 (2023ರ 46)ರ 474ನೇ ಪ್ರಕರಣಕ್ಕೆ ಅನುಸಾರವಾಗಿ ಈ ಸಂಹಿತೆಯ ಅಡಿಯಲ್ಲಿ ವಿಧಿಸಲಾದ ಯಾವುದೇ ದಂಡನೆಯನ್ನು ಸಮುಚಿತ ಸರ್ಕಾರವು ಅಪರಾಧಿಯ ಸಮ್ಮತಿಯಿಲ್ಲದೆಯೇ ಇತರ ಯಾವುದೇ ದಂಡನೆಯನ್ನು ಕಡಿಮೆ ಮಾಡಬಹುದು.

*ವಿವರಣೆ.*- ಈ ಪ್ರಕರಣದ ಉದ್ದೇಶಗಳಿಗಾಗಿ ‘ಸಮುಚಿತ ಸರ್ಕಾರ’ ಎಂದರೆ:-

(ಎ) ಯಾವ ಮೊಕದ್ದಮೆಗಳಲ್ಲಿ ವಿಧಿಸಿರುವ ದಂಡನೆಯು ಮರಣದಂಡನೆಯಾಗಿರುವುದೋ ಅಥವಾ ಯಾವ ವಿಷಯಕ್ಕೆ ಒಕ್ಕೂಟ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವುದೋ ಆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ವಿರುದ್ಧ ಮಾಡಿದ ಅಪರಾಧಕ್ಕಾಗಿ ವಿಧಿಸಿರುವ ದಂಡನೆಯಾಗಿರುವುದೋ ಆ ಮೊಕದ್ದಮೆಗಳಲ್ಲಿ, ಕೇಂದ್ರ ಸರ್ಕಾರ; ಮತ್ತು

(ಬಿ) ಯಾವ ಮೊಕದ್ದಮೆಗಳಲ್ಲಿ ವಿಧಿಸಿರುವ ದಂಡನೆಯು (ಅದು ಮರಣದಂಡನೆಯಾಗಿರಲಿ ಅಥವಾ ಅಲ್ಲದಿರಲಿ) ಯಾವ ವಿಷಯಕ್ಕೆ ರಾಜ್ಯದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವುದೋ ಆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ವಿರುದ್ಧ ಮಾಡಿದ ಅಪರಾಧಕ್ಕಾಗಿ ವಿಧಿಸಿರುವ ದಂಡನೆಯಾಗಿರುವುದೋ ಆ ಮೊಕದ್ದಮೆಗಳಲ್ಲಿ, ಯಾವ ರಾಜ್ಯದ ಒಳಗೆ ಅಪರಾಧಿಗೆ ದಂಡನೆ ವಿಧಿಸಲಾಗಿದೆಯೋ ಆ ರಾಜ್ಯದ ಸರ್ಕಾರ.

**6. ದಂಡನೆಯ ಅವಧಿಗಳ ಭಾಗಗಳು.-** ದಂಡನೆಯ ಅವಧಿಗಳ ಭಾಗಗಳನ್ನು ಲೆಕ್ಕ ಹಾಕುವಾಗ, ಅನ್ಯಥಾ ಉಪಬಂಧಿಸಿದ ಹೊರತು ಆಜೀವ ಕಾರಾವಾಸವನ್ನು ಇಪ್ಪತ್ತು ವರ್ಷಗಳ ಕಾರಾವಾಸಕ್ಕೆ ಸಮವಾದುದು ಎಂದು ಪರಿಗಣಿಸತಕ್ಕದ್ದು.

**7. (ಕಾರಾವಾಸದ ಕೆಲವು ಸಂದರ್ಭಗಳಲ್ಲಿ) ದಂಡನೆಯು ಪೂರ್ಣವಾಗಿ ಅಥವಾ ಭಾಗಶಃ ಕಠಿಣ ಕಾರಾವಾಸ ಅಥವಾ ಸಾದಾ ಕಾರಾವಾಸ ಆಗಿರಬಹುದು.-** ಅಪರಾಧಿಯು ಎರಡು ವಿಧದ ಕಾರಾವಾಸಗಳಲ್ಲಿ ಯಾವುದೇ ಒಂದು ವಿಧದ ಕಾರಾವಾಸದಿಂದ ದಂಡನೀಯನಾಗಿರುವ ಪ್ರತಿಯೊಂದು ಸಂದರ್ಭದಲ್ಲಿ, ಅಂಥ ಕಾರಾವಾಸವು ಪೂರ್ಣವಾಗಿ ಕಠಿಣ ಕಾರಾವಾಸವಾಗಿರತಕ್ಕದ್ದು ಅಥವಾ ಅಂಥ ಕಾರಾವಾಸವು ಪೂರ್ಣವಾಗಿ ಸಾದಾ ಕಾರಾವಾಸ ಆಗಿರತಕ್ಕದ್ದು ಅಥವಾ ಅಂಥ ಕಾರಾವಾಸದ ಯಾವುದೇ ಭಾಗವು ಕಠಿಣ ಕಾರಾವಾಸವಾಗಿರತಕ್ಕದ್ದು ಮತ್ತು ಉಳಿದುದು ಸಾದಾ ಕಾರಾವಾಸ ಆಗಿರತಕ್ಕದ್ದು ಎಂದು ದಂಡನೆ ಆದೇಶದಲ್ಲಿ ನಿರ್ದೇಶಿಸಲು ಅಪರಾಧಿಗೆ ದಂಡನೆ ವಿಧಿಸುವ ನ್ಯಾಯಾಲಯವು ಸಕ್ಷಮವಾಗಿರತಕ್ಕದ್ದು.

**8. ಜುಲ್ಮಾನೆಯ ಮೊಬಲಗು, ಜುಲ್ಮಾನೆ, ಇತ್ಯಾದಿ ಸಂದಾಯ ಮಾಡಲು ತಪ್ಪಿದ್ದಲ್ಲಿ ಹೊಣೆಗಾರಿಕೆ.-** (1) ಜುಲ್ಮಾನೆಯನ್ನು ಎಷ್ಟು ಮೊಬಲಗಿನವರೆಗೆ ವಿಸ್ತರಿಸಬಹುದೆಂಬ ಬಗ್ಗೆ ಸ್ಪಷ್ಟಗೊಳಿಸದಿದ್ದಲ್ಲಿ ಅಪರಾಧಿಗೆ ವಿಧಿಸಬಹುದಾದ ಮೊಬಲಗಿಗೆ ಮಿತಿಯಿರುವುದಿಲ್ಲ, ಆದರೆ ಮೊಬಲಗು ಅತ್ಯಧಿಕವಾಗಿರತಕ್ಕದ್ದಲ್ಲ.

(2) ಪ್ರತಿಯೊಂದು ಅಪರಾಧದ ಸಂದರ್ಭದಲ್ಲಿ,-

(ಎ) ಕಾರಾವಾಸ ಹಾಗೂ ಜುಲ್ಮಾನೆ ಇವೆರಡರಿಂದಲೂ ದಂಡನೀಯವಾದಾಗ, ಅಪರಾಧಿಗೆ ಕಾರಾವಾಸ ಸಹಿತವಾಗಿ ಅಥವಾ ರಹಿತವಾಗಿ ಜುಲ್ಮಾನೆಯನ್ನು ವಿಧಿಸಿದ್ದಾಗ;

(ಬಿ) ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಜುಲ್ಮಾನೆಯಿಂದ ಮಾತ್ರವೇ ದಂಡನೀಯವಾದಾಗ, ಅಪರಾಧಿಗೆ ಜುಲ್ಮಾನೆಯ ದಂಡ ವಿಧಿಸಿದ್ದಾಗ,

ಅಪರಾಧಿಯು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದರೆ, ಅವನು ನಿರ್ದಿಷ್ಟ ಅವಧಿಯ ಕಾರಾವಾಸವನ್ನು ಅನುಭವಿಸತಕ್ಕದ್ದೆಂದು ಅಂಥ ಅಪರಾಧಿಗೆ ದಂಡನೆ ವಿಧಿಸುವ ನ್ಯಾಯಾಲಯವು, ಆ ದಂಡನೆಯ ಆದೇಶದಲ್ಲಿ ನಿರ್ದೇಶಿಸಲು ಸಕ್ಷಮವಾಗಿರತಕ್ಕದ್ದು ಮತ್ತು ಆ ಕಾರಾವಾಸವನ್ನು ಅವನಿಗೆ ವಿಧಿಸಿರಬಹುದಾದ ಯಾವುದೇ ಇತರ ಕಾರಾವಾಸದ ಅಥವಾ ದಂಡನೆಯನ್ನು ತಗ್ಗಿಸುವುದರ ಪ್ರಕಾರ ಅವನು ಗುರಿಯಾಗಬಹುದಾದ ಕಾರಾವಾಸದ ಜೊತೆಗೆ ಅನುಭವಿಸತಕ್ಕದ್ದು.

(3) ಅಪರಾಧಿಯು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕೆ ನ್ಯಾಯಾಲಯವು ಅವನನ್ನು, ಯಾವ ಅವಧಿಯ ಕಾರಾವಾಸಕ್ಕೆ ನಿರ್ದೇಶನ ನೀಡಬಹುದೋ ಆ ಅವಧಿಯು, ಆ ಅಪರಾಧವು, ಕಾರಾವಾಸ ಮತ್ತು ಜುಲ್ಮಾನೆ ಇವೆರಡರಿಂದಲೂ ದಂಡನೀಯವಾಗಿದ್ದರೆ, ಆ ಅಪರಾಧಕ್ಕೆ ನಿಗದಿಪಡಿಸಿದ ಗರಿಷ್ಠ ಅವಧಿಯ ಕಾರಾವಾಸದ ನಾಲ್ಕನೇ ಒಂದು ಭಾಗಕ್ಕಿಂತ (ಕಾಲು ಭಾಗಕ್ಕಿಂತ) ಅಧಿಕವಾಗಿರತಕ್ಕದ್ದಲ್ಲ.

(4) ಅಪರಾಧಿಯು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕೆ ಅಥವಾ ಸಮುದಾಯ ಸೇವೆಯನ್ನು ಮಾಡಲು ತಪ್ಪಿದ್ದಲ್ಲಿ ನ್ಯಾಯಾಲಯವು ವಿಧಿಸುವ ಕಾರಾವಾಸವು, ಆ ಅಪರಾಧದ ಬಗ್ಗೆ ಅವನಿಗೆ ವಿಧಿಸಬಹುದಾದ ಯಾವುದೇ ಬಗೆಯ ಕಾರಾವಾಸವಾಗಿರಬಹುದು.

(5) ಅಪರಾಧವು ಜುಲ್ಮಾನೆ ಅಥವಾ ಸಮುದಾಯ ಸೇವೆಯಿಂದ ದಂಡನೀಯವಾಗಿದ್ದರೆ, ಆ ಜುಲ್ಮಾನೆಯನ್ನು ಸಂದಾಯ ಮಾಡಲು ಅಥವಾ ಸಮುದಾಯ ಸೇವೆಯನ್ನು ಸಲ್ಲಿಸಲು ತಪ್ಪಿದ್ದಲ್ಲಿ ನ್ಯಾಯಾಲಯವು ವಿಧಿಸಬಹುದಾದ ಕಾರಾವಾಸವು ಸಾದಾ ಕಾರಾವಾಸ ಆಗಿರತಕ್ಕದ್ದು ಮತ್ತು ಜುಲ್ಮಾನೆಯನ್ನು ಸಂದಾಯ ಮಾಡಲು ಅಥವಾ ಸಮುದಾಯ ಸೇವೆಯನ್ನು ಸಲ್ಲಿಸಲು ತಪ್ಪಿದ್ದಲ್ಲಿ ಅಪರಾಧಿಯನ್ನು ಯಾವ ಅವಧಿಯವರೆಗೆ ಕಾರಾವಾಸದಲ್ಲಿಡಬೇಕೆಂದು ನ್ಯಾಯಾಲಯವು ನಿರ್ದೇಶಿಸುವ ಅವಧಿಯು,-

(ಎ) ಜುಲ್ಮಾನೆಯ ಮೊಬಲಗು ಐದು ಸಾವಿರ ರೂಪಾಯಿಗಳಿಗೆ ಮೀರದಿರುವಾಗ ಎರಡು ತಿಂಗಳಿಗೆ;

(ಬಿ) ಜುಲ್ಮಾನೆಯ ಮೊಬಲಗು ಹತ್ತು ಸಾವಿರ ರೂಪಾಯಿಗಳಿಗೆ ಮೀರದಿರುವಾಗ ನಾಲ್ಕು ತಿಂಗಳಿಗೆ; ಮತ್ತು

(ಸಿ) ಇತರೆ ಸಂದರ್ಭಗಳಲ್ಲಿ ಒಂದು ವರ್ಷಕ್ಕೆ

- ಮೀರತಕ್ಕದ್ದಲ್ಲ.

(6) (ಎ) ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕೆ ವಿಧಿಸುವ ಕಾರಾವಾಸವು, ಆ ಜುಲ್ಮಾನೆಯು ಸಂದಾಯವಾದೊಡನೆಯೇ ಅಥವಾ ಕಾನೂನು ಪ್ರಕ್ರಿಯೆಯ ಮೂಲಕ ವಸೂಲಾದೊಡನೆಯೇ ಮುಕ್ತಾಯವಾಗತಕ್ಕದ್ದು.

(ಬಿ) ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕೆ, ನಿಗದಿಪಡಿಸಿದ ಕಾರಾವಾಸದ ಅವಧಿಯು ಮುಗಿಯುವುದಕ್ಕೆ ಮುಂಚೆಯೇ, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ಅನುಭವಿಸಿದ ಕಾರಾವಾಸದ ಅವಧಿಯು, ಇನ್ನೂ ಸಂದಾಯವಾಗತಕ್ಕ ಜುಲ್ಮಾನೆಯ ಭಾಗಕ್ಕೆ ಪ್ರಮಾಣಾನುಸಾರವಾಗಿ ಕಡಿಮೆಯಾಗಿರದ ಹಾಗೆ ಜುಲ್ಮಾನೆಯ ಒಂದು ಪ್ರಮಾಣಾನುಸಾರವಾದ ಭಾಗವು ಸಂದಾಯವಾದರೆ ಅಥವಾ ವಸೂಲಾದರೆ ಕಾರಾವಾಸವು ಮುಕ್ತಾಯವಾಗತಕ್ಕದ್ದು.

*ದೃಷ್ಟಾಂತ*

'ಏ'ನಿಗೆ ಒಂದು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ಮತ್ತು ಅದಕ್ಕೆ ತಪ್ಪಿದರೆ ನಾಲ್ಕು ತಿಂಗಳ ಕಾರಾವಾಸವನ್ನು ವಿಧಿಸಲಾಗಿದೆ. ಇಲ್ಲಿ, ಕಾರಾವಾಸದ ಒಂದು ತಿಂಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಏಳುನೂರ ಐವತ್ತು ರೂಪಾಯಿಗಳ ಜುಲ್ಮಾನೆ ಸಂದಾಯವಾದರೆ ಅಥವಾ ವಸೂಲಿಯಾದರೆ ಮೊದಲನೆಯ ತಿಂಗಳು ಮುಗಿಯುತ್ತಲೇ 'ಏ'ನನ್ನು ಬಿಡುಗಡೆ ಮಾಡಲಾಗುತ್ತದೆ. ಮೊದಲನೆಯ ತಿಂಗಳು ಮುಗಿಯುವ ಸಮಯದಲ್ಲಿ ಅಥವಾ ಅದರ ಅನಂತರದ ಯಾವುದೇ ಸಮಯದಲ್ಲಿ 'ಏ'ನು ಕಾರಾವಾಸದಲ್ಲಿ ಮುಂದುವರಿಯುತ್ತಿರುವಾಗ ಏಳುನೂರ ಐವತ್ತು ರೂಪಾಯಿಗಳು ಸಂದಾಯವಾದರೆ ಅಥವಾ ವಸೂಲಿಯಾದರೆ 'ಏ'ನನ್ನು ಆ ಕೂಡಲೇ ಬಿಡುಗಡೆ ಮಾಡಲಾಗುತ್ತದೆ. ಕಾರಾವಾಸದ ಎರಡು ತಿಂಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಜುಲ್ಮಾನೆಯ ಪೈಕಿ ಐದು ನೂರು ರೂಪಾಯಿಗಳು ಸಂದಾಯವಾದರೆ ಅಥವಾ ವಸೂಲಿಯಾದರೆ, ಎರಡು ತಿಂಗಳು ಮುಗಿಯುತ್ತಲೇ 'ಏ'ನನ್ನು ಬಿಡುಗಡೆ ಮಾಡಲಾಗುತ್ತದೆ. ಆ ಎರಡು ತಿಂಗಳು ಮುಗಿಯುವ ಸಮಯದಲ್ಲಿ ಅಥವಾ ಅನಂತರದ ಯಾವುದೇ ಸಮಯದಲ್ಲಿ 'ಏ'ನು ಕಾರಾವಾಸದಲ್ಲಿ ಮುಂದುವರಿಯುತ್ತಿರುವಾಗ ಐದು ನೂರು ರೂಪಾಯಿಗಳು ಸಂದಾಯವಾದರೆ ಅಥವಾ ವಸೂಲಿಯಾದರೆ 'ಏ'ನನ್ನು ಆ ಕೂಡಲೇ ಬಿಡುಗಡೆ ಮಾಡಲಾಗುತ್ತದೆ.

(7) ದಂಡನೆಯ ಆದೇಶವನ್ನು ಮಾಡಿದ ತರುವಾಯ ಆರು ವರ್ಷಗಳ ಒಳಗೆ ಮತ್ತು ಆ ದಂಡನೆಯ ಆದೇಶದ ಮೇರೆಗೆ ಅಪರಾಧಿಯು ಆರು ವರ್ಷಗಳಿಗೆ ಮೀರಿದ ಅವಧಿಯ ಕಾರಾವಾಸಕ್ಕೆ ಗುರಿಯಾದರೆ, ಆಗ ಆ ಅವಧಿಯು ಮುಗಿಯುವ ಮುನ್ನ ಯಾವುದೇ ಸಮಯದಲ್ಲಿ ಜುಲ್ಮಾನೆಯನ್ನು ಅಥವಾ ಸಂದಾಯವಾಗದೆ ಉಳಿದ ಅದರ ಯಾವುದೇ ಭಾಗವನ್ನು ವಸೂಲು ಮಾಡಬಹುದು ಮತ್ತು ಆ ಅಪರಾಧಿಯು ಮರಣ ಹೊಂದಿದರೆ ಅವನ ಋಣಗಳಿಗೆ ಅವನ ಮರಣದ ತರುವಾಯ ಯಾವ ಸ್ವತ್ತು ಕಾನೂನುಸಮ್ಮತವಾಗಿ ಹೊಣೆಗೆ ಗುರಿಯಾಗುತ್ತದೋ ಆ ಯಾವುದೇ ಸ್ವತ್ತು ಆ ಹೊಣೆಯಿಂದ ವಿಮೋಚಿತವಾಗುವುದಿಲ್ಲ.

**9. ಹಲವು ಅಪರಾಧಗಳನ್ನು ಒಳಗೊಂಡಿರುವ ಅಪರಾಧದ ದಂಡನೆಗೆ ಮಿತಿ.-** (1) ಅಪರಾಧವೆಂದೆನಿಸುವ ಯಾವುದೇ ಕೃತ್ಯವನ್ನು ಭಾಗಗಳಲ್ಲಿ ಮಾಡಿದ್ದರೆ, ಅಂಥ ಭಾಗಗಳಲ್ಲಿ ಯಾವುದಾದರೂ ಅಪರಾಧವಾಗಿದೆಯೆಂದೆನಿಸಿದರೆ, ಅಪರಾಧಿಯು ಮಾಡಿದ ಅಂಥ ಅಪರಾಧಗಳಲ್ಲಿ ಒಂದಕ್ಕೆ ವಿಧಿಸಬಹುದಾದ ದಂಡನೆಗಿಂತ ಹೆಚ್ಚಿನ ದಂಡನೆಯನ್ನು ವಿಧಿಸಬೇಕೆಂದು ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, ಹೆಚ್ಚಿನ ದಂಡನೆಯನ್ನು ವಿಧಿಸತಕ್ಕದ್ದಲ್ಲ.

(2) ಯಾವುದಾದರೂ,-

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವ ಕಾನೂನಿನಲ್ಲಿ ಅಪರಾಧಗಳನ್ನು ಪರಿಭಾಷಿಸಲಾಗಿದೆಯೋ ಅಥವಾ ಅವುಗಳಿಗೆ ದಂಡನೆ ವಿಧಿಸಲಾಗಿದೆಯೋ ಆ ಯಾವುದೇ ಕಾನೂನಿನಲ್ಲಿ ಎರಡು ಅಥವಾ ಹೆಚ್ಚು ಪ್ರತ್ಯೇಕ ಪರಿಭಾಷೆಗಳ ಮೇರೆಗೆ ಅಪರಾಧವೆಂದೆನಿಸಿದರೆ; ಅಥವಾ

(ಬಿ) ಹಲವು ಕೃತ್ಯಗಳ ಪೈಕಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕೃತ್ಯಗಳು ಅಪರಾಧವೆಂದೆನಿಸಿದಾಗ, ಆ ಅನೇಕ ಕೃತ್ಯಗಳನ್ನು ಒಟ್ಟಾಗಿ ಪರಿಗಣಿಸಿದಾಗ ಅದೊಂದು ಬೇರೆಯೇ ಅಪರಾಧವೆಂದೆನಿಸಿದಾಗ

- ಆ ಅಪರಾಧಿಯನ್ನು ಯಾವ ನ್ಯಾಯಾಲಯವು ಅಧಿವಿಚಾರಣೆ ಮಾಡುತ್ತದೋ ಆ ನ್ಯಾಯಾಲಯವು ಅಂಥ ಅಪರಾಧಗಳಲ್ಲಿ ಯಾವುದೇ ಒಂದು ಅಪರಾಧಕ್ಕಾಗಿ ಅವನಿಗೆ ಕೊಡಬಹುದಾದ ದಂಡನೆಗಿಂತ ಹೆಚ್ಚು ಕಠಿಣ ದಂಡನೆಯಿಂದ ಅವನು ದಂಡಿತನಾಗತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) ʻಎʼನು ʻಜೆಡ್ʼನಿಗೆ ಬೆತ್ತದಿಂದ ಐವತ್ತು ಏಟುಗಳನ್ನು ಹೊಡೆಯುತ್ತಾನೆ. ಇಲ್ಲಿ ʻಎʼನು ಆ ಎಲ್ಲ ಏಟುಗಳಿಂದ ಮತ್ತು ಅಂಥ ಪ್ರತಿಯೊಂದು ಏಟಿನಿಂದ ʻಜೆಡ್ʼನಿಗೆ ಸ್ವಯಿಚ್ಛೆಯಿಂದ ಗಾಯವುಂಟುಮಾಡುವ ಅಪರಾಧವನ್ನು ಮಾಡಿರಬಹುದು. ʻಎʼನನ್ನು ಪ್ರತಿಯೊಂದು ಏಟಿನ ಬಗ್ಗೆ ದಂಡನೆಗೆ ಗುರಿಪಡಿಸಬಹುದಾಗಿದ್ದರೆ, ಏಟಿಗೊಂದರಂತೆ ಐವತ್ತು ವರ್ಷಗಳವರೆಗೆ ಕಾರಾವಾಸದಲ್ಲಿ ಇಡಬೇಕಾದೀತು. ಆದರೆ ಅವನು ಆ ಎಲ್ಲ ಏಟುಗಳ ಬಗ್ಗೆ ಒಂದೇ ದಂಡನೆಗೆ ಗುರಿಯಾಗುತ್ತಾನೆ.

(ಬಿ) ಆದರೆ ʻಎʼನು ʻಜೆಡ್ʼನಿಗೆ ಏಟು ಹೊಡೆಯುತ್ತಿರುವಾಗ ʻವೈʼನು ಮಧ್ಯಪ್ರವೇಶ ಮಾಡಿದರೆ ಮತ್ತು ʻಎʼನು ʻವೈʼನಿಗೆ ಉದ್ದೇಶಪೂರ್ವಕವಾಗಿ ಏಟು ಹೊಡೆದರೆ ಹಾಗೆ ʻವೈʼನಿಗೆ ಹೊಡೆದ ಏಟು ʻಎʼನು ಸ್ವಯಿಚ್ಛೆಯಿಂದ ʻಜೆಡ್ʼನಿಗೆ ಯಾವ ಕೃತ್ಯದ ಮೂಲಕ ಗಾಯವುಂಟು ಮಾಡುತ್ತಾನೋ ಅದರ ಭಾಗವಾಗುವುದಿಲ್ಲ. ಈ ಕಾರಣದಿಂದ ʻಎʼನು ʻಜೆಡ್ʼನಿಗೆ ಸ್ವಯಿಚ್ಛೆಯಿಂದ ಗಾಯವುಂಟು ಮಾಡಿದ್ದಕ್ಕೆ ಒಂದು ದಂಡನೆಗೆ ಗುರಿಯಾಗುತ್ತಾನೆ ಮತ್ತು ʻವೈʼನಿಗೆ ಹೊಡೆದ ಏಟಿನ ಬಗ್ಗೆ ಇನ್ನೊಂದು ದಂಡನೆಗೂ ಗುರಿಯಾಗುತ್ತಾನೆ.

**10. ಯಾವ ಅಪರಾಧಕ್ಕಾಗಿ ವ್ಯಕ್ತಿಯು ತಪ್ಪಿತಸ್ಥನಾಗಿದ್ದಾನೆ ಎಂಬ ಬಗ್ಗೆ ತೀರ್ಪು ಸಂದೇಹ ವ್ಯಕ್ತಪಡಿಸಿರುವಾಗ ಹಲವು ಅಪರಾಧಗಳಲ್ಲಿ ಒಂದು ಅಪರಾಧದ ಬಗ್ಗೆ ತಪ್ಪಿತಸ್ಥನಿಗೆ ದಂಡನೆ.-** ತೀರ್ಪಿನಲ್ಲಿ ನಿರ್ದಿಷ್ಟಪಡಿಸಿದ ಹಲವು ಅಪರಾಧಗಳಲ್ಲಿ ವ್ಯಕ್ತಿಯು ಒಂದು ಅಪರಾಧದ ಬಗ್ಗೆ ತಪ್ಪಿತಸ್ಥನೆಂದೂ, ಆದರೆ ಆ ಹಲವು ಅಪರಾಧಗಳಲ್ಲಿ ಅವನು ಯಾವ ಅಪರಾಧದ ತಪ್ಪಿತಸ್ಥನೆಂಬುದು ಸಂದೇಹಾಸ್ಪದವಾಗಿದೆಯೆಂದು ತೀರ್ಪು ಕೊಟ್ಟಿರುವ ಎಲ್ಲ ಸಂದರ್ಭಗಳಲ್ಲೂ, ಆ ಎಲ್ಲ ಅಪರಾಧಗಳಿಗೆ ಒಂದೇ ಬಗೆಯ ದಂಡನೆಯನ್ನು ಉಪಬಂಧಿಸಿರದಿದ್ದರೆ, ಅತ್ಯಂತ ಕಡಿಮೆ ದಂಡನೆಯನ್ನು ಯಾವ ಅಪರಾಧಕ್ಕೆ ಕಲ್ಪಿಸಲಾಗಿದೆಯೋ ಅದರಿಂದ ಅವನು ದಂಡಿತನಾಗತಕ್ಕದ್ದು.

**11. ಏಕಾಂತ ಬಂಧನ.-** ಯಾವ ಅಪರಾಧದ ಬಗ್ಗೆ ಈ ಸಂಹಿತೆಯ ಮೇರೆಗೆ ಕಠಿಣ ಕಾರಾವಾಸದ ಆದೇಶವನ್ನು ಮಾಡಲು ನ್ಯಾಯಾಲಯಕ್ಕೆ ಅಧಿಕಾರವಿರುವುದೋ ಆ ಯಾವುದೇ ಅಪರಾಧಕ್ಕಾಗಿ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ, ಆ ನ್ಯಾಯಾಲಯವು, ತನ್ನ ದಂಡನೆಯ ಆದೇಶದ ಮೂಲಕ, ಅಪರಾಧಿಯು ಯಾವ ಅವಧಿಯ ಕಾರಾವಾಸದ ಬಗ್ಗೆ ದಂಡನೆಯ ಆದೇಶದಲ್ಲಿ ಹೇಳಲಾಗಿದೆಯೋ, ಆ ಅವಧಿಯ ಯಾವುದೇ ಭಾಗದವರೆಗೆ ಅಥವಾ ಭಾಗಗಳವರೆಗೆ, ಒಟ್ಟಿನಲ್ಲಿ ಮೂರು ತಿಂಗಳುಗಳಿಗೆ ಮೀರದ ಅವಧಿಯವರೆಗೆ, ಕೆಳಕಂಡ ಪ್ರಮಾಣಕ್ಕನುಸಾರವಾಗಿ ಎಂದರೆ:-

(ಎ) ಕಾರಾವಾಸದ ಅವಧಿಯು ಆರು ತಿಂಗಳಿಗೆ ಮೀರದಿದ್ದರೆ, ಒಂದು ತಿಂಗಳಿಗೆ ಮೀರದ ಅವಧಿಯವರೆಗೆ;

(ಬಿ) ಕಾರಾವಾಸದ ಅವಧಿಯು ಆರು ತಿಂಗಳಿಗೆ ಮೀರಿದ್ದು, ಆದರೆ ಒಂದು ವರ್ಷಕ್ಕೆ ಮೀರದಿದ್ದರೆ ಎರಡು ತಿಂಗಳಿಗೆ ಮೀರದ ಅವಧಿಯವರೆಗೆ;

(ಸಿ) ಕಾರಾವಾಸದ ಅವಧಿಯು ಒಂದು ವರ್ಷಕ್ಕೆ ಮೀರಿದರೆ, ಮೂರು ತಿಂಗಳಿಗೆ ಮೀರದ ಅವಧಿಯವರೆಗೆ

- ಅವನನ್ನು ಏಕಾಂತ ಬಂಧನದಲ್ಲಿ ಇರಿಸತಕ್ಕದ್ದೆಂದು ಆದೇಶಿಸಬಹುದು.

**12. ಏಕಾಂತ ಬಂಧನದ ಮಿತಿ.-** ಏಕಾಂತ ಬಂಧನದ ದಂಡನೆಯ ಆದೇಶವನ್ನು ಜಾರಿಗೊಳಿಸುವಾಗ, ಅಂಥ ಏಕಾಂತ ಬಂಧನವು, ಯಾವ ಸಂದರ್ಭದಲ್ಲೂ ಒಂದು ಸಲಕ್ಕೆ ಹದಿನಾಲ್ಕು ದಿವಸಗಳಿಗೆ ಮೀರತಕ್ಕದ್ದಲ್ಲ; ಆದರೆ, ಏಕಾಂತ ಬಂಧನದ ಅವಧಿಗಳ

ನಡುವಣ ಅಂತರಗಳು ಆ ಅವಧಿಗಳಿಗಿಂತಲೂ ಕಡಿಮೆಯದಾಗಿರಕೂಡದು; ಮತ್ತು ವಿಧಿಸಿದ ಕಾರಾವಾಸವು ಮೂರು ತಿಂಗಳಿಗೆ ಮೀರಿದ್ದರೆ, ಏಕಾಂತ ಬಂಧನವು, ಯಾವುದೇ ಒಂದು ತಿಂಗಳಲ್ಲಿ ಹಾಗೆ ವಿಧಿಸಿದ ಒಟ್ಟು ಕಾರಾವಾಸದ ಅವಧಿಯ ಏಳು ದಿವಸಗಳಿಗೆ ಮೀರತಕ್ಕದ್ದಲ್ಲ, ಆದರೆ ಏಕಾಂತ ಬಂಧನದ ಅವಧಿಗಳ ನಡುವಣ ಅಂತರವು ಅಂಥ ಅವಧಿಗೆ ಕಡಿಮೆಯದಾಗಿರತಕ್ಕದ್ದಲ್ಲ.

**13. ಹಿಂದಿನ ಅಪರಾಧ ನಿರ್ಣಯದ ತರುವಾಯ ಕೆಲವು ನಿರ್ದಿಷ್ಟ ಅಪರಾಧಗಳಿಗೆ ಹೆಚ್ಚಿಸಿದ ದಂಡನೆ.-** ಯಾರೇ ವ್ಯಕ್ತಿಯು, ಭಾರತದ ಯಾವುದೇ ನ್ಯಾಯಾಲಯದಿಂದ ಈ ಸಂಹಿತೆಯ Xನೇ ಅಧ್ಯಾಯ ಅಥವಾ XVIIನೇ ಅಧ್ಯಾಯದ ಮೇರೆಗೆ ಮೂರು ವರ್ಷಗಳ ಅವಧಿಯ ಅಥವಾ ಅದಕ್ಕೆ ಮೀರಿದ ಅವಧಿಯ ಯಾವುದೇ ಬಗೆಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಆ ಎರಡು ಅಧ್ಯಾಯಗಳಲ್ಲಿ ಯಾವುದರ ಪ್ರಕಾರವಾದರೂ ಅದೇ ಅವಧಿಗೆ, ಅದೇ ಬಗೆಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಅವನು ಮಾಡಿದ ಅಂಥ ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ ಆಜೀವ ಕಾರಾವಾಸಕ್ಕೆ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.

## ಅಧ್ಯಾಯ III

## ಸಾಮಾನ್ಯ ಅಪವಾದಗಳು

**14. ಕಾನೂನಿನ ಪ್ರಕಾರ ಬದ್ಧನಾಗಿರುವ ಅಥವಾ ಸಂಗತಿಯ ತಪ್ಪುಗ್ರಹಿಕೆಯಿಂದ ಕಾನೂನಿನ ಪ್ರಕಾರ ಬದ್ಧನಾಗಿರುವುದಾಗಿ ನಂಬಿರುವ ವ್ಯಕ್ತಿಯು ಮಾಡಿದ ಕೃತ್ಯ.-** ವ್ಯಕ್ತಿಯು ಕಾನೂನಿನ ತಪ್ಪುಗ್ರಹಿಕೆಯಿಂದ ಅಥವಾ ಸಂಗತಿಯ ತಪ್ಪುಗ್ರಹಿಕೆಯಿಂದಾಗಿ ಮಾಡಿರುವ ಯಾವುದನ್ನು, ಆದರೆ ಕಾನೂನಿನ ತಪ್ಪುಗ್ರಹಿಕೆಯಿಂದಲ್ಲದೆ ಅದನ್ನು ಮಾಡಲು ಕಾನೂನಿನ ಪ್ರಕಾರ ಬದ್ಧನಾಗಿರುವುದಾಗಿ ಸದ್ಭಾವನೆಯಿಂದ ನಂಬಿರುವನೋ ಆ ಯಾವುದೂ ಅಪರಾಧವಾಗುವುದಿಲ್ಲ.

*ದೃಷ್ಟಾಂತಗಳು*

(ಎ) ‘ಎ’ ಎಂಬ ಸೈನಿಕನು ಕಾನೂನಿನ ಆಣತಿಗಳಿಗನುಸಾರವಾಗಿ ತನ್ನ ವರಿಷ್ಠ ಅಧಿಕಾರಿಯ ಆದೇಶದ ಮೇರೆಗೆ ಜನಜಂಗುಳಿ ಮೇಲೆ ಗುಂಡು ಹಾರಿಸುತ್ತಾನೆ. ‘ಎ’ನು ಯಾವುದೇ ಅಪರಾಧ ಮಾಡಿದಂತಾಗುವುದಿಲ್ಲ;

(ಬಿ) ನ್ಯಾಯಾಲಯದ ಅಧಿಕಾರಿಯಾದ ‘ಎ’ನು, ‘ವೈ’ನನ್ನು ದಸ್ತಗಿರಿ ಮಾಡಲು ಆ ನ್ಯಾಯಾಲಯದಿಂದ ಆದೇಶಿತನಾಗಿದ್ದಾನೆ ಮತ್ತು ಸೂಕ್ತ ತನಿಖೆಯನ್ನು ನಡೆಸಿದ ತರುವಾಯ ‘ಜೆಡ್’ನೇ ‘ವೈ’ ಎಂದು ನಂಬಿ ದಸ್ತಗಿರಿ ಮಾಡುತ್ತಾನೆ. ‘ಎ’ನು ಯಾವುದೇ ಅಪರಾಧವನ್ನು ಮಾಡಿದಂತಾಗುವುದಿಲ್ಲ.

**15. ನ್ಯಾಯಿಕವಾಗಿ ಕಾರ್ಯನಿರ್ವಹಿಸುತ್ತಿರುವಾಗ ನ್ಯಾಯಾಧೀಶನ ಕಾರ್ಯ.-** ನ್ಯಾಯಾಧೀಶನು ತನಗೆ ಕಾನೂನಿನ ಮೂಲಕ ನೀಡಲಾದ ಅಥವಾ ನೀಡಲಾಗಿದೆಯೆಂದು ಸದ್ಭಾವನೆಯಿಂದ ತಾನು ನಂಬುವ ಯಾವುದೇ ಅಧಿಕಾರವನ್ನು ಚಲಾಯಿಸಿ ನ್ಯಾಯಿಕವಾಗಿ ಕಾರ್ಯನಿರ್ವಹಿಸುತ್ತಿರುವಾಗ ಮಾಡಿದ ಕಾರ್ಯವು ಅಪರಾಧವಾಗುವುದಿಲ್ಲ.

**16. ನ್ಯಾಯಾಲಯದ ತೀರ್ಪಿಗೆ ಅಥವಾ ಆದೇಶಕ್ಕೆ ಅನುಸಾರವಾಗಿ ಮಾಡಿದ ಕಾರ್ಯ.-** ಯಾವ ಕಾರ್ಯವನ್ನು ನ್ಯಾಯಾಲಯದ ತೀರ್ಪಿಗೆ ಅನುಸಾರವಾಗಿ ಅಥವಾ ಆ ತೀರ್ಪಿನ ಅಥವಾ ಆದೇಶದ ಅಧಿಕಾರದ ಮೇರೆಗೆ ಮಾಡಲಾಗಿದೆಯೋ, ಆ ಕಾರ್ಯವನ್ನು ಅಂಥ ತೀರ್ಪು ಅಥವಾ ಆದೇಶವು ಜಾರಿಯಲ್ಲಿರುವಾಗ ಮಾಡಿದ್ದರೆ, ಆ ನ್ಯಾಯಾಲಯಕ್ಕೆ ಅಂಥ ತೀರ್ಪನ್ನು ಅಥವಾ ಆದೇಶವನ್ನು ಮಾಡಲು ಅಧಿಕಾರವ್ಯಾಪ್ತಿ ಇರದಿದ್ದರೂ, ಆ ಯಾವುದೂ ಅಪರಾಧವಾಗುವುದಿಲ್ಲ, ಪರಂತು, ಆ ಕಾರ್ಯವನ್ನು ಸದ್ಭಾವನೆಯಿಂದ ಮಾಡುವ ವ್ಯಕ್ತಿಯು ನ್ಯಾಯಾಲಯಕ್ಕೆ ಅಂಥ ಅಧಿಕಾರವ್ಯಾಪ್ತಿಯು ಇದ್ದಿತೆಂದು ನಂಬಿರಬೇಕು.

**17. ಕಾನೂನಿನಿಂದ ಸಮರ್ಥಿತನಾದ ವ್ಯಕ್ತಿಯು ಮಾಡಿದ ಅಥವಾ ಸಂಗತಿಯನ್ನು ಕಾನೂನಿನಿಂದ ಸಮರ್ಥಿತನಾಗಿರುವೆನೆಂಬ ತಪ್ಪುಗ್ರಹಿಕೆಯಿಂದಾಗಿ ಸ್ವತಃ ನಂಬಿ ಮಾಡಿದ ಕಾರ್ಯ.-** ಯಾವ ಕಾರ್ಯವನ್ನು ಕಾನೂನಿನಿಂದ ಸಮರ್ಥಿತನಾಗಿರುವೆನೆಂದು ಯಾರೇ ವ್ಯಕ್ತಿಯು ಮಾಡಿರುವನೋ ಅಥವಾ ಸಂಗತಿಯ ತಪ್ಪುಗ್ರಹಿಕೆಯ ಕಾರಣದಿಂದಾಗಿ ಮಾಡಿರುವನೋ ಆದರೆ, ಸಂಗತಿಯ

ತಪ್ಪುಗ್ರಹಿಕೆಯಿಂದಾಗಿ ಅದನ್ನು ಮಾಡಲು ತಾನು ಕಾನೂನಿನಿಂದ ಸಮರ್ಥಿತನಾಗಿರುವೆನೆಂದು ಸದ್ಭಾವನೆಯಿಂದ ನಂಬಿರುವನೋ ಆ ವ್ಯಕ್ತಿಯು ಮಾಡಿದ ಯಾವುದೇ ಕಾರ್ಯವು ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಎ'ನು ತನಗೆ ಕೊಲೆಯೆಂದು ತೋರುವಂತಿರುವುದನ್ನು 'ಜೆಡ್'ನು ಮಾಡುತ್ತಿರುವುದನ್ನು ನೋಡುತ್ತಾನೆ. ಅಂಥ ಕೃತ್ಯವನ್ನು ಮಾಡುತ್ತಿದ್ದುದಕ್ಕಾಗಿ ಕೊಲೆಗಾರನನ್ನು ಹಿಡಿಯಲು ಎಲ್ಲ ವ್ಯಕ್ತಿಗಳಿಗೆ ಕಾನೂನು ಯಾವ ಅಧಿಕಾರವನ್ನು ಕೊಟ್ಟಿದೆಯೋ ಆ ಅಧಿಕಾರವನ್ನು ತನ್ನ ವಿವೇಚನಾನುಸಾರ ಸದ್ಭಾವನೆಯಿಂದ ಬಳಸಿ 'ಜೆಡ್'ನನ್ನು ಸೂಕ್ತ ಅಧಿಕಾರಿಯ ಮುಂದೆ ಹಾಜರುಪಡಿಸಲು 'ಎ'ನು 'ಜೆಡ್'ನನ್ನು ಹಿಡಿಯುತ್ತಾನೆ. 'ಜೆಡ್'ನು ಆತ್ಮರಕ್ಷಣೆಗಾಗಿ ಹಾಗೆ ವರ್ತಿಸುತ್ತಿದ್ದಾನೆಂದು ಗೊತ್ತಾದರೂ 'ಎ'ನು ಅಪರಾಧ ಮಾಡಿದ್ದಾನೆಂದಾಗುವುದಿಲ್ಲ.

**18. ಕಾನೂನುಬದ್ಧವಾದ ಕಾರ್ಯವನ್ನು ಮಾಡುವಾಗ ಆಕಸ್ಮಿಕವಾಗಿ ಆಗುವ ಅಪರಾಧ.-** ಯಾವುದು ಆಕಸ್ಮಿಕವಾಗಿ ಅಥವಾ ದುರದೃಷ್ಟವಶಾತ್ ಆಗಿಬಿಡುತ್ತದೋ ಅಥವಾ ಯಾವುದನ್ನು ಕಾನೂನುಬದ್ಧವಾದ ರೀತಿಯಲ್ಲಿ ಕಾನೂನುಬದ್ಧವಾದ ಸಾಧನಗಳಿಂದ ಮತ್ತು ಸೂಕ್ತ ಜಾಗರೂಕತೆ ಮತ್ತು ಎಚ್ಚರಿಕೆಯಿಂದ ಕಾನೂನುಬದ್ಧವಾದ ಕಾರ್ಯವನ್ನು ಮಾಡುವಾಗ ಮತ್ತು ಯಾವುದೇ ಆಪರಾಧಿಕ ಉದ್ದೇಶ ಅಥವಾ ತಿಳುವಳಿಕೆ ಇರುವುದಿಲ್ಲವೋ ಆ ಯಾವುದೇ ಕಾರ್ಯವು ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಎ'ನು ಕೊಡಲಿಯಿಂದ ಕೆಲಸ ಮಾಡುತ್ತಿರುತ್ತಾನೆ. ಕಾವಿನಿಂದ ಕೊಡಲಿಯು ಸಿಡಿದು ಹೋಗುತ್ತದೆ, ಸಮೀಪದಲ್ಲಿ ನಿಂತಿದ್ದ ಒಬ್ಬ ಮನುಷ್ಯನಿಗೆ ತಗಲುತ್ತದೆ, ಆ ಮನುಷ್ಯ ಸಾಯುತ್ತಾನೆ. ಇಲ್ಲಿ, 'ಎ'ನಲ್ಲಿ ಸೂಕ್ತ ಎಚ್ಚರಿಕೆಯ ಕೊರತೆಯಿರಲಿಲ್ಲವೆಂದಾದರೆ ಅವನ ಕೃತ್ಯವು ಕ್ಷಮಾರ್ಹವಾದುದಾಗುತ್ತದೆ ಮತ್ತು ಅದು ಅಪರಾಧವಾಗುವುದಿಲ್ಲ.

**19. ಹಾನಿಯನ್ನುಂಟು ಮಾಡುವ ಸಂಭವವಿರುವ, ಆದರೆ ಆಪರಾಧಿಕ ಉದ್ದೇಶವಿಲ್ಲದೆ ಮತ್ತು ಇತರ ಹಾನಿಯನ್ನು ಪ್ರತಿಬಂಧಿಸಲು ಮಾಡಿದ ಕಾರ್ಯ.-** ಹಾನಿಯನ್ನುಂಟು ಮಾಡುವ ಯಾವುದೇ ಆಪರಾಧಿಕ ಉದ್ದೇಶವಿಲ್ಲದೆ ಮತ್ತು ದೇಹಕ್ಕೆ ಅಥವಾ ಸ್ವತ್ತಿಗೆ ಉಂಟಾಗಬಹುದಾದ ಇತರ ಹಾನಿಯನ್ನು ಪ್ರತಿಬಂಧಿಸಲು ಅಥವಾ ತಪ್ಪಿಸಲು ಸದ್ಭಾವನೆಯಿಂದ ಮಾಡಿರುವ ಯಾವುದೂ, ಹಾನಿಯನ್ನುಂಟು ಮಾಡುವ ಸಂಭವವಿದೆಯೆಂಬುದು ತಿಳಿದಿದ್ದರೂ ಅದನ್ನು ಮಾಡಲಾಗುತ್ತಿದೆ ಎಂಬ ಕಾರಣ ಮಾತ್ರದಿಂದಲೇ ಅಪರಾಧವಾಗುವುದಿಲ್ಲ.

*ವಿವರಣೆ*.- ಅಂಥ ಸನ್ನಿವೇಶದಲ್ಲಿ, ಪ್ರತಿಬಂಧಿಸಬೇಕಾದ ಅಥವಾ ತಪ್ಪಿಸಬೇಕಾದ ಹಾನಿಯು, ಆ ಕೃತ್ಯವು ಹಾನಿಯನ್ನು ಉಂಟುಮಾಡುವ ಸಂಭವವಿದೆಯೆಂದು ತಿಳಿದಿದ್ದರೂ ಆ ಕೃತ್ಯವನ್ನು ಮಾಡುವುದರಿಂದಾಗುವ ಅಪಾಯವನ್ನು ಸಮರ್ಥಿಸಿಕೊಳ್ಳುವಂಥ ಅಥವಾ ಕ್ಷಮಿಸುವಂಥ ಮತ್ತು ಹಾನಿಯು ಇನ್ನೇನು ಆಗೇ ಬಿಡುತ್ತದೆ ಎಂಬ ಸ್ವರೂಪದ ಹಾನಿಯಾಗಿದ್ದಿತೇ ಎಂಬುದು ಸಂಗತಿಯ ಪ್ರಶ್ನೆಯಾಗುತ್ತದೆ.

*ದೃಷ್ಟಾಂತಗಳು*

(ಎ) 'ಎ'ನು ನೌಕೆಯ ಕ್ಯಾಪ್ಟನ್. ಅವನು, ಅವನಿಂದ ಯಾವುದೇ ತಪ್ಪು ಅಥವಾ ನಿರ್ಲಕ್ಷ್ಯ ಆಗುವುದಿಲ್ಲವಾದರೂ, ತನ್ನ ನೌಕೆಯನ್ನು ನಿಲ್ಲಿಸುವುದಕ್ಕೆ ಮುಂಚೆ ಅದರ ಗತಿಯನ್ನು ಬದಲಾಯಿಸದಿದ್ದರೆ ಅವನು ಇಪ್ಪತ್ತು ಅಥವಾ ಮೂವತ್ತು ಪ್ರಯಾಣಿಕರಿರುವ 'ಬಿ' ಎಂಬ ದೋಣಿಗೆ ಅನಿವಾರ್ಯವಾಗಿ ಅಪ್ಪಳಿಸಬೇಕಾಗುತ್ತದೆ. ಒಂದು ವೇಳೆ ಗತಿ ಬದಲಾಯಿಸಿದರೆ, ಕೇವಲ ಇಬ್ಬರು ಪ್ರಯಾಣಿಕರಿರುವ 'ಸಿ' ಎಂಬ ದೋಣಿಗೆ ಅಪ್ಪಳಿಸುವ ಅಪಾಯವಿದ್ದು, ಈ ಅಪಾಯವನ್ನು ಅವನು ತಪ್ಪಿಸುವ ಸಂಭವ ಇದ್ದರೂ ಅವನು ಅನಿವಾರ್ಯವಾಗಿ ಅವನು 'ಸಿ' ಎಂಬ ದೋಣಿಗೆ ಅಪ್ಪಳಿಸುವ ಅಪಾಯಕ್ಕೆ ಗುರಿಯಾಗಬೇಕಾಗುತ್ತದೆಂಬ ಪರಿಸ್ಥಿತಿಗೆ ಸಿಲುಕಿರುತ್ತಾನೆ. ಇಲ್ಲಿ 'ಎ'ನು, 'ಸಿ' ದೋಣಿಗೆ ಅಪ್ಪಳಿಸುವ ಯಾವುದೇ ಉದ್ದೇಶವಿಲ್ಲದೆ, 'ಬಿ' ದೋಣಿಯಲ್ಲಿರುವ ಪ್ರಯಾಣಿಕರಿಗೆ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸುವ ಸದ್ಭಾವನೆಯಿಂದ ತನ್ನ ನೌಕೆಯ ಗತಿಯನ್ನು ಬದಲಾಯಿಸಿದರೆ, ತಾನು ಮಾಡುವ ಅಂಥ ಕೃತ್ಯದಿಂದ 'ಸಿ' ದೋಣಿಯನ್ನು ಅಪ್ಪಳಿಸುವ ಸಂಭವವಿದೆಯೆಂದು ತಿಳಿದಿದ್ದೂ ಅದನ್ನು ಮಾಡಿದರೆ, ವಾಸ್ತವಿಕವಾಗಿ ಅವನು

ತಪ್ಪಿಸಬೇಕೆಂದು ಉದ್ದೇಶಿಸಿದ್ದ ಅಪಾಯವು ಓಃ ದೋಣಿಗೆ ಅಪ್ಪಳಿಸುವ ಅಪಾಯವನ್ನು ಸಮರ್ಥಿಸಿಕೊಳ್ಳುವಂಥ ಅಥವಾ ಕ್ಷಮಿಸುವಂಥ ಅಪಾಯವೆಂಬುದು ಕಂಡುಬಂದರೆ, 'ಎ'ನು ಅಪರಾಧದ ತಪ್ಪಿತಸ್ಥನಾಗುವುದಿಲ್ಲ.

(ಬಿ) ದೊಡ್ಡ ಪ್ರಮಾಣದಲ್ಲಿ ಬೆಂಕಿ ಹತ್ತಿಕೊಂಡಿರುವಾಗ, ಅಗ್ನಿಜ್ವಾಲೆಯು ಹರಡುವುದನ್ನು ತಪ್ಪಿಸಲು 'ಎ'ನು ಮನೆಗಳನ್ನು ಕೆಡವಿ ಹಾಕುತ್ತಾನೆ. ಅವನು, ಮಾನವ ಜೀವ ಮತ್ತು ಸ್ವತ್ತನ್ನು ರಕ್ಷಿಸುವ ಸದ್ಭಾವನೆಯಿಂದ ಈ ಕೃತ್ಯವನ್ನು ಮಾಡುತ್ತಾನೆ. ತಪ್ಪಿಸಬೇಕಾದಂಥ ಹಾನಿಯು 'ಎ'ನು ಮಾಡಿದ ಕೃತ್ಯವನ್ನು ಕ್ಷಮಿಸಬಹುದಾದ ಸ್ವರೂಪದ್ದಾಗಿದೆ ಮತ್ತು ಕ್ಷಮಿಸಬಹುದಾದಷ್ಟು ಸನ್ನಿಹಿತವಾಗಿದೆ ಎಂಬುದಾಗಿ ಕಂಡುಬಂದರೆ, 'ಎ'ನು ಅಪರಾಧದ ತಪ್ಪಿತಸ್ಥನಾಗುವುದಿಲ್ಲ.

**20. ಏಳು ವರ್ಷಕ್ಕೆ ಕಡಿಮೆ ವಯಸ್ಸಿನ ಮಗುವಿನ ಕೃತ್ಯ.-** ಏಳು ವರ್ಷಕ್ಕೆ ಕಡಿಮೆ ವಯಸ್ಸಿನ ಮಗು ಮಾಡಿದ ಕೃತ್ಯವು ಅಪರಾಧವಾಗುವುದಿಲ್ಲ.

**21. ಏಳು ವರ್ಷಕ್ಕೆ ಮೀರಿದ ಆದರೆ, ಹನ್ನೆರಡು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಅಪರಿಪಕ್ವ ತಿಳುವಳಿಕೆಯ ಮಗುವಿನ ಕೃತ್ಯ.-** ಏಳು ವರ್ಷಕ್ಕೆ ಮೀರಿದ, ಆದರೆ, ಹನ್ನೆರಡು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಗು ಮಾಡುವ ಯಾವುದೇ ಕೃತ್ಯವು, ಆಗ ಮಗು ಆ ಸಂದರ್ಭದಲ್ಲಿ ತನ್ನ ವರ್ತನೆಯ ಸ್ವರೂಪ ಮತ್ತು ಪರಿಣಾಮಗಳನ್ನು ನಿರ್ಣಯಿಸಲು ಸಾಕಾಗುವಷ್ಟು ತಿಳುವಳಿಕೆಯನ್ನು ಹೊಂದಿಲ್ಲದಿದ್ದರೆ ಆ ಮಗುವು ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.

**22. ಅಸ್ವಸ್ಥಚಿತ್ತದ ವ್ಯಕ್ತಿಯ ಕೃತ್ಯ.-** ಒಬ್ಬ ವ್ಯಕ್ತಿಯು ಯಾವ ಕೃತ್ಯವನ್ನು ಮಾಡುವನೋ ಅದನ್ನು ಮಾಡುವಾಗ ಅಸ್ವಸ್ಥಚಿತ್ತದ ಕಾರಣದಿಂದ ಆ ಕೃತ್ಯದ ಸ್ವರೂಪವನ್ನು ಅಥವಾ ತಾನು ಮಾಡುತ್ತಿರುವ ಆ ಕೃತ್ಯವು ಅಕ್ರಮವಾದುದು ಅಥವಾ ಕಾನೂನಿಗೆ ವಿರುದ್ಧವಾದುದು ಎಂಬುದನ್ನು ತಿಳಿಯಲು ಅಸಮರ್ಥನಾಗಿದ್ದರೆ ಆ ವ್ಯಕ್ತಿಯು ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.

**23. ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿ ಸೇವನೆ ಮಾಡಿಸಿದ ಮಾದಕವಸ್ತುವಿನ ಅಮಲಿನ ಕಾರಣದಿಂದಾಗಿ ವಿವೇಚಿಸಲು ಅಸಮರ್ಥನಾದ ವ್ಯಕ್ತಿಯ ಕೃತ್ಯ.-** ಅಮಲಿನ ಕಾರಣದಿಂದ ಒಬ್ಬ ವ್ಯಕ್ತಿಯು ಯಾವ ಕೃತ್ಯವನ್ನು ಮಾಡುವನೋ ಅದನ್ನು ಮಾಡುವಾಗ, ಆ ಕೃತ್ಯದ ಸ್ವರೂಪವನ್ನು ಅಥವಾ ತಾನು ಮಾಡುತ್ತಿರುವ ಕೃತ್ಯವು ಅಕ್ರಮವಾದುದು ಅಥವಾ ಕಾನೂನಿಗೆ ವಿರುದ್ಧವಾದುದು ಎಂಬುದನ್ನು ಅರಿತುಕೊಳ್ಳಲು ಅಸಮರ್ಥನಾಗಿದ್ದರೆ, ಆ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ, ಆದರೆ, ಅಮಲು ಉಂಟುಮಾಡಿದ ಪದಾರ್ಥವನ್ನು ಅವನಿಗೆ ಅರಿವಾಗದ ಹಾಗೆ ಅಥವಾ ಅವನ ಇಚ್ಛೆಗೆ ವಿರುದ್ಧವಾಗಿ ಸೇವನೆ ಮಾಡಿಸಿರಬೇಕು.

**24. ಮಾದಕವಸ್ತುವಿನ ಅಮಲಿನಲ್ಲಿರುವ ವ್ಯಕ್ತಿಯು ಮಾಡಿದ ಅಪರಾಧಕ್ಕೆ ನಿರ್ದಿಷ್ಟ ಉದ್ದೇಶ ಅಥವಾ ಅರಿವು ಇರಬೇಕಾದುದು ಅಗತ್ಯ.-** ಮಾಡಿರುವ ಒಂದು ಕೃತ್ಯವನ್ನು ನಿರ್ದಿಷ್ಟ ಉದ್ದೇಶದಿಂದ ಅಥವಾ ಅರಿವಿನಿಂದ ಮಾಡಿದ್ದ ಹೊರತು ಆ ಯಾವುದೂ ಅಪರಾಧವಾಗದಿರುವ ಸಂದರ್ಭಗಳಲ್ಲಿ, ಯಾವ ವ್ಯಕ್ತಿಯು ಆ ಕೃತ್ಯವನ್ನು ಅಮಲಿನಲ್ಲಿ ಮಾಡಿರುವನೋ ಆ ವ್ಯಕ್ತಿಯ ಬಗ್ಗೆ ಯಾವ ಪದಾರ್ಥವು ಅಮಲು ಉಂಟುಮಾಡಿತ್ತೋ ಆ ಪದಾರ್ಥವನ್ನು ಅವನಿಗೆ ಅರಿವಾಗದ ಹಾಗೆ ಅಥವಾ ಅವನು ಇಚ್ಛೆಗೆ ವಿರುದ್ಧವಾಗಿ ಸೇವನೆ ಮಾಡಿಸಿದ್ದ ಹೊರತು, ಅವನು ಅಮಲಿನಲ್ಲಿ ಇಲ್ಲದಿರುತ್ತಿದ್ದರೆ ಯಾವ ಅರಿವು ಅವನಿಗೆ ಇರುತ್ತಿತ್ತೋ ಅದೇ ಅರಿವು ಇದ್ದಿದ್ದರೆ ಹೇಗೆ ವ್ಯವಹರಿಸಲಾಗುತ್ತಿತ್ತೋ ಹಾಗೆಯೇ ಅವನೊಡನೆ ವ್ಯವಹರಿಸತಕ್ಕದ್ದು.

**25. ಸಮ್ಮತಿ ಪಡೆದು ಆದರೆ ಮರಣವನ್ನು ಅಥವಾ ತೀವ್ರ ಗಾಯವನ್ನುಂಟುಮಾಡುವ ಉದ್ದೇಶವಿಲ್ಲದೆ ಅಥವಾ ಉಂಟುಮಾಡುವ ಸಂಭವವಿದೆಯೆಂದು ತಿಳಿಯದೆ ಮಾಡಿದ ಕೃತ್ಯ.-** ಯಾರೇ ವ್ಯಕ್ತಿಯು ಮರಣವನ್ನು ಅಥವಾ ತೀವ್ರ ಗಾಯವನ್ನು ಉಂಟುಮಾಡುವ ಉದ್ದೇಶವಿಲ್ಲದೆ ಮತ್ತು ಮರಣ ಅಥವಾ ತೀವ್ರಗಾಯ ಉಂಟಾಗುವ ಸಂಭವವಿದೆಯೆಂಬುದು ಆತನಿಗೆ ತಿಳಿಯದೆ ಮಾಡುವ ಯಾವುದೇ ಕೃತ್ಯವು, ಆ ಹಾನಿಗೆ ಒಳಗಾಗಲು, ಅನುಭವಿಸಲು ಸ್ಪಷ್ಟ ಅಥವಾ ಸೂಚ್ಯ ಸಮ್ಮತಿಯನ್ನು ಹದಿನೆಂಟು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಯಾವ ವ್ಯಕ್ತಿಯು ಕೊಟ್ಟಿರುವನೋ ಆ ವ್ಯಕ್ತಿಗೆ, ಯಾವುದೇ ಹಾನಿಯನ್ನು ಉಂಟುಮಾಡುವ ಅಥವಾ ಅದನ್ನು ಮಾಡುವವನು ಹಾನಿ ಉಂಟುಮಾಡಲು ಉದ್ದೇಶಿಸಿರಬಹುದಾದ ಕಾರಣ ಮಾತ್ರದಿಂದಲೇ ಅಥವಾ ಆ ಹಾನಿಯ ಅಪಾಯ

ಸಂಭವವನ್ನು ಸಹಿಸುವುದಾಗಿ ಯಾವ ವ್ಯಕ್ತಿಯು ಸಮ್ಮತಿ ಕೊಟ್ಟಿರುವನೋ, ಆ ಯಾರೇ ವ್ಯಕ್ತಿಗೆ ತನ್ನ ಕೃತ್ಯದಿಂದ ಹಾನಿಯುಂಟಾಗುವ ಸಂಭವವಿದೆಯೆಂದು ಆ ಕೃತ್ಯವನ್ನು ಮಾಡುವವನಿಗೆ ತಿಳಿದಿರುವ ಕಾರಣ ಮಾತ್ರದಿಂದಲೇ ಅದು ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಎ' ಮತ್ತು 'ಜೆಡ್' ಇವರಿಬ್ಬರೂ ವಿನೋದಕ್ಕಾಗಿ ಕತ್ತಿಕಾಳಗವನ್ನು ಮಾಡಲು ಒಪ್ಪಿಕೊಳ್ಳುತ್ತಾರೆ. ಅಂಥ ಕಾಳಗ ನಡೆಯುವಾಗ ಕುತ್ಸಿತವಾಗಿ ವರ್ತಿಸದಿದ್ದರೂ, ಒದಗಬಹುದಾದ ಯಾವುದೇ ಹಾನಿಯನ್ನು ಸಹಿಸಲು ಇಬ್ಬರೂ ಸಮ್ಮತಿಯನ್ನು ಕೊಟ್ಟಿರುವಂತೆ ಆ ಒಪ್ಪಿಗೆಯಿಂದ ಸೂಚ್ಯವಾಗುತ್ತದೆ. ಕ್ರಮಬದ್ಧವಾಗಿ ಕಾಳಗವು ನಡೆಯುತ್ತಿರುವಾಗ, 'ಎ'ನು 'ಜೆಡ್'ನನ್ನು ಗಾಯಗೊಳಿಸಿದರೆ, 'ಎ'ನು ಅಪರಾಧ ಮಾಡಿದಂತಾಗುವುದಿಲ್ಲ.

**26. ವ್ಯಕ್ತಿಗೆ ಮರಣವನ್ನು ಉಂಟುಮಾಡುವ ಉದ್ದೇಶವಿಲ್ಲದೆ, ಆ ವ್ಯಕ್ತಿಯ ಪ್ರಯೋಜನಕ್ಕಾಗಿ ಅವನ ಸಮ್ಮತಿ ಪಡೆದು ಸದ್ಭಾವನೆಯಿಂದ ಮಾಡಿದ ಕೃತ್ಯ.-** ಮರಣವನ್ನು ಉಂಟುಮಾಡುವ ಉದ್ದೇಶವಿಲ್ಲದಿರುವ ಕೃತ್ಯವನ್ನು ಯಾವ ವ್ಯಕ್ತಿಯ ಪ್ರಯೋಜನಕ್ಕಾಗಿ ಸದ್ಭಾವನೆಯಿಂದ ಮಾಡಲಾಗುತ್ತಿದೆಯೋ ಮತ್ತು ಆ ಹಾನಿಗೆ ಈಡಾಗಲು ಅಥವಾ ಆ ಹಾನಿಯ ಅಪಾಯ ಸಂಭವವನ್ನು ತೆಗೆದುಕೊಳ್ಳಲು ಆ ವ್ಯಕ್ತಿಯು ಸ್ಪಷ್ಟ ಅಥವಾ ಸೂಚ್ಯ ಸಮ್ಮತಿಯನ್ನು ಕೊಟ್ಟಿರುವನೋ, ಆ ಕೃತ್ಯದಿಂದ ಆ ವ್ಯಕ್ತಿಗೆ ಉಂಟಾಗಬಹುದಾದ ಅಥವಾ ಆ ಕೃತ್ಯವನ್ನು ಮಾಡುವ ವ್ಯಕ್ತಿಯು ಉದ್ದೇಶಿಸಿರಬಹುದಾದ ಅಥವಾ ಉಂಟಾಗುವ ಸಂಭವವಿದೆಯೆಂದು ಅವನು ತಿಳಿದಿರಬಹುದಾದ ಹಾನಿಯ ಕಾರಣ ಮಾತ್ರದಿಂದ ಆ ಕೃತ್ಯವು ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಎ'ನು ಒಬ್ಬ ಶಸ್ತ್ರ ಚಿಕಿತ್ಸಕ. ತೀವ್ರವಾದ ನೋವಿನಿಂದ ನರಳುತ್ತಿರುವ 'ಜೆಡ್'ನಿಗೆ ಒಂದು ನಿರ್ದಿಷ್ಟ ಶಸ್ತ್ರಚಿಕಿತ್ಸೆಯನ್ನು ಮಾಡಿದರೆ ಅವನಿಗೆ ಮರಣ ಉಂಟಾಗುವ ಸಂಭವವಿದೆ ಎಂಬುದು ಶಸ್ತ್ರ ಚಿಕಿತ್ಸಕನಿಗೆ ತಿಳಿದಿದ್ದರೂ 'ಜೆಡ್'ನಿಗೆ ಮರಣ ಉಂಟುಮಾಡುವ ಉದ್ದೇಶವಿಲ್ಲದೆ ಮತ್ತು 'ಜೆಡ್'ನ ಹಿತದೃಷ್ಟಿಯಿಂದ ಮತ್ತು 'ಜೆಡ್'ನ ಸಮ್ಮತಿಯನ್ನು ಪಡೆದು ಮತ್ತು 'ಜೆಡ್'ನಿಗೆ ಸದ್ಭಾವನೆಯಿಂದ ಶಸ್ತ್ರಚಿಕಿತ್ಸೆ ಮಾಡುತ್ತಾನೆ. 'ಎ'ನು ಯಾವ ಅಪರಾಧವನ್ನೂ ಮಾಡಿಲ್ಲ.

**27. ಮಗುವಿನ ಅಥವಾ ಅಸ್ವಸ್ಥಚಿತ್ತದ ವ್ಯಕ್ತಿಯ ಪ್ರಯೋಜನಕ್ಕಾಗಿ ಸದ್ಭಾವನೆಯಿಂದ ಪೋಷಕನು ಮಾಡಿದ ಅಥವಾ ಪೋಷಕನ ಸಮ್ಮತಿಯಿಂದ ಮಾಡಿದ ಕೃತ್ಯ.-** ಹನ್ನೆರಡು ವರ್ಷಕ್ಕೆ ಕಡಿಮೆ ವಯಸ್ಸಿನ ಅಥವಾ ಅಸ್ವಸ್ಥಚಿತ್ತದ ವ್ಯಕ್ತಿಯ ಪ್ರಯೋಜನಕ್ಕಾಗಿ ಸದ್ಭಾವನೆಯಿಂದ ಅವನ ಪೋಷಕನು ಅಥವಾ ಕಾನೂನುಬದ್ಧವಾಗಿ ಆ ವ್ಯಕ್ತಿಯ ಮೇಲ್ವಿಚಾರಣೆಯನ್ನು ಹೊಂದಿರುವ ವ್ಯಕ್ತಿಯು ಮಾಡಿದ ಅಥವಾ ಅವರ ಸ್ಪಷ್ಟ ಅಥವಾ ಸೂಚ್ಯ ಸಮ್ಮತಿಯನ್ನು ಪಡೆದು ಮಾಡಿದ ಯಾವುದೇ ಕೃತ್ಯವು, ಅದರಿಂದ ಆ ವ್ಯಕ್ತಿಗೆ ಉಂಟಾಗಬಹುದಾದ ಅಥವಾ ಅದನ್ನು ಮಾಡುವವನು ಉದ್ದೇಶಿಸಿರಬಹುದಾದ ಅಥವಾ ಹಾನಿ ಉಂಟಾಗುವ ಸಂಭವವಿದೆಯೆಂದು ಅವನು ತಿಳಿದಿರಬಹುದಾದ ಯಾವುದೇ ಹಾನಿಯ ಕಾರಣದ ಮಾತ್ರದಿಂದಲೇ ಅಪರಾಧವಾಗುವುದಿಲ್ಲ:

ಪರಂತು,-

(ಎ) ಉದ್ದೇಶಪೂರ್ವಕವಾಗಿ ಮರಣವನ್ನು ಉಂಟುಮಾಡುವುದಕ್ಕೆ ಅಥವಾ ಮರಣವನ್ನು ಉಂಟುಮಾಡುವ ಪ್ರಯತ್ನಕ್ಕೆ;

(ಬಿ) ಮರಣವನ್ನು ಅಥವಾ ತೀವ್ರ ಗಾಯವಾಗುವುದನ್ನು ತಡೆಯುವುದಲ್ಲದ ಅಥವಾ ಗಂಭೀರ ಕಾಯಿಲೆಯನ್ನು ಅಥವಾ ದುರ್ಬಲತೆಯನ್ನು ಗುಣಪಡಿಸುವುದಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಕೃತ್ಯವನ್ನು ಮಾಡುವ ವ್ಯಕ್ತಿಯು, ಅದು ಮರಣವನ್ನು ಉಂಟುಮಾಡುವ ಸಂಭವವಿದೆಯೆಂದು ತಿಳಿದಿದ್ದರೆ, ಆ ಕೃತ್ಯಕ್ಕೆ;

(ಸಿ) ಮರಣವನ್ನು ಅಥವಾ ತೀವ್ರ ಗಾಯವಾಗುವುದನ್ನು ತಡೆಯುವ ಉದ್ದೇಶಕ್ಕಾಗಿ ಅಥವಾ ಗಂಭೀರ ಕಾಯಿಲೆಯನ್ನು ಅಥವಾ ದುರ್ಬಲತೆಯನ್ನು ಗುಣಪಡಿಸುವುದಕ್ಕಾಗಿ ಹೊರತು ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟುಮಾಡುವ ಕೃತ್ಯಕ್ಕೆ ಅಥವಾ ತೀವ್ರ ಗಾಯವನ್ನುಂಟು ಮಾಡುವ ಪ್ರಯತ್ನಕ್ಕೆ;

(ಡಿ) ಯಾವ ಅಪರಾಧವನ್ನು ಮಾಡುವುದಕ್ಕೆ ಅನ್ವಯವಾಗುವುದಿಲ್ಲವೋ ಆ ಅಪರಾಧದ ದುಷ್ಪ್ರೇರಣೆಗೆ

- ಈ ಅಪವಾದಗಳು ಅನ್ವಯವಾಗತಕ್ಕದ್ದಲ್ಲ.

*ದೃಷ್ಟಾಂತ*

'ಎ'ನು ತನ್ನ ಮಗುವಿನ ಹಿತಕ್ಕಾಗಿ, ಆದರೆ ಮಗುವಿನ ಸಮ್ಮತಿಯನ್ನು ಪಡೆಯದೆ, ಶಸ್ತ್ರಚಿಕಿತ್ಸೆ ಮಾಡಿಸಿದರೆ ಮಗುವಿನ ಮರಣವು ಸಂಭವಿಸಬಹುದೆಂದು ತಿಳಿದೂ, ಆದರೆ ಮರಣವನ್ನು ಉಂಟುಮಾಡುವ ಉದ್ದೇಶವಿಲ್ಲದೆ, ಶಸ್ತ್ರ ಚಿಕಿತ್ಸಕನಿಂದ ಕಲ್ಲನ್ನು ತೆಗೆಸುವುದಕ್ಕಾಗಿ ಸದ್ಭಾವನೆಯಿಂದ ಚಿಕಿತ್ಸೆ ಮಾಡಿಸುತ್ತಾನೆ. ಆ ಕೃತ್ಯವನ್ನು ಮಗುವಿನ ವ್ಯಾಧಿಯನ್ನು ಗುಣಪಡಿಸುವ ಉದ್ದೇಶದಿಂದ ಮಾಡಿದ್ದರಿಂದ ಈ ಅಪವಾದವು 'ಎ'ನಿಗೆ ಅನ್ವಯವಾಗುತ್ತದೆ.

**28. ಭಯ ಅಥವಾ ತಪ್ಪು ತಿಳುವಳಿಕೆಯಿಂದ ಕೊಡಲಾಗಿದೆಯೆಂದು ತಿಳಿದ ಸಮ್ಮತಿ.-** ಒಬ್ಬ ವ್ಯಕ್ತಿಯು,-

(ಎ) ಕ್ಷತಿಯ ಭಯದಿಂದ ಅಥವಾ ಸಂಗತಿಯ ತಪ್ಪು ತಿಳುವಳಿಕೆಯಿಂದ ಸಮ್ಮತಿಯನ್ನು ಕೊಟ್ಟಿದ್ದರೆ ಮತ್ತು ಆ ಸಮ್ಮತಿಯನ್ನು ಅಂಥ ಭಯ ಅಥವಾ ತಪ್ಪು ತಿಳುವಳಿಕೆಯಿಂದ ಕೊಡಲಾಗಿದೆಯೆಂದು ಕೃತ್ಯವನ್ನು ಮಾಡುವ ವ್ಯಕ್ತಿಗೆ ತಿಳಿದಿದ್ದರೆ ಅಥವಾ ಹಾಗೆ ನಂಬಲು ಅವನಿಗೆ ಕಾರಣವಿದ್ದರೆ, ಆ ಸಮ್ಮತಿಯು; ಅಥವಾ

(ಬಿ) ಅಸ್ವಸ್ಥಚಿತ್ತದ ಅಥವಾ ಅಮಲಿನ ಕಾರಣದಿಂದ ತಾನು ಸಮ್ಮತಿಸುವ ಕೃತ್ಯದ ಸ್ವರೂಪ ಮತ್ತು ಪರಿಣಾಮಗಳನ್ನು ಅರಿಯಲು ಅಸಮರ್ಥನಾಗಿರುವ ವ್ಯಕ್ತಿಯು ಕೊಟ್ಟ ಸಮ್ಮತಿಯು; ಅಥವಾ

(ಸಿ) ಸಂದರ್ಭದಿಂದ ತದ್ವಿರುದ್ಧವಾದುದು ಕಂಡುಬಂದ ಹೊರತು, ಹನ್ನೆರಡು ವರ್ಷಕ್ಕೆ ಕಡಿಮೆ ವಯಸ್ಸಿನ ವ್ಯಕ್ತಿಯು ಕೊಟ್ಟ ಸಮ್ಮತಿಯು

- ಈ ಸಂಹಿತೆಯ ಯಾವುದೇ ಪ್ರಕರಣದಿಂದ ಉದ್ದೇಶಿತವಾದ ಸಮ್ಮತಿಯಾಗುವುದಿಲ್ಲ.

**29. ಉಂಟು ಮಾಡುವ ಹಾನಿಗೆ ಸಂಬಂಧಪಡದಂಥ ಕೃತ್ಯಗಳನ್ನು ಹೊರತುಪಡಿಸುವುದು.-** 25, 26 ಮತ್ತು 27ನೇ ಪ್ರಕರಣಗಳಲ್ಲಿ ಹೇಳಿರುವ ಅಪವಾದಗಳು, ಅಪರಾಧಗಳಾಗುವ ಯಾವ ಕೃತ್ಯಗಳಿಂದ ಅವುಗಳಿಗೆ ಸಮ್ಮತಿಯನ್ನು ಕೊಡುವ ವ್ಯಕ್ತಿಗೆ ಅಥವಾ ಯಾರ ಪರವಾಗಿ ಸಮ್ಮತಿಯನ್ನು ಕೊಡಲಾಗುವುದೋ ಆ ವ್ಯಕ್ತಿಗೆ ಉಂಟುಮಾಡಬಹುದಾದ ಅಥವಾ ಉಂಟು ಮಾಡಲು ಉದ್ದೇಶಿಸಿದ ಅಥವಾ ಉಂಟು ಮಾಡುವ ಸಂಭವವಿದೆಯೆಂದು ತಿಳಿಯಲಾದ ಯಾವುದೇ ಹಾನಿಗೆ ಸಂಬಂಧಪಡದಂಥ ಕೃತ್ಯಗಳಿಗೆ ಅನ್ವಯವಾಗುವುದಿಲ್ಲ.

*ದೃಷ್ಟಾಂತ*

ಮಹಿಳೆಗೆ ಗರ್ಭಪಾತ ಮಾಡಿಸುವುದರಿಂದ ಉಂಟಾಗುವ ಅಥವಾ ಉಂಟುಮಾಡಲು ಉದ್ದೇಶಿಸಿರುವ ಯಾವುದೇ ಹಾನಿಯು ಸಂಬಂಧಪಡದಿದ್ದರೂ ಹಾಗೆ ಗರ್ಭಪಾತ ಮಾಡಿಸುವುದು (ಆ ಮಹಿಳೆಯ ಜೀವವನ್ನು ಉಳಿಸಬೇಕೆಂಬ ಸದ್ಭಾವನೆಯಿಂದ ಮಾಡಿದ್ದ ಹೊರತು) ಅಪರಾಧವಾಗುತ್ತದೆ. ಆದುದರಿಂದ 'ಆ ಹಾನಿಯ ಕಾರಣದಿಂದ' ಅದು ಅಪರಾಧವಾಗುವುದಿಲ್ಲ ಮತ್ತು ಹಾಗೆ ಗರ್ಭಪಾತ ಮಾಡಿಸಲು ಆ ಮಹಿಳೆ ಅಥವಾ ಅವಳ ಪೋಷಕನು ಕೊಟ್ಟ ಸಮ್ಮತಿಯು ಆ ಕೃತ್ಯವನ್ನು ಸಮರ್ಥಿಸುವುದಿಲ್ಲ.

**30. ವ್ಯಕ್ತಿಯ ಪ್ರಯೋಜನಕ್ಕಾಗಿ ಅವನ ಸಮ್ಮತಿಯಿಲ್ಲದೆ ಸದ್ಭಾವನೆಯಿಂದ ಮಾಡಿದ ಕೃತ್ಯ.-** ವ್ಯಕ್ತಿಯ ಪ್ರಯೋಜನಕ್ಕಾಗಿ, ಅವನ ಸಮ್ಮತಿಯಿಲ್ಲದೆ ಸದ್ಭಾವನೆಯಿಂದ ಮಾಡಿದ ಯಾವುದೇ ಕೃತ್ಯವು, ತನ್ನ ಸಮ್ಮತಿಯನ್ನು ಕೊಡಲು ಆ ವ್ಯಕ್ತಿಗೆ ಅಸಾಧ್ಯವಾಗುವಂಥ ಸನ್ನಿವೇಶಗಳಿದ್ದರೆ ಅಥವಾ ಸಮ್ಮತಿಯನ್ನು ಕೊಡಲು ಆ ವ್ಯಕ್ತಿಯು ಅಸಮರ್ಥನಾಗಿದ್ದರೆ ಮತ್ತು ಆ ಕೃತ್ಯವನ್ನು ಆ ವ್ಯಕ್ತಿಗೆ ಪ್ರಯೋಜನಕಾರಿಯಾಗುವ ಹಾಗೆ ಮಾಡಲು ಸಕಾಲದಲ್ಲಿ ಯಾರಿಂದ ಸಮ್ಮತಿ ಪಡೆದುಕೊಳ್ಳಬಹುದೋ ಅಂಥ ಪೋಷಕನು ಅಥವಾ ಕಾನೂನುಬದ್ಧವಾದ ಮೇಲ್ವಿಚಾರಣೆ ಹೊಂದಿರುವ ಇತರೆ ವ್ಯಕ್ತಿಯು ಇಲ್ಲದಿದ್ದರೆ, ಆ ಕೃತ್ಯವು ಆ ವ್ಯಕ್ತಿಗೆ ಉಂಟುಮಾಡಬಹುದಾದ ಯಾವುದೇ ಹಾನಿಯ ಕಾರಣದಿಂದ ಅಪರಾಧವಾಗುವುದಿಲ್ಲ:

ಪರಂತು,-

(ಎ) ಉದ್ದೇಶಪೂರ್ವಕವಾಗಿ ಮರಣವನ್ನು ಉಂಟುಮಾಡುವುದಕ್ಕೆ ಅಥವಾ ಮರಣವನ್ನು ಉಂಟುಮಾಡುವ ಪ್ರಯತ್ನಕ್ಕೆ;

(ಬಿ) ಮರಣವನ್ನು ಅಥವಾ ತೀವ್ರ ಗಾಯವಾಗುವುದನ್ನು ತಡೆಯುವುದಲ್ಲದ ಅಥವಾ ಗಂಭೀರ ಕಾಯಿಲೆ ಅಥವಾ ದುರ್ಬಲತೆಯನ್ನು ಗುಣಪಡಿಸುವುದಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಕೃತ್ಯವನ್ನು ಮಾಡುವ ವ್ಯಕ್ತಿಯು, ಅದು ಮರಣವನ್ನು ಉಂಟು ಮಾಡುವ ಸಂಭವವಿದೆಯೆಂದು ತಿಳಿದಿದ್ದರೆ, ಆ ಕೃತ್ಯಕ್ಕೆ;

(ಸಿ) ಮರಣವನ್ನು ಅಥವಾ ತೀವ್ರ ಗಾಯವಾಗುವುದನ್ನು ನಿವಾರಿಸುವುದನ್ನುಳಿದು ಇತರ ಯಾವುದೇ ಉದ್ದೇಶಕ್ಕಾಗಿ ಮಾಡಿದ ಹೊರತು, ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದಕ್ಕೆ ಅಥವಾ ಗಾಯವನ್ನುಂಟು ಮಾಡುವ ಪ್ರಯತ್ನಕ್ಕೆ;

(ಡಿ) ಯಾವ ಅಪರಾಧವನ್ನು ಮಾಡುವುದಕ್ಕೆ ಅನ್ವಯವಾಗುವುದಿಲ್ಲವೋ ಆ ಅಪರಾಧದ ದುಷ್ಪ್ರೇರಣೆಗೆ

- ಈ ಅಪವಾದಗಳು ಅನ್ವಯವಾಗತಕ್ಕದ್ದಲ್ಲ.

*ದೃಷ್ಟಾಂತಗಳು*

(1) ಕುದುರೆಯು ಜೆಡ್‌ನನ್ನು ಕೆಳಕ್ಕೆ ಬೀಳಿಸಿದೆ ಮತ್ತು ಅವನಿಗೆ ಪ್ರಜ್ಞೆ ತಪ್ಪಿದೆ. ಜೆಡ್‌ನ ಮೆದುಳಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆಯೆಂದು ಏ ಎಂಬ ಶಸ್ತ್ರ ಚಿಕಿತ್ಸಕನಿಗೆ ಕಂಡುಬರುತ್ತದೆ. ಏನು ಜೆಡ್‌ನಿಗೆ ಮರಣವನ್ನು ಉಂಟು ಮಾಡುವ ಉದ್ದೇಶವಿಲ್ಲದೆ ಆದರೆ, ಜೆಡ್‌ನ ಪ್ರಯೋಜನಕ್ಕಾಗಿ ಜೆಡ್‌ನಿಗೆ ಸ್ವಯಂ ನಿರ್ಧಾರ ಕೈಗೊಳ್ಳುವ ಶಕ್ತಿ ಬರುವುದಕ್ಕೆ ಮುಂಚೆಯೇ ಸದ್ಭಾವನೆಯಿಂದ ಅವನ ಮೆದುಳಿಗೆ ಶಸ್ತ್ರಚಿಕಿತ್ಸೆ ಮಾಡುತ್ತಾನೆ. ಇಲ್ಲಿ ಏನು ಯಾವ ಅಪರಾಧವನ್ನೂ ಮಾಡಿಲ್ಲ.

(2) ಜೆಡ್‌ನನ್ನು ಒಂದು ಹುಲಿಯು ಎತ್ತಿಕೊಂಡು ಹೋಗುತ್ತದೆ. ತಾನು ಹುಲಿಯ ಮೇಲೆ ಗುಂಡು ಹಾರಿಸಿದರೆ, ಅದು ಜೆಡ್‌ನನ್ನು ಕೊಲ್ಲುವ ಸಂಭವವಿದೆಯೆಂದು ತಿಳಿದೂ, ಆದರೆ ಜೆಡ್‌ನನ್ನು ಕೊಲ್ಲುವ ಉದ್ದೇಶವಿಲ್ಲದೆ ಜೆಡ್‌ನ ಪ್ರಯೋಜನಕ್ಕಾಗಿ ಸದ್ಭಾವನೆಯಿಂದ ಏನು ಗುಂಡು ಹಾರಿಸುತ್ತಾನೆ. ಏನು ಹಾರಿಸಿದ ಗುಂಡಿನಿಂದ ಜೆಡ್‌ನಿಗೆ ಮಾರಣಾಂತಿಕ ಗಾಯವಾಗುತ್ತದೆ. ಇಲ್ಲಿ ಏನು ಯಾವ ಅಪರಾಧವನ್ನೂ ಮಾಡಿಲ್ಲ.

(3) ಆ ಕೂಡಲೇ ಶಸ್ತ್ರಚಿಕಿತ್ಸೆ ಮಾಡದಿದ್ದರೆ ಪ್ರಾಣಕ್ಕೆ ಅಪಾಯವಾಗುವ ಸಂಭವವಿರುವ ಅಪಘಾತಕ್ಕೆ ಒಳಗಾಗಿರುವ ಮಗುವನ್ನು ಏ ಎಂಬ ಶಸ್ತ್ರ ಚಿಕಿತ್ಸಕನು ನೋಡುತ್ತಾನೆ. ಆ ಬಗ್ಗೆ ಮಗುವಿನ ಪೋಷಕನನ್ನು ಕೇಳಲು ಸಮಯವೇ ಇರುವುದಿಲ್ಲ. ಮಗುವಿನ ರೋದನೆಯನ್ನು ಲಕ್ಷಿಸದೆ ಸದ್ಭಾವನೆಯಿಂದ ಮಗುವಿನ ಪ್ರಯೋಜನಕ್ಕಾಗಿ ಏನು ಶಸ್ತ್ರಚಿಕಿತ್ಸೆ ಮಾಡುತ್ತಾನೆ. ಇಲ್ಲಿ ಏನು ಯಾವ ಅಪರಾಧವನ್ನೂ ಮಾಡಿಲ್ಲ.

(4) ಬೆಂಕಿ ಹತ್ತಿದ ಮನೆಯಲ್ಲಿ ಏನು ಜೆಡ್ ಎಂಬ ಮಗುವಿನೊಂದಿಗೆ ಇರುತ್ತಾನೆ. ಕೆಳಗಡೆ ಇರುವ ಜನ ಕಂಬಳಿಯನ್ನು ಜೋಳಿಗೆಯಾಗಿ ಹಿಡಿಯುತ್ತಾರೆ. ಮನೆಯ ಮೇಲ್ಗಡೆಯಿಂದ ಮಗುವನ್ನು ಕೆಳಗಿರುವ ಕಂಬಳಿಯ ಜೋಳಿಗೆಗೆ ಹಾಕಿದರೆ ಅದಕ್ಕೆ ಮರಣ ಉಂಟಾಗುವ ಸಂಭವವಿರುವುದೆಂದೂ ತಿಳಿದೂ, ಮಗುವನ್ನು ಕೊಲ್ಲುವ ಉದ್ದೇಶವಿಲ್ಲದೆ, ಅದರ ಪ್ರಯೋಜನಕ್ಕಾಗಿ ಸದ್ಭಾವನೆಯಿಂದ ಕೆಳಗೆ ಹಾಕುತ್ತಾನೆ. ಇಲ್ಲಿ ಹಾಗೆ ಕೆಳಗೆ ಹಾಕಿದುದರಿಂದಾಗಿ ಮಗುವು ಮರಣ ಹೊಂದಿದರೂ, ಏನು ಯಾವ ಅಪರಾಧವನ್ನೂ ಮಾಡಿಲ್ಲ.

*ವಿವರಣೆ.*- ಕೇವಲ ಆರ್ಥಿಕ ಪ್ರಯೋಜನವು 26ನೇ, 27ನೇ ಪ್ರಕರಣಗಳು ಮತ್ತು ಈ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ ಪ್ರಯೋಜನ ಅಲ್ಲ.

**31. ಸದ್ಭಾವನೆಯಿಂದ ತಿಳಿಸಿದ ಸುದ್ದಿ.-** ಯಾವ ವ್ಯಕ್ತಿಗೆ ಸದ್ಭಾವನೆಯಿಂದ ಯಾವ ಸುದ್ದಿಯನ್ನು ತಿಳಿಸಲಾಗಿದೆಯೋ ಅದನ್ನು ಆ ವ್ಯಕ್ತಿಯ ಪ್ರಯೋಜನಕ್ಕಾಗಿ ತಿಳಿಸಿದ್ದರೆ, ಆ ವ್ಯಕ್ತಿಗೆ ಅದರಿಂದ ಉಂಟಾಗುವ ಹಾನಿಯ ಕಾರಣದಿಂದ, ಆ ಸುದ್ದಿಯನ್ನು ತಿಳಿಸುವುದು ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಎ' ಎಂಬ ಶಸ್ತ್ರಚಿಕಿತ್ಸಕನು ರೋಗಿಗೆ ಅವನು ಬದುಕಲಾರನು ಎಂಬ ಸುದ್ದಿಯನ್ನು ಸದ್ಭಾವನೆಯಿಂದ ತಿಳಿಸುತ್ತಾನೆ. ಆ ಸುದ್ದಿಯ ಆಘಾತದಿಂದ ರೋಗಿಯು ಮರಣ ಹೊಂದುತ್ತಾನೆ. ಆ ಸುದ್ದಿಯನ್ನು ತಿಳಿಸಿದರೆ ರೋಗಿಯ ಮರಣ ಉಂಟಾಗುವ ಸಂಭವವಿರುತ್ತದೆಂದು ತಿಳಿದಿದ್ದರೂ 'ಎ'ನು ಯಾವ ಅಪರಾಧವನ್ನೂ ಮಾಡಿಲ್ಲ.

**32. ಬೆದರಿಕೆಗಳಿಂದಾಗಿ ಒತ್ತಾಯದಿಂದ ವ್ಯಕ್ತಿಯು ಮಾಡಿದ ಕೃತ್ಯ.-** ಕೊಲೆ ಮತ್ತು ರಾಜ್ಯದ ವಿರುದ್ಧವಾದ ಮರಣ ದಂಡನೀಯ ಅಪರಾಧಗಳನ್ನು ಹೊರತುಪಡಿಸಿ, ಯಾವ ಕೃತ್ಯವನ್ನು ಮಾಡುವಂತೆ ವ್ಯಕ್ತಿಯನ್ನು ಬೆದರಿಕೆಯಿಂದ ಒತ್ತಾಯಿಸಲಾಗಿದೆಯೋ ಮತ್ತು ಯಾವುದನ್ನು ಮಾಡುವ ಸಮಯದಲ್ಲಿ, ಅದನ್ನು ಮಾಡದೇ ಹೋದರೆ ಆ ವ್ಯಕ್ತಿಗೆ ತತ್‌ಕ್ಷಣ ಮರಣ ಉಂಟಾಗುವುದು ಎಂಬ ಸಕಾರಣ ಭಯವನ್ನು ಮೂಡಿಸಿರುವುದೋ ಆ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ:

ಪರಂತು, ಆ ಕೃತ್ಯವನ್ನು ಮಾಡುವ ವ್ಯಕ್ತಿಯು, ತಾನಾಗಿಯೇ ಅಥವಾ ತತ್‌ಕ್ಷಣ ಮರಣ ಸಂಭವವಿಲ್ಲದಂಥ ಹಾನಿಯು ತನಗುಂಟಾಗುತ್ತದೆಂಬ ಸಕಾರಣ ಭಯದಿಂದ ಯಾವ ಪರಿಸ್ಥಿತಿಯಲ್ಲಿ ಅಂಥ ನಿರ್ಬಂಧಕ್ಕೆ ಒಳಗಾಗಿರುವನೋ ಅಂಥ ಪರಿಸ್ಥಿತಿಗೆ ತನ್ನನ್ನು ಸಿಕ್ಕಿಸಿಕೊಂಡಿರಕೂಡದು.

*ವಿವರಣೆ 1.-* ದರೋಡೆಕೋರರ ಸ್ವಭಾವವನ್ನು ತಿಳಿದೂ ತಾನಾಗಿಯೇ ಅಥವಾ ಹೊಡೆಸಿಕೊಳ್ಳುವ ಬೆದರಿಕೆಯ ಕಾರಣದಿಂದ ಅವರ ತಂಡವನ್ನು ಸೇರಿಕೊಳ್ಳುವ ವ್ಯಕ್ತಿಯು, ತನ್ನ ಸಹಚರರು ಕಾನೂನಿನ ಪ್ರಕಾರ ಅಪರಾಧವಾಗಿರುವ ಯಾವುದೇ ಕೃತ್ಯವನ್ನು ಮಾಡಲು ಒತ್ತಾಯಿಸಿರುವರೆಂಬ ಕಾರಣಕ್ಕಾಗಿ ಆ ಅಪವಾದದ ಪ್ರಯೋಜನಕ್ಕೆ ಅರ್ಹನಾಗುವುದಿಲ್ಲ.

*ವಿವರಣೆ 2.-* ದರೋಡೆಕೋರರ ತಂಡದಿಂದ ಹಿಡಿಯಲ್ಪಟ್ಟ ಮತ್ತು ಯಾವ ಕೃತ್ಯವು ಕಾನೂನಿನ ಪ್ರಕಾರ ಅಪರಾಧವಾಗುತ್ತದೋ ಆ ಕೃತ್ಯವನ್ನು ತತ್‌ಕ್ಷಣ ಮರಣವುಂಟು ಮಾಡುವ ಬೆದರಿಕೆಗೆ ಒಳಗಾಗಿ ಮಾಡಲು ಯಾವ ವ್ಯಕ್ತಿಯನ್ನು ಬಲಾತ್ಕರಿಸಲಾಗಿದೆಯೋ ಆ ವ್ಯಕ್ತಿಯು ಉದಾಹರಣೆಗೆ ತನ್ನ ಸಾಧನಗಳನ್ನು ತೆಗೆದುಕೊಂಡು ಬರುವಂತೆ ಮತ್ತು ದರೋಡೆಕೋರರಿಗೆ ಮನೆಗೆ ನುಗ್ಗಿ ಕೊಳ್ಳೆ ಹೊಡೆಯಲು ಅನುಕೂಲವಾಗುವ ಹಾಗೆ ಆ ಮನೆಯ ಬಾಗಿಲನ್ನು ಮುರಿಯಲು ಒತ್ತಾಯಿಸಲ್ಪಟ್ಟ ಕಮ್ಮಾರನು, ಈ ಅಪವಾದದ ಪ್ರಯೋಜನಕ್ಕೆ ಅರ್ಹನಾಗುತ್ತಾನೆ.

**33. ಅಲ್ಪ ಹಾನಿಯನ್ನು ಉಂಟುಮಾಡುವ ಕೃತ್ಯ.-** ಯಾವ ಕೃತ್ಯದಿಂದಾಗಿ, ಹಾನಿಯು ಉಂಟಾಗುವುದಾಗಿ ಅಥವಾ ಹಾನಿಯನ್ನು ಉಂಟುಮಾಡಲು ಉದ್ದೇಶಿಸಲಾಗಿದೆಯೋ ಅಥವಾ ಹಾನಿಯು ಉಂಟಾಗುವ ಸಂಭವವಿದೆಯೆಂದು ತಿಳಿಯಲಾಗಿದೆಯೋ ಆ ಯಾವುದೇ ಹಾನಿಯ ಕಾರಣದಿಂದ ಸಾಧಾರಣ ತಿಳುವಳಿಕೆಯ ಮತ್ತು ಸ್ವಭಾವದ ಯಾರೇ ವ್ಯಕ್ತಿಯು ಅದರ ಬಗ್ಗೆ ದೂರು ಕೊಡದಿರುವಷ್ಟು ಆ ಹಾನಿಯು ಅಲ್ಪವಾಗಿದ್ದರೆ, ಆ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.

***ಖಾಸಗಿ ಪ್ರತಿರಕ್ಷೆಯ ಹಕ್ಕು***

**34. *ಖಾಸಗಿ* ಪ್ರತಿರಕ್ಷೆಗಾಗಿ ಮಾಡಿದ ಕೃತ್ಯಗಳು.-** *ಖಾಸಗಿ* ಪ್ರತಿರಕ್ಷೆಯ ಹಕ್ಕನ್ನು ಪ್ರಯೋಗಿಸಿ ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.

**35. ದೇಹ ಮತ್ತು ಸ್ವತ್ತಿನ ಬಗ್ಗೆ *ಖಾಸಗಿ* ಪ್ರತಿರಕ್ಷೆಯ ಹಕ್ಕು.-** 37ನೇ ಪ್ರಕರಣದಲ್ಲಿರುವ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಕ್ತಿಗೂ,-

(ಎ) ತನ್ನ ದೇಹವನ್ನು ಅಥವಾ ಇತರ ಯಾರೇ ವ್ಯಕ್ತಿಯ ದೇಹವನ್ನು ಮಾನವ ದೇಹಕ್ಕೆ ಬಾಧಕವಾಗುವ ಯಾವುದೇ ಅಪರಾಧ ಆಗದಂತೆ;

(ಬಿ) ತನ್ನ ಅಥವಾ ಇತರ ಯಾರೇ ವ್ಯಕ್ತಿಯ ಚರ ಅಥವಾ ಸ್ಥಿರ ಸ್ವತ್ತನ್ನು ಕಳ್ಳತನ, ಸುಲಿಗೆ, ಕೇಡು ಅಥವಾ ಆಪರಾಧಿಕ ಅತಿಕ್ರಮಣ ಪ್ರವೇಶದ ಪರಿಭಾಷೆಯಲ್ಲಿ ಬರುವ ಅಪರಾಧವಾಗುವಂಥ ಅಥವಾ ಯಾವ ಕೃತ್ಯವು ಕಳವು ಮಾಡಲು, ಸುಲಿಗೆ

ಮಾಡಲು, ಕೇಡುಂಟು ಮಾಡಲು ಅಥವಾ ಆಪರಾಧಿಕ ಅತಿಕ್ರಮಣ ಪ್ರವೇಶ ಮಾಡಲು ಮಾಡಿದ ಪ್ರಯತ್ನವೆನಿಸುತ್ತದೋ ಆ ಯಾವುದೇ ಕೃತ್ಯದ ವಿರುದ್ಧ

- ಪ್ರತಿರಕ್ಷಿಸಿಕೊಳ್ಳಲು ಹಕ್ಕು ಇರುತ್ತದೆ.

**36. ಅಸ್ವಸ್ಥಚಿತ್ತದ ವ್ಯಕ್ತಿ, ಮುಂತಾದವರಿಂದ ಕೃತ್ಯ ನಡೆಯದಂತೆ ಖಾಸಗಿ ಪ್ರತಿರಕ್ಷೆಯ ಹಕ್ಕು.-** ಯಾವ ಕೃತ್ಯವು ಅನ್ಯಥಾ ಒಂದು ನಿರ್ದಿಷ್ಟ ಅಪರಾಧವಾಗುತ್ತದೋ ಆ ಕೃತ್ಯವು, ಆ ಕೃತ್ಯವನ್ನು ಮಾಡುವ ವ್ಯಕ್ತಿಯ ಹುಡುಗುತನ, ಪರಿಪಕ್ವ ಅರಿವಿನ ಅಭಾವ, ಅಸ್ವಸ್ಥಚಿತ್ತ ಅಥವಾ ಅಮಲಿನ ಕಾರಣದಿಂದ ಅಥವಾ ಆ ವ್ಯಕ್ತಿಯ ತಪ್ಪು ಭಾವನೆಯ ಕಾರಣದಿಂದ ಅದು ಅಪರಾಧವಾಗದಿದ್ದರೆ, ಆ ಕೃತ್ಯವು ಆ ಅಪರಾಧವಾಗಿದ್ದಿದ್ದರೆ ಹೇಗೆ ಆ ಕೃತ್ಯದ ವಿರುದ್ಧ ಪ್ರತಿಯೊಬ್ಬ ವ್ಯಕ್ತಿಗೂ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತಿತ್ತೋ ಹಾಗೆಯೇ ಈ ಪ್ರತಿಯೊಬ್ಬ ವ್ಯಕ್ತಿಗೂ ಅದೇ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತದೆ.

*ದೃಷ್ಟಾಂತಗಳು*

(ಎ) ಅಸ್ವಸ್ಥಚಿತ್ತದ ವ್ಯಕ್ತಿಯಾಗಿದ್ದ ಜೆಡ್‌ನು ಎ‌ನನ್ನು ಕೊಲ್ಲಲು ಪ್ರಯತ್ನಿಸುತ್ತಾನೆ. ಜೆಡ್‌ನು ಯಾವುದೇ ಅಪರಾಧದ ತಪ್ಪಿತಸ್ಥನಾಗುವುದಿಲ್ಲ. ಆದರೆ, ಜೆಡ್‌ನು ಸ್ವಸ್ಥ ಚಿತ್ತದವನಾಗಿದ್ದಿದ್ದರೆ ಹೇಗೆ ಎ‌ನಿಗೆ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತಿತ್ತೋ ಹಾಗೆಯೇ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತದೆ.

(ಬಿ) ಯಾವ ಮನೆಗೆ ಪ್ರವೇಶಿಸಲು ಎ‌ಗೆ ಕಾನೂನುಸಮ್ಮತವಾಗಿ ಹಕ್ಕು ಇದೆಯೋ ಆ ಮನೆಗೆ ಎ‌ನು ರಾತ್ರಿಯಲ್ಲಿ ಪ್ರವೇಶಿಸುತ್ತಾನೆ. ಜೆಡ್‌ನು ಎ‌ನನ್ನು ಮನೆಗಳ್ಳನೆಂದು ಭಾವಿಸಿ ಎ‌ನ ಮೇಲೆ ಸದ್ಭಾವನೆಯಿಂದ ಹಲ್ಲೆ ಮಾಡುತ್ತಾನೆ. ಇಲ್ಲಿ ಜೆಡ್‌ನು ತಪ್ಪು ಭಾವನೆಯಿಂದ ಎ‌ನ ಮೇಲೆ ಹಲ್ಲೆ ಮಾಡಿದ್ದು ಅಪರಾಧವಾಗುವುದಿಲ್ಲ. ಆದರೆ ಜೆಡ್‌ನು ತಪ್ಪು ಭಾವನೆಯಿಂದ ವರ್ತಿಸದಿದ್ದಿದ್ದರೆ ಹೇಗೆ ಎ‌ನಿಗೆ ಜೆಡ್‌ನ ಬಗ್ಗೆ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತಿತ್ತೋ ಹಾಗೆಯೇ ಎ‌ನಿಗೆ ಅದೇ ಖಾಸಗಿ ಪ್ರತಿರಕ್ಷೆಯ ಹಕ್ಕು ಇರುತ್ತದೆ.

**37. ಯಾವ ಕೃತ್ಯಗಳ ಬಗ್ಗೆ ಖಾಸಗಿ ಪ್ರತಿರಕ್ಷೆಯ ಹಕ್ಕು ಇಲ್ಲವೋ ಆ ಕೃತ್ಯಗಳು.-** (1) ಖಾಸಗಿ ಪ್ರತಿರಕ್ಷೆಗೆ,-

(ಎ) ತನ್ನ ಅಧಿಕಾರ ಪದದ ನಿಮಿತ್ತ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಲೋಕ ನೌಕರನು ಮಾಡಿದ ಯಾವುದೇ ಕೃತ್ಯವು ಅದು ಕಾನೂನಿನಿಂದ ಕಟ್ಟುನಿಟ್ಟಾಗಿ ಸಮರ್ಥನೀಯವಲ್ಲದಿದ್ದರೂ, ಮರಣದ ಅಥವಾ ತೀವ್ರ ಗಾಯದ ಭಯವನ್ನು ಸಕಾರಣವಾಗಿ ಉಂಟುಮಾಡದಿದ್ದರೆ ಆ ಕೃತ್ಯದ ಬಗ್ಗೆ;

(ಬಿ) ತನ್ನ ಅಧಿಕಾರ ಪದದ ನಿಮಿತ್ತ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಲೋಕ ನೌಕರನ ನಿರ್ದೇಶನದಿಂದ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕೃತ್ಯವು ಆ ನಿರ್ದೇಶನವು ಕಾನೂನಿನಿಂದ ಕಟ್ಟುನಿಟ್ಟಾಗಿ ಸಮರ್ಥನೀಯವಲ್ಲದಿದ್ದರೂ, ಆ ಕೃತ್ಯವು ಮರಣದ ಅಥವಾ ತೀವ್ರ ಗಾಯದ ಭಯವನ್ನು ಸಕಾರಣವಾಗಿ ಉಂಟುಮಾಡದಿದ್ದರೆ, ಆ ಕೃತ್ಯದ ಬಗ್ಗೆ;

(ಸಿ) ಸಾರ್ವಜನಿಕ ಪ್ರಾಧಿಕಾರಗಳ ಸಂರಕ್ಷಣೆಗೆ ಮೊರೆ ಹೋಗಲು ಸಮಯವಿರುವ ಸಂದರ್ಭಗಳಲ್ಲಿ

- ಯಾವುದೇ ಹಕ್ಕು ಇರುವುದಿಲ್ಲ.

(2) ಪ್ರತಿರಕ್ಷೆಯ ಉದ್ದೇಶಕ್ಕಾಗಿ ಅವಶ್ಯವಿರುವುದಕ್ಕಿಂತಲೂ ಹೆಚ್ಚು ಹಾನಿಯನ್ನು ಉಂಟುಮಾಡುವುದಕ್ಕೆ ಖಾಸಗಿ ಪ್ರತಿರಕ್ಷೆಯ ಹಕ್ಕು ಯಾವ ಸಂದರ್ಭದಲ್ಲೂ ವ್ಯಾಪ್ತವಾಗುವುದಿಲ್ಲ.

*ವಿವರಣೆ 1.*- ಲೋಕ ನೌಕರನು ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಕೃತ್ಯದ ಬಗ್ಗೆ ಆ ಕೃತ್ಯವನ್ನು ಮಾಡಿದ ವ್ಯಕ್ತಿಯು ಅಂಥ ಲೋಕ ನೌಕರನಾಗಿರುವನೆಂದು ತಿಳಿದು ಅಥವಾ ನಂಬಲು ಕಾರಣವಿದ್ದ ಹೊರತು ವ್ಯಕ್ತಿಯು ಹೊಂದಿರುವ ಖಾಸಗಿ ಪ್ರತಿರಕ್ಷೆಯ ಹಕ್ಕಿನಿಂದ ವಂಚಿತನಾಗುವುದಿಲ್ಲ.

*ವಿವರಣೆ 2.*- ಲೋಕ ನೌಕರನ ನಿರ್ದೇಶನದಿಂದ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕೃತ್ಯದ ಬಗ್ಗೆ ಆ ಕೃತ್ಯವನ್ನು ಮಾಡುವ ವ್ಯಕ್ತಿಯು ಅಂಥ ನಿರ್ದೇಶನದಿಂದಾಗಿ ಕಾರ್ಯನಿರ್ವಹಿಸುತ್ತಿರುವನೆಂದು ತಿಳಿದು ಅಥವಾ ನಂಬಲು ಕಾರಣವಿದ್ದ

ಹೊರತು ಅಥವಾ ಅಂಥ ವ್ಯಕ್ತಿಯು ತಾನು ಯಾವ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವನೆಂದು ಹೇಳುವ ಹೊರತು ಅಥವಾ ಅವನು ಲಿಖಿತ ಅಧಿಕಾರವನ್ನು ಹೊಂದಿದ್ದರೆ, ಅದನ್ನು ಹಾಜರುಪಡಿಸುವಂತೆ ಕೇಳಿಕೊಂಡಾಗ ಹಾಗೆ ಹಾಜರುಪಡಿಸಿದ ಹೊರತು, ವ್ಯಕ್ತಿಯು ಹೊಂದಿರುವ ಖಾಸಗಿ ಪ್ರತಿರಕ್ಷೆಯ ಹಕ್ಕಿನಿಂದ ವಂಚಿತನಾಗುವುದಿಲ್ಲ.

**38. ಮರಣವನ್ನು ಉಂಟುಮಾಡುವುದಕ್ಕೆ ತೊಡಗಿದಾಗ ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಹಕ್ಕು ಯಾವಾಗ ವ್ಯಾಪ್ತವಾಗುತ್ತದೆ.-** ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಹಕ್ಕು, 37ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ನಿರ್ಬಂಧಗಳಿಗೆ ಒಳಪಟ್ಟು, ಯಾವ ಅಪರಾಧವು ಆ ಹಕ್ಕನ್ನು ಚಲಾಯಿಸುವಂತೆ ಮಾಡುವಂಥ ಈ ಮುಂದೆ ವರ್ಣಿಸಿರುವ ಅಪರಾಧಗಳಲ್ಲಿ ಯಾವುದಾದರೂ ಆಗಿದ್ದರೆ, ಹಲ್ಲೆಕಾರನಿಗೆ ಮರಣವನ್ನು ಅಥವಾ ಇತರ ಯಾವುದೇ ಹಾನಿಯನ್ನು ಸ್ವಯಿಚ್ಛೆಯಿಂದ ಉಂಟುಮಾಡುವುದಕ್ಕೆ ತೊಡಗಿದಾಗ ವ್ಯಾಪ್ತವಾಗುತ್ತದೆ; ಆ ಅಪರಾಧಗಳು ಯಾವುವೆಂದರೆ:-

(ಎ) ಯಾವ ಹಲ್ಲೆಯ ಪರಿಣಾಮವಾಗಿ, ಮರಣದ ಹೊರತು ಬೇರೇನೂ ಉಂಟಾಗದೆಂದು ಸಮಂಜಸವಾಗಿ ಗ್ರಹಿಸಬಹುದೋ ಅಂಥ ಹಲ್ಲೆ;

(ಬಿ) ಯಾವ ಹಲ್ಲೆಯ ಪರಿಣಾಮವಾಗಿ, ತೀವ್ರ ಗಾಯದ ಹೊರತು ಬೇರೇನೂ ಉಂಟಾಗದೆಂದು ಸಮಂಜಸವಾಗಿ ಗ್ರಹಿಸಬಹುದೋ ಅಂಥ ಹಲ್ಲೆ;

(ಸಿ) ಅತ್ಯಾಚಾರದ ಉದ್ದೇಶವುಳ್ಳ ಹಲ್ಲೆ;

(ಡಿ) ಅಸಹಜ ಕಾಮ ತೃಪ್ತಿಯ ಉದ್ದೇಶವುಳ್ಳ ಹಲ್ಲೆ;

(ಇ) ಅಪಹರಣದ ಅಥವಾ ಬಲಾತ್ ಅಪಹರಣದ ಉದ್ದೇಶವುಳ್ಳ ಹಲ್ಲೆ;

(ಎಫ್) ತನ್ನ ಬಿಡುಗಡೆಗಾಗಿ ಸಾರ್ವಜನಿಕ ಪ್ರಾಧಿಕಾರಗಳ ಮೊರೆ ಹೋಗಲು ತನಗೆ ಸಾಧ್ಯವಾಗುವುದಿಲ್ಲವೆಂದು ಯಾವ ಸನ್ನಿವೇಶಗಳಲ್ಲಿ ಸಮಂಜಸವಾಗಿ ಗ್ರಹಿಸಬಹುದೋ ಆ ಸನ್ನಿವೇಶಗಳಲ್ಲಿ ವ್ಯಕ್ತಿಯನ್ನು ಅಕ್ರಮ ಬಂಧನದಲ್ಲಿ ಇಡುವ ಉದ್ದೇಶದಿಂದ ಮಾಡಿದ ಹಲ್ಲೆ;

(ಜಿ) ಆ್ಯಸಿಡನ್ನು ಎರಚುವ ಅಥವಾ ಕುಡಿಸುವ ಅಥವಾ ಎರಚಲು ಅಥವಾ ಕುಡಿಸಲು ಪ್ರಯತ್ನಿಸುವ ಯಾವ ಕೃತ್ಯದ ಪರಿಣಾಮವಾಗಿ ತೀವ್ರ ಸ್ವರೂಪದ ನೋವು ಉಂಟಾಗಬಹುದೆಂದು ಸಮಂಜಸವಾಗಿ ಭಾವಿಸಬಹುದಾಗಿದೆಯೋ ಆ ಕೃತ್ಯ.

**39. ಮರಣದ ಹೊರತು ಇತರ ಯಾವುದೇ ಹಾನಿಯನ್ನು ಉಂಟುಮಾಡುವುದಕ್ಕೆ ತೊಡಗಿದಾಗ ಅಂಥ ಹಕ್ಕು ಯಾವಾಗ ವ್ಯಾಪ್ತವಾಗುತ್ತದೆ.-** ಅಪರಾಧವು, 38ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿವರಣೆಯಲ್ಲಿ ಅಪರಾಧವಾಗಿರದಿದ್ದರೆ, ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಹಕ್ಕು ಸ್ವಯಿಚ್ಛೆಯಿಂದ ಹಲ್ಲೆಕಾರನಿಗೆ ಮರಣವನ್ನು ಉಂಟುಮಾಡುವವರೆಗೆ ವ್ಯಾಪಿಸುವುದಿಲ್ಲ; ಆದರೆ 37ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ನಿರ್ಬಂಧಗಳಿಗೆ ಒಳಪಟ್ಟು, ಹಲ್ಲೆಕಾರನಿಗೆ ಮರಣದ ಹೊರತು ಇತರ ಹಾನಿಯನ್ನು ಉಂಟುಮಾಡುವವರೆಗೂ ವ್ಯಾಪ್ತವಾಗುತ್ತದೆ.

**40. ದೇಹದ ಖಾಸಗಿ ಪ್ರತಿರಕ್ಷೆಯ ಹಕ್ಕಿನ ಪ್ರಾರಂಭ ಮತ್ತು ಮುಂದುವರಿಕೆ.-** ಅಪರಾಧವನ್ನು ಮಾಡಿರದಿದ್ದರೂ, ಅದನ್ನು ಮಾಡುವ ಪ್ರಯತ್ನದಿಂದ ಅಥವಾ ಬೆದರಿಕೆಯಿಂದ ದೇಹಕ್ಕೆ ಅಪಾಯವುಂಟಾಗುವ ಸಮಂಜಸ ಭಯವು ಉದ್ಭವಿಸಿದೊಡನೆಯೇ ದೇಹದ ಖಾಸಗಿ ಪ್ರತಿರಕ್ಷೆಯ ಹಕ್ಕು ಪ್ರಾರಂಭವಾಗುತ್ತದೆ ಮತ್ತು ದೇಹಕ್ಕೆ ಅಂಥ ಅಪಾಯದ ಭಯವು ಮುಂದುವರಿಯುವವರೆಗೆ ಅದೂ ಮುಂದುವರಿಯುತ್ತದೆ.

**41. ಸ್ವತ್ತಿನ ಖಾಸಗಿ ಪ್ರತಿರಕ್ಷೆಯ ಹಕ್ಕು ಮರಣವನ್ನು ಉಂಟುಮಾಡುವುದಕ್ಕೆ ತೊಡಗಿದಾಗ ಯಾವಾಗ ವ್ಯಾಪ್ತವಾಗುತ್ತದೆ.-** ಸ್ವತ್ತಿನ ಖಾಸಗಿ ಪ್ರತಿರಕ್ಷೆಯ ಹಕ್ಕು 37ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ನಿರ್ಬಂಧಗಳಿಗೆ ಒಳಪಟ್ಟು, ಅಪರಾಧವು ಈ ಮುಂದೆ ವರ್ಣಿಸಿರುವ ಅಪರಾಧಗಳಲ್ಲಿ ಒಂದು ಅಪರಾಧವಾದರೆ ಮತ್ತು ಅದನ್ನು ಮಾಡುವುದು ಅಥವಾ ಮಾಡುವುದಕ್ಕೆ ಪ್ರಯತ್ನಿಸುವುದು ಆ

ಹಕ್ಕಿನ ಚಲಾವಣೆಗೆ ಕಾರಣವಾದರೆ, ಅದು ಆ ತಪ್ಪು ಮಾಡುವವನಿಗೆ ಸ್ವಯಂ ಆಗಿ ಮರಣವನ್ನು ಅಥವಾ ಇತರ ಯಾವುದೇ ಹಾನಿಯನ್ನು ಉಂಟುಮಾಡುವವರೆಗೆ ವ್ಯಾಪ್ತವಾಗುತ್ತದೆ. ಅಂಥ ಅಪರಾಧಗಳು ಯಾವುವೆಂದರೆ:-

(ಎ) ಸುಲಿಗೆ;

(ಬಿ) ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು ಮನೆಗೆ ಕನ್ನ ಹಾಕುವುದು;

(ಸಿ) ಯಾವ ಕಟ್ಟಡವನ್ನು, ಡೇರೆಯನ್ನು ಅಥವಾ ನೌಕೆಯನ್ನು ಮನುಷ್ಯನ ವಾಸಕ್ಕಾಗಿ ಅಥವಾ ಸ್ವತ್ತಿನ ಅಭಿರಕ್ಷೆಗೆ ಬಳಸಲಾಗುತ್ತಿದೆಯೋ ಆ ಯಾವುದೇ ಕಟ್ಟಡಕ್ಕೆ, ಡೇರೆಗೆ ಅಥವಾ ನೌಕೆಗೆ ಬೆಂಕಿ ಅಥವಾ ಯಾವುದೇ ಸ್ಫೋಟಕ ವಸ್ತು ಹಾಕುವ ಕುಚೇಷ್ಟೆ;

(ಡಿ) ಕಳುವಿನ, ಕುಚೇಷ್ಟೆಯ ಅಥವಾ ಮನೆ-ಅತಿಕ್ರಮಣ ಪ್ರವೇಶ ಮಾಡುವ ಯಾವ ಸನ್ನಿವೇಶಗಳಲ್ಲಿ ಅಂಥ ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸದಿದ್ದರೆ, ಮರಣ ಅಥವಾ ತೀವ್ರ ಗಾಯವುಂಟಾಗುತ್ತದೆಂದು ಸಮಂಜಸವಾಗಿ ಭಾವಿಸಬಹುದೋ ಅಂಥ ಕಳವು, ಕುಚೇಷ್ಟೆ ಅಥವಾ ಮನೆ ಅತಿಕ್ರಮಣ ಪ್ರವೇಶ.

**42. ಮರಣದ ಹೊರತು ಇತರ ಯಾವುದೇ ಹಾನಿಯನ್ನುಂಟುಮಾಡುವವರಿಗೆ ಅಂಥ ಹಕ್ಕು ಯಾವಾಗ ವ್ಯಾಪ್ತವಾಗುತ್ತದೆ.-** ಯಾವ ಅಪರಾಧವನ್ನು ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅದು ಕಳವು, ಕುಚೇಷ್ಟೆ ಅಥವಾ ಆಪರಾಧಿಕ ಅತಿಕ್ರಮಣ ಪ್ರವೇಶವು ಅಪರಾಧವಾದರೆ ಖಾಸಗಿ ಪ್ರತಿರಕ್ಷೆಯ ಹಕ್ಕಿನ ಚಲಾವಣೆಗೆ ಕಾರಣವಾಗುತ್ತದೋ, ಆ ಯಾವುದೇ ಅಪರಾಧವು 41ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವರ್ಣನೆಗಳಲ್ಲಿ ಯಾವುದೂ ಅಲ್ಲದಿದ್ದರೆ, ಆ ಹಕ್ಕು ಸ್ವಯಿಚ್ಛೆಯಿಂದ ಮರಣವನ್ನು ಉಂಟುಮಾಡುವುದಕ್ಕೆ ವ್ಯಾಪ್ತವಾಗುವುದಿಲ್ಲ, ಆದರೆ ತಪ್ಪು ಮಾಡಿದವನಿಗೆ ಮರಣ ಅಲ್ಲದ ಇತರ ಯಾವುದೇ ಹಾನಿಯನ್ನು ಸ್ವಯಿಚ್ಛೆಯಿಂದ ಉಂಟುಮಾಡುವುದಕ್ಕೆ 37ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿರ್ಬಂಧಗಳಿಗೆ ಒಳಪಟ್ಟು ವ್ಯಾಪ್ತವಾಗುತ್ತದೆ.

**43. ಸ್ವತ್ತಿನ ಖಾಸಗಿ ಪ್ರತಿರಕ್ಷೆಯ ಹಕ್ಕಿನ ಪ್ರಾರಂಭ ಮತ್ತು ಮುಂದುವರಿಕೆ.-** ಸ್ವತ್ತಿನ ಖಾಸಗಿ ಪ್ರತಿರಕ್ಷೆಯ ಹಕ್ಕು,-

(ಎ) ಸ್ವತ್ತಿಗೆ ಅಪಾಯವಾಗುವ ಸಮಂಜಸ ಭಯವು ಉಂಟಾದೊಡನೆಯೇ ಪ್ರಾರಂಭವಾಗುತ್ತದೆ;

(ಬಿ) ಕಳುವಿನ ವಿರುದ್ಧ, ಅಪರಾಧಿಯು ಸ್ವತ್ತಿನ ಸಮೇತ ಪಲಾಯನ ಮಾಡುವವರೆಗೆ ಅಥವಾ ಸಾರ್ವಜನಿಕ ಪ್ರಾಧಿಕಾರಗಳ ನೆರವನ್ನು ಪಡೆಯುವವರೆಗೆ ಅಥವಾ ಸ್ವತ್ತನ್ನು ವಸೂಲಿ ಮಾಡುವವರೆಗೆ ಮುಂದುವರಿಯುತ್ತದೆ;

(ಸಿ) ಸುಲಿಗೆಯ ವಿರುದ್ಧ, ಅಪರಾಧಿಯು ಯಾರೇ ವ್ಯಕ್ತಿಗೆ ಮರಣವನ್ನು ಅಥವಾ ತೀವ್ರ ಗಾಯವನ್ನು ಅಥವಾ ಅಕ್ರಮ ನಿರ್ಬಂಧವನ್ನು ಉಂಟುಮಾಡುವವರೆಗೆ ಅಥವಾ ಉಂಟುಮಾಡಲು ಪ್ರಯತ್ನಿಸುವವರೆಗೆ ಅಥವಾ ತತ್‌ಕ್ಷಣ ಮರಣದ ಅಥವಾ ತತ್‌ಕ್ಷಣ ಗಾಯದ ಅಥವಾ ತತ್‌ಕ್ಷಣ ವೈಯಕ್ತಿಕ ನಿರ್ಬಂಧದ ಭೀತಿಯು ಮುಂದುವರಿಯುವವರೆಗೆ ಮುಂದುವರಿಯುತ್ತದೆ;

(ಡಿ) ಅಪರಾಧಿಯು ಆಪರಾಧಿಕ ಅತಿಕ್ರಮಣ ಪ್ರವೇಶ ಅಥವಾ ಕೇಡು ಮಾಡುವುದನ್ನು ಮುಂದುವರಿಸುವವರೆಗೂ ಆ ಆಪರಾಧಿಕ ಅತಿಕ್ರಮಣ ಪ್ರವೇಶದ ಅಥವಾ ಕೇಡಿನ ವಿರುದ್ಧ ಸ್ವತ್ತಿನ ರಕ್ಷಣೆಗಾಗಿ ಮುಂದುವರಿಯುತ್ತದೆ;

(ಇ) ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು ಮನೆಗೆ ಕನ್ನ ಹಾಕುವುದರ ವಿರುದ್ಧ, ಹಾಗೆ ಮನೆಗೆ ಕನ್ನ ಹಾಕುವ ಕೃತ್ಯದಿಂದ ಪ್ರಾರಂಭವಾಗಿ ಮನೆ-ಅತಿಕ್ರಮಣ ಪ್ರವೇಶವು ಮುಂದುವರೆಯುವವರೆಗೂ ಮುಂದುವರಿಯುತ್ತದೆ.

**44. ಅಮಾಯಕ ವ್ಯಕ್ತಿಗೆ ಹಾನಿ ಸಂಭವಿಸುವ ಅಪಾಯವಿರುವಾಗ ಮಾರಕ ಹಲ್ಲೆಯ ವಿರುದ್ಧ ಖಾಸಗಿ ಪ್ರತಿರಕ್ಷೆಯ ಹಕ್ಕು.-** ಯಾವ ಹಲ್ಲೆಯ ಕಾರಣದಿಂದಾಗಿ ಮರಣದ ಸಮಂಜಸ ಭಯವು ಉಂಟಾಗುತ್ತದೋ ಆ ವಿರುದ್ಧ ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸುವಾಗ, ಪ್ರತಿರಕ್ಷಕನು ಅಮಾಯಕ ವ್ಯಕ್ತಿಗೆ ಅಪಾಯ ಉಂಟುಮಾಡುವ ಸಂಭವವಿಲ್ಲದೆಯೇ ಆ ಹಕ್ಕನ್ನು ಚಲಾಯಿಸುವುದು ಸಾಧ್ಯವಿಲ್ಲದ ಸನ್ನಿವೇಶದಲ್ಲಿ ಇದ್ದರೆ, ಆ ಅಪಾಯದ ಸಂಭವವಿದ್ದರೂ ಅವನು ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸಬಹುದು.

*ದೃಷ್ಟಾಂತ*

ಒಂದು ಗುಂಪು ಓನನ್ನು ಕೊಲ್ಲುವ ಪ್ರಯತ್ನದಲ್ಲಿ ಅವನ ಮೇಲೆ ಹಲ್ಲೆ ಮಾಡುತ್ತದೆ. ಅವನು ಆ ಗುಂಪಿನ ಮೇಲೆ ಗುಂಡು ಹಾರಿಸದೆ, ತನ್ನ ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಪರಿಣಾಮಕಾರಿಯಾಗಿ ಚಲಾಯಿಸಲಾರನು ಮತ್ತು ಗುಂಪಿನಲ್ಲಿ ಸೇರಿಕೊಂಡಿರುವ ಪುಟ್ಟ ಮಕ್ಕಳಿಗೆ ಅಪಾಯವುಂಟುಮಾಡುವ ಸಂಭವವಿಲ್ಲದೆಯೇ, ಅವನು ಗುಂಡು ಹಾರಿಸಲಾರನು, ಹಾಗೆ ಗುಂಡು ಹಾರಿಸಿ ಆ ಮಕ್ಕಳಲ್ಲಿ ಯಾರಿಗಾದರೂ ಹಾನಿಯುಂಟಾದರೆ ಓನು ಯಾವ ಅಪರಾಧವನ್ನೂ ಮಾಡಿದಂತಾಗುವುದಿಲ್ಲ.

## ಅಧ್ಯಾಯ IV

## ದುಷ್ಪ್ರೇರಣೆ, ಆಪರಾಧಿಕ ಒಳಸಂಚು ಮತ್ತು ಪ್ರಯತ್ನ

### *ದುಷ್ಪ್ರೇರಣೆ*

**45. ಕೃತ್ಯಕ್ಕೆ ದುಷ್ಪ್ರೇರೇಪಿಸುವುದು.-** ಒಬ್ಬ ವ್ಯಕ್ತಿಯು,-

(ಎ) ಕೃತ್ಯವನ್ನು ಮಾಡುವಂತೆ ಯಾರೇ ವ್ಯಕ್ತಿಯನ್ನು ಪ್ರಚೋದಿಸಿದರೆ; ಅಥವಾ

(ಬಿ) ಇತರ ಒಬ್ಬನ ಅಥವಾ ಅನೇಕ ವ್ಯಕ್ತಿಗಳ ಜತೆಗೆ ಕೃತ್ಯವನ್ನು ಮಾಡುವ ಒಳಸಂಚಿನಲ್ಲಿ ತೊಡಗಿದರೆ ಮತ್ತು ಆ ಒಳಸಂಚಿಗೆ ಅನುಸಾರವಾಗಿ ಮತ್ತು ಕೃತ್ಯವನ್ನು ಮಾಡುವಲ್ಲಿ ಒಂದು ಕೃತ್ಯವು ಅಥವಾ ಕಾನೂನುಬಾಹಿರವಾದ ಲೋಪವು ಸಂಭವಿಸಿದರೆ; ಅಥವಾ

(ಸಿ) ಯಾವುದೇ ಕೃತ್ಯದ ಅಥವಾ ಕಾನೂನುಬಾಹಿರವಾದ ಲೋಪದ ಮೂಲಕ ಆ ಕೃತ್ಯವನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವು ನೀಡಿದರೆ

- ಅವನು ಆ ಕೃತ್ಯಕ್ಕೆ ದುಷ್ಪ್ರೇರಣೆ ಮಾಡಿದಂತಾಗುತ್ತದೆ.

*ವಿವರಣೆ 1.-* ವ್ಯಕ್ತಿಯು, ಬುದ್ಧಿಪೂರ್ವಕವಾಗಿ ತಪ್ಪು ನಿರೂಪಣೆ ಮಾಡಿ ಅಥವಾ ತಾನು ಬಹಿರಂಗಗೊಳಿಸಲು ಬದ್ಧನಾಗಿರುವಂಥ ಸಂಗತಿಯನ್ನು ಬುದ್ಧಿಪೂರ್ವಕವಾಗಿ ಬಚ್ಚಿಟ್ಟು ಕೃತ್ಯವನ್ನು ಸ್ವಯಿಚ್ಛೆಯಿಂದ ಮಾಡಿಸಿದರೆ ಅಥವಾ ಮಾಡಲು ಅನುವು ಮಾಡಿಕೊಟ್ಟರೆ ಅಥವಾ ಮಾಡಿಸಲು ಅಥವಾ ಮಾಡಲು ಅನುವು ಮಾಡಿಕೊಡಲು ಪ್ರಯತ್ನಿಸಿದರೆ ಅವನು ಆ ಕೃತ್ಯವನ್ನು ಮಾಡಲು ಪ್ರಚೋದಿಸುತ್ತಾನೆ ಎಂದು ಹೇಳಲಾಗುತ್ತದೆ.

*ದೃಷ್ಟಾಂತ*

ಸಾರ್ವಜನಿಕ ಅಧಿಕಾರಿಯಾದ ಓನು ನ್ಯಾಯಾಲಯದ ವಾರಂಟಿನಂತೆ ಜೆಡ್‌ನನ್ನು ದಸ್ತಗಿರಿ ಮಾಡಲು ಅಧಿಕೃತನಾಗಿದ್ದಾನೆ. ಬಿನು ಆ ಸಂಗತಿಯನ್ನು ಮತ್ತು ಸಿನು ಜೆಡ್ ಅಲ್ಲವೆಂದು ತಿಳಿದಿದ್ದರೂ, ಬುದ್ಧಿಪೂರ್ವಕವಾಗಿ ಸಿನೇ ಜೆಡ್ ಎಂದು ಓನಿಗೆ ತಿಳಿಸುತ್ತಾನೆ. ಹೀಗೆ ಉದ್ದೇಶಪೂರ್ವಕವಾಗಿ ಓನಿಂದ ಸಿನನ್ನು ದಸ್ತಗಿರಿ ಮಾಡಿಸುತ್ತಾನೆ. ಇಲ್ಲಿ ಬಿನು ಪ್ರಚೋದನೆ ಮಾಡಿ ಸಿನ ದಸ್ತಗಿರಿಗೆ ದುಷ್ಪ್ರೇರಿಸುತ್ತಾನೆ.

*ವಿವರಣೆ 2.-* ಕೃತ್ಯವನ್ನು ಮಾಡುವುದಕ್ಕೆ ಮುಂಚೆ ಅಥವಾ ಮಾಡುವಾಗ, ಆ ಕೃತ್ಯವನ್ನು ಮಾಡುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಯಾರೇ ವ್ಯಕ್ತಿಯು ಏನಾದರೂ ಮಾಡಿದರೆ ಮತ್ತು ಆ ಮೂಲಕ ಅದನ್ನು ಮಾಡುವುದಕ್ಕೆ ಅನುಕೂಲ ಕಲ್ಪಿಸಿದರೆ, ಆ ಕೃತ್ಯವನ್ನು ಮಾಡುವುದಕ್ಕೆ ನೆರವು ನೀಡಿದನು ಎಂದು ಹೇಳಲಾಗುತ್ತದೆ.

**46. ದುಷ್ಪ್ರೇರಕ.-** ಅಪರಾಧವನ್ನು ಮಾಡುವುದಕ್ಕೆ ದುಷ್ಪ್ರೇರಣೆ ನೀಡುವ ಅಥವಾ ದುಷ್ಪ್ರೇರಕನಿಗೆ ಇರುವಂಥದೇ ಉದ್ದೇಶದಂತೆ ಮತ್ತು ತಿಳುವಳಿಕೆಯಂತೆ, ಅಪರಾಧವನ್ನು ಮಾಡಲು ಕಾನೂನಿನ ಪ್ರಕಾರ ಸಮರ್ಥನಾದ ವ್ಯಕ್ತಿಯು ಮಾಡಿದ್ದರೆ ಯಾವ ಕೃತ್ಯವು ಅಪರಾಧವಾಗುತ್ತಿತ್ತೋ ಆ ಕೃತ್ಯವನ್ನು ಮಾಡುವುದಕ್ಕೆ ದುಷ್ಪ್ರೇರಣೆ ನೀಡುವ ವ್ಯಕ್ತಿಯು ಅಪರಾಧಕ್ಕೆ ದುಷ್ಪ್ರೇರಣೆ ನೀಡಿದಂತಾಗುತ್ತದೆ.

*ವಿವರಣೆ 1.-* ಕೃತ್ಯವನ್ನು ಮಾಡಲು ದುಷ್ಪ್ರೇರಕನು ಸ್ವತಃ ಬದ್ಧನಾಗಿರದಿದ್ದರೂ, ಆ ಕೃತ್ಯದ ಕಾನೂನುಬಾಹಿರ ಲೋಪಕ್ಕೆ ದುಷ್ಪ್ರೇರಣೆ ನೀಡುವುದೂ ಅಪರಾಧವಾಗಬಹುದು.

*ವಿವರಣೆ 2.-* ದುಷ್ಪ್ರೇರಣೆಯ ಅಪರಾಧವಾಗಲು, ದುಷ್ಪ್ರೇರಿಸಲಾದ ಕೃತ್ಯವು ನಡೆದಿರಬೇಕಾದ ಅಥವಾ ಅಪರಾಧವಾಗಲು ಅಗತ್ಯವಿರುವ ಪರಿಣಾಮವು ಉಂಟಾಗಿರಬೇಕಾದ ಅವಶ್ಯಕತೆಯಿಲ್ಲ.

*ದೃಷ್ಟಾಂತಗಳು*

(ಎ) ‘ಎ’ನು ‘ಸಿ’ನ ಕೊಲೆ ಮಾಡಲು ‘ಬಿ’ನನ್ನು ಪ್ರಚೋದಿಸುತ್ತಾನೆ. ‘ಬಿ’ನು ಹಾಗೆ ಮಾಡಲು ನಿರಾಕರಿಸುತ್ತಾನೆ. ‘ಎ’ನು ಕೊಲೆ ಮಾಡಲು ‘ಬಿ’ನನ್ನು ದುಷ್ಪ್ರೇರಿಸಿದ ಬಗ್ಗೆ ತಪ್ಪಿತಸ್ಥನಾಗಿದ್ದಾನೆ.

(ಬಿ) ‘ಎ’ನು ‘ಡಿ’ನ ಕೊಲೆ ಮಾಡಲು ‘ಬಿ’ನನ್ನು ಪ್ರಚೋದಿಸುತ್ತಾನೆ. ಆ ಪ್ರಚೋದನೆಯನ್ನು ಅನುಸರಿಸಿ ‘ಬಿ’ನು ‘ಡಿ’ನನ್ನು ಚುಚ್ಚುತ್ತಾನೆ. ‘ಡಿ’ನು ಆ ಗಾಯದಿಂದ ಗುಣ ಹೊಂದುತ್ತಾನೆ. ‘ಎ’ನು ಕೊಲೆ ಮಾಡಲು ‘ಬಿ’ನನ್ನು ದುಷ್ಪ್ರೇರಿಸಿದ ಬಗ್ಗೆ ತಪ್ಪಿತಸ್ಥನಾಗಿದ್ದಾನೆ.

*ವಿವರಣೆ 3.-* ದುಷ್ಪ್ರೇರಣೆಗೆ ಒಳಗಾದ ವ್ಯಕ್ತಿಯು ಕಾನೂನಿನ ಪ್ರಕಾರ ಅಪರಾಧವನ್ನು ಮಾಡಲು ಸಮರ್ಥನಾಗಿರಲೇಬೇಕೆಂದೇನಿಲ್ಲ ಅಥವಾ ಅವನಿಗೆ ದುಷ್ಪ್ರೇರಕನಿಗೆ ಇರುವಂಥದೇ ದೋಷಯುಕ್ತ ಉದ್ದೇಶ ಅಥವಾ ತಿಳುವಳಿಕೆ ಅಥವಾ ಯಾವುದೇ ದೋಷಯುಕ್ತ ಉದ್ದೇಶ ಅಥವಾ ತಿಳುವಳಿಕೆ ಇರಲೇಬೇಕೆಂದೇನಿಲ್ಲ.

*ದೃಷ್ಟಾಂತಗಳು*

(ಎ) ‘ಎ’ನು ದೋಷಯುಕ್ತ ಉದ್ದೇಶದಿಂದ ಮಗುವಿಗೆ ಅಥವಾ ಅಸ್ವಸ್ಥಚಿತ್ತದ ವ್ಯಕ್ತಿಗೆ, ಕಾನೂನಿನ ಪ್ರಕಾರ ಅಪರಾಧ ಮಾಡಲು ಸಮರ್ಥನಾದ ಮತ್ತು ‘ಎ’ನಿಗೆ ಇರುವಂಥದ್ದೇ ಉದ್ದೇಶ ಇರುವ ವ್ಯಕ್ತಿಯು ಯಾವ ಕೃತ್ಯವನ್ನು ಮಾಡಿದರೆ ಅಪರಾಧವಾಗುತ್ತದೋ ಅಂಥ ಕೃತ್ಯವನ್ನು ಮಾಡಲು ದುಷ್ಪ್ರೇರಿಸುತ್ತಾನೆ. ಇಲ್ಲಿ ಆ ಕೃತ್ಯವು ನಡೆಯಲಿ, ನಡೆಯದಿರಲಿ ‘ಎ’ನು ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ ಬಗ್ಗೆ ತಪ್ಪಿತಸ್ಥನಾಗಿದ್ದಾನೆ.

(ಬಿ) ‘ಎ’ನು ‘ಜೆಡ್’ನಿಗೆ ಮರಣವನ್ನುಂಟು ಮಾಡುವ ಉದ್ದೇಶದಿಂದ ಏಳು ವರ್ಷಕ್ಕೆ ಕಡಿಮೆ ವಯಸ್ಸಿನ ‘ಬಿ’ ಎಂಬ ಮಗುವಿಗೆ ಮರಣವನ್ನುಂಟು ಮಾಡುವಂಥ ಕೃತ್ಯವನ್ನು ಮಾಡಲು ಪ್ರಚೋದನೆ ಮಾಡುತ್ತಾನೆ. ಆ ದುಷ್ಪ್ರೇರಣೆಯ ಪರಿಣಾಮವಾಗಿ ‘ಜೆಡ್’ನ ಮರಣವುಂಟಾಗುತ್ತದೆ. ‘ಬಿ’ ಮಗುವು ಪ್ರಚೋದನೆಯ ಪರಿಣಾಮವಾಗಿ ‘ಎ’ನ ಅನುಪಸ್ಥಿತಿಯಲ್ಲಿ ಆ ಕೃತ್ಯವನ್ನು ಮಾಡುತ್ತದೆ. ಆ ಮೂಲಕ ‘ಜೆಡ್’ಗೆ ಮರಣವನ್ನು ಉಂಟುಮಾಡುತ್ತದೆ. ಇಲ್ಲಿ, ಕಾನೂನಿನ ಪ್ರಕಾರ ‘ಬಿ’ ಮಗುವು ಅಪರಾಧವನ್ನು ಮಾಡಲು ಸಮರ್ಥನಲ್ಲದಿದ್ದಾಗ್ಯೂ, ‘ಬಿ’ ಮಗುವು ಕಾನೂನಿನ ಪ್ರಕಾರ ಅಪರಾಧವನ್ನು ಮಾಡಲು ಸಮರ್ಥನಾಗಿದ್ದರೆ ಮತ್ತು ಆ ಕೊಲೆಯನ್ನು ಮಾಡಿದ್ದಿದ್ದರೆ ಹೇಗೆ ದಂಡನೆಗೆ ಗುರಿಯಾಗುತ್ತಿತ್ತೋ ಹಾಗೆ ಅದೇ ರೀತಿಯಲ್ಲಿ ‘ಎ’ನು ದಂಡನೆಗೆ ಗುರಿಯಾಗುತ್ತಾನೆ. ಆದಕಾರಣ ‘ಎ’ ಮರಣದಂಡನೆಗೆ ಒಳಪಡುತ್ತಾನೆ.

(ಸಿ) ‘ಎ’ನು ‘ಬಿ’ಗೆ ಒಂದು ವಾಸದ ಮನೆಗೆ ಬೆಂಕಿ ಹಾಕಲು ಪ್ರಚೋದನೆ ಮಾಡುತ್ತಾನೆ. ‘ಬಿ’ನು ತನ್ನ ಅಸ್ವಸ್ಥಚಿತ್ತದ ಪರಿಣಾಮವಾಗಿ ಆ ಕೃತ್ಯದ ಸ್ವಭಾವವನ್ನು ಅರಿಯಲು ಅಥವಾ ತಾನು ಮಾಡುತ್ತಿರುವ ಕೃತ್ಯವು ಅಕ್ರಮವಾದುದು ಅಥವಾ ಕಾನೂನಿಗೆ ವಿರುದ್ಧವಾದುದು ಎಂಬುದನ್ನು ಅರಿಯಲು ಅಸಮರ್ಥನಾಗಿದ್ದುದರಿಂದ ‘ಎ’ನ ಪ್ರಚೋದನೆಯ ಪರಿಣಾಮವಾಗಿ ಆ ಮನೆಗೆ ಬೆಂಕಿ ಹಚ್ಚುತ್ತಾನೆ. ‘ಬಿ’ನು ಯಾವ ಅಪರಾಧವನ್ನು ಮಾಡಿರುವುದಿಲ್ಲ. ಆದರೆ ‘ಎ’ನು ವಾಸದ ಮನೆಗೆ ಬೆಂಕಿ ಹಚ್ಚುವ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆ ಮತ್ತು ಆ ಕಾರಣ ಆ ಅಪರಾಧಕ್ಕೆ ಉಪಬಂಧಿಸಿರುವ ದಂಡನೆಗೆ ಗುರಿಯಾಗುತ್ತಾನೆ.

(ಡಿ) ಕಳವನ್ನು ಮಾಡಿಸಬೇಕೆಂಬ ಉದ್ದೇಶದಿಂದ ‘ಎ’ನು ‘ಜೆಡ್’ನಿಗೆ ಸೇರಿರುವ ಸ್ವತ್ತನ್ನು ‘ಜೆಡ್’ನ ಸ್ವಾಧೀನದಿಂದ ತೆಗೆದುಕೊಳ್ಳುವಂತೆ ‘ಬಿ’ನಿಗೆ ಪ್ರಚೋದನೆ ಮಾಡುತ್ತಾನೆ. ‘ಎ’ನು ಆ ಸ್ವತ್ತು ತನಗೆ ಸೇರಿದ್ದು ಎಂದು ‘ಬಿ’ಯು ನಂಬುವಂತೆ ಮಾಡುತ್ತಾನೆ. ‘ಬಿ’ಯು ಆ ಸ್ವತ್ತು ‘ಎ’ನ ಸ್ವತ್ತೆಂದು ನಂಬಿ ಸದ್ಭಾವನೆಯಿಂದ ಅದನ್ನು ‘ಜೆಡ್’ನ ಸ್ವಾಧೀನತೆಯಿಂದ ತೆಗೆದುಕೊಳ್ಳುತ್ತಾನೆ. ‘ಬಿ’ನು ಈ ತಪ್ಪು ಭಾವನೆಯಿಂದ ವರ್ತಿಸಿ, ಅಪ್ರಾಮಾಣಿಕವಾಗಿ ಸ್ವತ್ತನ್ನು ತೆಗೆದುಕೊಳ್ಳುವುದಿಲ್ಲ. ಆದುದರಿಂದ, ಅವನು ಕಳವು ಮಾಡಿದಂತಾಗುವುದಿಲ್ಲ. ಆದರೆ ‘ಎ’ನು ಕಳವಿಗೆ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆ ಮತ್ತು ‘ಬಿ’ನೇ ಕಳವು ಮಾಡಿದ್ದರೆ ಯಾವ ದಂಡನೆಗೆ ಗುರಿಯಾಗುತ್ತಿದ್ದನೋ ಆ ದಂಡನೆಗೆ ‘ಎ’ ಗುರಿಯಾಗುತ್ತಾನೆ.

*ವಿವರಣೆ 4.-* ಅಪರಾಧದ ದುಷ್ಪ್ರೇರಣೆಯು ಅಪರಾಧವಾಗುವುದರಿಂದ, ಅಂಥ ದುಷ್ಪ್ರೇರಣೆಗೆ ದುಷ್ಪ್ರೇರಣೆ ಮಾಡುವುದೂ ಸಹ ಅಪರಾಧವಾಗುತ್ತದೆ.

*ದೃಷ್ಟಾಂತ*

'ಎ'ನು 'ಜೆಡ್'ನನ್ನು ಕೊಲೆ ಮಾಡುವಂತೆ 'ಸಿ'ಗೆ ಪ್ರಚೋದನೆ ಮಾಡುವಂತೆ 'ಬಿ'ಗೆ ಪ್ರಚೋದನೆ ಮಾಡುತ್ತಾನೆ. ತದನುಸಾರವಾಗಿ 'ಜೆಡ್'ನನ್ನು ಕೊಲೆ ಮಾಡಲು 'ಬಿ'ನು 'ಸಿ'ಗೆ ಪ್ರಚೋದನೆ ಮಾಡುತ್ತಾನೆ ಮತ್ತು 'ಸಿ'ನು 'ಬಿ'ನ ಪ್ರಚೋದನೆಯ ಪರಿಣಾಮವಾಗಿ 'ಜೆಡ್'ನ ಕೊಲೆ ಮಾಡುತ್ತಾನೆ. 'ಬಿ'ನು ತಾನು ಮಾಡಿದ ಅಪರಾಧಕ್ಕಾಗಿ ಕೊಲೆಗೆ ಉಪಬಂಧಿಸಿರುವ ದಂಡನೆಗೆ ಗುರಿಯಾಗುತ್ತಾನೆ; ಮತ್ತು 'ಎ'ನು 'ಬಿ'ಗೆ ಆ ಅಪರಾಧವನ್ನು ಮಾಡಲು ಪ್ರಚೋದನೆ ಮಾಡಿದ್ದರಿಂದ, 'ಎ'ನೂ ಅದೇ ದಂಡನೆಗೆ ಗುರಿಯಾಗುತ್ತಾನೆ.

*ವಿವರಣೆ 5.-* ಒಳಸಂಚಿನ ಮೂಲಕ ದುಷ್ಪ್ರೇರಣೆಯ ಅಪರಾಧವನ್ನು ಮಾಡುವ ಸಲುವಾಗಿ ಆ ಅಪರಾಧವನ್ನು ಮಾಡುವ ವ್ಯಕ್ತಿಯ ಜೊತೆಗೆ ಕಲೆತು ಯೋಚಿಸುವುದು ಅಗತ್ಯವಿಲ್ಲ. ಯಾವ ಒಳಸಂಚನ್ನು ಅನುಸರಿಸಿ ಆ ಅಪರಾಧ ಮಾಡಲಾಗುವುದೋ ಅದರಲ್ಲಿ ಅವನು ತೊಡಗಿದರೆ ಸಾಕು.

*ದೃಷ್ಟಾಂತ*

'ಜೆಡ್'ನಿಗೆ ವಿಷ ಹಾಕುವ ಹವಣಿಕೆಯಲ್ಲಿ 'ಎ'ನು 'ಬಿ'ನೊಂದಿಗೆ ಸೇರಿಕೊಳ್ಳುತ್ತಾನೆ. 'ಎ'ನು ವಿಷ ಹಾಕಬೇಕೆಂಬ ಒಡಂಬಡಿಕೆಯಾಗಿರುತ್ತದೆ. ಮೂರನೆಯವನೊಬ್ಬ ವಿಷ ಹಾಕುವನೆಂದು 'ಎ'ನ ಹೆಸರು ಹೇಳದೆ ಹವಣಿಕೆಯನ್ನು 'ಬಿ'ನು 'ಸಿ'ನಿಗೆ ವಿವರಿಸಿ ಹೇಳುತ್ತಾನೆ. 'ಸಿ'ನು ವಿಷವನ್ನು ಒದಗಿಸಲು ಒಪ್ಪಿಕೊಳ್ಳುತ್ತಾನೆ ಮತ್ತು ಅದನ್ನು ಪಡೆದು ತಾನು ವಿವರಿಸಿದ ರೀತಿಯಂತೆಯೇ ಬಳಸಲು 'ಬಿ'ನಿಗೆ ವಿಷವನ್ನು ಒಪ್ಪಿಸುತ್ತಾನೆ. 'ಎ'ನು ವಿಷ ಹಾಕುತ್ತಾನೆ. ಪರಿಣಾಮವಾಗಿ 'ಜೆಡ್'ನು ಸಾಯುತ್ತಾನೆ. ಇಲ್ಲಿ ಯಾವ ಒಳಸಂಚಿಗೆ ಅನುಸಾರವಾಗಿ 'ಜೆಡ್'ನ ಕೊಲೆ ಮಾಡಲಾಗಿದೆಯೋ ಆ ಒಳಸಂಚಿನಲ್ಲಿ 'ಎ' ಮತ್ತು 'ಸಿ' ಇಬ್ಬರೂ ಒಟ್ಟಿಗೆ ಒಳಸಂಚು ನಡೆಸಿರದಿದ್ದರೂ, 'ಸಿ'ನು ಒಳಸಂಚಿನಲ್ಲಿ ತೊಡಗಿದ್ದನು. ಆದಕಾರಣ 'ಸಿ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆ ಮತ್ತು ಕೊಲೆಯ ಅಪರಾಧಕ್ಕಾಗಿ ದಂಡನೆಗೆ ಗುರಿಯಾಗುತ್ತಾನೆ.

**47. ಭಾರತದ ಹೊರಗೆ ಮಾಡಿದ ಅಪರಾಧಗಳಿಗೆ ಭಾರತದಲ್ಲಿ ದುಷ್ಪ್ರೇರಣೆ.-** ಭಾರತದ ಹೊರಗೆ ಮತ್ತು ಆಚೆಗೆ ಮಾಡಿದ ಯಾವ ಕೃತ್ಯವನ್ನು ಭಾರತದ ಒಳಗೆ ಮಾಡಿದ್ದಿದ್ದರೆ ಅಪರಾಧವಾಗುತ್ತಿತ್ತೋ ಆ ಯಾವುದೇ ಕೃತ್ಯವನ್ನು ಮಾಡುವುದಕ್ಕೆ ಭಾರತದಲ್ಲಿ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಈ ಸಂಹಿತೆಯ ಅರ್ಥವ್ಯಾಪ್ತಿಯಲ್ಲಿ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದಂತಾಗುತ್ತದೆ.

*ದೃಷ್ಟಾಂತ*

ಭಾರತದಲ್ಲಿರುವ 'ಎ'ನು ಎಕ್ಸ್ ದೇಶದಲ್ಲಿರುವ 'ಬಿ' ಎಂಬ ವಿದೇಶೀಯನೊಬ್ಬನಿಗೆ ಆ ದೇಶದಲ್ಲಿ ಕೊಲೆ ಮಾಡಲು ದುಷ್ಪ್ರೇರಣೆ ಮಾಡುತ್ತಾನೆ. 'ಎ'ನು ಕೊಲೆಗೆ ದುಷ್ಪ್ರೇರಿಸಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆ.

**48. ಭಾರತದಲ್ಲಿ ಮಾಡಿದ ಅಪರಾಧಗಳಿಗೆ ಭಾರತದ ಹೊರಗೆ ದುಷ್ಪ್ರೇರಣೆ.-** ಭಾರತದ ಒಳಗೆ ಯಾವ ಕೃತ್ಯವನ್ನು ಮಾಡಿದ್ದಿದ್ದರೆ ಅಪರಾಧವಾಗುತ್ತಿತ್ತೋ ಆ ಯಾವುದೇ ಕೃತ್ಯವನ್ನು ಭಾರತದ ಹೊರಗೆ ಮತ್ತು ಆಚೆಗೆ ಮಾಡುವುದಕ್ಕೆ ಭಾರತದಲ್ಲಿ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಈ ಸಂಹಿತೆಯ ಅರ್ಥವ್ಯಾಪ್ತಿಯಲ್ಲಿ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದಂತಾಗುತ್ತದೆ.

*ದೃಷ್ಟಾಂತ*

'ಎಕ್ಸ್' ದೇಶದಲ್ಲಿರುವ 'ಎ'ನು, 'ಬಿ' ಎಂಬುವನಿಗೆ ಭಾರತದಲ್ಲಿ ಕೊಲೆ ಮಾಡಲು ದುಷ್ಪ್ರೇರಣೆ ಮಾಡುತ್ತಾನೆ. 'ಎ'ನು ಕೊಲೆಗೆ ದುಷ್ಪ್ರೇರಿಸಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆ.

**49. ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರಿತ ಕೃತ್ಯವನ್ನು ಮಾಡಿದ್ದರೆ ಮತ್ತು ಅದರ ದಂಡನೆಗೆ ಸ್ಪಷ್ಟ ಉಪಬಂಧವು ಇಲ್ಲದಿದ್ದರೆ ಆ ದುಷ್ಪ್ರೇರಣೆಗೆ ದಂಡನೆ.-** ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರಿತ ಕೃತ್ಯವನ್ನು ಯಾರೇ ವ್ಯಕ್ತಿಯು ಮಾಡಿದ್ದರೆ ಮತ್ತು

ಅಂಥ ದುಷ್ಪ್ರೇರಣೆಗಾಗಿ ದಂಡನೆ ವಿಧಿಸಲು ಈ ಸಂಹಿತೆಯಲ್ಲಿ ಸ್ಪಷ್ಟ ಉಪಬಂಧವಿರದಿದ್ದರೆ, ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ ಮಾಡುವ ವ್ಯಕ್ತಿಯು ಆ ಅಪರಾಧಕ್ಕಾಗಿ ಉಪಬಂಧಿಸಿರುವ ದಂಡನೆಯಿಂದ ದಂಡಿತನಾಗತಕ್ಕದ್ದು.

*ವಿವರಣೆ.-* ಕೃತ್ಯವನ್ನು ಅಥವಾ ಅಪರಾಧವನ್ನು, ಪ್ರಚೋದನೆಯ ಪರಿಣಾಮವಾಗಿ ಅಥವಾ ಒಳಸಂಚಿಗೆ ಅನುಸಾರವಾಗಿ ಅಥವಾ ದುಷ್ಪ್ರೇರಣೆ ಎನಿಸುವಂಥ ನೆರವಿನಿಂದ ಮಾಡಿದ್ದರೆ ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿದ್ದೆಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) ಸುಳ್ಳು ಸಾಕ್ಷ್ಯ ನೀಡುವಂತೆ 'ಎ'ನು 'ಬಿ'ನಿಗೆ ಪ್ರಚೋದಿಸುತ್ತಾನೆ. 'ಬಿ'ನು ಆ ಪ್ರಚೋದನೆಯ ಪರಿಣಾಮವಾಗಿ ಆ ಅಪರಾಧವನ್ನು ಮಾಡುತ್ತಾನೆ. 'ಎ'ನು ಆ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆ ಮತ್ತು 'ಬಿ'ನು ಗುರಿಯಾಗಬೇಕಾದ ಅದೇ ದಂಡನೆಗೆ ಗುರಿಯಾಗುತ್ತಾನೆ.

(ಬಿ) 'ಜೆಡ್'ನಿಗೆ ವಿಷ ಹಾಕಲು 'ಎ' ಮತ್ತು 'ಬಿ' ಒಳಸಂಚು ಮಾಡುತ್ತಾರೆ. 'ಎ'ನು ಆ ಒಳಸಂಚಿನ ಪರಿಣಾಮವಾಗಿ ವಿಷವನ್ನು ಪಡೆದು 'ಬಿ'ನು ಅದನ್ನು 'ಜೆಡ್'ನಿಗೆ ಹಾಕಬೇಕು ಎಂಬ ಉದ್ದೇಶದಿಂದ 'ಬಿ'ನಿಗೆ ಕೊಡುತ್ತಾನೆ. 'ಬಿ'ನು ಒಳಸಂಚಿಗೆ ಅನುಸಾರವಾಗಿ 'ಎ'ನ ಅನುಪಸ್ಥಿತಿಯಲ್ಲಿ 'ಜೆಡ್'ನಿಗೆ ವಿಷ ಹಾಕುತ್ತಾನೆ. ಅದರಿಂದ 'ಜೆಡ್'ನಿಗೆ ಮರಣವನ್ನು ಉಂಟುಮಾಡುತ್ತಾನೆ. ಇಲ್ಲಿ 'ಬಿ'ನು ಕೊಲೆಗಾಗಿ ತಪ್ಪಿತಸ್ಥನಾಗಿದ್ದಾನೆ. 'ಎ'ನು ಒಳಸಂಚು ಮಾಡಿದ್ದರಿಂದ ಆ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗುತ್ತಾನೆ ಮತ್ತು ಕೊಲೆಗಾಗಿ ದಂಡನೆಗೆ ಗುರಿಯಾಗುತ್ತಾನೆ.

**50. ದುಷ್ಪ್ರೇರಕನ ಉದ್ದೇಶಕ್ಕಿಂತಲೂ ಬೇರೆಯದಾದ ಉದ್ದೇಶದಿಂದ ದುಷ್ಪ್ರೇರಿತನು ಕೃತ್ಯವನ್ನು ಮಾಡಿದರೆ ದುಷ್ಪ್ರೇರಣೆಗಾಗಿ ದಂಡನೆ.-** ಅಪರಾಧ ಮಾಡುವುದಕ್ಕೆ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ದುಷ್ಪ್ರೇರಣೆಗೊಳಗಾದ ವ್ಯಕ್ತಿಯು ದುಷ್ಪ್ರೇರಣೆ ಮಾಡಿದವನ ಉದ್ದೇಶಕ್ಕಿಂತ ಮತ್ತು ತಿಳುವಳಿಕೆಗಿಂತ ಭಿನ್ನವಾದ ಉದ್ದೇಶದಿಂದ ಅಥವಾ ತಿಳುವಳಿಕೆಯಿಂದ ಆ ಕೃತ್ಯವನ್ನು ಮಾಡಿದರೆ, ಯಾವ ಅಪರಾಧವನ್ನು ಮಾಡಿದ್ದಿದ್ದರೆ ಆ ಅಪರಾಧಕ್ಕೆ ಉಪಬಂಧಿಸಿರುವ ದಂಡನೆಯಿಂದ ದುಷ್ಪ್ರೇರಕನ ಉದ್ದೇಶದಂತೆ ಅಥವಾ ಅವನಿಗೆ ಇದ್ದ ತಿಳುವಳಿಕೆಯಂತೆ ಮತ್ತು ಯಾರ ಜೊತೆಯೂ ಸೇರದೆ ಆ ಕೃತ್ಯವನ್ನು ಮಾಡಿದ್ದರೆ ಹೇಗೋ ಹಾಗೆ ದಂಡಿತನಾಗತಕ್ಕದ್ದು.

**51. ದುಷ್ಪ್ರೇರಣೆ ಮಾಡಿದ ಕೃತ್ಯವೇ ಒಂದು, ಮಾಡಲಾದ ಕೃತ್ಯವೇ ಬೇರೊಂದು ಆಗಿರುವಾಗ ದುಷ್ಪ್ರೇರಕನ ಹೊಣೆ.-** ಕೃತ್ಯಕ್ಕೆ ದುಷ್ಪ್ರೇರಣೆ ಮಾಡಿದ್ದರೆ, ಆದರೆ, ಅದರಿಂದ ಬೇರೆ ಒಂದು ಕೃತ್ಯವು ನಡೆದರೆ, ದುಷ್ಪ್ರೇರಕನು, ಅದಕ್ಕೆ ನೇರವಾಗಿ ದುಷ್ಪ್ರೇರಣೆ ನೀಡಿದ್ದಿದ್ದರೆ ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಹೊಣೆಗಾರನಾಗಿರುತ್ತಿದ್ದನೋ ಅದೇ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ಹೊಣೆಗಾರನಾಗಿರುತ್ತಾನೆ:

ಪರಂತು, ನಡೆದ ಕೃತ್ಯವು ದುಷ್ಪ್ರೇರಣೆಯ ಸಂಭಾವ್ಯ ಪರಿಣಾಮವಾಗಿರಬೇಕು ಮತ್ತು ಅದು ಪ್ರಚೋದನೆಯ ಪ್ರಭಾವದಿಂದ ಅಥವಾ ದುಷ್ಪ್ರೇರಣೆ ಎನಿಸುವ ಒಳಸಂಚಿನ ನೆರವಿನಿಂದ ಅಥವಾ ಅದಕ್ಕನುಸಾರವಾಗಿ ನಡೆದದ್ದಾಗಿರಬೇಕು.

*ದೃಷ್ಟಾಂತಗಳು*

(ಎ) 'ಜೆಡ್'ನ ಆಹಾರದಲ್ಲಿ ವಿಷ ಹಾಕುವಂತೆ 'ಎ'ನು ಮಗುವನ್ನು ಪ್ರಚೋದಿಸುತ್ತಾನೆ ಮತ್ತು ಆ ಉದ್ದೇಶದಿಂದ ಆ ಮಗುವಿಗೆ ವಿಷವನ್ನು ಕೊಡುತ್ತಾನೆ. ಆ ಮಗುವು ಪ್ರಚೋದನೆಯ ಪರಿಣಾಮವಾಗಿ ತಪ್ಪಿನಿಂದ 'ಜೆಡ್'ನ ಆಹಾರದ ಬಳಿಯಲ್ಲಿರುವ 'ವೈ'ನ ಆಹಾರದಲ್ಲಿ ಆ ವಿಷವನ್ನು ಹಾಕುತ್ತದೆ. ಇಲ್ಲಿ ಆ ಮಗುವು 'ಎ'ನ ಪ್ರಚೋದನೆಯ ಪ್ರಭಾವದಿಂದ ವರ್ತಿಸಿದ್ದರೆ ಮತ್ತು ಆ ಕೃತ್ಯವು, ಆ ದುಷ್ಪ್ರೇರಣೆಯ ಸಂಭಾವ್ಯ ಪರಿಣಾಮವಾಗಿದ್ದರೆ, 'ಎ'ನು 'ವೈ'ನ ಆಹಾರದಲ್ಲಿ ಆ ವಿಷವನ್ನು ಹಾಕಲು ಆ ಮಗುವನ್ನು ಪ್ರಚೋದಿಸಿದ್ದಿದ್ದರೆ ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಅದಕ್ಕೆ ಹೊಣೆಗಾರನಾಗಿರುತ್ತಿದ್ದನೋ ಅದೇ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ಹೊಣೆಗಾರನಾಗಿರುತ್ತಾನೆ.

(ಬಿ) 'ಜೆಡ್'ನ ಮನೆಗೆ ಬೆಂಕಿ ಹಚ್ಚಲು 'ಎ'ನು 'ಬಿ'ನನ್ನು ಪ್ರಚೋದಿಸುತ್ತಾನೆ, 'ಬಿ'ನು ಮನೆಗೆ ಬೆಂಕಿ ಹಚ್ಚುತ್ತಾನೆ ಮತ್ತು ಅದೇ ಕಾಲದಲ್ಲಿ ಅಲ್ಲಿ ಸ್ವತ್ತನ್ನು ಕಳವು ಮಾಡುತ್ತಾನೆ. 'ಎ'ನು ಮನೆಗೆ ಬೆಂಕಿ ಹಚ್ಚಲು ಪ್ರಚೋದಿಸಿದ ಅಪರಾಧಕ್ಕಾಗಿ ತಪ್ಪಿತಸ್ಥನಾದರೂ, ಕಳವಿಗೆ

ಪ್ರಚೋದಿಸಿದ್ದಕ್ಕಾಗಿ ತಪ್ಪಿತಸ್ಥನಾಗುವುದಿಲ್ಲ. ಏಕೆಂದರೆ ಕಳವು ಪ್ರತ್ಯೇಕ ಕೃತ್ಯವಾಗಿತ್ತೇ ಹೊರತು ಬೆಂಕಿ ಹಚ್ಚುವ ಕೃತ್ಯದ ಸಂಭಾವ್ಯ ಪರಿಣಾಮವಾಗಿರಲಿಲ್ಲ.

(ಸಿ) 'ಎ'ನು 'ಬಿ' ಮತ್ತು 'ಸಿ' ಇಬ್ಬರನ್ನೂ ಮಧ್ಯರಾತ್ರಿಯಲ್ಲಿ ಸುಲಿಗೆಯ ಉದ್ದೇಶಕ್ಕಾಗಿ ವಾಸದ ಮನೆಯೊಳಗೆ ನುಗ್ಗಲು ಪ್ರಚೋದಿಸುತ್ತಾನೆ ಮತ್ತು ಆ ಉದ್ದೇಶಕ್ಕಾಗಿ ಅವರಿಗೆ ಶಸ್ತ್ರಗಳನ್ನು ಒದಗಿಸುತ್ತಾನೆ. 'ಬಿ' ಮತ್ತು 'ಸಿ' ಮನೆಯೊಳಗೆ ನುಗ್ಗುತ್ತಾರೆ ಮತ್ತು 'ಜೆಡ್'ನು ಅವರಿಗೆ ಪ್ರತಿರೋಧ ಒಡ್ಡಿದ್ದರಿಂದ ಮನೆಯ ನಿವಾಸಿಗಳಲ್ಲಿ ಒಬ್ಬ 'ಜೆಡ್'ನನ್ನು ಕೊಲೆ ಮಾಡುತ್ತಾನೆ. ಇಲ್ಲಿ ಆ ಕೊಲೆಯು ದುಷ್ಪ್ರೇರಣೆಯ ಸಂಭಾವ್ಯ ಪರಿಣಾಮವಾಗಿದ್ದರೆ, ಕೊಲೆಗಾಗಿ ಉಪಬಂಧಿಸಿರುವ ದಂಡನೆಗೆ 'ಎ'ನು ಗುರಿಯಾಗುತ್ತಾನೆ.

**52. ಯಾವ ಕೃತ್ಯಕ್ಕೆ ದುಷ್ಪ್ರೇರಣೆ ನೀಡಲಾಯಿತೋ ಆ ಕೃತ್ಯಕ್ಕಾಗಿ ಮತ್ತು ನಡೆದ ಕೃತ್ಯಕ್ಕಾಗಿ ಸಂಚಿತ ದಂಡನೆಗೆ ದುಷ್ಪ್ರೇರಕನು ಯಾವಾಗ ಗುರಿಯಾಗುತ್ತಾನೆ.-** 51ನೇ ಪ್ರಕರಣದ ಮೇರೆಗೆ ದುಷ್ಪ್ರೇರಕನು ಯಾವ ಕೃತ್ಯಕ್ಕೆ ಹೊಣೆಗಾರನಾಗಿರುವನೋ ಆ ಕೃತ್ಯವು ಮಾತ್ರವಲ್ಲದೆ ದುಷ್ಪ್ರೇರಿತವಾದ ಕೃತ್ಯವೂ ನಡೆದಿರುವಾಗ ಮತ್ತು ಅದು ಪ್ರತ್ಯೇಕ ಅಪರಾಧವಾಗಿರುವಾಗ ಆ ದುಷ್ಪ್ರೇರಕನು ಆ ಅಪರಾಧಗಳಲ್ಲಿ ಪ್ರತಿಯೊಂದಕ್ಕೂ ದಂಡನೆಗೆ ಗುರಿಯಾಗುತ್ತಾನೆ.

*ದೃಷ್ಟಾಂತ*

ಲೋಕ ನೌಕರನು ಮಾಡಿದ ಜಪ್ತಿಯನ್ನು ಬಲಪ್ರಯೋಗ ಮಾಡಿ ಪ್ರತಿರೋಧಿಸುವಂತೆ 'ಎ'ನು 'ಬಿ'ನನ್ನು ಪ್ರಚೋದಿಸುತ್ತಾನೆ. ಪರಿಣಾಮವಾಗಿ 'ಬಿ'ನು ಆ ಜಪ್ತಿಯನ್ನು ಪ್ರತಿರೋಧಿಸುತ್ತಾನೆ. ಹಾಗೆ ಪ್ರತಿರೋಧಿಸುವಾಗ, 'ಬಿ'ನು ಆ ಜಪ್ತಿಯನ್ನು ಜಾರಿಗೊಳಿಸುತ್ತಿರುವ ಲೋಕ ನೌಕರನಿಗೆ ತೀವ್ರ ಗಾಯವನ್ನು ಉಂಟುಮಾಡುತ್ತಾನೆ. ಇಲ್ಲಿ 'ಬಿ'ನು ಜಪ್ತಿಯನ್ನು ಪ್ರತಿರೋಧಿಸುವ ಅಪರಾಧವನ್ನು ಮತ್ತು ಸ್ವಯಿಚ್ಛೆಯಿಂದ ತೀವ್ರ ಗಾಯವನ್ನು ಉಂಟುಮಾಡುವ ಅಪರಾಧವನ್ನೂ ಮಾಡಿದ್ದಾನೆ. ಆದ್ದರಿಂದ ಅವನು ಈ ಎರಡೂ ಅಪರಾಧಗಳಿಗಾಗಿ ದಂಡನೆಗೆ ಗುರಿಯಾಗುತ್ತಾನೆ ಮತ್ತು ಜಪ್ತಿಯನ್ನು ಪ್ರತಿರೋಧಿಸುವಾಗ 'ಬಿ'ನು ಸ್ವಯಿಚ್ಛೆಯಿಂದ ತೀವ್ರ ಗಾಯವನ್ನು ಉಂಟುಮಾಡುವ ಸಂಭವವಿದೆಯೆಂದು 'ಎ'ನು ತಿಳಿದಿದ್ದರೆ ಅವನೂ ಆ ಅಪರಾಧಗಳಲ್ಲಿ ಪ್ರತಿಯೊಂದಕ್ಕೂ ದಂಡನೆಗೆ ಗುರಿಯಾಗುತ್ತಾನೆ.

**53. ದುಷ್ಪ್ರೇರಕನು ಉದ್ದೇಶಿಸಿದ ಪರಿಣಾಮಕ್ಕಿಂತ ಭಿನ್ನವಾದ ಪರಿಣಾಮವು ದುಷ್ಪ್ರೇರಿತ ಕೃತ್ಯದಿಂದ ಉಂಟಾದರೆ ದುಷ್ಪ್ರೇರಕನ ಹೊಣೆಗಾರಿಕೆ.-** ದುಷ್ಪ್ರೇರಕನು ಒಂದು ನಿರ್ದಿಷ್ಟ ಪರಿಣಾಮವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ಕೃತ್ಯಕ್ಕೆ ದುಷ್ಪ್ರೇರಣೆ ಮಾಡಿದಾಗ ಮತ್ತು ಆ ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರಕನು ಹೊಣೆಗಾರನಾಗಿರುವ ಕೃತ್ಯವು ದುಷ್ಪ್ರೇರಕನು ಆ ಪರಿಣಾಮವನ್ನು ಉಂಟುಮಾಡಲೆಂದೇ ಆ ಕೃತ್ಯಕ್ಕೆ ದುಷ್ಪ್ರೇರಣೆ ಮಾಡಿದ್ದರೆ ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಅದಕ್ಕೆ ಹೊಣೆಗಾರನಾಗಿರುತ್ತಿದ್ದನೋ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಉಂಟಾದ ಪರಿಣಾಮಕ್ಕೆ ಹೊಣೆಗಾರನಾಗುತ್ತಾನೆ, ಪರಂತು, ದುಷ್ಪ್ರೇರಿತ ಕೃತ್ಯವು ಅಂಥ ಪರಿಣಾಮವನ್ನು ಉಂಟುಮಾಡುವ ಸಂಭವವಿದ್ದಿತೆಂದು ಅವನು ತಿಳಿದಿರಬೇಕು.

*ದೃಷ್ಟಾಂತ*

'ಜೆಡ್'ನಿಗೆ ತೀವ್ರ ಗಾಯವುಂಟುಮಾಡುವಂತೆ 'ಎ'ನು 'ಬಿ'ನನ್ನು ಪ್ರಚೋದಿಸುತ್ತಾನೆ. ಆ ಪ್ರಚೋದನೆಯ ಪರಿಣಾಮವಾಗಿ 'ಬಿ'ನು 'ಜೆಡ್'ನಿಗೆ ತೀವ್ರ ಗಾಯವನ್ನು ಉಂಟುಮಾಡುತ್ತಾನೆ. ಪರಿಣಾಮವಾಗಿ 'ಜೆಡ್'ನು ಮರಣ ಹೊಂದುತ್ತಾನೆ. ಇಲ್ಲಿ ದುಷ್ಪ್ರೇರಿತವಾದ ತೀವ್ರ ಗಾಯವು ಮರಣವನ್ನುಂಟುಮಾಡುವ ಸಂಭವವಿದ್ದಿತ್ತೆಂದು 'ಎ'ನಿಗೆ ತಿಳಿದಿದ್ದರೆ ಅವನು ಕೊಲೆಗಾಗಿ ಉಪಬಂಧಿಸಿರುವ ದಂಡನೆಗೆ ಗುರಿಯಾಗುತ್ತಾನೆ.

**54. ಅಪರಾಧವು ನಡೆದಾಗ ದುಷ್ಪ್ರೇರಕನ ಉಪಸ್ಥಿತಿ.-** ಯಾವಾಗಲಾದರೂ ಯಾರೇ ವ್ಯಕ್ತಿಯು ಉಪಸ್ಥಿತನಿರದಿದ್ದರೂ, ದುಷ್ಪ್ರೇರಕನೆಂದು ದಂಡನೆಗೆ ಗುರಿಯಾಗುವನೋ ಆ ವ್ಯಕ್ತಿಯು ದುಷ್ಪ್ರೇರಣೆಯ ಪರಿಣಾಮವಾಗಿ ಅವನು ಯಾವ ಕೃತ್ಯಕ್ಕಾಗಿ ಅಥವಾ ಅಪರಾಧಕ್ಕಾಗಿ ದಂಡನೆಗೆ ಗುರಿಯಾಗಬಹುದೋ ಆ ಕೃತ್ಯವು ಅಥವಾ ಅಪರಾಧವು ನಡೆಯುತ್ತಿರುವಾಗ ಹಾಜರಾಗಿದ್ದರೆ ಅವನು ಅಂಥ ಕೃತ್ಯವನ್ನು ಅಥವಾ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

**55. ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ದುಷ್ಪ್ರೇರಣೆ.-** ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವುದಕ್ಕೆ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಆ ದುಷ್ಪ್ರೇರಣೆಯ ಪರಿಣಾಮವಾಗಿ ಆ ಅಪರಾಧವು ನಡೆಯದಿದ್ದರೆ ಮತ್ತು ಈ ಸಂಹಿತೆಯಲ್ಲಿ ಅಂಥ ದುಷ್ಪ್ರೇರಣೆಯ ಬಗ್ಗೆ ಸ್ಪಷ್ಟ ಉಪಬಂಧವಿರದಿದ್ದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಮತ್ತು ಯಾವ ಕೃತ್ಯಕ್ಕೆ ದುಷ್ಪ್ರೇರಣೆ ಮಾಡಿದ ಪರಿಣಾಮವಾಗಿ ದುಷ್ಪ್ರೇರಕನು ಹೊಣೆಗಾರನಾಗಿರುವನೋ ಮತ್ತು ಯಾವ ಕೃತ್ಯವು ಯಾರೇ ವ್ಯಕ್ತಿಗೆ ಗಾಯವನ್ನುಂಟು ಮಾಡುವುದೋ ಆ ಕೃತ್ಯವು ನಡೆದಿದ್ದರೆ, ದುಷ್ಪ್ರೇರಕನು ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತ*

'ಜೆಡ್'ನ ಕೊಲೆ ಮಾಡಲು 'ಎ'ನು 'ಬಿ'ನನ್ನು ಪ್ರಚೋದಿಸುತ್ತಾನೆ. ಅಪರಾಧವು ನಡೆಯಲಿಲ್ಲ. 'ಜೆಡ್'ನನ್ನು 'ಬಿ'ನು ಕೊಲೆ ಮಾಡಿದ್ದರೆ 'ಬಿ'ನು ಮರಣದಂಡನೆಗೆ ಅಥವಾ ಆಜೀವ ಕಾರಾವಾಸದ ದಂಡನೆಗೆ ಗುರಿಯಾಗಬಹುದಾಗಿತ್ತು. ಆದ್ದರಿಂದ 'ಎ'ನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೂ ಮತ್ತು ಜುಲ್ಮಾನೆಗೂ ಸಹ ಗುರಿಯಾಗುತ್ತಾನೆ ಮತ್ತು ದುಷ್ಪ್ರೇರಣೆಯ ಪರಿಣಾಮವಾಗಿ 'ಜೆಡ್'ನಿಗೆ ಗಾಯವೇನಾದರೂ ಉಂಟಾಗಿದ್ದರೆ 'ಎ'ನು ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೂ ಮತ್ತು ಜುಲ್ಮಾನೆಗೂ ಗುರಿಯಾಗುತ್ತಾನೆ.

**56. ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ದುಷ್ಪ್ರೇರಣೆ.-** ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ದುಷ್ಪ್ರೇರಣೆಯ ಪರಿಣಾಮವಾಗಿ ಆ ಅಪರಾಧವು ನಡೆಯದಿದ್ದರೆ ಮತ್ತು ಅಂಥ ದುಷ್ಪ್ರೇರಣೆಗಾಗಿ ಈ ಸಂಹಿತೆಯಲ್ಲಿ ಸ್ಪಷ್ಟ ಉಪಬಂಧವಿರದಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಅವಧಿಯ ಯಾವುದೇ ಬಗೆಯ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು; ಮತ್ತು ದುಷ್ಪ್ರೇರಣೆ ಮಾಡಿದವನು ಅಥವಾ ದುಷ್ಪ್ರೇರಣೆಗೆ ಒಳಗಾದವನು ಅಂಥ ಅಪರಾಧವನ್ನು ಪ್ರತಿಬಂಧಿಸುವ ಕರ್ತವ್ಯವುಳ್ಳ ಲೋಕ ನೌಕರನಾಗಿದ್ದರೆ, ದುಷ್ಪ್ರೇರಣೆ ಮಾಡಿದವನು, ಅಂಥ ಅಪರಾಧಕ್ಕಾಗಿ ಉಪಬಂಧಿಸಿರುವ ಯಾವುದೇ ಬಗೆಯ ಕಾರಾವಾಸದ ಬಹುದೀರ್ಘತಮ ಅವಧಿಯ ಅರ್ಧ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಸುಳ್ಳು ಸಾಕ್ಷ್ಯವನ್ನು ಕೊಡುವಂತೆ 'ಎ'ನು 'ಬಿ'ನನ್ನು ಪ್ರಚೋದಿಸುತ್ತಾನೆ. ಇಲ್ಲಿ, 'ಬಿ'ನು ಸುಳ್ಳು ಸಾಕ್ಷ್ಯವನ್ನು ಕೊಡದಿದ್ದರೂ, 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವನ್ನು ಮಾಡಿರುತ್ತಾನೆ ಮತ್ತು ಆ ಮೇರೆಗೆ ಅವನು ದಂಡನೀಯನಾಗುತ್ತಾನೆ.

(ಬಿ) ಸುಲಿಗೆಯನ್ನು ತಡೆಯುವುದು ಪೊಲೀಸ್ ಅಧಿಕಾರಿಯಾದ 'ಎ'ನ ಕರ್ತವ್ಯ. ಆದರೆ ಅವನು ಸುಲಿಗೆಗೆ ದುಷ್ಪ್ರೇರಣೆ ಮಾಡುತ್ತಾನೆ. ಇಲ್ಲಿ ಸುಲಿಗೆಯು ನಡೆಯದಿದ್ದರೂ, 'ಎ'ನು ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿ ಕಾರಾವಾಸದ ಅರ್ಧದಷ್ಟು ಕಾರಾವಾಸಕ್ಕೂ ಮತ್ತು ಜುಲ್ಮಾನೆಗೂ ಸಹ ಗುರಿಯಾಗುತ್ತಾನೆ.

(ಸಿ) ಸುಲಿಗೆಯನ್ನು ತಡೆಯುವ ಕರ್ತವ್ಯವುಳ್ಳ ಪೊಲೀಸ್ ಅಧಿಕಾರಿಯಾದ 'ಎ'ನಿಗೆ 'ಬಿ'ನು ಸುಲಿಗೆ ಮಾಡಲು ದುಷ್ಪ್ರೇರಣೆ ಮಾಡುತ್ತಾನೆ. ಇಲ್ಲಿ ಸುಲಿಗೆ ನಡೆಯದಿದ್ದರೂ, 'ಬಿ'ನು ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧದಷ್ಟು ಕಾರಾವಾಸಕ್ಕೂ ಮತ್ತು ಜುಲ್ಮಾನೆಗೂ ಸಹ ಗುರಿಯಾಗುತ್ತಾನೆ.

**57. ಸಾರ್ವಜನಿಕರಿಂದ ಅಥವಾ ಹತ್ತಕ್ಕಿಂತ ಹೆಚ್ಚು ಜನರಿಂದ ಅಪರಾಧ ಮಾಡಿಸಲು ದುಷ್ಪ್ರೇರಣೆ.-** ಸಾಮಾನ್ಯವಾಗಿ ಸಾರ್ವಜನಿಕರಿಂದ ಅಥವಾ ಹತ್ತಕ್ಕಿಂತ ಹೆಚ್ಚು ಜನರಿಂದ ಅಥವಾ ವ್ಯಕ್ತಿಗಳ ವರ್ಗಗಳಿಂದ ಅಪರಾಧ ಮಾಡಿಸಲು ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

*ದೃಷ್ಟಾಂತ*

ಎದುರು ಪಂಗಡದ ಸದಸ್ಯರು ಮೆರವಣಿಗೆಯಲ್ಲಿ ಹೋಗುತ್ತಿರುವಾಗ ಅವರ ಮೇಲೆ ಹಲ್ಲೆ ಮಾಡುವ ಉದ್ದೇಶದಿಂದ ಒಂದು ನಿರ್ದಿಷ್ಟ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸೇರುವಂತೆ ಹತ್ತಕ್ಕಿಂತ ಹೆಚ್ಚು ಸದಸ್ಯರಿರುವ ಒಂದು ಪಂಗಡಕ್ಕೆ ಪ್ರಚೋದಿಸುವ ಒಂದು ಪ್ರಕಟಣೆ ಪತ್ರವನ್ನು ಸಾರ್ವಜನಿಕ ಸ್ಥಳದಲ್ಲಿ 'ಎ'ನು ಅಂಟಿಸುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವನ್ನು ಮಾಡಿದ್ದಾನೆ.

**58. ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವ ಸಂಚನ್ನು ಮರೆಮಾಚುವುದು.-** ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅಥವಾ ಆ ಮೂಲಕ ತಾನು ಅದಕ್ಕೆ ಅನುಕೂಲ ಕಲ್ಪಿಸುವ ಸಂಭವವಿದೆಯೆಂದು ತಿಳಿದೂ, ಯಾರೇ ವ್ಯಕ್ತಿಯು, ಅಂಥ ಅಪರಾಧ ಮಾಡುವ ಸಂಚು ಇರುವುದನ್ನು ಯಾವುದೇ ಕೃತ್ಯದಿಂದ ಅಥವಾ ಕಾನೂನುಬಾಹಿರ ಲೋಪದಿಂದ ಅಥವಾ ಗೂಢಲಿಪಿಯ ಬಳಕೆಯಿಂದ ಅಥವಾ ಯಾವುದೇ ಇತರೆ ಸಾಧನಗಳಿಂದ ಮಾಹಿತಿಯನ್ನು ಸ್ವಯಿಚ್ಛೆಯಿಂದ ಮರೆಮಾಚಿದರೆ ಅಥವಾ ಅಂಥ ಸಂಚಿಗೆ ಸಂಬಂಧಿಸಿದಂತೆ ಸುಳ್ಳೆಂದು ತಾನು ತಿಳಿದಿರುವ ಯಾವುದೇ ನಿರೂಪಣೆಯನ್ನು ಮಾಡಿರತಕ್ಕದ್ದು,-

(ಎ) ಆ ಅಪರಾಧವು ನಡೆದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ; ಅಥವಾ

(ಬಿ) ಆ ಅಪರಾಧವು ನಡೆಯದಿದ್ದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು

- ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತ*

'ಬಿ' ಎಂಬ ಸ್ಥಳದಲ್ಲಿ ದರೋಡೆಯು ಆಗಲಿದೆಯೆಂಬುದು ತಿಳಿದಿದ್ದು 'ಎ'ನಿಗೆ ಅದರ ಎದುರು ದಿಕ್ಕಿನಲ್ಲಿರುವ 'ಸಿ' ಎಂಬ ಸ್ಥಳದಲ್ಲಿ ದರೋಡೆಯು ಆಗಲಿದೆ ಎಂದು 'ಎ'ನು ಮ್ಯಾಜಿಸ್ಟ್ರೇಟನಿಗೆ ಸುಳ್ಳು ಸುದ್ದಿ ಕೊಡುತ್ತಾನೆ. ಹೀಗೆ, ಆ ಅಪರಾಧವು ಸುಗಮವಾಗಿ ನಡೆಯಲೆಂಬ ಉದ್ದೇಶದಿಂದ 'ಎ'ನು ಮ್ಯಾಜಿಸ್ಟ್ರೇಟನಿಗೆ ತಪ್ಪು ತಿಳುವಳಿಕೆ ಉಂಟು ಮಾಡುತ್ತಾನೆ. ಸಂಚಿನಂತೆಯೇ 'ಬಿ' ಎಂಬ ಸ್ಥಳದಲ್ಲಿ ದರೋಡೆಯು ನಡೆಯುತ್ತದೆ. 'ಎ'ನು ಈ ಪ್ರಕರಣದ ಮೇರೆಗೆ ದಂಡನೀಯನಾಗಿದ್ದಾನೆ.

**59. ಅಪರಾಧವನ್ನು ಪ್ರತಿಬಂಧಿಸುವುದು ತನ್ನ ಕರ್ತವ್ಯವಾಗಿರುವ ಲೋಕ ನೌಕರನು ಆ ಅಪರಾಧದ ಸಂಚನ್ನು ಮರೆಮಾಚುವುದು.-** ಲೋಕ ನೌಕರನಾಗಿ ಯಾವ ಅಪರಾಧವನ್ನು ಪ್ರತಿಬಂಧಿಸುವುದು ತನ್ನ ಕರ್ತವ್ಯವಾಗಿರುವುದೋ ಆ ಅಪರಾಧದ ಸಂಚನ್ನು, ಆ ಅಪರಾಧವು ನಡೆಯಲೆಂಬ ಉದ್ದೇಶದಿಂದ ಅಥವಾ ಆ ಮೂಲಕ ತಾನು ಅದಕ್ಕೆ ಅನುಕೂಲ ಕಲ್ಪಿಸುವ ಸಂಭವವಿದೆಯೆಂದು ತಿಳಿದೂ, ಯಾರೇ ವ್ಯಕ್ತಿಯು, ಅಂಥ ಅಪರಾಧ ಮಾಡುವ ಸಂಚು ಇರುವುದನ್ನು ಯಾವುದೇ ಕೃತ್ಯದಿಂದ ಅಥವಾ ಕಾನೂನುಬಾಹಿರ ಲೋಪದಿಂದ ಅಥವಾ ಗೂಢಲಿಪಿಯ ಬಳಕೆಯಿಂದ ಅಥವಾ ಯಾವುದೇ ಇತರೆ ಸಾಧನಗಳಿಂದ ಮಾಹಿತಿಯನ್ನು

ಸ್ವಯಿಚ್ಛೆಯಿಂದ ಮರೆಮಾಚಿದರೆ ಅಥವಾ ಅಂಥ ಸಂಚಿಗೆ ಸಂಬಂಧಿಸಿದಂತೆ ಸುಳ್ಳೆಂದು ತಾನು ತಿಳಿದಿರುವ ಯಾವುದೇ ನಿರೂಪಣೆಯನ್ನು ಮಾಡಿದರೆ,-

(ಎ) ಅವನು ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧದಷ್ಟು ಅವಧಿಯವರೆಗೆ ವಿಸ್ತರಿಸಬಹುದಾದ ಯಾವುದೇ ಬಗೆಯ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು; ಅಥವಾ

(ಬಿ) ಆ ಅಪರಾಧವು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾಗಿದ್ದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಅಥವಾ

(ಸಿ) ಆ ಅಪರಾಧವು ನಡೆಯದಿದ್ದರೆ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಅವಧಿಯ ಯಾವುದೇ ಬಗೆಯ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತ*

'ಎ' ಎಂಬ ಪೊಲೀಸ್ ಅಧಿಕಾರಿಯು, ಸುಲಿಗೆ ಮಾಡುವ ಸಂಚುಗಳಿಗೆ ಸಂಬಂಧಿಸಿದಂತೆ ತನ್ನ ಗಮನಕ್ಕೆ ಬರಬಹುದಾದ ಎಲ್ಲ ಸುದ್ದಿಯನ್ನು ಒದಗಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುತ್ತಾನೆ ಮತ್ತು 'ಬಿ'ಯು ಸುಲಿಗೆ ಮಾಡಲು ಸಂಚು ಮಾಡುತ್ತಿರುವನೆಂದು ತಿಳಿದೂ ಆ ಅಪರಾಧವು ಸುಗಮವಾಗಿ ನಡೆಯಲೆಂಬ ಉದ್ದೇಶದಿಂದ ಅಂಥ ಸುದ್ದಿಯನ್ನು ಒದಗಿಸಲು ತಪ್ಪುತ್ತಾನೆ. ಇಲ್ಲಿ 'ಎ'ಯು ಕಾನೂನುಬಾಹಿರ ಲೋಪದಿಂದ 'ಬಿ'ನ ಸಂಚು ಇರುವುದನ್ನು ಮರೆಮಾಚಿದ್ದಾನೆ ಮತ್ತು ಅವನು ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ದಂಡನೆಗೆ ಗುರಿಯಾಗುತ್ತಾನೆ.

**60. ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವ ಸಂಚನ್ನು ಮರೆಮಾಚುವುದು.-** ಕಾರಾವಾಸದಿಂದ ದಂಡನೀಯವಾದ ಅಪರಾಧವು ನಡೆಯುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅಥವಾ ಆ ಮೂಲಕ ತಾನು ಅನುಕೂಲ ಕಲ್ಪಿಸುವ ಸಂಭವವಿದೆಯೆಂದು ತಿಳಿದೂ ಯಾರೇ ವ್ಯಕ್ತಿಯು, ಯಾವುದೇ ಕೃತ್ಯದಿಂದ ಅಥವಾ ಕಾನೂನುಬಾಹಿರವಾದ ಲೋಪದಿಂದ ಅಂಥ ಅಪರಾಧದ ಸಂಚು ಇರುವುದನ್ನು ಸ್ವಯಿಚ್ಛೆಯಿಂದ ಮರೆಮಾಚಿದರೆ ಅಥವಾ ಅಂಥ ಸಂಚಿನ ಬಗ್ಗೆ ಸುಳ್ಳು ಎಂದು ತಾನು ತಿಳಿದಿರುವ ಯಾವುದೇ ನಿರೂಪಣೆಯನ್ನು ಮಾಡಿದರೆ,-

(ಎ) ಆ ಅಪರಾಧವು ನಡೆದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಕಾರಾವಾಸದ ಕಾಲು ಭಾಗದ ಅವಧಿಯವರೆಗಿನ ಕಾರಾವಾಸದಿಂದ; ಮತ್ತು

(ಬಿ) ಆ ಅಪರಾಧವು ನಡೆಯದಿದ್ದರೆ, ಅಂಥ ಕಾರಾವಾಸದ ಬಹುದೀರ್ಘತಮ ಅವಧಿಯ ಎಂಟನೇ ಒಂದು ಭಾಗದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

***ಆಪರಾಧಿಕ ಒಳಸಂಚು***

**61. ಆಪರಾಧಿಕ ಒಳಸಂಚು.**- (1) ಇಬ್ಬರು ಇಲ್ಲವೆ ಹೆಚ್ಚು ಜನರು,-

(ಎ) ಕಾನೂನುಬಾಹಿರ ಕೃತ್ಯವನ್ನು; ಅಥವಾ

(ಬಿ) ಕಾನೂನುಬಾಹಿರವಲ್ಲದ ಕೃತ್ಯವನ್ನು ಕಾನೂನುಬಾಹಿರ ಸಾಧನಗಳಿಂದ ಮಾಡಲು ಅಥವಾ ಮಾಡಿಸಲು ಸಾಮಾನ್ಯ ಉದ್ದೇಶದಿಂದ ಒಪ್ಪಿಕೊಂಡರೆ ಹಾಗೆ ಒಪ್ಪಿಕೊಂಡಿರುವುದನ್ನು

- ಆಪರಾಧಿಕ ಒಳಸಂಚು ಎಂದು ಕರೆಯಲಾಗುತ್ತದೆ:

ಪರಂತು, ಅಪರಾಧವನ್ನು ಮಾಡಲು ಒಪ್ಪಿಕೊಂಡಿರುವುದಲ್ಲದ ಯಾವುದೂ ಅದಕ್ಕನುಸಾರವಾಗಿ ಒಬ್ಬನು ಅಥವಾ ಒಬ್ಬನಿಗಿಂತ ಹೆಚ್ಚು ಪಕ್ಷಕಾರರು ಯಾವುದಾದರೂ ಕೃತ್ಯವನ್ನು ಮಾಡಿದ್ದ ಹೊರತು, ಆಪರಾಧಿಕ ಒಳಸಂಚು ಆಗುವುದಿಲ್ಲ.

*ವಿವರಣೆ.-* ಆ ಕಾನೂನುಬಾಹಿರ ಕೃತ್ಯವು ಹಾಗೆ ಒಪ್ಪಿಕೊಂಡಿರುವುದರ ಅಂತಿಮ ಉದ್ದೇಶವಾಗಿದೆಯೇ ಅಥವಾ ಆ ಉದ್ದೇಶಕ್ಕೆ ಕೇವಲ ಪ್ರಾಸಂಗಿಕವಾಗಿದೆಯೇ ಎಂಬುದು ಮುಖ್ಯವಲ್ಲ.

(2) ಆಪರಾಧಿಕ ಒಳಸಂಚಿಗೆ ಪಕ್ಷಕಾರನಾದ ಯಾರೇ ವ್ಯಕ್ತಿಯು,-

(ಎ) ಮರಣದಂಡನೆಯಿಂದ, ಆಜೀವ ಕಾರಾವಾಸದಿಂದ ಅಥವಾ ಎರಡು ವರ್ಷಗಳಿಗೆ ಅಥವಾ ಅದಕ್ಕೆ ಮೇಲ್ಪಟ್ಟ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡಲು ಅಂಥ ಒಳಸಂಚಿನ ದಂಡನೆಗೆ ಈ ಸಂಹಿತೆಯಲ್ಲಿ ಸ್ಪಷ್ಟ ಉಪಬಂಧವನ್ನು ಮಾಡಿರದಿದ್ದರೆ, ಅವನು ಅಂಥ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಹಾಗೆಯೇ ದಂಡಿತನಾಗತಕ್ಕದ್ದು.

(ಬಿ) ಹಿಂದೆ ಹೇಳಿದ ಹಾಗೆ ದಂಡನೀಯವಾದ ಅಪರಾಧವನ್ನು ಮಾಡುವ ಆಪರಾಧಿಕ ಒಳಸಂಚಲ್ಲದ ಇತರ ಯಾವುದೇ ಆರು ತಿಂಗಳುಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

***ಅಪರಾಧಗಳನ್ನು ಮಾಡುವ ಪ್ರಯತ್ನ***

**62. ಆಜೀವ ಕಾರಾವಾಸದಿಂದ ಅಥವಾ ಇತರ ಕಾರಾವಾಸದಿಂದ ದಂಡನೀಯವಾದ ಅಪರಾಧಗಳನ್ನು ಮಾಡಲು ಪ್ರಯತ್ನಿಸುವುದಕ್ಕೆ ದಂಡನೆ.-** ಯಾರೇ ವ್ಯಕ್ತಿಯು, ಈ ಸಂಹಿತೆಯ ಮೇರೆಗೆ ಆಜೀವ ಕಾರಾವಾಸದಿಂದ ಅಥವಾ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡಲು ಅಥವಾ ಮಾಡಿಸಲು ಪ್ರಯತ್ನಿಸಿದರೆ ಮತ್ತು ಆ ಪ್ರಯತ್ನ ಮಾಡುವಾಗ ಆ ಅಪರಾಧ ಮಾಡುವ ದೆಸೆಯಲ್ಲಿ ಯಾವುದೇ ಕೃತ್ಯವನ್ನು ಮಾಡಿದರೆ, ಆ ವ್ಯಕ್ತಿಯು ಅಂಥ ಪ್ರಯತ್ನಕ್ಕಾಗಿ ದಂಡನೆ ವಿಧಿಸುವ ಬಗ್ಗೆ ಈ ಸಂಹಿತೆಯಲ್ಲಿ ಯಾವುದೇ ಸ್ಪಷ್ಟ ಉಪಬಂಧವು ಇಲ್ಲದಿದ್ದರೆ ಸಂದರ್ಭಾನುಸಾರ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಗೆಯ ಕಾರಾವಾಸದಿಂದ ಅಥವಾ ಆಜೀವ ಕಾರಾವಾಸದ ಅವಧಿಯ ಅರ್ಧದಷ್ಟು ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧದಷ್ಟರಿಂದ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಟಿ'ನು ಪೆಟ್ಟಿಗೆಯನ್ನು ಒಡೆದು ಕೆಲವು ಆಭರಣಗಳನ್ನು ಕಳವು ಮಾಡಲು ಪ್ರಯತ್ನಿಸುತ್ತಾನೆ. ಆದರೆ, ಪೆಟ್ಟಿಗೆಯನ್ನು ಹಾಗೆ ತೆರೆದು ನೋಡಲಾಗಿ, ಅದರಲ್ಲಿ ಅಭರಣಗಳು ಇಲ್ಲದಿರುವುದು ಅವನಿಗೆ ಕಂಡುಬರುತ್ತದೆ. ಆದರೂ, ಅವನು ಕಳವು ಮಾಡುವ ಸಲುವಾಗಿ ಪ್ರಯತ್ನದ ಕೃತ್ಯವನ್ನು ಮಾಡಿದ್ದಾನೆ. ಆದಕಾರಣ ಅವನು ಈ ಪ್ರಕರಣದ ಮೇರೆಗೆ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

(ಬಿ) ಜೆಡ್'ನ ಜೇಬಿಗೆ ತನ್ನ ಕೈಗಳನ್ನು ಹಾಕಿ ಟಿ'ನು ಕಳವು ಮಾಡಲು ಪ್ರಯತ್ನಿಸುತ್ತಾನೆ. ಜೆಡ್'ನ ಜೇಬಿನಲ್ಲಿ ಏನೂ ಇರುವುದಿಲ್ಲವಾದ್ದರಿಂದ ಅವನ ಪ್ರಯತ್ನವು ನಿಷ್ಫಲವಾಗುತ್ತದೆ. ಇಲ್ಲಿ ಟಿ'ನು ಈ ಪ್ರಕರಣದ ಮೇರೆಗೆ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

## ಅಧ್ಯಾಯ V

## ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧ

### *ಲೈಂಗಿಕ ಅಪರಾಧಗಳು*

**63. ಅತ್ಯಾಚಾರ.-** ಒಬ್ಬ ಪುರುಷನು,-

(ಎ) ತನ್ನ ಶಿಶ್ನವನ್ನು ಮಹಿಳೆಯ ಯೋನಿಯ, ಬಾಯಿಯ, ಮೂತ್ರದ್ವಾರದ, ಗುದದ ಒಳಕ್ಕೆ ಎಷ್ಟು ಸಾಧ್ಯವಾಗುತ್ತದೋ ಅಷ್ಟೂ ಹಾಕಿದರೆ ಅಥವಾ ಆಕೆ ತನ್ನೊಂದಿಗೆ ಅಥವಾ ಇತರ ಯಾರೇ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಬಿ) ಶಿಶ್ನವಲ್ಲದ ಯಾವುದೇ ವಸ್ತುವನ್ನು ಅಥವಾ ಶರೀರದ ಯಾವುದೇ ಭಾಗವನ್ನು ಮಹಿಳೆಯ ಯೋನಿಯ, ಮೂತ್ರದ್ವಾರದ ಅಥವಾ ಗುದದ ಒಳಗಡೆಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟೂ ಸೇರಿಸಿದರೆ ಅಥವಾ ಆಕೆ ತನ್ನೊಂದಿಗೆ ಅಥವಾ ಇತರ ಯಾರೇ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಸಿ) ಮಹಿಳೆಯ ಶರೀರದ ಯಾವುದೇ ಭಾಗವು ಯೋನಿಯ, ಮೂತ್ರದ್ವಾರದ, ಗುದದ ಅಥವಾ ಅಂಥ ಮಹಿಳೆಯ ಶರೀರದ ಯಾವುದೇ ಭಾಗದ ಒಳಕ್ಕೆ ಹೋಗುವಂತೆ ಉದ್ರೇಕಿಸಿದರೆ ಅಥವಾ ಇತರ ಯಾರೇ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಮಾಡಿದರೆ; ಅಥವಾ

(ಡಿ) ತನ್ನ ಬಾಯಿಯನ್ನು, ಮಹಿಳೆಯ ಯೋನಿಗೆ, ಗುದಕ್ಕೆ, ಮೂತ್ರದ್ವಾರಕ್ಕೆ ಹಾಕಿದರೆ ಅಥವಾ ಇತರ ಯಾರೇ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಮಾಡಿದರೆ

- ಅವನು "ಅತ್ಯಾಚಾರ" ಮಾಡಿದ್ದಾನೆ ಎಂದು ಹೇಳಲಾಗುತ್ತದೆ.

ಕೆಳಗೆ ಹೇಳಿರುವ ಏಳು ವರ್ಣನೆಗಳಲ್ಲಿ ಯಾವುದೇ ವರ್ಣನೆಯ ಸನ್ನಿವೇಶಗಳಲ್ಲಿ ಎಂದರೆ, ಯಾರೇ ಪುರುಷನು,-

(i) ಆಕೆಯ ಇಚ್ಛೆಗೆ ವಿರುದ್ಧವಾಗಿ;

(ii) ಆಕೆಯ ಸಮ್ಮತಿ ಇಲ್ಲದೆಯೆ;

(iii) ಆಕೆ ಸಮ್ಮತಿ ಕೊಟ್ಟಿದ್ದರೂ ಆಕೆಗೆ ಅಥವಾ ಆಕೆಯು ಯಾವ ವ್ಯಕ್ತಿಯಲ್ಲಿ ಆಸಕ್ತಿ ಉಳ್ಳವಳಾಗಿದ್ದಾಳೋ ಆ ಯಾರೇ ಇನ್ನೊಬ್ಬ ವ್ಯಕ್ತಿಗೆ ಮರಣ ಉಂಟುಮಾಡುವುದಾಗಿ ಅಥವಾ ಗಾಯಗೊಳಿಸುವುದಾಗಿ ಬೆದರಿಕೆ ಹಾಕಿ ಆಕೆಯ ಸಮ್ಮತಿಯನ್ನು ಪಡೆದುಕೊಂಡಿದ್ದರೆ;

(iv) ಅವಳ ಸಮ್ಮತಿಯಿಂದ, ಆ ಪುರುಷನು ತಾನು ಅವಳ ಪತಿಯಲ್ಲವೆಂದು ಮತ್ತು ಅವಳು ಅನ್ಯಪುರುಷನನ್ನು ತಾನು ಕಾನೂನುಬದ್ಧವಾಗಿ ವಿವಾಹವಾಗಿರುವುದಾಗಿ ಅಥವಾ ವಿವಾಹವಾಗುವುದಾಗಿ ನಂಬಿರುವ ಕಾರಣದಿಂದ ಆತನಿಗೆ ಸಮ್ಮತಿಯನ್ನು ಕೊಟ್ಟಿರುವಳೆಂದು ತಿಳಿದಿರುವಾಗ;

(v) ಮಹಿಳೆಯು ತನ್ನ ಸಮ್ಮತಿಯನ್ನು ನೀಡಿದ ಕಾಲದಲ್ಲಿ ಆಕೆಯ ಅಸ್ವಸ್ಥಚಿತ್ತ ಅಥವಾ ಅಮಲೇರಿದ ಸ್ಥಿತಿಯ ಕಾರಣದಿಂದಾಗಿ ಅಥವಾ ಮಂಕುಗೊಳಿಸುವ ಅಥವಾ ಅನಾರೋಗ್ಯಕರ ಪದಾರ್ಥವನ್ನು ಸ್ವತಃ ಆ ಪುರುಷನೇ ಅಥವಾ ಬೇರೆಯವರ ಮೂಲಕ ಆಕೆಗೆ ಕೊಟ್ಟ ಕಾರಣದಿಂದಾಗಿ, ಆಕೆ ತಾನು ಕೊಡುತ್ತಿರುವ ಸಮ್ಮತಿಯ ಸ್ವರೂಪ ಮತ್ತು ಪರಿಣಾಮಗಳನ್ನು ತಿಳಿದುಕೊಳ್ಳಲು ಅಸಮರ್ಥಳಾಗಿರುವಾಗ, ಆಕೆ ಸಮ್ಮತಿ ಕೊಟ್ಟಿದ್ದರೆ;

(vi) ಮಹಿಳೆಯು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಿರುವಾಗ ಆಕೆ ಸಮ್ಮತಿ ಕೊಟ್ಟಿದ್ದರೆ ಅಥವಾ ಆಕೆಯ ಸಮ್ಮತಿ ಇಲ್ಲದೆಯೆ;

(vii) ಆಕೆ ಸಮ್ಮತಿ ತಿಳಿಸಲು ಅಸಮರ್ಥಳಿರುವಾಗ

- ಅತ್ಯಾಚಾರ ಮಾಡಿದ್ದಾನೆಂದು ಹೇಳಲಾಗುತ್ತದೆ.

*ವಿವರಣೆ 1.-* ಈ ಪ್ರಕರಣದ ಉದ್ದೇಶಕ್ಕಾಗಿ ìಯೋನಿîಯು ಯೋನಿಯ ಹೊರಮಡಿಕೆಗಳನ್ನು ಒಳಗೊಳ್ಳುತ್ತದೆ.

*ವಿವರಣೆ 2.-* ಸಮ್ಮತಿ ಎಂದರೆ, ಮಹಿಳೆಯು ಶಬ್ದಗಳಲ್ಲಿ, ಸಂಜ್ಞೆಗಳಲ್ಲಿ ಅಥವಾ ಮಾತುಗಳಲ್ಲಿ ಅಥವಾ ಮಾತುಗಳನ್ನಾಡದೆ ಸಂವಹಿಸುವ ಮೂಲಕ ಒಂದು ನಿರ್ದಿಷ್ಟ ಲೈಂಗಿಕ ಸಂಭೋಗದಲ್ಲಿ ತೊಡಗಲು ಇಚ್ಛೆಯನ್ನು ತಿಳಿಸುವ ಸ್ವಯಿಚ್ಛೆಯ ಸ್ಪಷ್ಟ ಒಪ್ಪಿಗೆ ಎಂದು ಅರ್ಥ:

ಪರಂತು, ಒಳಕ್ಕೆ ಸೇರಿಸುವ ಕೃತ್ಯವನ್ನು ತಡೆಯಲು ಯಾವ ಮಹಿಳೆಯು ದೈಹಿಕವಾಗಿ ಪ್ರತಿರೋಧಿಸದಿರುವ ಸಂಗತಿಯ ಕಾರಣ ಮಾತ್ರದಿಂದಲೇ ಆಕೆ ಲೈಂಗಿಕ ಸಂಭೋಗಕ್ಕೆ ಸಮ್ಮತಿಸಿದ್ದಾಳೆ ಎಂದು ಭಾವಿಸತಕ್ಕದ್ದಲ್ಲ.

*ಅಪವಾದ 1.-* ವೈದ್ಯಕೀಯ ಪ್ರಕ್ರಿಯೆ ಅಥವಾ ಕೈ ಹಾಕಿ ಪರೀಕ್ಷಿಸುವುದು ಅತ್ಯಾಚಾರವೆಂದಾಗುವುದಿಲ್ಲ.

*ಅಪವಾದ 2.-* ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನವಳಲ್ಲದ ತನ್ನ ಸ್ವಂತ ಹೆಂಡತಿಯೊಂದಿಗೆ ಲೈಂಗಿಕ ಸಂಭೋಗ ಅಥವಾ ಯಾವುವೇ ಲೈಂಗಿಕ ಕ್ರಿಯೆಗಳು ಅತ್ಯಾಚಾರ ಎನಿಸುವುದಿಲ್ಲ.

**64. ಅತ್ಯಾಚಾರಕ್ಕಾಗಿ ದಂಡನೆ.-** (1) ಉಪಪ್ರಕರಣ (2)ರಲ್ಲಿ ಹೇಳಿರುವ ಸಂದರ್ಭಗಳಲ್ಲಿ ಹೊರತು, ಅತ್ಯಾಚಾರ ಮಾಡುವ ಯಾರೇ ವ್ಯಕ್ತಿಯು ಹತ್ತು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು, ಆದರೆ, ಆ ದಂಡನೆಯು ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಶಿಕ್ಷೆಗೆ ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಎಂದರೆ:-

(ಎ) ಪೊಲೀಸ್ ಅಧಿಕಾರಿಯಾಗಿರುವ ಯಾರೇ ವ್ಯಕ್ತಿಯು,-

(i) ಅಂಥ ಪೊಲೀಸ್ ಅಧಿಕಾರಿಯನ್ನು, ಯಾವ ಪೊಲೀಸ್ ಠಾಣೆಗೆ ನೇಮಕ ಮಾಡಲಾಗಿದೆಯೋ ಆ ಪೊಲೀಸ್ ಠಾಣೆಯ ಸರಹದ್ದಿನಲ್ಲಿ; ಅಥವಾ

(ii) ಯಾವುದೇ ಪೊಲೀಸ್ ಠಾಣೆಯ ಆವರಣದಲ್ಲಿ; ಅಥವಾ

(iii) ಅಂಥ ಪೊಲೀಸ್ ಅಧಿಕಾರಿಯ ಅಭಿರಕ್ಷೆಯಲ್ಲಿರುವ ಅಥವಾ ಅಂಥ ಪೊಲೀಸ್ ಅಧಿಕಾರಿಯ ಅಧೀನದಲ್ಲಿರುವ ಪೊಲೀಸ್ ಅಧಿಕಾರಿಯ ಅಭಿರಕ್ಷೆಯಲ್ಲಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಬಿ) ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನ ಅಭಿರಕ್ಷೆಯಲ್ಲಿರುವ ಅಥವಾ ಅಂಥ ಲೋಕ ನೌಕರನ ಅಧೀನದಲ್ಲಿರುವ ಲೋಕ ನೌಕರನ ಅಭಿರಕ್ಷೆಯಲ್ಲಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಸಿ) ಸಶಸ್ತ್ರ ದಳದಲ್ಲಿರುವ ಯಾರೇ ವ್ಯಕ್ತಿಯು, ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಪ್ರದೇಶದಲ್ಲಿ ನಿಯೋಜಿತನಾಗಿದ್ದಾಗ ಆ ಪ್ರದೇಶದಲ್ಲಿ ಅತ್ಯಾಚಾರ ಮಾಡಿದರೆ; ಅಥವಾ

(ಡಿ) ಸೆರೆಮನೆಯ, ರಿಮಾಂಡ್ ಹೋಮ್‌ನ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮತ್ತು ಕಾನೂನು ಮೂಲಕ ಸ್ಥಾಪಿತವಾಗಿರುವ ಅಭಿರಕ್ಷಣಾ ಸ್ಥಳದ ಅಥವಾ ಮಹಿಳೆಯರ ಅಥವಾ ಮಕ್ಕಳ ಸಂಸ್ಥೆಯ ವ್ಯವಸ್ಥಾಪನೆ ಮಾಡುತ್ತಿರುವ ಅಥವಾ ಅವುಗಳ ಸಿಬ್ಬಂದಿಯಾಗಿರುವ ಯಾರೇ ವ್ಯಕ್ತಿಯು, ಅಂಥ ಸೆರೆಮನೆಯಲ್ಲಿ, ರಿಮಾಂಡ್ ಹೋಮಿನಲ್ಲಿ, ಸ್ಥಳದಲ್ಲಿ ಅಥವಾ ಸಂಸ್ಥೆಯಲ್ಲಿ ವಾಸಿಸುತ್ತಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಇ) ಆಸ್ಪತ್ರೆಯ ವ್ಯವಸ್ಥಾಪನೆ ಮಾಡುತ್ತಿರುವ ಅಥವಾ ಸಿಬ್ಬಂದಿಯಾಗಿರುವ ಯಾರೇ ವ್ಯಕ್ತಿಯು, ಆ ಆಸ್ಪತ್ರೆಯಲ್ಲಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಎಫ್) ಮಹಿಳೆಯ ಸಂಬಂಧಿಕನಾಗಿರುವ, ಪಾಲಕನಾಗಿರುವ ಅಥವಾ ಶಿಕ್ಷಕನಾಗಿರುವ ಅಥವಾ ನಂಬಿಕಸ್ಥ ಅಥವಾ ಅಧಿಕಾರ ಸ್ಥಾನದಲ್ಲಿರುವ ಯಾರೇ ವ್ಯಕ್ತಿಯು ಆಕೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಜಿ) ಮತೀಯ ಅಥವಾ ಪಂಥೀಯ ಹಿಂಸೆಯ ಕಾಲದಲ್ಲಿ ಅತ್ಯಾಚಾರ ಮಾಡಿದರೆ; ಅಥವಾ

(ಎಚ್) ಗರ್ಭಿಣಿ ಎಂದು ಗೊತ್ತಿದ್ದರೂ ಆ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಐ) ಸಮ್ಮತಿಯನ್ನು ಕೊಡಲು ಅಸಮರ್ಥಳಾಗಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಜೆ) ಮಹಿಳೆಯ ಮೇಲೆ ನಿಯಂತ್ರಣ ಹೊಂದಿರುವ ಅಥವಾ ಪ್ರಾಬಲ್ಯ ಉಳ್ಳ ಯಾರೇ ವ್ಯಕ್ತಿಯು ಆಕೆಯ ಮೇಲೆ ಅತ್ಯಾಚಾರ ಮಾಡಿದರೆ;

(ಕೆ) ಮಾನಸಿಕ ಅಥವಾ ದೈಹಿಕ ದುರ್ಬಲತೆಯಿಂದ ಬಳಲುತ್ತಿರುವ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ; ಅಥವಾ

(ಎಲ್) ಮಹಿಳೆಗೆ ಅತ್ಯಾಚಾರದ ಕಾಲದಲ್ಲಿ ತೀವ್ರ ಸ್ವರೂಪದ ದೈಹಿಕ ಗಾಯ ಉಂಟುಮಾಡಿದರೆ ಅಥವಾ ಅಂಗವಿಕಲಗೊಳಿಸಿದರೆ, ಕುರೂಪಗೊಳಿಸಿದರೆ ಅಥವಾ ಮಹಿಳೆಯ ಪ್ರಾಣಕ್ಕೆ ಅಪಾಯವನ್ನುಂಟು ಮಾಡಿದರೆ; ಅಥವಾ

(ಎಂ) ಪುನಃ ಪುನಃ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ

- ಅವನು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಗೆ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.*- ಈ ಉಪಪ್ರಕರಣದ ಉದ್ದೇಶಗಳಿಗಾಗಿ,-

(ಎ) ʻಸಶಸ್ತ್ರ ಪಡೆಗಳುʼ ಎಂದರೆ, ನೌಕಾ ಸೇನೆ, ಭೂ ಸೇನೆ ಮತ್ತು ವಾಯು ಸೇನೆ ಮತ್ತು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಪ್ಯಾರಾಮಿಲಿಟರಿ ಮತ್ತು ಯಾವುವೇ ಆಕ್ಸಿಲರಿ ದಳಗಳೂ ಸೇರಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಸ್ಥಾಪಿತವಾದ ಸಶಸ್ತ್ರ ದಳಗಳ ಯಾರೇ ಸೈನಿಕನನ್ನು ಒಳಗೊಳ್ಳುತ್ತದೆ;

(ಬಿ) ʻಆಸ್ಪತ್ರೆʼ ಎಂದರೆ, ಆಸ್ಪತ್ರೆಯ ಆವರಣಗಳು ಮತ್ತು ಅನಾರೋಗ್ಯದ ಸಮಯದಲ್ಲಿ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ವೈದ್ಯಕೀಯ ನಿಗಾ ಅಥವಾ ಪುನರ್ವ್ಯವಸ್ಥೆ ಅಗತ್ಯವಾಗಿರುವ ವ್ಯಕ್ತಿಗಳನ್ನು ಸ್ವೀಕರಿಸಲು ಮತ್ತು ಉಪಚರಿಸಲು ಇರುವ ಯಾವುದೇ ಸಂಸ್ಥೆಯ ಆವರಣವನ್ನು ಒಳಗೊಳ್ಳುತ್ತದೆ;

(ಸಿ) ʻಪೊಲೀಸ್ ಅಧಿಕಾರಿʼ ಪದವು, ಪೊಲೀಸ್ ಅಧಿನಿಯಮ, 1861 (1861 ರ 5)ರ ಮೇರೆಗೆ ʻಪೊಲೀಸ್ʼ ಪದಾವಳಿಗೆ ಕೊಟ್ಟಿರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಡಿ) ʻಮಹಿಳೆಯರ ಅಥವಾ ಮಕ್ಕಳ ಸಂಸ್ಥೆʼ ಎಂದರೆ, ಅನಾಥಾಶ್ರಮ ಅಥವಾ ನಿರ್ಲಕ್ಷಿತ ಮಹಿಳೆಯರ ಅಥವಾ ಮಕ್ಕಳ ಗೃಹವೆಂದಾಗಲಿ ಅಥವಾ ವಿಧವಾಶ್ರಮವೆಂದಾಗಲಿ ಅಥವಾ ಇತರ ಯಾವುದೇ ಹೆಸರಿನಿಂದ ಕರೆಯಲಾಗುತ್ತಿರುವ ಸಂಸ್ಥೆ ಅಥವಾ ಮಹಿಳೆಯರನ್ನು ಮತ್ತು ಮಕ್ಕಳನ್ನು ಸ್ವೀಕರಿಸಲು ಮತ್ತು ರಕ್ಷಿಸಲು ಸ್ಥಾಪಿತವಾದ ಮತ್ತು ನಿರ್ವಹಿಸಲಾಗುತ್ತಿರುವ ಯಾವುದೇ ಹೆಸರಿನಿಂದ ಕರೆಯಲಾಗುವ ಸಂಸ್ಥೆ.

**65. ಕೆಲವು ಪ್ರಕರಣಗಳಲ್ಲಿ ಅತ್ಯಾಚಾರಕ್ಕಾಗಿ ದಂಡನೆ.-** (1) ಹದಿನಾರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದ ಯಾರೇ ವ್ಯಕ್ತಿಯು, ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ಅಂಥ ಜುಲ್ಮಾನೆಯು, ಸಂತ್ರಸ್ತೆಯ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಆಕೆಗೆ ಪುನರ್ವ್ಯವಸ್ಥೆ ಕಲ್ಪಿಸಲು ಸಾಕಾಗುವಷ್ಟು ನ್ಯಾಯಯುತವಾಗಿರತಕ್ಕದ್ದು ಮತ್ತು ಸಮಂಜಸವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯನ್ನು ಸಂತ್ರಸ್ತೆಗೆ ಸಂದಾಯ ಮಾಡತಕ್ಕದ್ದು.

(2) ಹನ್ನೆರಡು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದ ಯಾರೇ ವ್ಯಕ್ತಿಯು, ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಅಥವಾ ಮರಣದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಜುಲ್ಮಾನೆಯು, ಸಂತ್ರಸ್ತೆಯ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಆಕೆಗೆ ಪುನರ್ವ್ಯವಸ್ಥೆ ಕಲ್ಪಿಸಲು ಸಾಕಾಗುವಷ್ಟು ನ್ಯಾಯಯುತವಾಗಿರತಕ್ಕದ್ದು ಮತ್ತು ಸಮಂಜಸವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯನ್ನು ಸಂತ್ರಸ್ತೆಗೆ ಸಂದಾಯ ಮಾಡತಕ್ಕದ್ದು.

**66. ಸಂತ್ರಸ್ತೆಗೆ ಮರಣವನ್ನುಂಟು ಮಾಡಿದ್ದರೆ ಅಥವಾ ಸಂತ್ರಸ್ತೆಯು ಸತತ ನಿಶ್ಚೇಷ್ಟಿತ ಸ್ಥಿತಿಯ ಜೀವನ ನಡೆಸುವಂತೆ ಮಾಡಿದ್ದರೆ ದಂಡನೆ.-** ಯಾರೇ ವ್ಯಕ್ತಿಯು, 64ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧ ಮಾಡಿರುವಾಗ ಮತ್ತು ಅಂಥ ಅಪರಾಧವನ್ನು ಮಾಡುವಾಗ ಮಹಿಳೆಗೆ ಮರಣವನ್ನುಂಟು ಮಾಡುವಂಥ ಗಾಯವನ್ನು ಮಾಡಿದ್ದರೆ ಅಥವಾ ಆ ಮಹಿಳೆಯು ಸತತವಾಗಿ ನಿಶ್ಚೇಷ್ಟಿತ ಸ್ಥಿತಿಯಲ್ಲಿರುವಂತೆ ಮಾಡಿದ್ದರೆ, ಅವನು ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮರಣದಂಡನೆಯಿಂದ ದಂಡಿತನಾಗತಕ್ಕದ್ದು.

**67. ಪ್ರತ್ಯೇಕ ವಾಸದ ಅವಧಿಯಲ್ಲಿ ಪತಿಯು ತನ್ನ ಪತ್ನಿಯೊಡನೆ ಲೈಂಗಿಕ ಸಂಭೋಗ ಮಾಡುವುದು.-** ಪ್ರತ್ಯೇಕ ವಾಸದ ಡಿಕ್ರಿಯ ಮೇರೆಗೆ ಅಥವಾ ಅನ್ಯಥಾ ಪ್ರತ್ಯೇಕ ವಾಸ ಮಾಡುತ್ತಿರುವ ತನ್ನ ಪತ್ನಿಯೊಡನೆ ಆಕೆಯ ಸಮ್ಮತಿ ಇಲ್ಲದೆಯೇ ಪತಿಯು ಲೈಂಗಿಕ ಸಂಭೋಗ ಮಾಡಿದರೆ, ಆತನು ಎರಡು ವರ್ಷಗಳಿಗೆ ಕಡಿಮೆಯಿಲ್ಲದ, ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದಲ್ಲಿ ìಲೈಂಗಿಕ ಸಂಭೋಗî ಎಂದರೆ, 63ನೇ ಪ್ರಕರಣದ (ಎ) ಯಿಂದ (ಡಿ) ವರೆಗಿನ ಖಂಡಗಳಲ್ಲಿ ಹೇಳಿರುವ ಕೃತ್ಯಗಳಲ್ಲಿ ಯಾವುದೇ ಕೃತ್ಯ.

**68. ಅಧಿಕಾರದಲ್ಲಿರುವ ವ್ಯಕ್ತಿಯಿಂದ ಲೈಂಗಿಕ ಸಂಭೋಗ.- ಯಾರೇ ವ್ಯಕ್ತಿಯು,-**

(ಎ) ಅಧಿಕಾರದ ಸ್ಥಾನದಲ್ಲಿದ್ದಾಗ ಅಥವಾ ನಂಬಿಕೆ-ವಿಶ್ವಾಸದ ಸಂಬಂಧದಲ್ಲಿದ್ದಾಗ; ಅಥವಾ

(ಬಿ) ಲೋಕ ನೌಕರನಾಗಿದ್ದಾಗ; ಅಥವಾ

(ಸಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅಥವಾ ಕಾನೂನಿನ ಮೂಲಕ ಕಾರಾಗೃಹದ, ರಿಮಾಂಡ್ ಹೋಮಿನ ಅಥವಾ ಅಭಿರಕ್ಷೆಯ ಇತರ ಸ್ಥಳದ ಅಥವಾ ಮಕ್ಕಳ ಸಂಸ್ಥೆಯ ಅಧೀಕ್ಷಕನಾಗಿದ್ದಾಗ ಅಥವಾ ವ್ಯವಸ್ಥಾಪಕನಾಗಿದ್ದಾಗ; ಅಥವಾ

(ಡಿ) ಆಸ್ಪತ್ರೆಯ ವ್ಯವಸ್ಥಾಪನೆ ವಹಿಸಿಕೊಂಡಿರುವವನಾಗಿದ್ದಾಗ ಅಥವಾ ಆಸ್ಪತ್ರೆಯ ಸಿಬ್ಬಂದಿಯಾಗಿರುವಾಗ

- ಅಂಥ ಸ್ಥಾನವನ್ನು ಅಥವಾ ನಂಬಿಕೆ-ವಿಶ್ವಾಸದ ಸಂಬಂಧವನ್ನು ತನ್ನ ಅಭಿರಕ್ಷೆಯಲ್ಲಿರುವ ಅಥವಾ ತನ್ನ ಪ್ರಭಾರದಲ್ಲಿರುವ ಅಥವಾ ಆವರಣದಲ್ಲಿರುವ ಮಹಿಳೆಯನ್ನು ತನ್ನ ಜೊತೆ ಲೈಂಗಿಕ ಸಂಭೋಗ ನಡೆಸುವಂತೆ ಪ್ರೇರೇಪಣೆ ಮಾಡಲು ಅಥವಾ ದುಷ್ಪ್ರೇರಣೆ ಮಾಡಲು ದುರುಪಯೋಗಪಡಿಸಿಕೊಂಡರೆ, ಅತ್ಯಾಚಾರದ ಅಪರಾಧವಾಗದಿರುವ ಅಂಥ ಲೈಂಗಿಕ ಸಂಭೋಗಕ್ಕಾಗಿ ಐದು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಈ ಪ್ರಕರಣದಲ್ಲಿ, "ಲೈಂಗಿಕ ಸಂಭೋಗî ಎಂದರೆ, 63ನೇ ಪ್ರಕರಣದ (ಎ) ಯಿಂದ (ಡಿ) ವರೆಗಿನ ಖಂಡಗಳಲ್ಲಿ ಹೇಳಿರುವ ಕೃತ್ಯಗಳಲ್ಲಿ ಯಾವುದೇ ಕೃತ್ಯ.

*ವಿವರಣೆ 2.-* ಈ ಪ್ರಕರಣದ ಉದ್ದೇಶಗಳಿಗಾಗಿ 63ನೇ ಪ್ರಕರಣದ 1ನೇ ವಿವರಣೆಯು ಸಹ ಅನ್ವಯವಾಗತಕ್ಕದ್ದು.

*ವಿವರಣೆ 3.-* ಜೈಲಿಗೆ, ರಿಮಾಂಡ್ ಹೋಮ್‌ಗೆ ಅಥವಾ ಮಹಿಳೆಯರ ಅಥವಾ ಮಕ್ಕಳ ಸಂಸ್ಥೆಗಳಿಗೆ ಸಂಬಂಧಿಸಿದ ìಅಧೀಕ್ಷಕî ಪದದಲ್ಲಿ, ಅಂಥ ಜೈಲಿಗೆ, ರಿಮಾಂಡ್ ಹೋಮ್ ಸ್ಥಳಕ್ಕೆ ಅಥವಾ ಸಂಸ್ಥೆಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರವನ್ನು ಅಥವಾ ನಿಯಂತ್ರಣವನ್ನು ಅಲ್ಲಿ ವಾಸಿಸುತ್ತಿರುವವರ ಮೇಲೆ ಚಲಾಯಿಸಲು ಅಧಿಕಾರವನ್ನು ಹೊಂದಿರುವ ವ್ಯಕ್ತಿ ಒಳಗೊಳ್ಳುತ್ತಾನೆ.

*ವಿವರಣೆ 4.-* "ಆಸ್ಪತ್ರೆî ಮತ್ತು ìಮಹಿಳೆಯರ ಮತ್ತು ಮಕ್ಕಳ ಸಂಸ್ಥೆî ಪದಾವಳಿಯು ಅನುಕ್ರಮವಾಗಿ 64ನೇ ಪ್ರಕರಣದ (2)ನೇ ಉಪಪ್ರಕರಣದ ವಿವರಣೆಯ (ಎ) ಮತ್ತು (ಡಿ) ಖಂಡಗಳಲ್ಲಿ ಕೊಟ್ಟಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**69. ವಂಚನೆಯ ವಿಧಾನಗಳು, ಇತ್ಯಾದಿಗಳನ್ನು ಬಳಸಿ ಲೈಂಗಿಕ ಸಂಭೋಗ.-** ಯಾರೇ ವ್ಯಕ್ತಿಯು, ವಂಚನೆ ವಿಧಾನಗಳಿಂದ ಅಥವಾ ತಾನು ಮಹಿಳೆಯನ್ನು ಮದುವೆಯಾಗುವ ಯಾವುದೇ ಉದ್ದೇಶವಿಲ್ಲದಿದ್ದರೂ ಅವನು ಮದುವೆಯಾಗುವುದಾಗಿ ಆಕೆಗೆ ವಾಗ್ದಾನ ಮಾಡುವ ಮೂಲಕ, ಅತ್ಯಾಚಾರದ ಅಪರಾಧವಾಗದಿರುವ ಅಂಥ ಲೈಂಗಿಕ ಸಂಭೋಗವನ್ನು ಆಕೆಯೊಂದಿಗೆ ನಡೆಸಿದರೆ ಅಂಥ ವ್ಯಕ್ತಿಯು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* "ವಂಚನೆಯ ವಿಧಾನಗಳುî ಎಂದರೆ, ಉದ್ಯೋಗ ಅಥವಾ ಬಡ್ತಿಯ ಪ್ರಲೋಭನೆ ಒಡ್ಡುವುದು ಅಥವಾ ಆ ಬಗ್ಗೆ ಸುಳ್ಳು ಭರವಸೆ ನೀಡುವುದನ್ನು ಅಥವಾ ಗುರುತನ್ನು ಮರೆಮಾಚಿ ಮದುವೆಯಾಗುವುದನ್ನು ಒಳಗೊಳ್ಳತಕ್ಕದ್ದು.

**70. ಸಾಮೂಹಿಕ ಅತ್ಯಾಚಾರ.-** (1) ಒಬ್ಬ ವ್ಯಕ್ತಿಯು ಅಥವಾ ಹೆಚ್ಚು ವ್ಯಕ್ತಿಗಳು ಗುಂಪುಗೂಡಿ ಅಥವಾ ತಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳಲು ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದರೆ, ಅವರಲ್ಲಿ ಪ್ರತಿಯೊಬ್ಬನೂ ಅತ್ಯಾಚಾರದ ಅಪರಾಧವನ್ನು ಮಾಡಿರುತ್ತಾನೆಂದು ಭಾವಿಸತಕ್ಕದ್ದು ಮತ್ತು ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಅಂಥ ಜುಲ್ಮಾನೆಯು, ಸಂತ್ರಸ್ತೆಯ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಆಕೆಗೆ ಪುನರ್ವ್ಯವಸ್ಥೆ ಕಲ್ಪಿಸಲು ಸಾಕಾಗುವಷ್ಟು ನ್ಯಾಯಯುತವಾಗಿರತಕ್ಕದ್ದು ಮತ್ತು ಸಮಂಜಸವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯನ್ನು ಸಂತ್ರಸ್ತೆಗೆ ಸಂದಾಯ ಮಾಡತಕ್ಕದ್ದು.

(2) ಒಬ್ಬ ವ್ಯಕ್ತಿಯು ಅಥವಾ ಹೆಚ್ಚು ವ್ಯಕ್ತಿಗಳು ಗುಂಪುಗೂಡಿ ಅಥವಾ ತಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳಲು ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದರೆ, ಅವರಲ್ಲಿ ಪ್ರತಿಯೊಬ್ಬನೂ ಅತ್ಯಾಚಾರದ ಅಪರಾಧವನ್ನು ಮಾಡಿರುತ್ತಾನೆಂದು ಭಾವಿಸತಕ್ಕದ್ದು ಮತ್ತು ಪ್ರತಿಯೊಬ್ಬನೂ ಆಜೀವ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡನೆಗೆ ಮತ್ತು ಜುಲ್ಮಾನೆಗೆ ಅಥವಾ ಮರಣದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಜುಲ್ಮಾನೆಯು, ಸಂತ್ರಸ್ತೆಯ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಆಕೆಗೆ ಪುನರ್ವ್ಯವಸ್ಥೆ ಕಲ್ಪಿಸಲು ಸಾಕಾಗುವಷ್ಟು ನ್ಯಾಯಯುತವಾಗಿರತಕ್ಕದ್ದು ಮತ್ತು ಸಮಂಜಸವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯನ್ನು ಸಂತ್ರಸ್ತೆಗೆ ಸಂದಾಯ ಮಾಡತಕ್ಕದ್ದು.

**71. ಪುನರಾವರ್ತಿತ ಅಪರಾಧಿಗಳಿಗೆ ದಂಡನೆ.-** 64ನೇ ಪ್ರಕರಣದ ಅಥವಾ 65ನೇ ಪ್ರಕರಣದ ಅಥವಾ 66ನೇ ಪ್ರಕರಣದ ಅಥವಾ 70ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಈ ಮೊದಲೇ ಅಪರಾಧ ನಿರ್ಣೀತನಾಗಿರುವ ಯಾರೇ ವ್ಯಕ್ತಿಯು, ಅನಂತರ ಯಾವುದೇ ಸದರಿ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಅಪರಾಧ ನಿರ್ಣೀತನಾದಲ್ಲಿ, ಆತನು ಆಜೀವ

ಕಾರಾವಾಸದಿಂದ ಅಂದರೆ, ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ಕಾರಾವಾಸದಿಂದ ಅಥವಾ ಮರಣದಂಡನೆಯಿಂದ ದಂಡಿತನಾಗತಕ್ಕದ್ದು.

**72. ಕೆಲವು ಅಪರಾಧಗಳ, ಇತ್ಯಾದಿಗಳ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸುವಿಕೆ.-** (1) 64ನೇ ಪ್ರಕರಣ ಅಥವಾ 65ನೇ ಪ್ರಕರಣ ಅಥವಾ 66ನೇ ಪ್ರಕರಣ ಅಥವಾ 67ನೇ ಪ್ರಕರಣ ಅಥವಾ 68ನೇ ಪ್ರಕರಣ ಅಥವಾ 69ನೇ ಪ್ರಕರಣ ಅಥವಾ 70ನೇ ಪ್ರಕರಣ ಅಥವಾ 71ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಮೇಲೆ ಅಪರಾಧ ಎಸಗಲಾಗಿದೆ ಎಂದು ಹೇಳಲಾಗಿದೆಯೋ ಅಥವಾ ಕಂಡುಬಂದಿದೆಯೋ ಆ ಯಾರೇ ವ್ಯಕ್ತಿಯ (ಈ ಪ್ರಕರಣದಲ್ಲಿ **ಇನ್ನು ಮುಂದೆ** ಸಂತ್ರಸ್ತರು ***ಎಂದು ಉಲ್ಲೇಖಿಸಲಾಗಿರುತ್ತದೆ)*** ಹೆಸರನ್ನು ಅಥವಾ ಗುರುತನ್ನು ಬಹಿರಂಗಪಡಿಸುವ ಯಾವುದೇ ವಿಷಯವನ್ನು ಮುದ್ರಿಸುವ ಅಥವಾ ಪ್ರಕಟಿಸುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ **ವಿಸ್ತರಿಸಬಹುದಾದ ಅವಧಿಯ** ಎರಡರಲ್ಲೊಂದು **ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

(2) ಅಂಥ ಮುದ್ರಣ ಅಥವಾ ಪ್ರಕಟಣೆಯನ್ನು,-

(ಎ) ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಅಂಥ ಅಪರಾಧದ ಬಗ್ಗೆ ತನಿಖೆ ನಡೆಸುವ ಪೊಲೀಸ್ ಅಧಿಕಾರಿ ಅಂಥ ತನಿಖೆಯ ಉದ್ದೇಶಗಳಿಗಾಗಿ ಸದ್ಭಾವನೆಯಿಂದ ಲಿಖಿತ ಆದೇಶದ ಮೂಲಕ ಅಥವಾ ಲಿಖಿತ ಆದೇಶದ ಮೇರೆಗೆ ಮಾಡಿದರೆ; ಅಥವಾ

(ಬಿ) ಸಂತ್ರಸ್ತ ವ್ಯಕ್ತಿಯ ಲಿಖಿತ ಅಧಿಕಾರ ಪತ್ರದ ಮೂಲಕ ಅಥವಾ ಲಿಖಿತ ಅಧಿಕಾರ ಪತ್ರದೊಂದಿಗೆ; ಅಥವಾ

(ಸಿ) ಸಂತ್ರಸ್ತ ವ್ಯಕ್ತಿಯು ಮರಣ ಹೊಂದಿದ್ದರೆ ಅಥವಾ ಸಂತ್ರಸ್ತ ವ್ಯಕ್ತಿಯು ಮಗು ಅಥವಾ ಅಸ್ವಸ್ಥಚಿತ್ತದವನಾಗಿದ್ದರೆ, ಸಂತ್ರಸ್ತ ವ್ಯಕ್ತಿಯ ಹತ್ತಿರದ ಸಂಬಂಧಿಗಳಿಂದ ಲಿಖಿತ ಅಧಿಕಾರ ಪತ್ರದ ಮೂಲಕ ಅಥವಾ ಲಿಖಿತ ಅಧಿಕಾರ ಪತ್ರದೊಂದಿಗೆ

- ಸಂತ್ರಸ್ತ ವ್ಯಕ್ತಿಯ ಹೆಸರಿನ ಅಥವಾ ಸಂತ್ರಸ್ತ ವ್ಯಕ್ತಿಯ ಗುರುತನ್ನು ಬಹಿರಂಗಪಡಿಸಬಹುದಾದಂತಹ ಯಾವುದೇ ವಿಷಯದ ಯಾವುದೇ ಮುದ್ರಣ ಅಥವಾ ಪ್ರಕಟಣೆಗೆ (1)ನೇ ಉಪಪ್ರಕರಣದಲ್ಲಿನ ಯಾವುದೂ ವ್ಯಾಪ್ತವಾಗುವುದಿಲ್ಲ:

ಪರಂತು, ಯಾವುದೇ ಮಾನ್ಯತೆ ಪಡೆದ ಕ್ಷೇಮಾಭಿವೃದ್ಧಿ ಸಂಸ್ಥೆ ಅಥವಾ ಸಂಘಟನೆಯಿಂದ ಯಾವುದೇ ಹೆಸರಿನಿಂದ ಕರೆಯಲಾಗುವ ಅಧ್ಯಕ್ಷ ಅಥವಾ ಕಾರ್ಯದರ್ಶಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಅಂಥ ಅಧಿಕಾರವನ್ನು ಹತ್ತಿರದ ಸಂಬಂಧಿಕರು ನೀಡತಕ್ಕದ್ದಲ್ಲ.

*ವಿವರಣೆ.-* ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಮಾನ್ಯತೆ ಪಡೆದ ಕ್ಷೇಮಾಭಿವೃದ್ಧಿ ಸಂಸ್ಥೆ ಅಥವಾ ಸಂಘಟನೆ" ಎಂದರೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮೂಲಕ, ಈ ಸಂಬಂಧದಲ್ಲಿ ಮಾನ್ಯತೆ ಪಡೆದ ಸಮಾಜ ಕ್ಷೇಮಾಭಿವೃದ್ಧಿ ಸಂಸ್ಥೆ ಅಥವಾ ಸಂಘಟನೆ.

**73. ಅನುಮತಿಯಿಲ್ಲದೆ ನ್ಯಾಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಮುದ್ರಣ ಅಥವಾ ಪ್ರಕಟಣೆ.-** ಯಾರೇ ವ್ಯಕ್ತಿಯು, 72ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಪರಾಧಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದಿರುವ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂಥ ಯಾವುದೇ ವಿಷಯವನ್ನು, ಅಂಥ ನ್ಯಾಯಾಲಯದ ಪೂರ್ವ ಅನುಮತಿ ಪಡೆಯದೆ ಮುದ್ರಿಸಿದಲ್ಲಿ ಅಥವಾ ಪ್ರಕಟಿಸಿದಲ್ಲಿ, ಅಂಥ ವ್ಯಕ್ತಿಯು ಎರಡು ವರ್ಷಗಳವರೆಗೆ **ವಿಸ್ತರಿಸಬಹುದಾದ ಅವಧಿಯ** ಎರಡರಲ್ಲೊಂದು **ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

*ವಿವರಣೆ.-* ಯಾವುದೇ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಮುದ್ರಿಸುವುದು ಅಥವಾ ಪ್ರಕಟಿಸುವುದು ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಅಪರಾಧವಾಗುವುದಿಲ್ಲ.

*ಮಹಿಳೆಯ ಮೇಲೆ ಆಪರಾಧಿಕ ಬಲಪ್ರಯೋಗ ಮತ್ತು ಹಲ್ಲೆ*

**74. ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ.-** ಯಾರೇ ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶದಿಂದ ಅಥವಾ ಅದರಿಂದಾಗಿ ಆಕೆಯ ಗೌರವ-ಘನತೆಗೆ ಕುಂದುಂಟಾಗುವ ಸಂಭವವಿದೆಯೆಂಬುದು ತಿಳಿದೂ, ಆಕೆಯ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**75. ಲೈಂಗಿಕ ಕಿರುಕುಳ.-** (1) ಯಾರೇ ಪುರುಷನು**,** ಈ ಕೆಳಗಿನ ಯಾವುದೇ ಕೃತ್ಯಗಳನ್ನು, ಎಂದರೆ:-

(i) ದೈಹಿಕ ಸಂಪರ್ಕ ಮತ್ತು ಇಷ್ಟ ಆಗದ ಮತ್ತು ಲೈಂಗಿಕ ಆಸೆ ಸ್ಪಷ್ಟವಾಗಿ ವ್ಯಕ್ತವಾಗುವಂಥ ಸನ್ನೆಗಳನ್ನು ಮಾಡಿದರೆ; ಅಥವಾ

(ii) ಲೈಂಗಿಕ ಸಮ್ಮತಿಗಾಗಿ ಒತ್ತಾಯಿಸಿದರೆ ಅಥವಾ ಕೋರಿದರೆ; ಅಥವಾ

(iii) ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಅಶ್ಲೀಲ ಚಿತ್ರಣಗಳನ್ನು ತೋರಿಸಿದರೆ; ಅಥವಾ

(iv) ಲೈಂಗಿಕ ಅರ್ಥ ಬರುವಂಥ ಮಾತುಗಳನ್ನು ಆಡಿದರೆ

- ಅವನು ಲೈಂಗಿಕ ಕಿರುಕುಳದ ಅಪರಾಧದ ತಪ್ಪಿತಸ್ಥನಾಗುತ್ತಾನೆ.

(2) ಉಪಪ್ರಕರಣ (1)ರ ಖಂಡ (i)ರಲ್ಲಿ ಅಥವಾ ಖಂಡ (ii)ರಲ್ಲಿ ಅಥವಾ ಖಂಡ (iii)ರಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧವನ್ನು ಮಾಡುವ ಯಾರೇ ಪುರುಷನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಉಪಪ್ರಕರಣ (1)ರ (iv)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧವನ್ನು ಮಾಡುವ ಯಾರೇ ಪುರುಷನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**76. ಮಹಿಳೆಯನ್ನು ವಿವಸ್ತ್ರಗೊಳಿಸುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗಿಸುವುದು.-** ಮಹಿಳೆಯನ್ನು ವಿವಸ್ತ್ರಗೊಳಿಸುವ ಉದ್ದೇಶದಿಂದ ಅಥವಾ ಆಕೆ ಬೆತ್ತಲೆಯಾಗುವಂತೆ ಒತ್ತಾಯಿಸಲು ಆ ಮಹಿಳೆಯ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**77. ಅನ್ಯರ ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವುದು.-** ಮಹಿಳೆಯು ಯಾವ ಸಂದರ್ಭಗಳಲ್ಲಿ ಗುಪ್ತ ಕೃತ್ಯದಲ್ಲಿ ನಿರತಳಾಗಿರುತ್ತಾಳೋ ತನ್ನ ಆ ಕೃತ್ಯವನ್ನು, ಅಪರಾಧ ಎಸಗುವವನಾಗಲಿ ಅಥವಾ ಅಪರಾಧ ಎಸಗುವವನ ಮಾತು ಕೇಳಿದ ಇತರೆ ಯಾರೇ ವ್ಯಕ್ತಿಯಾಗಲಿ, ಸಾಮಾನ್ಯವಾಗಿ ಯಾರೂ ನೋಡುವುದಿಲ್ಲವೆಂದುಕೊಳ್ಳುವ ಆ ಮಹಿಳೆಯನ್ನು ಯಾವ ಪುರುಷನು ಗಮನಿಸುತ್ತಿರುತ್ತಾನೋ ಅಥವಾ ಆ ಮಹಿಳೆಯ ಛಾಯಾಚಿತ್ರವನ್ನು ತೆಗೆದುಕೊಳ್ಳುತ್ತಾನೋ ಅಥವಾ ಅದನ್ನು ಪ್ರಸಾರ ಮಾಡುತ್ತಾನೋ ಆ ವ್ಯಕ್ತಿಯು ಪ್ರಥಮ ಭಾರಿ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ, ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಈ ಪ್ರಕರಣದ ಉದ್ದೇಶಗಳಿಗಾಗಿ, 'ಗುಪ್ತ ಕೃತ್ಯ' ಪದದಲ್ಲಿ ಯಾವ ಸ್ಥಳವು ಅಂಥ ಸಂದರ್ಭ, ಸನ್ನಿವೇಶಗಳಲ್ಲಿ ಏಕಾಂತವನ್ನು ಒದಗಿಸುತ್ತದೆ ಎಂದು ಸಮಂಜಸವಾಗಿ ನಿರೀಕ್ಷೆ ಮಾಡಬಹುದೋ ಮತ್ತು ಆ ಸಂತ್ರಸ್ತೆಯ ಜನನಾಂಗವು, ನಿತಂಬವು ಅಥವಾ ಸ್ತನಗಳು ಒಳಉಡುಪಿನೊಳಗಿಂದ ಮಾತ್ರವೇ ಕಾಣುವಂತಿರುತ್ತವೋ ಅಥವಾ ಒಳಉಡುಪಿನಲ್ಲಿ ಮುಚ್ಚಿಕೊಂಡಿರುವಂತಿರುತ್ತವೋ ಅಥವಾ ಆ ಸಂತ್ರಸ್ತೆಯು ಶೌಚಾಲಯವನ್ನು ಬಳಸುತ್ತಿರುತ್ತಾಳೋ ಅಥವಾ ಸಾಮಾನ್ಯವಾಗಿ ಸಾರ್ವಜನಿಕವಾಗಿ ಮಾಡದಿರುವ ರೀತಿಯ ಲೈಂಗಿಕ ಕ್ರಿಯೆಯನ್ನು ಆ ಸಂತ್ರಸ್ತೆಯು ಮಾಡುತ್ತಿರುತ್ತಾಳೋ ಆ ಸ್ಥಳದಲ್ಲಿ ಗಮನಿಸುವುದೂ ಸೇರುತ್ತದೆ.

*ವಿವರಣೆ 2.-* ಸಂತ್ರಸ್ತೆಯು ಛಾಯಾಚಿತ್ರಗಳನ್ನು ಅಥವಾ ಯಾವುದೇ ಕೃತ್ಯವನ್ನು ಸೆರೆಹಿಡಿಯಲು ಸಮ್ಮತಿಸಿದ್ದರೆ, ಆದರೆ ಮೂರನೆಯವರಿಗೆ ಅವುಗಳ ಪ್ರಸರಣ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿರದಿದ್ದಾಗ ಅಂಥ ಛಾಯಾಚಿತ್ರವನ್ನು ಅಥವಾ ಕೃತ್ಯವನ್ನು ಪ್ರಸರಣ ಮಾಡಿದ್ದರೆ, ಅಂಥ ಪ್ರಸರಣವನ್ನು ಈ ಪ್ರಕರಣದ ಮೇರೆಗಿನ ಅಪರಾಧವೆಂದು ಪರಿಗಣಿಸತಕ್ಕದ್ದು.

**78. ಗೊತ್ತಾಗದಂತೆ ಹಿಂಬಾಲಿಸುವುದು.-** (1) ಯಾರೇ ಪುರುಷನು,-

(i) ಯಾವ ಮಹಿಳೆಯನ್ನು ಗೊತ್ತಾಗದಂತೆ ಹಿಂಬಾಲಿಸುತ್ತಾನೋ ಮತ್ತು ಸಂಪರ್ಕಿಸುತ್ತಾನೋ, ಆ ಮಹಿಳೆಯು ಅವನ ಆ ಬಗೆಯ ನಡವಳಿಕೆ ತನಗೆ ಇಷ್ಟವಾಗುವುದಿಲ್ಲವೆಂಬ ಸ್ಪಷ್ಟ ಇಂಗಿತದ ಸುಳಿವು ನೀಡಿದ್ದಾಗ್ಯೂ, ಇಬ್ಬರೂ ಖುದ್ದಾಗಿ ಮಾತನಾಡುವ ಸಲುವಾಗಿ ಪದೇ ಪದೇ ಆಕೆಯನ್ನು ಸಂಪರ್ಕಿಸಲು ಪ್ರಯತ್ನ ಮಾಡುತ್ತಾನೋ; ಅಥವಾ

(ii) ಆ ಮಹಿಳೆಯು ಅಂತರ್ಜಾಲದ, ಇ-ಮೇಲ್‌ನ ಅಥವಾ ಯಾವುದೇ ಇತರ ವಿದ್ಯುನ್ಮಾನ ಸಂಪರ್ಕದ ಬಳಕೆ ಮಾಡುವುದನ್ನು ಗಮನಿಸುತ್ತಾನೋ

- ಆ ಪುರುಷನು ಗೊತ್ತಾಗದಂತೆ ಹಿಂಬಾಲಿಸುವ ಅಪರಾಧವನ್ನು ಎಸಗುತ್ತಾನೆಂದಾಗುತ್ತದೆ:

ಪರಂತು, ಅಂಥ ನಡವಳಿಕೆಯನ್ನು ಮುಂದುವರಿಸುತ್ತಿರುವ ಪುರುಷನು,-

(i) ಅಪರಾಧವನ್ನು ತಡೆಯುವ ಅಥವಾ ಪತ್ತೆ ಹಚ್ಚುವ ಉದ್ದೇಶಕ್ಕಾಗಿ ಅಂಥ ನಡವಳಿಕೆಯನ್ನು ಮುಂದುವರಿಸಲಾಗಿತ್ತೆಂದು ಮತ್ತು ಗೊತ್ತಾಗದಂತೆ ಹಿಂಬಾಲಿಸುವ ಅಪರಾಧದ ಆಪಾದಿತನಾದ ಆ ಪುರುಷನಿಗೆ, ರಾಜ್ಯವು ಅಪರಾಧವನ್ನು ತಡೆಯುವ ಮತ್ತು ಪತ್ತೆ ಹಚ್ಚುವ ಜವಾಬ್ದಾರಿಯನ್ನು ವಹಿಸಿಕೊಟ್ಟಿತ್ತೆಂದು; ಅಥವಾ

(ii) ಅದನ್ನು ಯಾವುದೇ ಕಾನೂನು ಮೇರೆಗೆ ಅಥವಾ ಯಾರೇ ವ್ಯಕ್ತಿಯು ಯಾವುದೇ ಕಾನೂನು ಮೇರೆಗೆ ವಿಧಿಸಿದ್ದ ಷರತ್ತುಗಳನ್ನು ಮತ್ತು ಅಗತ್ಯತೆಗಳನ್ನು ಪಾಲಿಸುವುದಕ್ಕಾಗಿ ಮುಂದುವರಿಸಲಾಗಿತ್ತೆಂದು; ಅಥವಾ

(iii) ನಿರ್ದಿಷ್ಟ ಸಂದರ್ಭಗಳಲ್ಲಿ ಅಂಥ ನಡವಳಿಕೆಯು ಸಮಂಜಸವಾದುದು ಮತ್ತು ನ್ಯಾಯಸಮ್ಮತವಾದುದು ಆಗಿತ್ತೆಂದು

- ರುಜುವಾತುಪಡಿಸಿದರೆ ಗೊತ್ತಾಗದಂತೆ ಹಿಂಬಾಲಿಸುವುದು ಎಂದಾಗತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಗೊತ್ತಾಗದಂತೆ ಹಿಂಬಾಲಿಸುವ ಅಪರಾಧವನ್ನು ಮಾಡಿದಲ್ಲಿ ಅದಕ್ಕಾಗಿ ಪ್ರಥಮ ಬಾರಿಗೆ ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಮೇಲೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**79. ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶವಿರುವ ಪದ, ಆಂಗಿಕಸನ್ನೆ ಅಥವಾ ಕೃತ್ಯ.-** ಯಾರೇ ವ್ಯಕ್ತಿಯು, ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶದಿಂದ ಯಾವುದೇ ಪದಗಳನ್ನು ಉಚ್ಚರಿಸಿದರೆ, ಯಾವುದೇ ಧ್ವನಿಯನ್ನು ಅಥವಾ ಆಂಗಿಕಸನ್ನೆಯನ್ನು ಮಾಡಿದರೆ ಅಥವಾ ಅಂಥ ಮಹಿಳೆಯು ಅಂಥ ಪದ ಅಥವಾ ಶಬ್ದವನ್ನು

ಕೇಳಿಸಿಕೊಳ್ಳಬೇಕೆಂಬ ಅಥವಾ ಆಂಗಿಕಸನ್ನೆಯನ್ನು ಅಥವಾ ವಸ್ತುವನ್ನು ನೋಡಬೇಕೆಂಬ ಉದ್ದೇಶದಿಂದ ಯಾವುದೇ ರೂಪದಲ್ಲಿ ಯಾವುದೇ ವಸ್ತುವನ್ನು ಪ್ರದರ್ಶಿಸಿದರೆ ಅಥವಾ ಅಂಥ ಮಹಿಳೆಯು ಏಕಾಂತದಲ್ಲಿರುವಾಗ ಅಲ್ಲಿಗೆ ಅಕ್ರಮವಾಗಿ ಪ್ರವೇಶ ಮಾಡಿದರೆ, ಆ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕದ್ದು.

***ಮದುವೆಗೆ ಸಂಬಂಧಿಸಿದ ಅಪರಾಧಗಳು***

**80. ವಧು-ವರದಕ್ಷಿಣೆ ಮರಣ.-** (1) ಯಾರೇ ಮಹಿಳೆಯ ಮರಣವು ಅವಳ ವಿವಾಹದ ಏಳು ವರ್ಷಗಳೊಳಗೆ ಸುಟ್ಟ ಗಾಯಗಳಿಂದ ಅಥವಾ ದೈಹಿಕ ಕ್ಷತಿಯಿಂದ ಅಥವಾ ಸಾಮಾನ್ಯ ಸಂದರ್ಭಗಳಲ್ಲಾಗಿರುವುದರ ಹೊರತು ಅನ್ಯಥಾ ಉಂಟಾಗಿದ್ದರೆ ಮತ್ತು ಅವಳು ಮರಣ ಹೊಂದುವುದಕ್ಕಿಂತ ಮುಂಚೆ ಅವಳು ವಧು-ವರದಕ್ಷಿಣೆಯ ಯಾವುದೇ ತಗಾದೆಗಾಗಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅವಳ ಗಂಡನಿಂದ ಅಥವಾ ಅವಳ ಗಂಡನ ಯಾರೇ ಸಂಬಂಧಿಯಿಂದ ಕ್ರೌರ್ಯಕ್ಕೆ ಅಥವಾ ಕಿರುಕುಳಕ್ಕೆ ಒಳಪಟ್ಟಿದ್ದಳು ಎಂದು ತೋರಿಸಿದರೆ, ಅಂಥ ಮರಣವನ್ನು ‘ವಧು-ವರದಕ್ಷಿಣೆ ಮರಣ’ ಎಂಬುದಾಗಿ ಕರೆಯತಕ್ಕದ್ದು ಮತ್ತು ಅಂಥ ಗಂಡನು ಅಥವಾ ಅವನ ಸಂಬಂಧಿಯು ಅವಳಿಗೆ ಮರಣವನ್ನು ಉಂಟುಮಾಡಿರುವುದಾಗಿ ಭಾವಿಸತಕ್ಕದ್ದು.

*ವಿವರಣೆ.*- ಈ ಉಪಪ್ರಕರಣದ ಉದ್ದೇಶಗಳಿಗಾಗಿ, ‘ವಧು-ವರದಕ್ಷಿಣೆ’ ಪದಕ್ಕೆ ವಧು-ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961 ರ 28)ರ 2ನೇ ಪ್ರಕರಣದಲ್ಲಿ ಕೊಟ್ಟಿರುವಂಥದೇ ಅರ್ಥ ಇರತಕ್ಕದ್ದು.

(2) ವಧು-ವರದಕ್ಷಿಣೆಗಾಗಿ ಮರಣವನ್ನು ಉಂಟು ಮಾಡುವ ಯಾರೇ ವ್ಯಕ್ತಿಯು ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**81. ಪುರುಷನು ಕಾನೂನುಬದ್ಧವಾಗಿ ವಿವಾಹ ಆಗಿದೆಯೆಂಬ ನಂಬಿಕೆಯನ್ನು ಮೋಸದಿಂದ ಉಂಟು ಮಾಡಿ ತನ್ನೊಡನೆ ವಾಸಿಸುವಂತೆ ಮಾಡುವುದು.-** ಕಾನೂನುಬದ್ಧವಾಗಿ ತನ್ನನ್ನು ಮದುವೆಯಾಗದಿರುವ ಸ್ತ್ರೀಯನ್ನು, ಕಾನೂನುಬದ್ಧವಾಗಿ ವಿವಾಹವಾಗಿದೆಯೆಂದು ಮೋಸದಿಂದ ನಂಬಿಸಿ ಮತ್ತು ಆ ನಂಬಿಕೆಯಂತೆ ತನ್ನೊಡನೆ ವಾಸಿಸುವಂತೆ ಅಥವಾ ತನ್ನೊಂದಿಗೆ ಲೈಂಗಿಕ ಸಂಭೋಗ ಹೊಂದುವಂತೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**82. ಗಂಡನು ಅಥವಾ ಹೆಂಡತಿಯು ಜೀವಿಸಿರುವಾಗ ಪುನಃ ಮದುವೆಯಾಗುವುದು.-** (1) ಗಂಡನಿರುವ ಅಥವಾ ಹೆಂಡತಿ ಇರುವ ಯಾರೇ ವ್ಯಕ್ತಿಯು, ತನ್ನ ಗಂಡನ ಅಥವಾ ತನ್ನ ಹೆಂಡತಿಯ ಜೀವಿತ ಕಾಲದಲ್ಲಿ ಪುನಃ ಮದುವೆಯಾದರೆ ಆ ಯಾವ ಮದುವೆಯು ಅನೂರ್ಜಿತವಾಗುವುದೋ ಅಂಥ ಯಾವುದೇ ಸಂದರ್ಭದಲ್ಲಿ ಆ ಗಂಡನಾಗಲಿ ಅಥವಾ ಆ ಹೆಂಡತಿಯಾಗಲಿ ಪುನಃ ಮದುವೆಯಾದರೆ, ಆ ವ್ಯಕ್ತಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ಅಪವಾದ.*- ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯವು, ಅಂಥ ಗಂಡನೊಂದಿಗೆ ಅಥವಾ ಹೆಂಡತಿಯೊಂದಿಗೆ ನಡೆದ ಯಾವ ವ್ಯಕ್ತಿಯ ವಿವಾಹವನ್ನು ಅನೂರ್ಜಿತವೆಂದು ಘೋಷಿಸಿದೆಯೋ, ಆ ಯಾರೇ ವ್ಯಕ್ತಿಗೆ ಅಥವಾ ಮೊದಲಿನ ಗಂಡನು ಅಥವಾ ಮೊದಲಿನ ಹೆಂಡತಿಯು ಜೀವಿಸಿರುವಾಗಲೇ ಯಾರು ಮದುವೆಯಾಗುವರೋ, ಆತ ಅಥವಾ ಆಕೆ, ಹಾಗೆ ಮದುವೆಯಾದ ತರುವಾಯ ಆತನಿಂದ ಅಥವಾ ಆಕೆಯಿಂದ ಏಳು ವರ್ಷಗಳ ಕಾಲ ಸತತವಾಗಿ ಬೇರೆ ಇದ್ದರೆ ಮತ್ತು ಆ ಕಾಲದೊಳಗೆ ಆತ ಅಥವಾ ಆಕೆಯು ಜೀವಂತವಾಗಿರುವ ಬಗ್ಗೆ ಆತನಿಗೆ ಅಥವಾ ಆಕೆಗೆ ಯಾವ ಸುದ್ದಿಯು ತಿಳಿಯದೆ ಹೋದರೆ, ಹಾಗೆ ಅಂಥ ಮದುವೆಯನ್ನು ಮಾಡಿಕೊಂಡ ಆತನಿಗೆ ಅಥವಾ ಆಕೆಗೆ ಈ ಉಪಪ್ರಕರಣವು ವ್ಯಾಪ್ತವಾಗುವುದಿಲ್ಲ: ಪರಂತು, ಹಾಗೆ ತರುವಾಯ ಮದುವೆ ಮಾಡಿಕೊಳ್ಳುವ ಆತ ಅಥವಾ ಆಕೆಯು, ಅಂಥ ಮದುವೆಯು ನಡೆಯುವುದಕ್ಕೆ ಮುಂಚೆ, ಯಾರ ಜತೆ ತನ್ನ ಮದುವೆ ನಡೆಯುವುದೋ ಆತನಿಗೆ ಅಥವಾ ಆಕೆಗೆ ತನಗೆ ತಿಳಿದಿರುವಷ್ಟರ ಮಟ್ಟಿಗೆ ನಿಜಸ್ಥಿತಿಯನ್ನು ತಿಳಿಸತಕ್ಕದ್ದು.

(2) ಯಾವ ವ್ಯಕ್ತಿಯೊಂದಿಗೆ ತರುವಾಯದಲ್ಲಿ ಯಾರ ಮದುವೆಯಾಗುತ್ತದೆಯೋ, ಹಾಗೆ ಮದುವೆಯಾದ ಆ ವ್ಯಕ್ತಿಗೆ ತನ್ನ ಮೊದಲಿನ ಮದುವೆಯ ಸಂಗತಿಯನ್ನು ಮರೆಮಾಚಿ (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡಿದರೆ, ಆ ವ್ಯಕ್ತಿಯು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**83. ಕಾನೂನುಬದ್ಧವಾಗಿ ವಿವಾಹ ನೆರವೇರದೆಯೇ ಮೋಸದಿಂದ ವಿವಾಹ ಸಮಾರಂಭ ನೆರವೇರಿಸಿರುವುದು.-** ಯಾರೇ ವ್ಯಕ್ತಿಯು, ತಾನು ಮಾಡಿಕೊಂಡಿರುವ ವಿವಾಹ ಸಮಾರಂಭದಿಂದ ತಾನು ಕಾನೂನುಬದ್ಧವಾಗಿ ವಿವಾಹವಾದಂತಾಗಲಿಲ್ಲವೆಂದು ಗೊತ್ತಿದ್ದರೂ ಅಪ್ರಾಮಾಣಿಕವಾಗಿ ಅಥವಾ ಮೋಸದ ಉದ್ದೇಶದಿಂದ, ಹಾಗೆ ವಿವಾಹ ಮಾಡಿಕೊಂಡರೆ, ಆ ವ್ಯಕ್ತಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**84. ವಿವಾಹಿತ ಮಹಿಳೆಯನ್ನು ಆಪರಾಧಿಕ ಉದ್ದೇಶದಿಂದ ಪುಸಲಾಯಿಸುವುದು ಅಥವಾ ಕರೆದುಕೊಂಡು ಹೋಗುವುದು.-** ಯಾರೇ ವ್ಯಕ್ತಿಯು, ಇನ್ನೊಬ್ಬನ ಹೆಂಡತಿಯಾಗಿರುವ ಅಥವಾ ಇನ್ನೊಬ್ಬನ ಹೆಂಡತಿಯೆಂದು ತನಗೆ ಗೊತ್ತಿರುವ ಅಥವಾ ನಂಬಲು ಕಾರಣವಿರುವ ಯಾರೇ ಮಹಿಳೆಯನ್ನು ಆಕೆ ಇನ್ನೊಬ್ಬ ವ್ಯಕ್ತಿಯೊಡನೆ ಅಕ್ರಮ ಸಂಭೋಗ ನಡೆಸಲೆಂಬ ಉದ್ದೇಶದಿಂದ ಕರೆದುಕೊಂಡು ಹೋದರೆ ಅಥವಾ ಪುಸಲಾಯಿಸಿದರೆ ಅಥವಾ ಆ ಉದ್ದೇಶದಿಂದ ಅಂಥ ಯಾರೇ ಮಹಿಳೆಯನ್ನು ಬಚ್ಚಿಟ್ಟರೆ ಅಥವಾ ತಡೆಹಿಡಿದಿಟ್ಟುಕೊಂಡರೆ, ಆ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**85. ಮಹಿಳೆಯ ಪತಿಯಿಂದ ಅಥವಾ ಅವಳ ಪತಿಯ ಸಂಬಂಧಿಯಿಂದ ಕ್ರೌರ್ಯ.-** ಮಹಿಳೆಯ ಪತಿಯಾಗಿರುವ ಅಥವಾ ಅವಳ ಪತಿಯ ಸಂಬಂಧಿಯಾಗಿರುವ ಯಾರೇ ವ್ಯಕ್ತಿಯು ಅಂಥ ಮಹಿಳೆಯ ಮೇಲೆ ಕ್ರೌರ್ಯ ನಡೆಸಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**86. ಕ್ರೌರ್ಯದ ಪರಿಭಾಷೆ.–** 85ನೇ ಪ್ರಕರಣದ ಉದ್ದೇಶಗಳಿಗಾಗಿ "ಕ್ರೌರ್ಯ" ಎಂದರೆ:-

(ಎ) ಮಹಿಳೆಯನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವ ಅಥವಾ ಆ ಮಹಿಳೆಯ ಪ್ರಾಣಕ್ಕೆ ಧಕ್ಕೆ, ಅವಯವಕ್ಕೆ ಅಥವಾ ಆರೋಗ್ಯಕ್ಕೆ (ಮಾನಸಿಕವಾಗಿಯಾಗಲಿ ಅಥವಾ ದೈಹಿಕವಾಗಿಯಾಗಲಿ) ಗಂಭೀರ ಕ್ಷತಿ ಅಥವಾ ಅಪಾಯ ಉಂಟುಮಾಡುವ ಸಂಭವವಿರುವಂಥ ಸ್ವರೂಪದ ಯಾವುದೇ ಉದ್ದೇಶಪೂರ್ವಕ ವರ್ತನೆ; ಅಥವಾ

(ಬಿ) ಮಹಿಳೆಗೆ ಕಿರುಕುಳ ಎಂದರೆ, ಯಾವುದೇ ಸ್ವತ್ತಿಗಾಗಿ ಅಥವಾ ಬೆಲೆಬಾಳುವ ಭದ್ರತೆಗಾಗಿ ಕಾನೂನಿಗೆ ವಿರುದ್ಧವಾಗಿ ಮಾಡಿದ ಯಾವುದೇ ಬೇಡಿಕೆಯನ್ನು ಈಡೇರಿಸುವಂತೆ ಆ ಮಹಿಳೆಯನ್ನು ಅಥವಾ ಅವಳಿಗೆ ಸಂಬಂಧಪಟ್ಟ ಯಾರೇ ವ್ಯಕ್ತಿಯನ್ನು ಒತ್ತಾಯಪಡಿಸುವ ದೃಷ್ಟಿಯಿಂದ, ಮಹಿಳೆಗೆ ಕೊಟ್ಟಿರುವ ಕಿರುಕುಳ ಅಥವಾ ಅಂಥ ಬೇಡಿಕೆಯನ್ನು ಈಡೇರಿಸಲು ಆ ಮಹಿಳೆ ಅಥವಾ ಅವಳಿಗೆ ಸಂಬಂಧಪಟ್ಟ ಯಾರೇ ವ್ಯಕ್ತಿಯು ವಿಫಲನಾದ ಕಾರಣದಿಂದ ಮಹಿಳೆಗೆ ಕೊಟ್ಟಿರುವ ಕಿರುಕುಳ.

**87. ಮದುವೆ, ಇತ್ಯಾದಿಗೆ ಮಹಿಳೆಗೆ ಒತ್ತಾಯ ಮಾಡಲು ಅಪಹರಣ ಮಾಡುವುದು, ಬಲಾತ್ ಅಪಹರಣ ಮಾಡುವುದು ಅಥವಾ ಪ್ರೇರೇಪಣೆ ಮಾಡುವುದು.-** ಯಾರೇ ಮಹಿಳೆಯನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ ಯಾರೇ ವ್ಯಕ್ತಿಯನ್ನು ಮದುವೆಯಾಗುವಂತೆ ಆಕೆಯನ್ನು ಒತ್ತಾಯಪಡಿಸುವ ಉದ್ದೇಶದಿಂದ ಅಥವಾ ಆಕೆಯನ್ನು ಒತ್ತಾಯಪಡಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ಅಥವಾ ಅಕ್ರಮ ಸಂಭೋಗಕ್ಕೆ ಆಕೆಯನ್ನು ಬಲಾತ್ಕರಿಸುವ ಸಲುವಾಗಿ ಅಥವಾ ಅಕ್ರಮ ಸಂಭೋಗದ ತಪ್ಪುದಾರಿಗೆ ಪ್ರೇರೇಪಣೆ ಮಾಡುವ ಸಲುವಾಗಿ ಅಥವಾ ಅಕ್ರಮ ಸಂಭೋಗಕ್ಕೆ ಆಕೆಯನ್ನು ಬಲಾತ್ಕರಿಸುವ ಅಥವಾ ತಪ್ಪುದಾರಿಗೆ ಪ್ರೇರೇಪಣೆ ಮಾಡುವ ಸಂಭವವಿರುವುದೆಂಬುದು ಗೊತ್ತಿದ್ದೂ ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಯಾರೇ ವ್ಯಕ್ತಿಯು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ

ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಈ ಸಂಹಿತೆಯಲ್ಲಿ ಪರಿಭಾಷಿಸಿದ ಆಪರಾಧಿಕ ಭಯೋತ್ಪಾದನೆಯಿಂದ ಅಥವಾ ಅಧಿಕಾರದ ದುರುಪಯೋಗದಿಂದ ಅಥವಾ ಇತರ ಯಾವುದೇ ರೀತಿಯ ಒತ್ತಾಯದಿಂದ ಯಾರೇ ಮಹಿಳೆಯನ್ನು, ಬೇರೊಬ್ಬ ವ್ಯಕ್ತಿಯೊಂದಿಗೆ ಆಕೆ ಅಕ್ರಮ ಸಂಭೋಗ ಮಾಡಬೇಕೆಂದು ಆಕೆಯನ್ನು ಬಲಾತ್ಕರಿಸಬಹುದೆಂಬ ಅಥವಾ ಪ್ರೇರೇಪಣೆ ಮಾಡಬಹುದೆಂಬ ಉದ್ದೇಶದಿಂದ ಅಥವಾ ಹಾಗೆ ಬಲಾತ್ಕರಿಸುವ ಅಥವಾ ತಪ್ಪುದಾರಿಗೆ ಪ್ರೇರೇಪಣೆ ಮಾಡುವ ಸಂಭವವಿರುವುದೆಂಬುದು ಗೊತ್ತಿದ್ದರೂ, ಆ ಮಹಿಳೆಯನ್ನು ಯಾವುದೇ ಸ್ಥಳದಿಂದ ಹೊರಹೋಗಲು ಪ್ರೇರೇಪಣೆ ಮಾಡುವ ಯಾರೇ ವ್ಯಕ್ತಿಯು ಸಹ ಮೇಲೆ ಹೇಳಿದಂತೆ ದಂಡಿತನಾಗತಕ್ಕದ್ದು.

***ಗರ್ಭಪಾತವುಂಟು ಮಾಡುವುದು, ಇತ್ಯಾದಿ.***

**88. ಗರ್ಭಪಾತವುಂಟು ಮಾಡುವುದು.-** ಯಾರೇ ವ್ಯಕ್ತಿಯು, ಗರ್ಭವತಿಯಾದ ಮಹಿಳೆಗೆ ಸ್ವಯಿಚ್ಛೆಯಿಂದ ಗರ್ಭಪಾತವನ್ನುಂಟು ಮಾಡಿದರೆ ಮತ್ತು ಆ ಮಹಿಳೆಯ ಪ್ರಾಣವನ್ನು ರಕ್ಷಿಸುವ ಸದ್ಭಾವನೆಯಿಂದಲ್ಲದೆ ಹಾಗೆ ಗರ್ಭಪಾತವನ್ನುಂಟು ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಆ ಮಹಿಳೆಯು ತುಂಬು ಗರ್ಭಿಣಿಯಾಗಿದ್ದು ಆ ಮಹಿಳೆಗೆ ಗರ್ಭಪಾತ ಉಂಟುಮಾಡಿಸಿದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಸ್ವತಃ ಗರ್ಭಪಾತವನ್ನುಂಟು ಮಾಡಿಕೊಳ್ಳುವ ಮಹಿಳೆಯು ಈ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಬರುತ್ತಾಳೆ.

**89. ಮಹಿಳೆಯ ಸಮ್ಮತಿಯಿಲ್ಲದೆ ಗರ್ಭಪಾತವನ್ನುಂಟು ಮಾಡುವುದು.-** ಯಾರೇ ವ್ಯಕ್ತಿಯು, ಮಹಿಳೆಯ ಸಮ್ಮತಿಯಿಲ್ಲದೆ ಅವಳ ಗರ್ಭದಲ್ಲಿರುವ ಮಗುವು ಜೀವಂತವಾಗಿರಲಿ ಅಥವಾ ಇಲ್ಲದಿರಲಿ, 88ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**90. ಗರ್ಭಪಾತವಾಗಿಸುವ ಉದ್ದೇಶದಿಂದ ಮಾಡಲಾದ ಕೃತ್ಯದಿಂದ ಉಂಟಾದ ಮರಣ.-** (1) ಯಾರೇ ವ್ಯಕ್ತಿಯು, ಗರ್ಭವತಿಯಾದ ಮಹಿಳೆಗೆ ಗರ್ಭಪಾತವನ್ನುಂಟು ಮಾಡುವ ಉದ್ದೇಶದಿಂದ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಆ ಪರಿಣಾಮವಾಗಿ ಅಂಥ ಮಹಿಳೆಯ ಮರಣವುಂಟಾದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಕೃತ್ಯವನ್ನು ಮಹಿಳೆಯ ಸಮ್ಮತಿಯಿಲ್ಲದೆ ಮಾಡಿದರೆ**,** ಆಜೀವ ಕಾರಾವಾಸಕ್ಕೆ ಅಥವಾ ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗೆ ಗುರಿಯಾಗತಕ್ಕದ್ದು.

*ವಿವರಣೆ.-* ಈ ಅಪರಾಧದ ಬಗ್ಗೆ ಹೇಳುವುದಾದರೆ**,** ಆ ಕೃತ್ಯವು ಮರಣವನ್ನುಂಟು ಮಾಡುವ ಸಂಭವವಿದೆಯೆಂಬುದು ಅಪರಾಧಿಗೆ ಗೊತ್ತಿರಬೇಕಾದ ಅವಶ್ಯಕತೆಯಿಲ್ಲ.

**91. ಮಗುವು ಜೀವಂತವಾಗಿ ಹುಟ್ಟದಂತೆ ಅಥವಾ ಅದು ಹುಟ್ಟಿದ ಅನಂತರ ಸಾಯುವಂತೆ ಮಾಡುವ ಉದ್ದೇಶದಿಂದ ಮಾಡಿದ ಕೃತ್ಯ.-** ಯಾರೇ ವ್ಯಕ್ತಿಯು, ಯಾವುದೇ ಮಗುವು ಜೀವಂತವಾಗಿ ಹುಟ್ಟದಂತೆ ತಡೆಯುವ ಅಥವಾ ಅದು ಹುಟ್ಟಿದ ನಂತರ ಅದು ಸಾಯುವಂತೆ ಮಾಡುವ ಉದ್ದೇಶದಿಂದ ಆ ಮಗುವು ಹುಟ್ಟುವುದಕ್ಕೆ ಮುಂಚೆಯೇ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಆ ಕೃತ್ಯದಿಂದ ಆ ಮಗು ಜೀವಂತವಾಗಿ ಹುಟ್ಟದಂತೆ ತಡೆದರೆ ಅಥವಾ ಅದು ಹುಟ್ಟಿದ ನಂತರ ಅದು ಸಾಯುವಂತೆ ಮಾಡಿದರೆ, ಆ ಕೃತ್ಯವನ್ನು ತಾಯಿಯ ಪ್ರಾಣವನ್ನು ಉಳಿಸುವ ಸದ್ಭಾವನೆಯಿಂದಲ್ಲದೆ ಮಾಡಿದ್ದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**92. ಆಪರಾಧಿಕ ಮಾನವ ಹತ್ಯೆಯೆಂದು ಪರಿಗಣಿತವಾಗುವ ಕೃತ್ಯದಿಂದ ಗರ್ಭಸ್ಥ ಮಗುವಿಗೆ ಮರಣವನ್ನುಂಟು ಮಾಡುವುದು.-** ಯಾರೇ ವ್ಯಕ್ತಿಯು, ಯಾವ ಸನ್ನಿವೇಶಗಳಲ್ಲಿ ಕೃತ್ಯವನ್ನು ಮಾಡಿ ಆ ಮೂಲಕ ಮರಣವನ್ನುಂಟುಮಾಡಿದ್ದರೆ ಆಪರಾಧಿಕ ಮಾನವ ಹತ್ಯೆಯ ಬಗ್ಗೆ ತಪ್ಪಿತಸ್ಥನಾಗುತ್ತಿದ್ದನೋ ಆ ಸನ್ನಿವೇಶಗಳಲ್ಲಿ ಅಂಥ ಕೃತ್ಯವನ್ನು ಮಾಡಿ ಗರ್ಭಸ್ಥ ಮಗುವಿಗೆ ಮರಣವನ್ನುಂಟು ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತ*

ತಾನು ಒಂದು ಕೃತ್ಯವನ್ನು ಮಾಡಿದರೆ ಅದು ಗರ್ಭವತಿಗೆ ಮರಣವನ್ನುಂಟು ಮಾಡುವ ಸಂಭವವಿದೆಯೆಂಬುದು ಮತ್ತು ಅದರಿಂದಾಗಿ ಆ ಮಹಿಳೆಗೆ ಮರಣವುಂಟಾದರೆ ಅದು ಆಪರಾಧಿಕ ಮಾನವ ಹತ್ಯೆಯಾಗುವುದೆಂಬುದು ಗೊತ್ತಿದ್ದರೂ ಓನು ಆ ಕೃತ್ಯವನ್ನು ಮಾಡುತ್ತಾನೆ. ಅದರಿಂದ, ಆ ಮಹಿಳೆಗೆ ಕ್ಷತಿಯುಂಟಾಗುತ್ತದೆ. ಆದರೆ ಅವಳು ಸಾಯುವುದಿಲ್ಲ. ಆದರೆ ಆ ಕೃತ್ಯದಿಂದ ಅವಳ ಗರ್ಭದಲ್ಲಿರುವ ಜೀವಂತ ಮಗುವಿನ ಮರಣವುಂಟಾಗುತ್ತದೆ. ಓನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧದ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

***ಮಗುವಿನ ಮೇಲಿನ ಅಪರಾಧಗಳು***

**93. ತಂದೆ ತಾಯಿಯ ಅಥವಾ ಮಗುವಿನ ರಕ್ಷಣೆಯ ಹೊಣೆಯನ್ನು ಹೊತ್ತಿರುವ ವ್ಯಕ್ತಿಯು ಹನ್ನೆರಡು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಗುವನ್ನು ಅಪಾಯಕ್ಕೆ ಒಡ್ಡುವುದು ಅಥವಾ ತೊರೆದು ಬಿಡುವುದು.-** ಹನ್ನೆರಡು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಗುವಿನ ತಂದೆ ಅಥವಾ ತಾಯಿಯು ಅಥವಾ ಆ ಮಗುವಿನ ರಕ್ಷಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಆ ಮಗುವನ್ನು ಅಪಾಯಕ್ಕೊಡ್ಡಿದ್ದರೆ ಅಥವಾ ಅದನ್ನು ಸಂಪೂರ್ಣವಾಗಿ ತೊರೆದುಬಿಡುವ ಉದ್ದೇಶದಿಂದ ಯಾವುದೇ ಸ್ಥಳದಲ್ಲಿ ಅದನ್ನು ಬಿಟ್ಟರೆ, ಆ ವ್ಯಕ್ತಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* ಹಾಗೆ ಅಪಾಯಕ್ಕೊಡ್ಡಿದ್ದರ ಪರಿಣಾಮವಾಗಿ ಆ ಮಗುವು ಮರಣಹೊಂದಿದರೆ, ಸಂದರ್ಭಾನುಸಾರ ಕೊಲೆಯ ಅಥವಾ ಆಪರಾಧಿಕ ಮಾನವ ಹತ್ಯೆಯ ಅಪರಾಧಿಯ ವಿಚಾರಣೆಯನ್ನು ತಡೆಯುವುದು ಈ ಪ್ರಕರಣದ ಉದ್ದೇಶವಾಗಿರುವುದಿಲ್ಲ.

**94. ಮೃತದೇಹವನ್ನು ರಹಸ್ಯವಾಗಿ ವಿಲೆ ಮಾಡಿ ಜನನವನ್ನು ಮರೆಮಾಚುವುದು.-** ಮಗು ಅದರ ಜನನಕ್ಕೆ ಮುಂಚೆ ಅಥವಾ ಆ ತರುವಾಯ ಅಥವಾ ಜನನದ ಕಾಲದಲ್ಲಿ ಸತ್ತರೆ, ಯಾರೇ ವ್ಯಕ್ತಿಯು ಅಂಥ ಮಗುವಿನ ಮೃತದೇಹವನ್ನು ರಹಸ್ಯವಾಗಿ ಹೂಳುವ ಅಥವಾ ಅದನ್ನು ಬೇರೆ ರೀತಿಯಲ್ಲಿ ವಿಲೆ ಮಾಡುವ ಮೂಲಕ ಉದ್ದೇಶಪೂರ್ವಕವಾಗಿ ಆ ಶಿಶುವಿನ ಜನನವನ್ನು ಮರೆಮಾಚಿದರೆ ಅಥವಾ ಮರೆಮಾಚಲು ಪ್ರಯತ್ನಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**95. ಅಪರಾಧವನ್ನು ಮಾಡಲು ಮಗುವನ್ನು ಬಾಡಿಗೆಗೆ ತೆಗೆದುಕೊಳ್ಳುವುದು, ನಿಯೋಜಿಸಿಕೊಳ್ಳುವುದು ಅಥವಾ ತೊಡಗಿಸಿಕೊಳ್ಳುವುದು.-** ಯಾರೇ ವ್ಯಕ್ತಿಯು, ಅಪರಾಧವನ್ನು ಮಾಡಲು ಮಗುವನ್ನು ಬಾಡಿಗೆಗೆ ತೆಗೆದುಕೊಂಡರೆ, ನಿಯೋಜಿಸಿಕೊಂಡರೆ ಅಥವಾ ತೊಡಗಿಸಿಕೊಂಡರೆ, ಅವನು ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಆದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು; ಮತ್ತು ಆ ಮಗುವು ಅಪರಾಧವನ್ನು ಎಸಗಿದರೆ, ಆ ಅಪರಾಧವನ್ನು ಸ್ವತಃ ಅಂಥ ವ್ಯಕ್ತಿಯೇ ಎಸಗಿದರೆ ಹೇಗೋ ಹಾಗೆ ಆ ಅಪರಾಧಕ್ಕೆ ಉಪಬಂಧಿಸಿದ ದಂಡನೆಯಿಂದಲೂ ಸಹ ದಂಡಿತನಾಗತಕ್ಕದ್ದು.

*ವಿವರಣೆ.-* ಲೈಂಗಿಕ ಶೋಷಣೆ ಅಥವಾ ಅಶ್ಲೀಲ ಚಿತ್ರಣಕ್ಕಾಗಿ ಮಗುವನ್ನು ಬಾಡಿಗೆಗೆ ತೆಗೆದುಕೊಳ್ಳುವುದು**,** ನಿಯೋಜಿಸಿಕೊಳ್ಳುವುದು**,** ತೊಡಗಿಸಿಕೊಳ್ಳುವುದು ಅಥವಾ ಬಳಸಿಕೊಳ್ಳುವುದು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುತ್ತದೆ.

**96. ಮಗುವನ್ನು ಒದಗಿಸುವುದು.- ಯಾವುದೇ ಮಗುವನ್ನು** ಬೇರೊಬ್ಬ ವ್ಯಕ್ತಿಯೊಂದಿಗೆ ಅಕ್ರಮ ಸಂಭೋಗ ಮಾಡಲು ಅಂಥ ಮಗುವನ್ನು ಬಲಾತ್ಕರಿಸಬಹುದೆಂಬ ಅಥವಾ ತಪ್ಪುದಾರಿಗೆ ಪ್ರೇರೇಪಣೆ ಮಾಡಬಹುದೆಂಬ ಉದ್ದೇಶದಿಂದ ಅಥವಾ ಹಾಗೆ ಅಂಥ ಮಗುವನ್ನು ಬಲಾತ್ಕರಿಸುವ ಅಥವಾ ತಪ್ಪುದಾರಿಗೆ ಪ್ರೇರೇಪಣೆ ಮಾಡುವ ಸಂಭವವಿರುವುದೆಂಬುದು ಗೊತ್ತಿದ್ದರೂ ಆ ಮಗುವನ್ನು ಯಾವುದೇ ಸ್ಥಳದಿಂದ ಹೊರಹೋಗಲು ಅಥವಾ ಯಾವುದೇ ಕೃತ್ಯವನ್ನು ಮಾಡಲು ಯಾವುದೇ ರೀತಿಯಲ್ಲಿ ಪ್ರೇರೇಪಣೆ ಮಾಡುವ ಯಾರೇ ವ್ಯಕ್ತಿಯು**,** ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**97. ಹತ್ತು ವರ್ಷದೊಳಗಿನ ಮಗುವನ್ನು ಅದರ ಮೈಮೇಲಿರುವ ವಸ್ತುವನ್ನು ಕಳವು ಮಾಡುವ ಉದ್ದೇಶದಿಂದ ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು.-** ಹತ್ತು ವರ್ಷದೊಳಗಿನ ಯಾವುದೇ ಮಗುವನ್ನು ಅಂಥ ಮಗುವಿನ ಮೈಮೇಲಿರುವ ಯಾವುದೇ ಚರಸ್ವತ್ತನ್ನು ಅಪ್ರಾಮಾಣಿಕತೆಯಿಂದ ತೆಗೆದುಕೊಳ್ಳುವ ಉದ್ದೇಶದಿಂದ ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**98. ವೇಶ್ಯಾವೃತ್ತಿ, ಇತ್ಯಾದಿ ಉದ್ದೇಶಗಳಿಗಾಗಿ ಮಗುವನ್ನು ಮಾರುವುದು.- ಯಾವುದೇ ಮಗುವನ್ನು**, ಅಂಥ **ಮಗು** ಎಷ್ಟೇ ವಯಸ್ಸಿನದ್ದಾಗಿರಲಿ, ವೇಶ್ಯಾವೃತ್ತಿಯ ಅಥವಾ ಯಾರೇ ವ್ಯಕ್ತಿಯೊಂದಿಗೆ ಅಕ್ರಮ ಸಂಭೋಗ ಮಾಡುವ ಅಥವಾ ಯಾವುದೇ ಕಾನೂನುಬಾಹಿರ ಮತ್ತು ಅನೈತಿಕ ಉದ್ದೇಶಕ್ಕಾಗಿ ತೊಡಗಿಸುವ ಅಥವಾ ಬಳಸಿಕೊಳ್ಳುವ ಉದ್ದೇಶದಿಂದ ಅಥವಾ ಅಂಥ ಮಗುವು ಎಷ್ಟೇ ವಯಸ್ಸಿನದ್ದಾಗಿರಲಿ, ಅಂಥ ಮಗುವನ್ನು ಯಾವುದೇ ವಯಸ್ಸಿನಲ್ಲಿ, ಅಂಥ ಉದ್ದೇಶಕ್ಕಾಗಿ ತೊಡಗಿಸುವ ಅಥವಾ ಬಳಸುವ ಸಂಭವವಿದೆಯೆಂಬುದು ಗೊತ್ತಿದ್ದರೂ, ಮಾರಾಟ ಮಾಡುವ, ಬಾಡಿಗೆಗೆ ನೀಡುವ ಅಥವಾ ಅನ್ಯಥಾ ವಿಲೆ ಮಾಡುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಯಾರೇ ವೇಶ್ಯೆಗೆ ಅಥವಾ ವೇಶ್ಯಾಗೃಹವನ್ನು ಇಟ್ಟುಕೊಂಡಿರುವ ಅಥವಾ ನಡೆಸುತ್ತಿರುವ ಯಾರೇ ವ್ಯಕ್ತಿಗೆ, ಹದಿನೆಂಟು ವರ್ಷ ವಯಸ್ಸಿನೊಳಗಿನ ಮಹಿಳೆಯನ್ನು ಮಾರಾಟ ಮಾಡಿದರೆ, ಬಾಡಿಗೆಗೆ ನೀಡಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ ಅಂಥ ಮಹಿಳೆಯನ್ನು ಹಾಗೆ ವಿಲೆ ಮಾಡಿದ ವ್ಯಕ್ತಿಯು, ತದ್ವಿರುದ್ಧವಾಗಿ ರುಜುವಾತಾದ ಹೊರತು, ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ಬಳಸಬೇಕೆಂಬ ಉದ್ದೇಶದಿಂದ ಆಕೆಯನ್ನು ವಿಲೆ ಮಾಡಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ 2.-* ಈ ಪ್ರಕರಣದ ಉದ್ದೇಶಗಳಿಗಾಗಿ "ಅಕ್ರಮ ಸಂಭೋಗ" ಎಂದರೆ, ಮದುವೆಯಿಂದಾಗಿ ಅಥವಾ ಯಾವ ಕೂಡಿಕೆಯನ್ನು ಅಥವಾ ಬಂಧನವನ್ನು, ಅದು ಮದುವೆ ಎನಿಸದಿದ್ದರೂ, ಯಾವ ವ್ಯಕ್ತಿಗಳು ಯಾವ ಸಮುದಾಯದವರಾಗಿದ್ದಾರೋ ಆ ಸಮುದಾಯದ ಅಥವಾ ಯಾವ ವ್ಯಕ್ತಿಗಳು ಯಾವ ವಿಭಿನ್ನ ಸಮುದಾಯಗಳಿಗೆ ಸೇರಿದವರಾಗಿದ್ದಾರೋ ಆ ಎರಡೂ ಸಮುದಾಯಗಳ ವೈಯಕ್ತಿಕ ಕಾನೂನು ಅಥವಾ ರೂಢಿ ಪ್ರಕಾರ ಮಾನ್ಯವಾಗಿದ್ದರೂ ಆ ವ್ಯಕ್ತಿಗಳ ನಡುವೆ ಹೆಚ್ಚು ಕಡಿಮೆ ವೈವಾಹಿಕ ಸ್ವರೂಪದ ಸಂಬಂಧವಾಗಿರದ ಆ ಯಾವುದೇ ರೀತಿಯಲ್ಲಿ ಕೂಡಿಕೆಯಿಂದ ಅಥವಾ ಯಾವುದೇ ಬಂಧನದಿಂದ ಸಂಬಂಧಿತರಾಗಿರದ ವ್ಯಕ್ತಿಗಳ ನಡುವಣ ಸಂಭೋಗ.

**99. ವೇಶ್ಯಾವೃತ್ತಿ, ಇತ್ಯಾದಿ ಉದ್ದೇಶಗಳಿಗಾಗಿ ಮಗುವನ್ನು ಕೊಂಡುಕೊಳ್ಳುವುದು.-** ಯಾವುದೇ ಮಗುವನ್ನು, ಯಾವುದೇ ವಯಸ್ಸಿನಲ್ಲಿ ವೇಶ್ಯಾವೃತ್ತಿಯ ಅಥವಾ ಯಾರೇ ವ್ಯಕ್ತಿಯೊಂದಿಗೆ ಅಕ್ರಮ ಸಂಭೋಗ ಮಾಡುವ ಅಥವಾ ಯಾವುದೇ ಕಾನೂನುಬಾಹಿರ ಮತ್ತು ಅನೈತಿಕ ಉದ್ದೇಶಕ್ಕಾಗಿ ತೊಡಗಿಸುವ ಅಥವಾ ಬಳಸಿಕೊಳ್ಳುವ ಉದ್ದೇಶದಿಂದ ಅಥವಾ ಅಂಥ ಮಗುವನ್ನು, ಯಾವುದೇ

ವಯಸ್ಸಿನಲ್ಲಿ, ಅಂಥ ಉದ್ದೇಶಕ್ಕಾಗಿ ತೊಡಗಿಸುವ ಅಥವಾ ಬಳಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ಕೊಂಡುಕೊಳ್ಳುವ, ಬಾಡಿಗೆಗಾಗಿ ಪಡೆಯುವ ಅಥವಾ ಅನ್ಯಥಾ ಸ್ವಾಧೀನಕ್ಕೆ ತೆಗೆದುಕೊಳ್ಳುವ ಯಾರೇ ವ್ಯಕ್ತಿಯು, ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಹದಿನೆಂಟು ವರ್ಷ ವಯಸ್ಸಿನೊಳಗಿನ ಮಹಿಳೆಯನ್ನು ಕೊಂಡುಕೊಳ್ಳುವ, ಬಾಡಿಗೆಗಾಗಿ ಪಡೆಯುವ ಅಥವಾ ಅನ್ಯಥಾ ಸ್ವಾಧೀನಕ್ಕೆ ತೆಗೆದುಕೊಳ್ಳುವ ಯಾರೇ ವೇಶ್ಯೆಯನ್ನು ಅಥವಾ ವೇಶ್ಯಾಗೃಹವನ್ನು ಇಟ್ಟುಕೊಂಡಿರುವ ಅಥವಾ ನಡೆಸುತ್ತಿರುವ ಯಾರೇ ವ್ಯಕ್ತಿಯು, ತದ್ವಿರುದ್ಧವಾಗಿ ರುಜುವಾತಾದ ಹೊರತು ವೇಶ್ಯಾವೃತ್ತಿಯ ಉದ್ದೇಶಕ್ಕಾಗಿ ಬಳಸುವ ಉದ್ದೇಶದಿಂದ ಅಂಥ ಮಹಿಳೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾಳೆಂದು/ದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ 2.-* "ಅಕ್ರಮ ಸಂಭೋಗ" ಎಂಬುದಕ್ಕೆ 98ನೇ ಪ್ರಕರಣದಲ್ಲಿ ವಿವರಿಸಿದಂಥ ಅರ್ಥವೇ ಇರುತ್ತದೆ.

## ಅಧ್ಯಾಯ VI

## ಮಾನವ ದೇಹಕ್ಕೆ ಸಂಬಂಧಿಸಿದ ಅಪರಾಧಗಳು

### *ಪ್ರಾಣಕ್ಕೆ ಸಂಬಂಧಿಸಿದ ಅಪರಾಧಗಳು*

**100. ಆಪರಾಧಿಕ ಮಾನವ ಹತ್ಯೆ.-** ಮರಣವನ್ನುಂಟುಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟು ಮಾಡುವ ಸಂಭವವಿರುವಂಥ ದೈಹಿಕ ಕ್ಷತಿಯನ್ನುಂಟುಮಾಡುವ ಉದ್ದೇಶದಿಂದ ಅಥವಾ ಅಂಥ ಕೃತ್ಯದಿಂದ ತಾನು ಮರಣವನ್ನುಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಆ ಕೃತ್ಯವನ್ನು ಮಾಡಿ ಮರಣವನ್ನುಂಟುಮಾಡುವ ಯಾರೇ ವ್ಯಕ್ತಿಯು, ಆಪರಾಧಿಕ ಮಾನವ ಹತ್ಯೆಯ ಅಪರಾಧವನ್ನು ಮಾಡುತ್ತಾನೆಂದಾಗುತ್ತದೆ.

*ದೃಷ್ಟಾಂತಗಳು*

(ಎ) ಮರಣವನ್ನುಂಟುಮಾಡುವ ಉದ್ದೇಶದಿಂದ ಅಥವಾ ಮರಣವುಂಟಾಗುವ ಸಂಭವವಿದೆಯೆಂಬುದು ಗೊತ್ತಿದ್ದರೂ 'ಎ'ನು ಒಂದು ಗುಂಡಿಯ ಮೇಲೆ ಕಡ್ಡಿಗಳನ್ನು ಮತ್ತು ಹುಲ್ಲನ್ನು ಹರಡುತ್ತಾನೆ. ಗಟ್ಟಿ ನೆಲವೆಂದು ಭಾವಿಸಿ 'ಜೆಡ್'ನು ಅದರ ಮೇಲೆ ಕಾಲಿಡುತ್ತಾನೆ, ಒಳಗೆ ಬೀಳುತ್ತಾನೆ ಮತ್ತು ಸಾವಿಗೆ ಈಡಾಗುತ್ತಾನೆ. ಹೀಗೆ 'ಎ'ನು ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಜೆಡ್'ನು ಒಂದು ಪೊದೆಯ ಮರೆಯಲ್ಲಿದ್ದಾನೆಂಬುದು 'ಎ'ನಿಗೆ ಗೊತ್ತಿರುತ್ತದೆ. ಆದರೆ 'ಬಿ'ನಿಗೆ ಅದು ಗೊತ್ತಿರುವುದಿಲ್ಲ. 'ಜೆಡ್'ನ ಮರಣವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಅಥವಾ ಮರಣವುಂಟಾಗುವ ಸಂಭವವಿದೆಯೆಂಬುದು ಗೊತ್ತಿದ್ದರೂ 'ಬಿ'ನನ್ನು ಆ ಪೊದೆಗೆ ಗುಂಡು ಹೊಡೆಯುವಂತೆ 'ಎ'ನು ಪ್ರೇರೇಪಿಸುತ್ತಾನೆ, 'ಬಿ'ನು ಗುಂಡು ಹೊಡೆಯುತ್ತಾನೆ ಮತ್ತು 'ಜೆಡ್'ನನ್ನು ಕೊಲ್ಲುತ್ತಾನೆ. ಇಲ್ಲಿ 'ಬಿ'ನು ಅಪರಾಧದ ಬಗ್ಗೆ ತಪ್ಪಿತಸ್ಥನಾಗದಿರಬಹುದು ಆದರೆ, 'ಎ'ನು ಆಪರಾಧಿಕ ಮಾನವ ಹತ್ಯೆಯ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಸಿ) 'ಎ'ನು ಒಂದು ಹಕ್ಕಿಯನ್ನು ಸಾಯಿಸುವ ಮತ್ತು ಕಳವು ಮಾಡಬೇಕೆಂಬ ಉದ್ದೇಶದಿಂದ ಅದಕ್ಕೆ ಗುಂಡು ಹೊಡೆಯುತ್ತಾನೆ. ಆದರೆ, ಆ ಗುಂಡು ಪೊದೆಯ ಮರೆಯಲ್ಲಿರುವ 'ಬಿ'ಗೆ ತಗುಲಿ 'ಬಿ'ನು ಸಾಯುತ್ತಾನೆ. ಆದರೆ, 'ಬಿ'ನು ಅಲ್ಲಿದ್ದುದು 'ಎ'ನಿಗೆ ಗೊತ್ತಿರಲಿಲ್ಲ. ಇಲ್ಲಿ 'ಎ'ನು ಕಾನೂನು ವಿರುದ್ಧ ಕೃತ್ಯವನ್ನು ಮಾಡಿದುದು ನಿಜವಾದರೂ, ಅವನು ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗುವುದಿಲ್ಲ. ಏಕೆಂದರೆ ಗುಂಡು ಹೊಡೆಯುವಾಗ ಅವನಿಗೆ 'ಬಿ'ನನ್ನು ಕೊಲ್ಲುವ ಅಥವಾ ಮರಣವನ್ನುಂಟು ಮಾಡುವ ಸಂಭವವಿತ್ತೆನ್ನುವ ಕೃತ್ಯ ತನಗೆ ತಿಳಿದಿರಬಹುದಾದರೂ ಅವನಿಗೆ ಆ ಕೃತ್ಯವನ್ನು ಮಾಡಿ ಮರಣವನ್ನುಂಟು ಮಾಡುವ ಉದ್ದೇಶವಿರಲಿಲ್ಲ.

*ವಿವರಣೆ 1.-* ಒಬ್ಬ ವ್ಯಕ್ತಿಯು, ಅಸ್ವಸ್ಥತೆಯಿಂದ, ಕಾಯಿಲೆಯಿಂದ ಅಥವಾ ದೈಹಿಕ ದುರ್ಬಲತೆಯಿಂದ ಬಳಲುತ್ತಿರುವ ಇನ್ನೊಬ್ಬ ವ್ಯಕ್ತಿಗೆ ದೈಹಿಕ ಕ್ಷತಿಯನ್ನುಂಟುಮಾಡಿ ಆ ಮೂಲಕ ಆ ಇನ್ನೊಬ್ಬ ವ್ಯಕ್ತಿಯು ಬೇಗನೆ ಮರಣ ಹೊಂದುವಂತೆ ಮಾಡಿದರೆ, ಅವನು ಆ ವ್ಯಕ್ತಿಯ ಮರಣವನ್ನುಂಟು ಮಾಡಿದ್ದಾನೆಂದೇ ಭಾವಿಸತಕ್ಕದ್ದು.

*ವಿವರಣೆ 2.-* ದೈಹಿಕ ಕ್ಷತಿಯಿಂದ ಮರಣವುಂಟಾಗಿರುವ ಸಂದರ್ಭದಲ್ಲಿ, ಸರಿಯಾದ ನಿವಾರಣೋಪಾಯಗಳಿಂದ ಮತ್ತು ಕುಶಲ ಚಿಕಿತ್ಸೆಯಿಂದ ಮರಣವನ್ನು ತಪ್ಪಿಸುವುದು ಸಾಧ್ಯವಿದ್ದಿರಬಹುದಾದರೂ, ಹಾಗೆ ದೈಹಿಕ ಕ್ಷತಿಯನ್ನುಂಟು ಮಾಡಿದ ವ್ಯಕ್ತಿಯು ಮರಣವನ್ನುಂಟು ಮಾಡಿದ್ದಾನೆಂದೇ ಭಾವಿಸತಕ್ಕದ್ದು.

*ವಿವರಣೆ 3.-* ತಾಯಿಯ ಗರ್ಭದಲ್ಲಿರುವ ಮಗುವಿನ ಮರಣವನ್ನುಂಟುಮಾಡುವುದು ಮಾನವ ಹತ್ಯೆಯಲ್ಲ. ಆದರೆ, ಒಂದು ಜೀವಂತ ಮಗುವಿನ, ಅದು ಉಸಿರಾಡುತ್ತಿಲ್ಲದಿರಬಹುದಾದರೂ ಅಥವಾ ಸಂಪೂರ್ಣವಾಗಿ ಹುಟ್ಟಿಲ್ಲದಿರಬಹುದಾದರೂ ಅದರ ಯಾವುದೇ ಭಾಗವು ಹೊರಬಂದಿದ್ದರೆ, ಅಂಥ ಮಗುವಿನ ಮರಣವನ್ನುಂಟುಮಾಡುವುದು ಆಪರಾಧಿಕ ಮಾನವ ಹತ್ಯೆಯೆಂದಾಗಬಹುದು.

**101. ಕೊಲೆ.-** ಇಲ್ಲಿ ಇನ್ನು ಮುಂದೆ ವಿನಾಯಿತಿಸಿದ ಸಂದರ್ಭಗಳ ಹೊರತು, ಉಳಿದೆಡೆ ಕೊಲೆ ಎಂದರೆ:-

(ಎ) ಯಾವ ಕೃತ್ಯದಿಂದ ಮರಣ ಉಂಟಾಗುತ್ತದೋ ಆ ಕೃತ್ಯವನ್ನು ಮರಣವನ್ನುಂಟು ಮಾಡುವ ಉದ್ದೇಶದಿಂದ ಮಾಡಿದ್ದರೆ; ಅಥವಾ

(ಬಿ) ಯಾವ ವ್ಯಕ್ತಿಗೆ ಕೆಡುಕನ್ನುಂಟುಮಾಡಲಾಗಿದೆಯೋ ಆ ವ್ಯಕ್ತಿಗೆ ದೈಹಿಕ ಕ್ಷತಿಯಿಂದ ಮರಣವನ್ನುಂಟಾಗುವ ಸಂಭವವಿದೆಯೆಂಬುದು ಅಪರಾಧಿಗೆ ಗೊತ್ತಿದ್ದೂ, ದೈಹಿಕ ಕ್ಷತಿಯನ್ನುಂಟುಮಾಡುವ ಉದ್ದೇಶದಿಂದ ಮರಣವನ್ನುಂಟು ಮಾಡುವ ಕೃತ್ಯವನ್ನು ಮಾಡಿದ್ದರೆ; ಅಥವಾ

(ಸಿ) ಯಾರೇ ವ್ಯಕ್ತಿಗೆ ದೈಹಿಕ ಕ್ಷತಿಯುಂಟು ಮಾಡುವ ಉದ್ದೇಶದಿಂದ ಮರಣ ಉಂಟುಮಾಡುವ ಕೃತ್ಯವನ್ನು ಮಾಡಿದ್ದರೆ ಮತ್ತು ಹಾಗೆ ಮಾಡಬೇಕೆಂದು ಉದ್ದೇಶಿಸಿದ್ದ ದೈಹಿಕ ಕ್ಷತಿಯು ಮರಣ ಉಂಟುಮಾಡುವ ಸಾಮಾನ್ಯ ಸ್ವರೂಪದ ಕ್ರಮದಲ್ಲಿ ಸಾಕಷ್ಟಿದ್ದರೆ; ಅಥವಾ

(ಡಿ) ಅದು ಶೀಘ್ರ ಅಪಾಯಕಾರಿಯಾದುದಾಗಿದ್ದು, ಅದು ಬಹುಮಟ್ಟಿಗೆ ಮರಣವನ್ನುಂಟು ಮಾಡಿಯೇ ತೀರುವುದೆಂಬುದು ಅಥವಾ ಅಂಥ ದೈಹಿಕ ಕ್ಷತಿಯಿಂದ ಮರಣವುಂಟಾಗುವ ಸಂಭವವಿದೆಯೆಂಬುದು ಆ ಕೃತ್ಯವನ್ನು ಮಾಡುವ ವ್ಯಕ್ತಿಗೆ ಗೊತ್ತಿದ್ದರೆ ಮತ್ತು ಮರಣವುಂಟು ಮಾಡುವ ಅಥವಾ ಮೇಲೆ ಹೇಳಿದಂಥ ಕ್ಷತಿಯನ್ನುಂಟು ಮಾಡುವ ಸಂಭವನೀಯ ಹೊಣೆಗೇಡಾಗಲು ಯಾವುದೇ ಸರಿಯಾದ ಕಾರಣಕೊಡದೆ ಆ ಕೃತ್ಯವನ್ನು ಮಾಡಿದರೆ

-ಆಪರಾಧಿಕ ಮಾನವ ಹತ್ಯೆಯು ಕೊಲೆಯೆನಿಸುತ್ತದೆ.

*ದೃಷ್ಟಾಂತಗಳು*

(ಎ) ‘ಜೆಡ್’ನನ್ನು ಕೊಲ್ಲುವ ಉದ್ದೇಶದಿಂದ ‘ಎ’ನು ಅವನಿಗೆ ಗುಂಡು ಹೊಡೆಯುತ್ತಾನೆ. ಪರಿಣಾಮವಾಗಿ ‘ಜೆಡ್’ನು ಸಾಯುತ್ತಾನೆ. ‘ಎ’ನು ಕೊಲೆ ಮಾಡಿದ್ದಾನೆ.

(ಬಿ) ‘ಜೆಡ್’ನು ಎಂಥ ಕಾಯಿಲೆಯಿಂದ ಬಳಲುತ್ತಿದ್ದಾನೆಂದರೆ ಒಂದೇ ಹೊಡೆತ ‘ಜೆಡ್’ನಿಗೆ ಮರಣವನ್ನುಂಟು ಮಾಡುವ ಸಂಭವವಿದೆಯೆಂದು ‘ಎ’ನಿಗೆ ಗೊತ್ತಿದ್ದೂ ‘ಜೆಡ್’ನಿಗೆ ದೈಹಿಕ ಕ್ಷತಿಯನ್ನುಂಟುಮಾಡುವ ಉದ್ದೇಶದಿಂದ ಹೊಡೆಯುತ್ತಾನೆ. ಆ ಹೊಡೆತದ ಪರಿಣಾಮವಾಗಿ ‘ಜೆಡ್’ನು ಸಾಯುತ್ತಾನೆ. ಒಳ್ಳೆಯ ಆರೋಗ್ಯ ಸ್ಥಿತಿಯಲ್ಲಿರುವ ವ್ಯಕ್ತಿಯ ಮರಣವನ್ನುಂಟುಮಾಡಲು ಸಾಮಾನ್ಯ ಸ್ವರೂಪದ ಕ್ರಮದಲ್ಲಿ ತೊಡಗಿದಾಗ, ಆ ಹೊಡೆತ ಮರಣವನ್ನುಂಟು ಮಾಡುವಷ್ಟರ ಮಟ್ಟಿಗೆ ಸಾಕಾಗದಿದ್ದರೂ 'ಎನು ಕೊಲೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗುತ್ತಾನೆ. ಆದರೆ, ‘ಜೆಡ್’ನು ಆ ಕಾಯಿಲೆಯಿಂದ ಬಳಲುತ್ತಿರುವನೆಂಬ ವಿಚಾರ ‘ಎ’ಗೆ ಗೊತ್ತಿಲ್ಲವಾದ್ದರಿಂದ, ಒಳ್ಳೆಯ ಆರೋಗ್ಯ ಸ್ಥಿತಿಯಲ್ಲಿರುವ ವ್ಯಕ್ತಿಯ ಮರಣವನ್ನು ಉಂಟುಮಾಡಲು ಸಾಮಾನ್ಯ ಸ್ವರೂಪದ ಕ್ರಮದಲ್ಲಿ ತೊಡಗಿದಾಗ, ಮರಣ ಉಂಟುಮಾಡುವಷ್ಟರಮಟ್ಟಿಗೆ ಸಾಕಾಗದಂಥ ಹೊಡೆತವನ್ನು ‘ಜೆಡ್’ನಿಗೆ ಹೊಡೆಯುತ್ತಾನೆ. ಇಲ್ಲಿ ‘ಎ’ನು ದೈಹಿಕ ಕ್ಷತಿಯನ್ನುಂಟುಮಾಡಲು ಉದ್ದೇಶಿಸಿರಬಹುದಾದರೂ, ಮರಣವನ್ನುಂಟುಮಾಡಲು ಅಥವಾ ಮರಣವನ್ನುಂಟಾಗುವ ಸಾಮಾನ್ಯ ಸ್ವರೂಪದ ಕ್ರಮದಲ್ಲಿ ದೈಹಿಕ ಕ್ಷತಿಯನ್ನುಂಟುಮಾಡಲು ಉದ್ದೇಶಿಸಿರದಿದ್ದರೆ ಕೊಲೆ ಮಾಡಿದ ಬಗ್ಗೆ ತಪ್ಪಿತಸ್ಥನಾಗುವುದಿಲ್ಲ.

(ಸಿ) ಸಾಮಾನ್ಯ ಸ್ವರೂಪದ ಕ್ರಮದಲ್ಲಿ ಮನುಷ್ಯನ ಮರಣವನ್ನುಂಟುಮಾಡಲು ತೊಡಗಿದಾಗ ಮರಣವನ್ನುಂಟು ಮಾಡಲು ಸಾಕಾಗುವಂಥ ಖಡ್ಗದ ಗಾಯವನ್ನು ಅಥವಾ ದೊಣ್ಣೆಯ ಗಾಯವನ್ನು ಟಿ/ನು ಜೆಡ್‌ನಿಗೆ ಉದ್ದೇಶಪೂರ್ವಕವಾಗಿ ಮಾಡುತ್ತಾನೆ. ಅದರ ಪರಿಣಾಮವಾಗಿ ಜೆಡ್‌ನು ಸಾಯುತ್ತಾನೆ. ಇಲ್ಲಿ ಟಿಗೆ ಜೆಡ್‌ನ ಮರಣವನ್ನುಂಟುಮಾಡುವ ಉದ್ದೇಶ ಇಲ್ಲದೆ ಇರಬಹುದಾಗಿದ್ದರೂ, ಕೊಲೆ ಮಾಡಿದ ಬಗ್ಗೆ ತಪ್ಪಿತಸ್ಥನಾಗುತ್ತಾನೆ.

(ಡಿ) ಯಾವುದೇ ಕಾರಣವಿಲ್ಲದೆಯೆ, 'ಎ'ನು ಗುಂಡು ತುಂಬಿದ ಬಂದೂಕದಿಂದ ಜನಜಂಗುಳಿಯ ಮೇಲೆ ಗುಂಡು ಹಾರಿಸಿ ಅದರಲ್ಲಿ ಒಬ್ಬನನ್ನು ಕೊಲ್ಲುತ್ತಾನೆ. ಯಾರೇ ನಿರ್ದಿಷ್ಟ ವ್ಯಕ್ತಿಯನ್ನು ಕೊಲ್ಲುವ ಪೂರ್ವನಿಶ್ಚಿತ ಸಂಚನ್ನು ಮಾಡದಿರಬಹುದಾಗಿದ್ದರೂ ಟಿ/ನು ಕೊಲೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗುತ್ತಾನೆ.

*ಅಪವಾದ 1.-* ಅಪರಾಧಿಯು ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದಾಗಿ ತನ್ನ ಮೇಲಣ ಹತೋಟಿಯನ್ನು ಕಳೆದುಕೊಂಡು ಆ ಪ್ರಚೋದನೆಗೆ ಕಾರಣನಾದ ವ್ಯಕ್ತಿಯ ಮರಣವನ್ನುಂಟುಮಾಡಿದರೆ ಅಥವಾ ಪ್ರಮಾದವಶಾತ್ ಅಥವಾ ಆಕಸ್ಮಿಕವಾಗಿ ಯಾರೇ ಇತರ ವ್ಯಕ್ತಿಯ ಮರಣವನ್ನುಂಟುಮಾಡಿದರೆ, ಅಂಥ ಆಪರಾಧಿಕ ಮಾನವ ಹತ್ಯೆಯು ಕೊಲೆಯಾಗುವುದಿಲ್ಲ:

ಪರಂತು,-

(ಎ) ಯಾರೇ ವ್ಯಕ್ತಿಯನ್ನು ಕೊಲ್ಲಲು ಅಥವಾ ಅವನಿಗೆ ಹಾನಿಯುಂಟುಮಾಡಲು ಒಂದು ನೆಪವಾಗಿ ಅಪರಾಧಿಯು ಪ್ರಚೋದನೆಯನ್ನು ತಾನೇ ಉಂಟುಮಾಡಿಕೊಂಡಿರಕೂಡದು ಅಥವಾ ಅದಕ್ಕೆ ಸ್ವಯಿಚ್ಛೆಯಿಂದ ಕಾರಣನಾಗಿರಬಾರದು;

(ಬಿ) ಆ ಪ್ರಚೋದನೆಯು ಕಾನೂನಿನ ಪಾಲನೆಯಲ್ಲಿ ಮಾಡಿದ ಯಾವುದೇ ಕೃತ್ಯದಿಂದ ಒದಗಿರಕೂಡದು ಅಥವಾ ಲೋಕ ನೌಕರನಿಂದ ಹಾಗೆ ಲೋಕ ನೌಕರನಾಗಿ ತನ್ನ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸುವಾಗ ಉಂಟಾಗಿರಬಾರದು;

(ಸಿ) ಆ ಪ್ರಚೋದನೆಯು ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಕಾನೂನುಬದ್ಧವಾಗಿ ಚಲಾಯಿಸಿ ಮಾಡಿದ ಯಾವುದೇ ಕೃತ್ಯದಿಂದ ಉಂಟಾಗಿರಬಾರದು.

*ವಿವರಣೆ.-* ಪ್ರಚೋದನೆಯು, ಅಪರಾಧವು ಕೊಲೆಯೆಂದು ಪರಿಗಣಿತವಾಗದಂತೆ ಮಾಡುವಷ್ಟು ಗಂಭೀರವೂ ಮತ್ತು ಹಠಾತ್ ಆದದೂ ಆಗಿದ್ದಿತ್ತೇ ಎಂಬುದು ಸಂಗತಿಯ ಪ್ರಶ್ನೆಯಾಗುತ್ತದೆ.

*ದೃಷ್ಟಾಂತಗಳು*

(ಎ) ಜೆಡ್‌ನು ಮಾಡಿದ ಪ್ರಚೋದನೆಯಿಂದ ಉದ್ರಿಕ್ತನಾಗಿ ಆವೇಶದ ಭರದಲ್ಲಿ ಜೆಡ್‌ನ ಮಗುವಾದ ವೈನನ್ನು ಟಿ/ನು ಉದ್ದೇಶಪೂರ್ವಕವಾಗಿ ಕೊಲ್ಲುತ್ತಾನೆ. ಇದು ಕೊಲೆಯಾಗುತ್ತದೆ. ಏಕೆಂದರೆ ಪ್ರಚೋದನೆ ಒದಗಿಸಿದ್ದು ಆ ಮಗುವಲ್ಲ ಮತ್ತು ಮಗುವಿನ ಮರಣವು ಆ ಪ್ರಚೋದನೆಯ ಪರಿಣಾಮವಾದ ಕೃತ್ಯವನ್ನು ಮಾಡುವಾಗ ಆಕಸ್ಮಿಕವಾಗಿ ಅಥವಾ ದುರ್ದೈವದಿಂದ ಉಂಟಾಗಲಿಲ್ಲ.

(ಬಿ) ವೈನು ಟಿ/ನಿಗೆ ಗಂಭೀರ ಮತ್ತು ಹಠಾತ್ ಪ್ರಚೋದನೆಯನ್ನು ಉಂಟುಮಾಡುತ್ತಾನೆ. ಟಿ/ನು ಈ ಪ್ರಚೋದನೆಯಿಂದಾಗಿ, ತನ್ನ ಹತ್ತಿರದಲ್ಲೇ ಇರುವ ಆದರೆ ತನಗೆ ಕಾಣದಿರುವ ಜೆಡ್‌ನನ್ನು ಕೊಲ್ಲುವ ಉದ್ದೇಶವಿಲ್ಲದೆ ಅಥವಾ ತಾನು ಅವನನ್ನು ಕೊಲ್ಲುವ ಸಂಭವವಿದೆಯೆಂದು ತಿಳಿಯದೆ ಪಿಸ್ತೂಲಿನಿಂದ ವೈನತ್ತ ಗುಂಡು ಹಾರಿಸುತ್ತಾನೆ. ಹೀಗೆ ಟಿ/ನು ಜೆಡ್‌ನನ್ನು ಕೊಲ್ಲುತ್ತಾನೆ. ಇಲ್ಲಿ ಟಿ/ನು ಕೊಲೆ ಮಾಡಿಲ್ಲ, ಆದರೆ ಕೇವಲ ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದ್ದಾನೆ.

(ಸಿ) ಜೆಡ್‌ನೆಂಬ ಬೇಲಿಫನು ಟಿ/ನನ್ನು ಕಾನೂನುಬದ್ಧವಾಗಿ ದಸ್ತಗಿರಿ ಮಾಡಿದ್ದಾನೆ. ಆ ದಸ್ತಗಿರಿಯಿಂದಾಗಿ ಹಠಾತ್ ಮತ್ತು ತೀವ್ರವಾದ ಆವೇಶದಿಂದ ಉದ್ರಿಕ್ತನಾಗಿ ಟಿ/ನು ಜೆಡ್‌ನನ್ನು ಕೊಲ್ಲುತ್ತಾನೆ. ಇಲ್ಲಿ ಲೋಕ ನೌಕರನು ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಮಾಡಿದ ಕೃತ್ಯದಿಂದ ಪ್ರಚೋದನೆಯುಂಟಾಗಿರುವುದರಿಂದ ಇದು ಕೊಲೆಯಾಗುತ್ತದೆ.

(ಡಿ) ಜೆಡ್‌ನೆಂಬ ಮ್ಯಾಜಿಸ್ಟ್ರೇಟನ ಮುಂದೆ ವೈನು ಸಾಕ್ಷಿಯಾಗಿ ಹಾಜರಾಗುತ್ತಾನೆ. ವೈನ ಹೇಳಿಕೆಯ ಒಂದು ಶಬ್ದವನ್ನೂ ತಾನು ನಂಬುವುದಿಲ್ಲ ಮತ್ತು ವೈನು ಸುಳ್ಳು ಸಾಕ್ಷ್ಯವನ್ನು ಹೇಳಿದ್ದಾನೆ ಎಂದು ಜೆಡ್‌ನು ಹೇಳುತ್ತಾನೆ. ಈ ಮಾತುಗಳಿಂದ ವೈನು ಹಠಾತ್ತಾಗಿ ಆವೇಶದಿಂದ ಉದ್ರಿಕ್ತನಾಗಿ ಜೆಡ್‌ನನ್ನು ಕೊಲ್ಲುತ್ತಾನೆ. ಇದು ಕೊಲೆಯಾಗುತ್ತದೆ.

(ಇ) ವೈನು ಜೆಡ್‌ನ ಮೂಗನ್ನು ಹಿಡಿದೆಳೆಯಲು ಪ್ರಯತ್ನಿಸುತ್ತಾನೆ. ಜೆಡ್‌ನು ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸಿ ಹಾಗೆ ಮಾಡದ ಹಾಗೆ ವೈನನ್ನು ತಡೆಯಲು ಅವನನ್ನು ಹಿಡಿದುಕೊಳ್ಳುತ್ತಾನೆ. ಇದರಿಂದಾಗಿ ವೈನು ಹಠಾತ್ತಾದ ಮತ್ತು ತೀವ್ರವಾದ ಆವೇಶದ ಭರದಲ್ಲಿ ಜೆಡ್‌ನನ್ನು ಕೊಲ್ಲುತ್ತಾನೆ. ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸುವಾಗ ಮಾಡಿದ ಕೃತ್ಯದಿಂದ ಪ್ರಚೋದನೆಯುಂಟಾಗಿರುವುದರಿಂದ ಇದು ಕೊಲೆಯಾಗುತ್ತದೆ.

(ಎಫ್) ಜೆಡ್‌ನು ಬಿನನ್ನು ಹೊಡೆಯುತ್ತಾನೆ. ಬಿನು ಈ ಪ್ರಚೋದನೆಯಿಂದ ಉದ್ರಿಕ್ತನಾಗಿ ತೀವ್ರವಾಗಿ ಕೋಪಗೊಳ್ಳುತ್ತಾನೆ. ಪಕ್ಕದಲ್ಲಿ ನಿಂತಿದ್ದ ವೈನು ಬಿನ ಕೋಪದ ಪ್ರಯೋಜನ ಪಡೆಯುವ ಮತ್ತು ಜೆಡ್‌ನನ್ನು ಕೊಲ್ಲಿಸುವ ಉದ್ದೇಶದಿಂದ ಬಿ ಕೈಯಲ್ಲಿ ಆ ಉದ್ದೇಶಕ್ಕಾಗಿ ಚಾಕನ್ನು ಕೊಡುತ್ತಾನೆ. ಬಿನು ಜೆಡ್‌ನನ್ನು ಆ ಚಾಕುವಿನಿಂದ ಕೊಲ್ಲುತ್ತಾನೆ. ಇಲ್ಲಿ ಬಿನು ಆಪರಾಧಿಕ ಮಾನವ ಹತ್ಯೆಯನ್ನು ಮಾತ್ರ ಮಾಡಿರಬಹುದು. ಆದರೆ, ವೈನು ಕೊಲೆಯ ದೋಷಿಯಾಗುತ್ತಾನೆ.

*ಅಪವಾದ 2.-* ಅಪರಾಧಿಯು, ತನ್ನ ದೇಹದ ಅಥವಾ ಸ್ವತ್ತಿನ ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಸದ್ಭಾವನೆಯಿಂದ ಚಲಾಯಿಸುವಾಗ, ಪೂರ್ವಾಲೋಚನೆಯಿಲ್ಲದೆಯೇ ಮತ್ತು ಅಂಥ ರಕ್ಷಣೆ ಬಗ್ಗೆ ಅವಶ್ಯವಾದುದಕ್ಕಿಂತ ಹೆಚ್ಚು ಹಾನಿಯನ್ನುಂಟುಮಾಡುವ ಉದ್ದೇಶವಿಲ್ಲದೆಯೇ, ತನಗೆ ಕಾನೂನಿನಿಂದ ದತ್ತವಾದ ಅಧಿಕಾರವನ್ನು ಮೀರಿ ಯಾವ ವ್ಯಕ್ತಿಯ ವಿರುದ್ಧ ಅಂಥ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸುತ್ತಿದ್ದಾನೆಯೋ ಆ ವ್ಯಕ್ತಿಯ ಮರಣವನ್ನುಂಟುಮಾಡಿದರೆ, ಅಂಥ ಆಪರಾಧಿಕ ಮಾನವ ಹತ್ಯೆಯು ಕೊಲೆಯೆನಿಸುವುದಿಲ್ಲ.

***ದೃಷ್ಟಾಂತ***

ಜೆಡ್‌ನು ವೈನಿಗೆ ಕುದುರೆ ಚಾವಟಿಯಿಂದ ಹೊಡೆಯಲು ಪ್ರಯತ್ನಿಸುತ್ತಾನೆ; ಆದರೆ, ಅವನಿಗೆ ತೀವ್ರ ಗಾಯವನ್ನು ಉಂಟುಮಾಡುವಷ್ಟು ರೀತಿಯಲ್ಲಿ ಅಲ್ಲ. ವೈನು ಪಿಸ್ತೂಲನ್ನು ಹೊರತೆಗೆಯುತ್ತಾನೆ. ಜೆಡ್‌ನು ವೈಗೆ ಹೊಡೆಯುವುದನ್ನು ಮುಂದುವರೆಸುತ್ತಾನೆ. ಜೆಡ್‌ನು ತನ್ನನ್ನು ಕುದುರೆ ಚಾವಟಿಯಿಂದ ಹೊಡೆಯುವುದನ್ನು ಬೇರೆ ಯಾವ ರೀತಿಯಿಂದಲೂ ತಪ್ಪಿಸಿಕೊಳ್ಳಲಾಗುವುದಿಲ್ಲವೆಂದು ವೈನು ಸದ್ಭಾವನೆಯಿಂದ ನಂಬಿ ಗುಂಡು ಹಾರಿಸಿ ಜೆಡ್‌ನನ್ನು ಕೊಲ್ಲುತ್ತಾನೆ. ಇಲ್ಲಿ ವೈನು ಕೊಲೆ ಮಾಡಿಲ್ಲ; ಆದರೆ ಆಪರಾಧಿಕ ಮಾನವ ಹತ್ಯೆ ಮಾಡಿದ್ದಾನೆಂದಾಗುತ್ತದೆ.

*ಅಪವಾದ 3.-* ಅಪರಾಧಿಯು ಲೋಕ ನೌಕರನಾಗಿದ್ದು ಅಥವಾ ಸಾರ್ವಜನಿಕ ನ್ಯಾಯಪಾಲನೆಗಾಗಿ ಕ್ರಮ ಕೈಗೊಳ್ಳುತ್ತಿರುವ ಲೋಕ ನೌಕರನಿಗೆ ನೆರವು ನೀಡುವವನಾಗಿದ್ದು, ಯಾವ ಕೃತ್ಯವು ಕಾನೂನುಬದ್ಧವಾದುದೆಂದು ಮತ್ತು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಗೆ ಅವಶ್ಯವಾದುದೆಂದು ಸದ್ಭಾವನೆಯಿಂದ ತಾನು ನಂಬಿರುವನೋ ಆ ಕೃತ್ಯದಿಂದ ಮತ್ತು ಯಾವ ವ್ಯಕ್ತಿಗೆ ಮರಣವನ್ನುಂಟುಮಾಡಲಾಯಿತೋ ಆ ವ್ಯಕ್ತಿಯ ಬಗ್ಗೆ ಯಾವುದೇ ದ್ವೇಷ ಭಾವನೆ ಇಲ್ಲದೆಯೆ, ಕಾನೂನಿನಿಂದ ತನಗೆ ಪ್ರದತ್ತವಾದ ಅಧಿಕಾರಗಳನ್ನು ಮೀರಿ ಮರಣವನ್ನುಂಟು ಮಾಡಿದರೆ, ಆ ಆಪರಾಧಿಕ ಮಾನವ ಹತ್ಯೆಯು ಕೊಲೆಯಾಗುವುದಿಲ್ಲ.

*ಅಪವಾದ 4.-* ಹಠಾತ್ ಜಗಳದಿಂದುಂಟಾದ ಆವೇಶದ ಭರದಲ್ಲಿ ಆದ ಹಠಾತ್ ಹೊಡೆದಾಟದಲ್ಲಿ ಅಪರಾಧಿಯು ಪೂರ್ವಾಲೋಚನೆಯಿಲ್ಲದೆಯೇ ಮತ್ತು ಅನುಚಿತ ಅವಕಾಶವನ್ನು ಬಳಸಿಕೊಳ್ಳದೆಯೆ ಅಥವಾ ಕ್ರೂರ ಅಥವಾ ಅಸಾಧಾರಣ ರೀತಿಯಲ್ಲಿ ವರ್ತಿಸದೆಯೆ ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದರೆ, ಅದು ಕೊಲೆಯಾಗುವುದಿಲ್ಲ.

*ವಿವರಣೆ.-* ಇಂಥ ಸಂದರ್ಭದಲ್ಲಿ ಯಾವ ಪಕ್ಷಕಾರನು ಪ್ರಚೋದನೆ ಮಾಡಿದನು ಅಥವಾ ಮೊದಲು ಹಲ್ಲೆ ನಡೆಸಿದನು ಎಂಬುದು ಮುಖ್ಯವಲ್ಲ.

ಅಪವಾದ *5.*- ಯಾವ ವ್ಯಕ್ತಿಯು ಮರಣ ಹೊಂದಿರುವನೋ, ಆ ವ್ಯಕ್ತಿಯು ಹದಿನೆಂಟು ವರ್ಷಕ್ಕೆ ಮೀರಿದ ವಯಸ್ಸಿನವನಾಗಿದ್ದು, ಸ್ವಸಮ್ಮತಿಯಿಂದಲೇ ಮರಣಕ್ಕೆ ತುತ್ತಾಗಿದ್ದರೆ ಅಥವಾ ಮರಣದ ಅಪಾಯಕ್ಕೆ ಒಡ್ಡಿಕೊಂಡಿದ್ದರೆ ಆ ಆಪರಾಧಿಕ ಮಾನವ ಹತ್ಯೆಯು ಕೊಲೆಯಾಗುವುದಿಲ್ಲ.

*ದೃಷ್ಟಾಂತ*

'ಎ'ನು 'ಜೆಡ್' ಮಗುವನ್ನು ಸ್ವಂತ ಇಚ್ಛೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತಾನೆ. ಇಲ್ಲಿ 'ಜೆಡ್'ನು ಚಿಕ್ಕ ವಯಸ್ಸಿನವನಾಗಿದ್ದ ಕಾರಣ, ತನ್ನ ಮರಣಕ್ಕಾಗಿ ಸಮ್ಮತಿಯನ್ನು ಕೊಡುವಷ್ಟು ತಿಳುವಳಿಕೆ ಉಳ್ಳವನಲ್ಲ. ಆದುದರಿಂದ 'ಎ'ನು ಕೊಲೆಗೆ ದುಷ್ಪ್ರೇರಣೆ ಮಾಡಿದ್ದಾನೆಂದಾಗುತ್ತದೆ.

**102. ಯಾವ ವ್ಯಕ್ತಿಗೆ ಮರಣವನ್ನುಂಟು ಮಾಡಲು ಉದ್ದೇಶಿಸಲಾಗಿತ್ತೋ ಆ ವ್ಯಕ್ತಿಯಲ್ಲದ ಇತರ ವ್ಯಕ್ತಿಗೆ ಮರಣವನ್ನುಂಟು ಮಾಡುವ ಮೂಲಕ ಆದ ಆಪರಾಧಿಕ ಮಾನವ ಹತ್ಯೆ.-** ಯಾರೇ ವ್ಯಕ್ತಿಯು, ಮರಣವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಯಾವುದೇ ಕೃತ್ಯವನ್ನು ಮಾಡುವ ಮೂಲಕ, ಯಾವ ವ್ಯಕ್ತಿಗೆ ಮರಣವನ್ನುಂಟು ಮಾಡಲು ತಾನು ಉದ್ದೇಶಿಸಿರಲಿಲ್ಲವೋ ಅಥವಾ ಮರಣವುಂಟಾಗುವ ಸಂಭವವಿದೆಯೆಂಬುದು ತನಗೆ ಗೊತ್ತಿರಲಿಲ್ಲವೋ, ಆ ಯಾರೇ ವ್ಯಕ್ತಿಗೆ ಮರಣವನ್ನುಂಟು ಮಾಡಿ ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದರೆ, ಆ ಅಪರಾಧಿಯು ಮಾಡಿದ ಆಪರಾಧಿಕ ಮಾನವ ಹತ್ಯೆಯು, ಆ ಅಪರಾಧಿಯು ಯಾವ ವ್ಯಕ್ತಿಗೆ ಮರಣವನ್ನುಂಟು ಮಾಡಬೇಕೆಂದು ಉದ್ದೇಶಿಸಿದ್ದನೋ ಅಥವಾ ಯಾವ ವ್ಯಕ್ತಿಗೆ ಮರಣವುಂಟಾಗುವ ಸಂಭವವಿದೆಯೆಂಬುದು ಗೊತ್ತಿದೆಯೋ ಆ ವ್ಯಕ್ತಿಗೆ ಮರಣವನ್ನುಂಟುಮಾಡಿದ್ದರೆ ಯಾವ ಬಗೆಯದಾಗಿರುತ್ತಿತ್ತೋ ಆ ಬಗೆಯದೇ ಆಗಿರುತ್ತದೆ.

**103. ಕೊಲೆಗೆ ದಂಡನೆ.-** (1) ಯಾರೇ ವ್ಯಕ್ತಿಯು ಕೊಲೆಯನ್ನು ಮಾಡಿದರೆ ಅವನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಹುಟ್ಟಿದ ಸ್ಥಳ, ಭಾಷೆ, ವೈಯಕ್ತಿಕ ನಂಬಿಕೆ ಆಧಾರದ ಮೇಲೆ ಅಥವಾ ಇನ್ಯಾವುದೇ ಅದೇ ರೀತಿಯ ಆಧಾರದ ಮೇಲೆ, ಐದು ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಒಟ್ಟಿಗೆ ಸೇರಿ ಕೊಲೆ ಮಾಡಿದಾಗ ಅಂತಹ ಗುಂಪಿನ ಪ್ರತಿಯೊಬ್ಬ ಸದಸ್ಯನೂ ಮರಣದಂಡನೆ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**104. ಆಜೀವ ಕಾರಾವಾಸಕ್ಕೆ ಗುರಿಯಾದವನು ಮಾಡಿದ ಕೊಲೆಗೆ ದಂಡನೆ.-** ಆಜೀವ ಕಾರಾವಾಸದ ಶಿಕ್ಷೆಯಲ್ಲಿರುವ ಯಾರೇ ವ್ಯಕ್ತಿಯು ಕೊಲೆ ಮಾಡಿದರೆ ಅವನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು, ಆ ಶಿಕ್ಷೆಯು ಆ ವ್ಯಕ್ತಿಯು **ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯ** ಭಾಗವೆಂದು ಅರ್ಥೈಸತಕ್ಕದ್ದು.

**105. ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವ ಹತ್ಯೆಗೆ ದಂಡನೆ.-** ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವ ಹತ್ಯೆಯನ್ನು ಮಾಡುವ ಯಾರೇ ವ್ಯಕ್ತಿಯು ಯಾವ ಕೃತ್ಯದಿಂದ ಮರಣ ಉಂಟಾಯಿತೋ ಆ ಕೃತ್ಯವನ್ನು, ಅವನು ಮರಣವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟುಮಾಡುವ ಸಂಭವವಿರುವ ದೈಹಿಕ ಕ್ಷತಿಯನ್ನುಂಟುಮಾಡುವ ಉದ್ದೇಶದಿಂದ ಮಾಡಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ, ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಅಥವಾ ಆ ಕೃತ್ಯವನ್ನು ಅದರಿಂದ ಮರಣವುಂಟಾಗುವ ಸಂಭವವಿದೆಯೆಂಬುದು ಗೊತ್ತಿದ್ದರೂ, ಆದರೆ, ಮರಣವನ್ನುಂಟುಮಾಡುವ ಅಥವಾ ಮರಣವನ್ನುಂಟು ಮಾಡುವಂಥ ದೈಹಿಕ ಕ್ಷತಿಯನ್ನುಂಟು ಮಾಡುವ ಯಾವುದೇ ಉದ್ದೇಶವಿಲ್ಲದೆಯೇ ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

**106. ನಿರ್ಲಕ್ಷ್ಯದಿಂದ ಮರಣವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು ಆಪರಾಧಿಕ ಮಾನವ ಹತ್ಯೆಯೆಂದು ಪರಿಗಣಿಸಲಾಗದ ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯವನ್ನು ಮಾಡಿ ಯಾರೇ ವ್ಯಕ್ತಿಗೆ ಮರಣವನ್ನುಂಟು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಮತ್ತು ಅಂಥ ಕೃತ್ಯವನ್ನು ವೈದ್ಯಕೀಯ ಕಾರ್ಯವಿಧಾನವನ್ನು ನಿರ್ವಹಿಸುವಾಗ ನೋಂದಾಯಿತ ವೈದ್ಯಕೀಯ ವೃತ್ತಿಗನು ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಈ ಉಪಪ್ರಕರಣದ ಉದ್ದೇಶಕ್ಕಾಗಿ, "ನೋಂದಾಯಿತ ವೈದ್ಯಕೀಯ ವೃತ್ತಿಗ" ಎಂದರೆ, ರಾಷ್ಟ್ರೀಯ ವೈದ್ಯಕೀಯ ಆಯೋಗ ಅಧಿನಿಯಮ, 2019 (2019ರ 30)ರ ಮೇರೆಗೆ ಮಾನ್ಯತೆ ಪಡೆದ ಯಾವುದೇ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ಆ ಅಧಿನಿಯಮದ ಮೇರೆಗೆ ರಾಷ್ಟ್ರೀಯ ವೈದ್ಯಕೀಯ ರಿಜಿಸ್ಟರ್ ಅಥವಾ ರಾಜ್ಯ ವೈದ್ಯಕೀಯ ರಿಜಿಸ್ಟರ್‌ನಲ್ಲಿ ಹೆಸರನ್ನು ನಮೂದಿಸಿರುವ ವೈದ್ಯಕೀಯ ವೃತ್ತಿಗ.

(2) ಯಾರೇ ವ್ಯಕ್ತಿಯು, ಆಪರಾಧಿಕ ಮಾನವ ಹತ್ಯೆಯೆಂದು ಪರಿಗಣಿಸಲಾಗದ ಯಾವುದೇ ದುಡುಕಿನಿಂದ ಮತ್ತು ನಿರ್ಲಕ್ಷ್ಯದಿಂದ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡುವ ಮೂಲಕ ಯಾರೇ ವ್ಯಕ್ತಿಗೆ ಮರಣವನ್ನುಂಟು ಮಾಡಿದರೆ ಮತ್ತು ಘಟನೆಯ ನಂತರ ಪೊಲೀಸ್ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟ್‌ರವರಿಗೆ ವರದಿ ಮಾಡದೆ ತಪ್ಪಿಸಿಕೊಂಡರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**107. ಮಗುವಿನ ಅಥವಾ ಅಸ್ವಸ್ಥಚಿತ್ತದ ವ್ಯಕ್ತಿಯ ಆತ್ಮಹತ್ಯೆಗೆ ದುಷ್ಪ್ರೇರಣೆ.- ಯಾವುದೇ** ಮಗು, ಯಾರೇ ಅಸ್ವಸ್ಥಚಿತ್ತದ ವ್ಯಕ್ತಿ, ಯಾರೇ ಭಾವೋದ್ರಿಕ್ತ ವ್ಯಕ್ತಿ ಅಥವಾ ಕುಡಿದು ಅಮಲಿನಲ್ಲಿರುವ ಯಾರೇ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡಾಗ, ಆ ಆತ್ಮಹತ್ಯೆಗೆ ದುಷ್ಪ್ರೇರಣೆ ನೀಡುವ ಯಾರೇ ವ್ಯಕ್ತಿಯು, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**108. ಆತ್ಮಹತ್ಯೆಗೆ ದುಷ್ಪ್ರೇರಣೆ.-** ಯಾರೇ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡಾಗ ಹಾಗೆ ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**109. ಕೊಲೆ ಮಾಡಲು ಪ್ರಯತ್ನ.-** (1) ಯಾವ ಕೃತ್ಯವನ್ನು ಯಾವ ಉದ್ದೇಶದಿಂದ ಅಥವಾ ತಿಳುವಳಿಕೆಯಿಂದ ಮತ್ತು ಯಾವ ಸನ್ನಿವೇಶಗಳಲ್ಲಿ ಮಾಡಿದಾಗ ಮತ್ತು ಆ ಕೃತ್ಯದಿಂದ ಮರಣವನ್ನುಂಟು ಮಾಡಿದಾಗ ಕೊಲೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗುತ್ತಿದ್ದನೋ ಅಂಥ ಯಾವುದೇ ಕೃತ್ಯವನ್ನು ಅಂಥ ಉದ್ದೇಶದಿಂದ ಅಥವಾ ತಿಳುವಳಿಕೆಯಿಂದ ಮತ್ತು ಆ ಸನ್ನಿವೇಶಗಳಲ್ಲಿ ಮಾಡುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಅಂಥ ಕೃತ್ಯದಿಂದ ಯಾರೇ ವ್ಯಕ್ತಿಗೆ ಗಾಯವುಂಟಾದರೆ, ಅಪರಾಧಿಯು ಆಜೀವ ಕಾರಾವಾಸಕ್ಕೆ ಅಥವಾ ಈ ಹಿಂದೆ ಹೇಳಿರುವಂಥ ದಂಡನೆಗೆ ಗುರಿಯಾಗತಕ್ಕದ್ದು.

(2) ಆಜೀವ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವ, (1)ನೇ ಉಪಪ್ರಕರಣದ ಮೇರೆಗಿನ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು ಗಾಯವನ್ನುಂಟು ಮಾಡಿದರೆ, ಅವನು ಮರಣದಂಡನೆಯಿಂದ ದಂಡಿತನಾಗತಕ್ಕದ್ದು ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು. ಆಜೀವ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯ ಭಾಗ ಎಂದರ್ಥ.

*ದೃಷ್ಟಾಂತಗಳು*

(ಎ) ಯಾವ ಸನ್ನಿವೇಶಗಳಲ್ಲಿ ಮರಣವುಂಟಾದರೆ ಎ'ನು ಕೊಲೆ ತಪ್ಪಿತಸ್ಥನಾಗುತ್ತಾನೋ ಆ ಸನ್ನಿವೇಶಗಳಲ್ಲಿ, 'ಎ'ನು ಜೆಡ್'ನನ್ನು ಕೊಲ್ಲುವ ಉದ್ದೇಶದಿಂದ ಅವನ ಕಡೆಗೆ ಗುಂಡು ಹಾರಿಸುತ್ತಾನೆ. ಎ'ನು ಈ ಪ್ರಕರಣದ ಮೇರೆಗೆ ದಂಡನೆಗೆ ಗುರಿಯಾಗುತ್ತಾನೆ.

(ಬಿ) ಎಳೆಯ ವಯಸ್ಸಿನ ಮಗುವಿಗೆ ಮರಣವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಎ'ನು ಮಗುವನ್ನು ನಿರ್ಜನ ಪ್ರದೇಶದಲ್ಲಿ ಬಿಟ್ಟು ಬರುತ್ತಾನೆ. ಆ ಮಗುವಿಗೆ ಮರಣವುಂಟಾಗದಿದ್ದರೂ, 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಸಿ) ಜೆಡ್'ನನ್ನು ಕೊಲ್ಲುವ ಉದ್ದೇಶದಿಂದ ಎ'ನು ಬಂದೂಕನ್ನು ಖರೀದಿ ಮಾಡಿದ್ದಾನೆ ಮತ್ತು ಅದಕ್ಕೆ ಗುಂಡು ತುಂಬಿದ್ದಾನೆ. ಎ'ನಿಂದ ಇನ್ನೂ ಅಪರಾಧ ಆಗಿಲ್ಲ. ಎ'ನು ಜೆಡ್'ನ ಕಡೆಗೆ ಗುಂಡು ಹಾರಿಸುತ್ತಾನೆ. ಆಗ ಅವನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ ಮತ್ತು ಹಾಗೆ ಗುಂಡು ಹಾರಿಸಿ ಜೆಡ್'ನಿಗೆ ಗಾಯವುಂಟು ಮಾಡಿದರೆ, ಅವನು (1)ನೇ ಉಪಪ್ರಕರಣದ ಎರಡನೇ ಭಾಗದಲ್ಲಿ ಉಪಬಂಧಿಸಿರುವ ದಂಡನೆಗೆ ಗುರಿಯಾಗುತ್ತಾನೆ.

(ಡಿ) ಜೆಡ್'ನನ್ನು ವಿಷ ಹಾಕಿ ಕೊಲ್ಲಬೇಕೆಂಬ ಉದ್ದೇಶದಿಂದ ಎ'ನು ವಿಷವನ್ನು ಖರೀದಿ ಮಾಡುತ್ತಾನೆ ಮತ್ತು ತನ್ನ ಬಳಿಯಲ್ಲಿರುವ ಆಹಾರದಲ್ಲಿ ಅದನ್ನು ಬೆರೆಸುತ್ತಾನೆ. ಆದರೆ, ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವು 'ಎ'ನಿಂದ ಇನ್ನೂ ಆಗಿಲ್ಲ. ಎ'ನು ಜೆಡ್'ನ ಮೇಜಿನ ಮೇಲೆ ಆಹಾರವನ್ನು ಇಡುತ್ತಾನೆ ಅಥವಾ ಜೆಡ್'ನ ಮೇಜಿನ ಮೇಲೆ ಇಡುವಂತೆ ಜೆಡ್'ನ ಸೇವಕರಿಗೆ ಕೊಡುತ್ತಾನೆ. ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**110. ಆಪರಾಧಿಕ ಮಾನವ ಹತ್ಯೆಯನ್ನು ಮಾಡಲು ಪ್ರಯತ್ನ.-** ಯಾವ ಕೃತ್ಯವನ್ನು ಯಾವ ಉದ್ದೇಶದಿಂದ ಅಥವಾ ತಿಳುವಳಿಕೆಯಿಂದ ಮತ್ತು ಯಾವ ಸನ್ನಿವೇಶಗಳಲ್ಲಿ ಮಾಡಿದರೆ ಆ ಕೃತ್ಯದಿಂದ ಮರಣವುಂಟಾದಾಗ, ಕೊಲೆಯೆಂದು ಪರಿಗಣಿತವಾಗದ ಆಪರಾಧಿಕ ಮಾನವ ಹತ್ಯೆ ಮಾಡಿದ ಬಗ್ಗೆ ತಪ್ಪಿತಸ್ಥನಾಗುತ್ತಿದ್ದನೋ ಆ ಯಾವುದೇ ಕೃತ್ಯವನ್ನು ಅಂಥ ಉದ್ದೇಶದಿಂದ ಅಥವಾ ತಿಳುವಳಿಕೆಯಿಂದ ಮತ್ತು ಅಂಥ ಸನ್ನಿವೇಶಗಳಲ್ಲಿ ಮಾಡುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಂಥ ಕೃತ್ಯದಿಂದ ಯಾರೇ ವ್ಯಕ್ತಿಗೆ ಗಾಯವುಂಟಾದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತ*

ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದ ಎ'ನು ಯಾವ ಸನ್ನಿವೇಶಗಳಲ್ಲಿ ಜೆಡ್'ಗೆ ಕಡೆಗೆ ಪಿಸ್ತೂಲಿನಿಂದ ಗುಂಡು ಹಾರಿಸಿ ಅವನ ಮರಣವನ್ನುಂಟು ಮಾಡಿದಾಗ ಕೊಲೆಯೆಂದು ಪರಿಗಣಿಸಲಾದ ಆಪರಾಧಿಕ ಮಾನವ ಹತ್ಯೆಯ ಬಗ್ಗೆ ತಪ್ಪಿತಸ್ಥನಾಗುತ್ತಿದ್ದನೋ ಆ ಸನ್ನಿವೇಶಗಳಲ್ಲಿ ಅವನು ಗುಂಡು ಹಾರಿಸುತ್ತಾನೆ. ಆದಕಾರಣ, 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**111. ಸಂಘಟಿತ ಅಪರಾಧ.-** (1) ಯಾವುದೇ ಸಂಘಟಿತ ಅಪರಾಧದ ಸಿಂಡಿಕೇಟ್'ನ ಸದಸ್ಯನಾಗಿಯಾಗಲಿ ಅಥವಾ ಅಂಥ ಸಿಂಡಿಕೇಟ್'ನ ಪರವಾಗಿ ಒಂಟಿಯಾಗಿಯಾಗಲಿ ಅಥವಾ ಜಂಟಿಯಾಗಿಯಾಗಲಿ ಒಟ್ಟಿಗೆ ಸೇರಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಆರ್ಥಿಕ ಪ್ರಯೋಜನವೂ ಸೇರಿದಂತೆ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಮುಖ ಪ್ರಯೋಜನವನ್ನು ಪಡೆಯಲು ಹಿಂಸಾಚಾರದ ಬಳಕೆ, ಹಿಂಸಾಚಾರದ ಬೆದರಿಕೆ, ಭಯೋತ್ಪಾದನೆ, ದಬ್ಬಾಳಿಕೆಯ ಮೂಲಕ ಅಥವಾ ಇತರೆ ಯಾವುದೇ ಕಾನೂನುಬಾಹಿರ ಸಾಧನಗಳ ಮೂಲಕ ಅಪಹರಣ, ಸುಲಿಗೆ, ವಾಹನ ಕಳವು, ಬಲಾದ್ಗ್ರಹಣ, ಭೂಕಬಳಿಕೆ, ಕೊಲ್ಲುವುದಕ್ಕಾಗಿ ಕರಾರು ಮಾಡಿಕೊಳ್ಳುವುದು, ಆರ್ಥಿಕ ಅಪರಾಧ, ಸೈಬರ್ ಅಪರಾಧಗಳು, ವ್ಯಕ್ತಿಗಳ, ಮಾದಕ ವಸ್ತುಗಳ, ಆಯುಧಗಳ ಅಥವಾ ನಿಷಿದ್ಧ

ಸರಕುಗಳ ಅಥವಾ ಸೇವೆಗಳ ದುರ್ವ್ಯಾಪಾರ ಮಾಡುವುದು, ವೈಶ್ಯಾವೃತ್ತಿ ಅಥವಾ ಒತ್ತೆ ಹಣಕ್ಕಾಗಿ ಮಾನವ ದುರ್ವ್ಯಾಪಾರ ಮಾಡುವುದೂ ಒಳಗೊಂಡಂತೆ ಯಾವುದೇ ನಿರಂತರ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದು ಸಂಘಟಿತ ಅಪರಾಧವಾಗತಕ್ಕದ್ದು.

*ವಿವರಣೆ.-* ಈ ಉಪಪ್ರಕರಣದ ಉದ್ದೇಶಕ್ಕಾಗಿ,-

(i) "ಸಂಘಟಿತ ಅಪರಾಧದ ಸಿಂಡಿಕೇಟ್" ಎಂದರೆ, ನಿರಂತರವಾಗಿ ಯಾವುದೇ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಸಿಂಡಿಕೇಟ್ ಅಥವಾ ಗ್ಯಾಂಗ್ ರೂಪದಲ್ಲಿ ಒಂಟಿಯಾಗಿಯಾಗಲಿ ಅಥವಾ ಜಂಟಿಯಾಗಿಯಾಗಲಿ ಕಾರ್ಯನಿರ್ವಹಿಸುವ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ಜನರಿರುವ ಒಂದು ಗುಂಪು;

(ii) "ನಿರಂತರ ಕಾನೂನುಬಾಹಿರ ಚಟುವಟಿಕೆ" ಎಂದರೆ, ಯಾರೇ ವ್ಯಕ್ತಿಯು ಯಾವುದೇ ಸಂಘಟಿತ ಅಪರಾಧದ ಸಿಂಡಿಕೇಟ್‌ನ ಸದಸ್ಯನಾಗಿ ಅಥವಾ ಅಂಥ ಸಿಂಡಿಕೇಟ್‌ನ ಪರವಾಗಿ ಒಂಟಿಯಾಗಿಯಾಗಲಿ ಅಥವಾ ಜಂಟಿಯಾಗಿಯಾಗಲಿ ಕೈಗೊಂಡಿರುವ ಕಾನೂನಿನ ಮೂಲಕ ನಿಷೇಧಿತವಾದ ಚಟುವಟಿಕೆಗಳು, ಮೂರು ವರ್ಷಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಸಂಜ್ಞೇಯ ಅಪರಾಧವಾಗಿರುವ ಅಥವಾ ಹಿಂದಿನ ಹತ್ತು ವರ್ಷಗಳ ಅವಧಿಯೊಳಗೆ ಸಕ್ಷಮ ನ್ಯಾಯಾಲಯದ ಮುಂದೆ ಆ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚು ದೋಷಾರೋಪ ಪಟ್ಟಿಗಳು ದಾಖಲಾಗಿದ್ದು, ಆ ನ್ಯಾಯಾಲಯವು ಅಂಥ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಂಡಿದೆಯೋ ಅಂಥ ಕಾರ್ಯ ಚಟುವಟಿಕೆಗಳು ಮತ್ತು ಇದರಲ್ಲಿ ಆರ್ಥಿಕ ಅಪರಾಧವು ಸೇರಿರುತ್ತದೆ;

(iii) "ಆರ್ಥಿಕ ಅಪರಾಧ"ವು ಆಪರಾಧಿಕ ನಂಬಿಕೆ ದ್ರೋಹ, ಸುಳ್ಳು ಸೃಷ್ಟನೆ, ಕರೆನ್ಸಿ-ನೋಟುಗಳು, ಬ್ಯಾಂಕ್-ನೋಟುಗಳು ಮತ್ತು ಸರ್ಕಾರಿ ಸ್ಟಾಂಪುಗಳ ಖೋಟಾ ತಯಾರಿಕೆ, ಹವಾಲ ವಹಿವಾಟು, ಸಾಮೂಹಿಕ ಮಾರುಕಟ್ಟೆ ವಂಚನೆ ಅಥವಾ ಯಾವುದೇ ರೂಪದಲ್ಲಿ ಹಣಕಾಸಿನ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಹಲವಾರು ವ್ಯಕ್ತಿಗಳನ್ನು ವಂಚಿಸಲು ಯಾವುದೇ ಯೋಜನೆಯನ್ನು ನಡೆಸುವುದು ಅಥವಾ ಯಾವುದೇ ಬ್ಯಾಂಕನ್ನು ಅಥವಾ ಹಣಕಾಸು ಸಂಸ್ಥೆಯನ್ನು ಅಥವಾ ಯಾವುದೇ ಇತರ ಸಂಸ್ಥೆ ಅಥವಾ ಸಂಘಸಂಸ್ಥೆಯನ್ನು ವಂಚಿಸುವ ದೃಷ್ಟಿಯಿಂದ ಯಾವುದೇ ರೀತಿಯಲ್ಲಿ ಮಾಡುವ ಯಾವುದೇ ಕೃತ್ಯವನ್ನು ಒಳಗೊಂಡಿರುತ್ತದೆ.

(2) ಸಂಘಟಿತ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು,-

(ಎ) ಅಂಥ ಅಪರಾಧವು ಯಾರೇ ವ್ಯಕ್ತಿಯ ಮರಣಕ್ಕೆ ಕಾರಣವಾಗಿದ್ದರೆ, ಆತನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಐದು ವರ್ಷಗಳಿಗಿಂತ ಕಡಿಮೆಯಿರದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಸಂಘಟಿತ ಅಪರಾಧವನ್ನು ಮಾಡುವುದಕ್ಕೆ ದುಷ್ಪ್ರೇರೇಪಿಸುವ, ಪ್ರಯತ್ನಿಸುವ, ಸಂಚು ರೂಪಿಸುವ ಅಥವಾ ಉದ್ದೇಶಪೂರ್ವಕವಾಗಿ ಅನುವು ಮಾಡಿಕೊಡುವ ಅಥವಾ ಸಂಘಟಿತ ಅಪರಾಧದ ಯಾವುದೇ ಪೂರ್ವಸಿದ್ಧತಾ ಕೃತ್ಯದಲ್ಲಿ ಅನ್ಯಥಾ ತೊಡಗಿರುವ ಯಾರೇ ವ್ಯಕ್ತಿಯು, ಐದು ವರ್ಷಗಳಿಗಿಂತ ಕಡಿಮೆಯಿರದ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಸಂಘಟಿತ ಅಪರಾಧದ ಸಿಂಡಿಕೇಟ್‌ನ ಸದಸ್ಯರಾಗಿರುವ ಯಾರೇ ವ್ಯಕ್ತಿಯು, ಐದು ವರ್ಷಗಳಿಗಿಂತ ಕಡಿಮೆಯಿರದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಸಂಘಟಿತ ಅಪರಾಧದ ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿ ಆಶ್ರಯಕೊಡುವ ಅಥವಾ ಬಚ್ಚಿಡುವ ಯಾರೇ ವ್ಯಕ್ತಿಗೆ, ಮೂರು ವರ್ಷಗಳಿಗಿಂತ ಕಡಿಮೆಯಿರದ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ಅಪರಾಧಿಯ ಸಂಗಾತಿಯು ಆಶ್ರಯ ನೀಡುವ ಅಥವಾ ಬಚ್ಚಿಡುವ ಯಾವುದೇ ಸಂದರ್ಭದಲ್ಲಿ ಈ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(6) ಯಾವುದೇ ಸಂಘಟಿತ ಅಪರಾಧ ಮಾಡುವುದರಿಂದ ಅಥವಾ ಸಂಘಟಿತ ಅಪರಾಧದ ಉತ್ಪತ್ತಿಗಳಿಂದ ಪಡೆದ ಅಥವಾ ಬಂದ ಅಥವಾ ಸಂಘಟಿತ ಅಪರಾಧದ ಮೂಲಕ ಆರ್ಜಿಸಿರುವ ಯಾವುದೇ ಸ್ವತ್ತಿನ ಸ್ವಾಧೀನತೆ ಹೊಂದಿರುವ ಯಾರೇ ವ್ಯಕ್ತಿಯು ಮೂರು ವರ್ಷಗಳಿಗಿಂತ ಕಡಿಮೆಯಿರದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(7) ಸಂಘಟಿತ ಅಪರಾಧದ ಸಿಂಡಿಕೇಟಿನ ಸದಸ್ಯರ ಪರವಾಗಿ ಯಾರೇ ವ್ಯಕ್ತಿಯು ಅಥವಾ ಯಾವುದೇ ಸಮಯದಲ್ಲಿ, ಚರ ಅಥವಾ ಸ್ಥಿರ ಆಸ್ತಿಯನ್ನು ಹೊಂದಿದ್ದು, ಅದಕ್ಕೆ ತೃಪ್ತಿಕರವಾಗಿ ಲೆಕ್ಕವನ್ನು ನೀಡಲು ಆತನಿಗೆ ಸಾಧ್ಯವಾಗದಿದ್ದಲ್ಲಿ, ಆತನು ಮೂರು ವರ್ಷಗಳಿಗಿಂತ ಕಡಿಮೆಯಿರದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**112. ಸಣ್ಣಪುಟ್ಟ ಸಂಘಟಿತ ಅಪರಾಧ.-** (1) ಒಂದು ಗುಂಪು ಅಥವಾ ಗ್ಯಾಂಗ್‌ನ ಸದಸ್ಯನಾಗಿದ್ದ ಯಾರೇ ವ್ಯಕ್ತಿಯು, ಒಂಟಿಯಾಗಿಯಾಗಲಿ ಅಥವಾ ಜಂಟಿಯಾಗಿಯಾಗಲಿ ಕಳ್ಳತನ, ಕಸಿದುಕೊಳ್ಳುವಿಕೆ, ವಂಚನೆ, ಟಿಕೆಟ್‌ಗಳ ಅನಧಿಕೃತ ಮಾರಾಟ, ಅನಧಿಕೃತ ಬಾಜಿ ಕಟ್ಟುವುದು ಅಥವಾ ಜೂಜಾಡುವುದು, ಪಬ್ಲಿಕ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಮಾರಾಟ ಮಾಡುವ ಕೃತ್ಯ ಅಥವಾ ಅಂಥದೇ ಯಾವುದೇ ಇತರ ಆಪರಾಧಿಕ ಕೃತ್ಯವನ್ನು ಮಾಡುವುದು ಸಣ್ಣಪುಟ್ಟ ಸಂಘಟಿತ ಅಪರಾಧವನ್ನು ಮಾಡುವುದು ಎಂದು ಹೇಳಲಾಗುತ್ತದೆ.

*ವಿವರಣೆ.-* ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಕಳ್ಳತನ" ಎಂಬುದು ಚಾಲಾಕಿ ಕಳ್ಳತನ, ವಾಹನದಿಂದ, ವಾಸದ ಮನೆಯಿಂದ ಅಥವಾ ವ್ಯಾಪಾರದ ಆವರಣಗಳಿಂದ ಮಾಡಿದ ಕಳ್ಳತನ, ಸರಕು ಕಳ್ಳತನ, ಜೇಬುಗಳ್ಳತನ, ಕಾರ್ಡ್ ಸ್ಕಿಮ್ಮಿಂಗ್, ಶಾಪ್ ಲಿಫ್ಟಿಂಗ್ ಮುಖಾಂತರ ಕಳ್ಳತನ ಮತ್ತು ಎಟಿಎಂ ಕಳ್ಳತನವನ್ನು ಒಳಗೊಳ್ಳುತ್ತದೆ.

(2) ಯಾವುದೇ ಸಣ್ಣಪುಟ್ಟ ಸಂಘಟಿತ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು, ಒಂದು ವರ್ಷಕ್ಕಿಂತ ಕಡಿಮೆಯಲ್ಲದ, ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**113. ಭಯೋತ್ಪಾದಕ ಕೃತ್ಯ.-** (1) ಯಾರೇ ವ್ಯಕ್ತಿಯು, ಭಾರತದ ಏಕತೆ, ಅಖಂಡತೆ, ಸಾರ್ವಭೌಮತೆ, ಭದ್ರತೆ ಅಥವಾ ಆರ್ಥಿಕ ಭದ್ರತೆಗೆ ಬೆದರಿಕೆಯೊಡ್ಡುವ ಉದ್ದೇಶದಿಂದ ಅಥವಾ ಬೆದರಿಕೆಯೊಡ್ಡುವ ಸಂಭವದಿಂದ ಅಥವಾ ಭಾರತದ ಜನರಲ್ಲಿ ಅಥವಾ ವಿದೇಶದ ಯಾವುದೇ ವರ್ಗದ ಜನರಲ್ಲಿ ಆತಂಕವನ್ನು ಉಂಟುಮಾಡುವ ಉದ್ದೇಶದಿಂದ ಅಥವಾ ಆತಂಕವನ್ನು ಉಂಟುಮಾಡುವ ಸಂಭವದಿಂದ ಬಳಸುವ ಮೂಲಕ, ಎಂದರೆ:-

(ಎ) ಬಾಂಬ್‌ಗಳು, ಡೈನಮೈಟ್ ಅಥವಾ ಇತರ ಸ್ಫೋಟಕ ವಸ್ತುಗಳು ಅಥವಾ ಸುಲಭದಹ್ಯ ವಸ್ತುಗಳು ಅಥವಾ ಬಂದೂಕುಗಳು ಅಥವಾ ಇತರ ಮಾರಕ ಶಸ್ತ್ರಾಸ್ತ್ರಗಳು ಅಥವಾ ವಿಷಕಾರಿ ಅಥವಾ ಅಪಾಯಕಾರಿ ಅನಿಲಗಳು ಅಥವಾ ಇತರ ರಾಸಾಯನಿಕಗಳನ್ನು ಅಥವಾ ಪ್ರಕೃತಿಯಲ್ಲಿನ ಯಾವುದೇ ಹಾನಿಕಾರಕ ಸ್ವರೂಪದ ವಸ್ತುವನ್ನು (ಜೈವಿಕ, ವಿಕಿರಣಶೀಲ, ಪರಮಾಣು ಅಥವಾ ಅನ್ಯಥಾ) ಬಳಸುವ ಮೂಲಕ ಅಥವಾ,-

(i) ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಮರಣ ಅಥವಾ ಕ್ಷತಿಯನ್ನುಂಟುಮಾಡುವ ಸಂಭವವಿರುವ; ಅಥವಾ

(ii) ಸ್ವತ್ತಿನ ನಷ್ಟ ಅಥವಾ ಹಾನಿ ಅಥವಾ ನಾಶ ಮಾಡುವ ಸಂಭವವಿರುವ; ಅಥವಾ

(iii) ಭಾರತದಲ್ಲಿ ಅಥವಾ ಯಾವುದೇ ವಿದೇಶದಲ್ಲಿ ಸಮುದಾಯದ ಜೀವನಕ್ಕೆ ಅಗತ್ಯವಾದ ಯಾವುದೇ ಸರಬರಾಜು ಅಥವಾ ಸೇವೆಗಳಿಗೆ ಅಡ್ಡಿಪಡಿಸುವ ಸಂಭವವಿರುವ; ಅಥವಾ

(iv) ಖೋಟಾ ಭಾರತೀಯ ಕಾಗದದ ಕರೆನ್ಸಿ, ನಾಣ್ಯ ಅಥವಾ ಯಾವುದೇ ಇತರ ವಸ್ತುಗಳ ತಯಾರಿಕೆ ಅಥವಾ ಕಳ್ಳಸಾಗಣೆ ಅಥವಾ ಪ್ರಸರಣದ ಮೂಲಕ ಭಾರತದ ಹಣಕಾಸಿನ ಸುಸ್ಥಿರತೆಗೆ ಹಾನಿಯನ್ನುಂಟು ಮಾಡುವ ಸಂಭವವಿರುವ; ಅಥವಾ

(v) ಭಾರತದ ರಕ್ಷಣೆಗಾಗಿ ಅಥವಾ ಭಾರತ ಸರ್ಕಾರದ, ಯಾವುದೇ ರಾಜ್ಯ ಸರ್ಕಾರದ ಅಥವಾ ಅದರ ಯಾವುದೇ ಏಜೆನ್ಸಿಗಳ ಯಾವುದೇ ಇತರ ಉದ್ದೇಶಗಳಿಗೆ ಸಂಬಂಧಿಸಿದಂತೆ ಬಳಸಲಾದ ಅಥವಾ ಬಳಸಲು ಉದ್ದೇಶಿಸಲಾದ ಭಾರತದಲ್ಲಿ ಅಥವಾ ವಿದೇಶದಲ್ಲಿನ ಯಾವುದೇ ಸ್ವತ್ತಿನ ಹಾನಿ ಅಥವಾ ನಾಶ ಮಾಡುವ ಸಂಭವವಿರುವ

- ಸ್ವರೂಪದ ಇತರ ಯಾವುವೇ ಸಾಧನಗಳ ಮೂಲಕ ಮಾಡುವ; ಅಥವಾ

(ಬಿ) ಆಪರಾಧಿಕ ಬಲಪ್ರಯೋಗದ ಮೂಲಕ ಭಯದಲ್ಲಿಡುವ ಅಥವಾ ಆಪರಾಧಿಕ ಬಲಪ್ರಯೋಗದ ಪ್ರದರ್ಶನ ಅಥವಾ ಹಾಗೆ ಮಾಡಲು ಪ್ರಯತ್ನಿಸುವ ಅಥವಾ ಯಾವುದೇ ಸಾರ್ವಜನಿಕ ಕಾರ್ಯನಿರ್ವಾಹಕನ ಮರಣಕ್ಕೆ ಕಾರಣವಾಗುವ ಅಥವಾ ಯಾರೇ ಸಾರ್ವಜನಿಕ ಕಾರ್ಯನಿರ್ವಾಹಕನ ಮರಣಕ್ಕೆ ಕಾರಣವಾಗುವ ಪ್ರಯತ್ನಗಳನ್ನು ಮಾಡುವ; ಅಥವಾ

(ಸಿ) ಯಾರೇ ವ್ಯಕ್ತಿಯನ್ನು ಬಂಧಿಸಿಡುವ, ಅಪಹರಿಸುವ ಅಥವಾ ಬಲಾತ್ ಅಪಹರಣ ಮಾಡುವ ಮತ್ತು ಅಂಥ ವ್ಯಕ್ತಿಗೆ ಕೊಲೆ ಬೆದರಿಕೆ ಹಾಕುವ ಅಥವಾ ಗಾಯಗೊಳಿಸುವ ಅಥವಾ ಭಾರತ ಸರ್ಕಾರವನ್ನು, ಯಾವುದೇ ರಾಜ್ಯ ಸರ್ಕಾರವನ್ನು ಅಥವಾ ವಿದೇಶಿ ಸರ್ಕಾರವನ್ನು ಅಥವಾ ಅಂತಾರಾಷ್ಟ್ರೀಯ ಅಥವಾ ಅಂತರ-ಸರ್ಕಾರಿ ಸಂಸ್ಥೆಯನ್ನು ಅಥವಾ ಯಾರೇ ಇತರ ವ್ಯಕ್ತಿಯನ್ನು ಯಾವುದೇ ಕೃತ್ಯವನ್ನು ಮಾಡಲು ಅಥವಾ ಮಾಡದಂತೆ ಒತ್ತಾಯಿಸುವ ಸಲುವಾಗಿ ಯಾವುದೇ ಕೃತ್ಯವನ್ನು ಮಾಡುವ

- ಯಾವುದೇ ಕೃತ್ಯವು ಭಯೋತ್ಪಾದಕ ಕೃತ್ಯವಾಗುತ್ತದೆ.

*ವಿವರಣೆ.*- ಈ ಉಪಪ್ರಕರಣದ ಉದ್ದೇಶಕ್ಕಾಗಿ,-

(ಎ) "ಸಾರ್ವಜನಿಕ ಕಾರ್ಯನಿರ್ವಾಹಕ" ಎಂದರೆ, ಸಾಂವಿಧಾನಿಕ ಪ್ರಾಧಿಕಾರಿ ಅಥವಾ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಸಾರ್ವಜನಿಕ ಕಾರ್ಯನಿರ್ವಾಹಕ ಎಂದು ಅಧಿಸೂಚಿಸಿದ ಯಾರೇ ಇತರ ಕಾರ್ಯನಿರ್ವಾಹಕ;

(ಬಿ) "ಖೋಟಾ ಭಾರತೀಯ ಕರೆನ್ಸಿ" ಎಂದರೆ, ಅಧಿಕೃತ ಅಥವಾ ಅಧಿಸೂಚಿತ ವಿಧಿವಿಜ್ಞಾನ ಪ್ರಾಧಿಕಾರವು ಪರಿಶೀಲಿಸಿದ ನಂತರ ಅಂಥ ಕರೆನ್ಸಿಯು ಭಾರತೀಯ ಕರೆನ್ಸಿಯ ಪ್ರಮುಖ ಭದ್ರತಾ ಲಕ್ಷಣಗಳನ್ನು ಅನುಕರಿಸುತ್ತದೆ ಅಥವಾ ಹೋಲುತ್ತದೆ ಎಂದು ಘೋಷಿಸಬಹುದಾದ ಖೋಟಾ ಕರೆನ್ಸಿ.

(2) ಭಯೋತ್ಪಾದಕ ಕೃತ್ಯವನ್ನು ಮಾಡುವ ಯಾರೇ ವ್ಯಕ್ತಿಯು,-

(ಎ) ಅಂಥ ಅಪರಾಧವು ಯಾರೇ ವ್ಯಕ್ತಿಯ ಮರಣಕ್ಕೆ ಕಾರಣವಾಗಿದ್ದರೆ, ಆತನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಐದು ವರ್ಷಗಳಿಗಿಂತ ಕಡಿಮೆಯಿರದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಭಯೋತ್ಪಾದಕ ಕೃತ್ಯವೊಂದನ್ನು ಎಸಗಲು ಅಥವಾ ಭಯೋತ್ಪಾದಕ ಕೃತ್ಯವನ್ನು ಎಸಗುವುದಕ್ಕೆ ಪೂರ್ವಸಿದ್ಧತೆಯಾಗಿ ಯಾವುದೇ ಕೃತ್ಯವನ್ನು ಎಸಗಲು ಸಂಚು ರೂಪಿಸುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಭಯೋತ್ಪಾದಕ ಕೃತ್ಯವನ್ನು ಸಮರ್ಥಿಸಿಕೊಳ್ಳುವ, ದುಷ್ಪ್ರೇರಿಸುವ, ಸಲಹೆ ನೀಡುವ ಅಥವಾ ಪ್ರಚೋದಿಸುವ, ಪ್ರತ್ಯಕ್ಷವಾಗಿ ಅಥವಾ ಗೊತ್ತಿದ್ದೂ ಅನುಕೂಲ ಕಲ್ಪಿಸುವ ಯಾರೇ ವ್ಯಕ್ತಿಯು, ಐದು ವರ್ಷಗಳಿಗಿಂತ ಕಡಿಮೆಯಿರದ, ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ **ಅವಧಿಯ** ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಭಯೋತ್ಪಾದಕ ಕೃತ್ಯಕ್ಕೆ ಸಂಬಂಧಿಸಿದಂತೆ ತರಬೇತಿಯನ್ನು ನೀಡುವುದಕ್ಕಾಗಿ ಯಾವುದೇ ಶಿಬಿರ ಅಥವಾ ಶಿಬಿರಗಳನ್ನು ಆಯೋಜಿಸುವ ಅಥವಾ ಆಯೋಜಿಸುವಂತೆ ಮಾಡುವ ಅಥವಾ ಭಯೋತ್ಪಾದಕ ಕೃತ್ಯವನ್ನು ಮಾಡುವುದಕ್ಕಾಗಿ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನೇಮಿಸಿಕೊಳ್ಳುವ ಅಥವಾ ನೇಮಿಸಿಕೊಳ್ಳುವಂತೆ ಮಾಡುವ ಯಾರೇ ವ್ಯಕ್ತಿಯು, ಐದು ವರ್ಷಗಳಿಗಿಂತ ಕಡಿಮೆಯಿರದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಭಯೋತ್ಪಾದಕ ಕೃತ್ಯದಲ್ಲಿ ತೊಡಗಿರುವ ಸಂಸ್ಥೆಯೊಂದರ ಸದಸ್ಯನಾಗಿರುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಅಂಥ ವ್ಯಕ್ತಿಯು ಭಯೋತ್ಪಾದಕ ಕೃತ್ಯವನ್ನು ಮಾಡಿದ್ದಾನೆಂದು ತಿಳಿದೂ, ಯಾರೇ ವ್ಯಕ್ತಿಗೆ ಸ್ವಯಂಪ್ರೇರಣೆಯಿಂದ ಆಶ್ರಯ ನೀಡುವ ಅಥವಾ ಮರೆಮಾಚುವ ಅಥವಾ ಆಶ್ರಯ ನೀಡಲು ಅಥವಾ ಮರೆಮಾಚಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಮೂರು ವರ್ಷಗಳಿಗಿಂತ ಕಡಿಮೆಯಿರದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ಅಪರಾಧಿಯ ಸಂಗಾತಿಯು ಆಶ್ರಯ ನೀಡುವ ಅಥವಾ ಬಚ್ಚಿಡುವ ಯಾವುದೇ ಸಂದರ್ಭದಲ್ಲಿ ಈ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(7) ಯಾವುದೇ ಭಯೋತ್ಪಾದಕ ಕೃತ್ಯ ಮಾಡುವುದರಿಂದ ಪಡೆದ ಅಥವಾ ಬಂದ ಅಥವಾ ಭಯೋತ್ಪಾದಕ ಕೃತ್ಯದ ಮೂಲಕ ಆರ್ಜಿಸಿರುವ ಯಾವುದೇ ಸ್ವತ್ತನ್ನು ತಿಳಿದೂ ಸ್ವಾಧೀನತೆ ಹೊಂದಿರುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಸಂದೇಹಗಳ ನಿವಾರಣೆಗಾಗಿ, ಪೊಲೀಸ್ ವರಿಷ್ಠಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯು ಈ ಪ್ರಕರಣದ ಮೇರೆಗೆ ಅಥವಾ ಕಾನೂನುಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (1967ರ 37)ರ ಮೇರೆಗೆ ಪ್ರಕರಣವನ್ನು ದಾಖಲಿಸಬೇಕೇ ಎಂದು ನಿರ್ಧರಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

***ಗಾಯ***

**114. ಗಾಯ.-** ಯಾರೇ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ದೈಹಿಕ ನೋವು, ಕಾಯಿಲೆ ಅಥವಾ ದುರ್ಬಲತೆಯನ್ನು ಉಂಟು ಮಾಡಿದರೆ ಅವನು ಗಾಯವನ್ನುಂಟು ಮಾಡಿದ್ದಾನೆಂದು ಹೇಳಲಾಗುತ್ತದೆ.

**115. ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಗೆ ಗಾಯವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಆ ಮೂಲಕ ಆ ವ್ಯಕ್ತಿಗೆ ಗಾಯವನ್ನುಂಟು ಮಾಡುವ ಸಂಭವವಿದೆಯೆಂಬುದೂ ಗೊತ್ತಿದ್ದೂ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಅದರಿಂದಾಗಿ ಆ ವ್ಯಕ್ತಿಗೆ ಗಾಯ ಉಂಟಾದರೆ, ಅವನು ìಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದ್ದಾನೆî ಎಂದು ಹೇಳಲಾಗುತ್ತದೆ.

(2) ಯಾರೇ ವ್ಯಕ್ತಿಯು, 122ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಉಪಬಂಧಿಸಲಾದ ಸಂದರ್ಭವನ್ನು ಹೊರತುಪಡಿಸಿ, ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಹತ್ತು **ಸಾವಿರ** ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**116. ತೀವ್ರ ಗಾಯ.-** ಕೆಳಕಂಡ ಬಗೆಯ ಗಾಯಗಳನ್ನು ಮಾತ್ರ "ತೀವ್ರ" ಗಾಯಗಳೆಂದು ಕರೆಯಲಾಗುತ್ತದೆ, ಎಂದರೆ:-

(ಎ) ಪುರುಷತ್ವಹರಣ;

(ಬಿ) ಎರಡು ಕಣ್ಣುಗಳ ಪೈಕಿ ಯಾವುದೇ ಒಂದು ಕಣ್ಣಿನ ದೃಷ್ಟಿ ಶಕ್ತಿಯನ್ನು ಶಾಶ್ವತವಾಗಿ ಕಳೆಯುವುದು;

(ಸಿ) ಎರಡು ಕಿವಿಗಳ ಪೈಕಿ ಯಾವುದೇ ಒಂದು ಕಿವಿಯ ಶ್ರವಣ ಶಕ್ತಿಯನ್ನು ಶಾಶ್ವತವಾಗಿ ಕಳೆಯುವುದು;

(ಡಿ) ಯಾವುದೇ ಅವಯವವನ್ನು ಅಥವಾ ಕೀಲನ್ನು ಕಳಚಿ ಹಾಕುವುದು;

(ಇ) ಯಾವುದೇ ಅವಯವದ ಅಥವಾ ಕೀಲಿನ ಶಕ್ತಿಗಳನ್ನು ನಾಶಗೊಳಿಸುವುದು ಅಥವಾ ಶಾಶ್ವತವಾಗಿ ಊನಗೊಳಿಸುವುದು;

(ಎಫ್) ತಲೆಯನ್ನು ಅಥವಾ ಮುಖವನ್ನು ಶಾಶ್ವತವಾಗಿ ವಿರೂಪಗೊಳಿಸುವುದು;

(ಜಿ) ಮೂಳೆಯ ಅಥವಾ ಹಲ್ಲಿನ ಮುರಿತ ಅಥವಾ ಸ್ಥಳಾಂತರಣ;

(ಹೆಚ್) ಪ್ರಾಣವನ್ನು ಅಪಾಯಕ್ಕೀಡುಮಾಡುವ ಅಥವಾ ಗಾಯ ಹೊಂದಿದವನಿಗೆ ಹದಿನೈದು ದಿನಗಳವರೆಗೆ ತೀವ್ರವಾದ ದೈಹಿಕ ನೋವುಂಟಾಗುವಂತೆ ಮಾಡುವ ಅಥವಾ ಅವನು ತನ್ನ ಸಾಮಾನ್ಯ ಕೆಲಸಕಾರ್ಯಗಳನ್ನು ಮಾಡದಂತೆ ಆತನನ್ನು ಅಶಕ್ತಗೊಳಿಸುವ ಯಾವುದೇ ಗಾಯ.

**117. ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, ತಾನು ಮಾಡಬೇಕೆಂದು ಉದ್ದೇಶಿಸಿರುವ ಅಥವಾ ಉಂಟುಮಾಡುವ ಸಂಭವವಿರುವ ಗಾಯವು ತೀವ್ರವಾದ ಗಾಯವಾಗುತ್ತದೆಂಬುದು ಗೊತ್ತಿದ್ದರೂ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ ಮತ್ತು ಅವನು ಉಂಟು ಮಾಡಿದ ಗಾಯವು ತೀವ್ರವಾದ ಗಾಯವಾಗಿದ್ದರೆ "ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡಿದ್ದಾನೆ" ಎಂದು ಹೇಳಲಾಗುತ್ತದೆ.

*ವಿವರಣೆ.-* ಒಬ್ಬ ವ್ಯಕ್ತಿಯು ತೀವ್ರ ಗಾಯವನ್ನುಂಟು ಮಾಡಿರುವ ಮತ್ತು ತೀವ್ರವಾದ ಗಾಯವನ್ನುಂಟು ಮಾಡುವ ಉದ್ದೇಶ ಹೊಂದಿರುವ ಅಥವಾ ಉಂಟುಮಾಡುವ ಸಂಭವವಿದೆಯೆಂಬುದು ಗೊತ್ತಿರುವ ಸಂದರ್ಭಗಳಲ್ಲಿ ಹೊರತು ಅವನು ತೀವ್ರ ಗಾಯವನ್ನುಂಟು ಮಾಡುತ್ತಾನೆಂದು ಹೇಳಲಾಗುವುದಿಲ್ಲ. ಆದರೆ ಅವನು ಒಂದು ಬಗೆಯ ತೀವ್ರವಾದ ಗಾಯವನ್ನುಂಟು ಮಾಡಲು ಉದ್ದೇಶಿಸಿದ್ದು ಅಥವಾ ಆ ಗಾಯವನ್ನು ಉಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ, ವಾಸ್ತವವಾಗಿ ಬೇರೊಂದು ಬಗೆಯ ತೀವ್ರವಾದ ಗಾಯವನ್ನುಂಟು ಮಾಡಿದರೆ ಅವನು ಸ್ವಯಿಚ್ಛೆಯಿಂದ ತೀವ್ರವಾದ ಗಾಯವನ್ನುಂಟು ಮಾಡಿದ್ದಾನೆಂದು ಹೇಳಲಾಗುತ್ತದೆ.

*ದೃಷ್ಟಾಂತ*

'ಎ'ನು 'ಜೆಡ್'ನ ಮುಖವನ್ನು ಶಾಶ್ವತವಾಗಿ ವಿರೂಪಗೊಳಿಸುವ ಉದ್ದೇಶದಿಂದ ಅಥವಾ ಹಾಗೆ ವಿರೂಪಗೊಳ್ಳುವ ಸಂಭವವಿದೆಯೆಂಬುದು ಗೊತ್ತಿದ್ದೂ 'ಜೆಡ್'ನಿಗೆ ಒಂದು ಏಟನ್ನು ಹೊಡೆಯುತ್ತಾನೆ. ಅದರಿಂದ 'ಜೆಡ್'ನ ಮುಖವು ಶಾಶ್ವತವಾಗಿ ವಿರೂಪಗೊಳ್ಳುವುದಿಲ್ಲ. ಆದರೆ 'ಜೆಡ್'ನು ಹದಿನೈದು ದಿನಗಳ ಕಾಲ ತೀವ್ರವಾದ ದೈಹಿಕ ನೋವನ್ನು ಅನುಭವಿಸಬೇಕಾಗುತ್ತದೆ. ಆದಕಾರಣ 'ಎ'ನು ಸ್ವಯಿಚ್ಛೆಯಿಂದ ಗಾಯವನ್ನು ಉಂಟು ಮಾಡಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯು, 122ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಉಪಬಂಧಿಸಲಾದ ಸಂದರ್ಭವನ್ನು ಹೊರತುಪಡಿಸಿ, ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಏಳು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಅಪರಾಧ ಎಸಗಿದಲ್ಲಿ ಅಥವಾ ಅಂಥ ಅಪರಾಧ ಎಸಗುವ ಕ್ರಮದಲ್ಲಿ ಯಾರೇ ವ್ಯಕ್ತಿಗೆ, ಆ ವ್ಯಕ್ತಿಯನ್ನು ಶಾಶ್ವತ ಅಂಗವೈಕಲ್ಯ ಅಥವಾ **ಸತತ ನಿಶ್ಚೇಷ್ಟಿತ** ಸ್ಥಿತಿಗೆ ದೂಡಲು ಕಾರಣವಾಗುವ ಯಾವುದೇ ಗಾಯವನ್ನುಂಟು ಮಾಡಿದರೆ, ಹತ್ತು **ವರ್ಷಗಳಿಗಿಂತ ಕಡಿಮೆಯಿರದ, ಆದರೆ, ಆಜೀವ ಕಾರಾವಾಸಕ್ಕೆ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು.**

(4) ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಹುಟ್ಟಿದ ಸ್ಥಳ, ಭಾಷೆ, ವೈಯಕ್ತಿಕ ನಂಬಿಕೆಯ ಆಧಾರದ ಮೇಲೆ ಅಥವಾ ಇನ್ನಾವುದೇ ಅದೇ ರೀತಿಯ ಆಧಾರದ ಮೇಲೆ, ಐದು ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಒಟ್ಟಿಗೆ ಸೇರಿ ತೀವ್ರ ಗಾಯವುಂಟು ಮಾಡಿದಾಗ ಅಂಥ ಗುಂಪಿನ ಪ್ರತಿಯೊಬ್ಬ ಸದಸ್ಯನೂ ತೀವ್ರ ಗಾಯವನ್ನುಂಟು ಮಾಡಿದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಏಳು **ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ** ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**118. ಅಪಾಯಕಾರಿ ಆಯುಧಗಳಿಂದ ಅಥವಾ ಸಾಧನಗಳಿಂದ ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, 122ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಉಪಬಂಧಿಸಲಾದ ಸಂದರ್ಭವನ್ನು ಹೊರತುಪಡಿಸಿ, ಗುಂಡು ಹಾರಿಸುವ, ಇರಿಯುವ ಅಥವಾ ಕತ್ತರಿಸುವ ಯಾವುದೇ ಉಪಕರಣದಿಂದ ಅಥವಾ ಯಾವ ಉಪಕರಣವನ್ನು ಅಕ್ರಮ ಆಯುಧವಾಗಿ ಬಳಸಿದರೆ ಮರಣವನ್ನುಂಟು ಮಾಡುವ ಸಂಭವವಿದೆಯೋ ಆ ಯಾವುದೇ ಉಪಕರಣದಿಂದ ಅಥವಾ ಬೆಂಕಿಯಿಂದ ಅಥವಾ ಯಾವುದೇ ಕಾದ ವಸ್ತುವಿನಿಂದ ಅಥವಾ ಯಾವುದೇ ವಿಷದಿಂದ ಅಥವಾ ಕ್ಷೀಣಕಾರಕ ವಸ್ತುವಿನಿಂದ ಅಥವಾ ಯಾವುದೇ ಸ್ಫೋಟಕ ವಸ್ತುವಿನಿಂದ ಅಥವಾ ಉಸಿರು ತೆಗೆದುಕೊಂಡರೆ, ನುಂಗಿದರೆ ಅಥವಾ ರಕ್ತಕ್ಕೆ ಸೇರಿದರೆ, ಮಾನವ ದೇಹಕ್ಕೆ ಅಪಾಯಕಾರಿಯಾದ ಯಾವುದೇ ವಸ್ತುವಿನಿಂದ ಅಥವಾ ಯಾವುದೇ ಪ್ರಾಣಿಯ ಮೂಲಕ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) **ಯಾರೇ ವ್ಯಕ್ತಿಯು,** 122ನೇ **ಪ್ರಕರಣದ** (2)ನೇ ಉಪಪ್ರಕರಣದ ಮೂಲಕ ಉಪಬಂಧಿಸಲಾದ ಸಂದರ್ಭವನ್ನು ಹೊರತುಪಡಿಸಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ವಿಧಾನದಿಂದ **ಸ್ವಯಿಚ್ಛೆಯಿಂದ ತೀವ್ರವಾದ ಗಾಯವನ್ನುಂಟು ಮಾಡಿದರೆ,** ಅವನು ಆಜೀವ ಕಾರಾವಾಸ ಅಥವಾ ಒಂದು **ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ** ಹತ್ತು **ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

**119. ಸ್ವತ್ತನ್ನು ಬಲಾದ್ಗ್ರಹಣ ಮಾಡಲು ಅಥವಾ ಕಾನೂನುಬಾಹಿರವಾದ ಕೃತ್ಯವನ್ನು ಮಾಡುವಂತೆ ಒತ್ತಾಯಿಸಲು ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, ಗಾಯಗೊಂಡವನಿಂದ ಅಥವಾ ಗಾಯಗೊಂಡವನಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯಿಂದ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ಬಲಾದ್ಗ್ರಹಣ ಮಾಡುವ ಅಥವಾ ಗಾಯಗೊಂಡವನನ್ನು ಅಥವಾ ಗಾಯಗೊಂಡವನಲ್ಲಿ ಹಿತಾಸಕ್ತಿಯುಳ್ಳವನನ್ನು ಕಾನೂನುಬಾಹಿರವಾದ ಅಥವಾ ಅಪರಾಧ ಮಾಡುವುದಕ್ಕೆ ಅನುಕೂಲ ಕಲ್ಪಿಸಬಹುದಾದ ಯಾವುದೇ ಕೃತ್ಯವನ್ನು ಮಾಡುವಂತೆ ಒತ್ತಾಯಿಸುವ ಉದ್ದೇಶದಿಂದ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಉದ್ದೇಶಕ್ಕಾಗಿ **ಸ್ವಯಿಚ್ಛೆಯಿಂದ ತೀವ್ರವಾದ ಗಾಯವನ್ನುಂಟು ಮಾಡಿದರೆ,** ಆತನು ಆಜೀವ ಕಾರಾವಾಸ ಅಥವಾ ಹತ್ತು **ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

**120. ಬಲವಂತ ಮಾಡಿ ತಪ್ಪೊಪ್ಪಿಗೆಯನ್ನು ಪಡೆಯಲು ಅಥವಾ ಸ್ವತ್ತನ್ನು ವಾಪಸ್ಸು ಕೊಡುವಂತೆ ಒತ್ತಾಯಿಸಲು ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, ಯಾವುದೇ ಅಪರಾಧವನ್ನು ಅಥವಾ ದುರ್ವರ್ತನೆಯನ್ನು ಪತ್ತೆಹಚ್ಚಲು ನೆರವಾಗುವ ಯಾವುದೇ ತಪ್ಪೊಪ್ಪಿಗೆಯನ್ನು ಅಥವಾ ಮಾಹಿತಿಯನ್ನು ಗಾಯಗೊಂಡವನಿಂದ ಅಥವಾ ಗಾಯಗೊಂಡವನಲ್ಲಿ ಹಿತಾಸಕ್ತಿ ಉಳ್ಳ ಯಾರೇ ವ್ಯಕ್ತಿಯಿಂದ ಬಲವಂತವಾಗಿ ಪಡೆಯುವ ಉದ್ದೇಶದಿಂದ ಅಥವಾ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ವಾಪಸ್ಸು ಕೊಡುವಂತೆ ಅಥವಾ ವಾಪಸ್ಸು ಕೊಡಿಸುವಂತೆ ಮಾಡಲು ಅಥವಾ ಯಾವುದೇ ಕ್ಲೇಮನ್ನು ಅಥವಾ ತಗಾದೆಯನ್ನು ಪೂರೈಸುವಂತೆ ಮಾಡಲು ಅಥವಾ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ವಾಪಸ್ಸು ಪಡೆಯಲು ನೆರವಾಗುವಂಥ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಮಾಡಲು ಗಾಯಗೊಂಡವನನ್ನು ಅಥವಾ ಗಾಯಗೊಂಡಿರುವವನಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯನ್ನು ಒತ್ತಾಯಿಸುವ ಉದ್ದೇಶಕ್ಕಾಗಿ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಪೊಲೀಸ್ ಅಧಿಕಾರಿಯಾದ ‘ಎ’ನು ‘ಜೆಡ್’ನನ್ನು ಅವನೇ ಅಪರಾಧ ಮಾಡಿದ್ದಾನೆಂದು ತಪ್ಪೊಪ್ಪಿಗೆ ನೀಡುವುದನ್ನು ಒಪ್ಪಿಕೊಳ್ಳುವಂತೆ ಅವನಿಗೆ ಹಿಂಸೆ ಕೊಡುತ್ತಾನೆ. ‘ಎ’ನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗುತ್ತಾನೆ.

(ಬಿ) ಪೊಲೀಸ್ ಅಧಿಕಾರಿಯಾದ ‘ಎ’ನು ಕಳವು ಮಾಡಲಾದ ಸ್ವತ್ತನ್ನು ಎಲ್ಲಿ ಇಡಲಾಗಿದೆಯೆಂದು ತೋರಿಸಲು ಒಪ್ಪಿಕೊಳ್ಳುವಂತೆ ‘ಬಿ’ನಿಗೆ ಹಿಂಸೆ ಕೊಡುತ್ತಾನೆ. ‘ಎ’ನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗುತ್ತಾನೆ..

(ಸಿ) ರೆವಿನ್ಯೂ ಅಧಿಕಾರಿಯಾದ ‘ಎ’ನು ‘ಜೆಡ್’ನಿಂದ ಬರಬೇಕಾದ ಕಂದಾಯದ ಬಾಕಿಗಳನ್ನು ಸಂದಾಯ ಮಾಡುವಂತೆ ಆತನನ್ನು ಒತ್ತಾಯಿಸಿ ‘ಜೆಡ್’ಗೆ ಹಿಂಸೆ ಕೊಡುತ್ತಾನೆ. ‘ಎ’ನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗುತ್ತಾನೆ.

(2) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಉದ್ದೇಶಕ್ಕೆ **ಸ್ವಯಿಚ್ಛೆಯಿಂದ ತೀವ್ರವಾದ ಗಾಯವನ್ನುಂಟು ಮಾಡಿದರೆ,** ಅವನು ಹತ್ತು **ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

**121. ಲೋಕ ನೌಕರನು ತನ್ನ ಕರ್ತವ್ಯಗಳನ್ನು ನಿರ್ವಹಿಸದಂತೆ ಅವನನ್ನು ನಿರ್ಬಂಧಿಸಲು ಅವನಿಗೆ ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವನ್ನುಂಟು ಮಾಡುವುದು.-** (1) ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ತನ್ನ

ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ಆ ವ್ಯಕ್ತಿಯು ಅಥವಾ ಇತರ ಯಾರೇ ಲೋಕ ನೌಕರನು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯುವ ಅಥವಾ ಅದನ್ನು ಮಾಡದಂತೆ ನಿರ್ಬಂಧಿಸುವ ಉದ್ದೇಶದಿಂದ ಅಥವಾ ಆ ವ್ಯಕ್ತಿಯು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ಕಾನೂನುಬದ್ಧವಾಗಿ ನಿರ್ವಹಿಸುವಾಗ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕಾರ್ಯದ ಪರಿಣಾಮವಾಗಿ, ಅವನಿಗೆ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವ ಯಾರೇ ವ್ಯಕ್ತಿಯು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ಆ ವ್ಯಕ್ತಿಯು ಅಥವಾ ಇತರ ಯಾರೇ ಲೋಕ ನೌಕರನು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯುವ ಅಥವಾ ಅದನ್ನು ಮಾಡದಂತೆ ನಿರ್ಬಂಧಿಸುವ ಉದ್ದೇಶದಿಂದ ಅಥವಾ ಆ ವ್ಯಕ್ತಿಯು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ಕಾನೂನುಬದ್ಧವಾಗಿ ನಿರ್ವಹಿಸುವಾಗ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕಾರ್ಯದ ಪರಿಣಾಮವಾಗಿ, ಅವನಿಗೆ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವ ಯಾರೇ ವ್ಯಕ್ತಿಯು, ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**122. ಉದ್ರೇಕಗೊಂಡು ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವನ್ನುಂಟು ಮಾಡುವುದು.-** (1) ಯಾರೇ ವ್ಯಕ್ತಿಯು, ಗಂಭೀರ ಮತ್ತು ಹಠಾತ್ ಉದ್ರೇಕದಿಂದಾಗಿ, ಉದ್ರೇಕವನ್ನು ಉಂಟುಮಾಡಿದ ವ್ಯಕ್ತಿಯಲ್ಲದ ಯಾರೇ ಇತರ ವ್ಯಕ್ತಿಗೆ ಗಾಯವನ್ನುಂಟು ಮಾಡುವ ಉದ್ದೇಶವಿಲ್ಲದೆ ಮತ್ತು ಅಂಥ ಸಂಭವವಿದೆಯೆಂದು ತಿಳಿಯದೆ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ, ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ **ಐದು** ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ತೀವ್ರ ಮತ್ತು ಹಠಾತ್ ಉದ್ರೇಕದಿಂದಾಗಿ, ಉದ್ರೇಕವನ್ನು ಉಂಟುಮಾಡಿದ ವ್ಯಕ್ತಿಯಲ್ಲದ ಯಾರೇ ಇತರ ವ್ಯಕ್ತಿಗೆ ತೀವ್ರ ಗಾಯವನ್ನುಂಟು ಮಾಡುವ ಉದ್ದೇಶವಿಲ್ಲದೆ ಮತ್ತು ಅಂಥ ಸಂಭವವಿದೆಯೆಂದು ತಿಳಿಯದೆ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ವಿವರಣೆ.- ಈ ಪ್ರಕರಣವು 101ನೇ ಪ್ರಕರಣದ 1ನೇ ಅಪವಾದದಲ್ಲಿರುವಂಥ ಅದೇ ಪರಂತುಕಕ್ಕೆ ಒಳಪಟ್ಟಿರುತ್ತದೆ.

**123. ಅಪರಾಧವನ್ನು ಮಾಡುವ ಉದ್ದೇಶದಿಂದ ವಿಷ, ಮುಂತಾದವುಗಳ ಮೂಲಕ ಗಾಯವನ್ನುಂಟು ಮಾಡುವುದು.-** ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಗೆ ಗಾಯವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಅಪರಾಧವನ್ನು ಮಾಡುವ ಅಥವಾ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅಥವಾ ಆ ಮೂಲಕ ತಾನು ಗಾಯವನ್ನುಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ, ಆ ವ್ಯಕ್ತಿಗೆ, ಯಾವುದೇ ವಿಷವನ್ನು ಅಥವಾ ಜಡಗೊಳಿಸುವ ಅಥವಾ ಮತ್ತು ಬರಿಸುವ ಅಥವಾ ಅನಾರೋಗ್ಯಕರವಾದ ಔಷಧವನ್ನು ಅಥವಾ ಇತರ ಪದಾರ್ಥವನ್ನು ಕೊಟ್ಟರೆ ಅಥವಾ ಆ ವ್ಯಕ್ತಿಯು ತೆಗೆದುಕೊಳ್ಳುವಂತೆ ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**124. ಆ್ಯಸಿಡ್, ಇತ್ಯಾದಿಗಳನ್ನು ಬಳಸಿ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು.-** ಯಾರೇ ವ್ಯಕ್ತಿಯು, ಕ್ಷತಿ ಅಥವಾ ಗಾಯ ಉಂಟುಮಾಡುವ ಉದ್ದೇಶದಿಂದ ಅಥವಾ ಅಂಥ ಕ್ಷತಿ ಅಥವಾ ಗಾಯ ಉಂಟುಮಾಡುವ ಸಂಭವವಿದೆಯೆಂದು

ತಿಳಿದು ಯಾರೇ ವ್ಯಕ್ತಿಯ ದೇಹದ ಯಾವುದೇ ಭಾಗ ಅಥವಾ ಭಾಗಗಳ ಮೇಲೆ ಆ್ಯಸಿಡ್ ಎರಚುವ ಮೂಲಕ ಅಥವಾ ಆತನಿಗೆ ಆ್ಯಸಿಡ್ ಕುಡಿಸುವ ಮೂಲಕ ಅಥವಾ ಯಾವುದೇ ಇತರ ಸಾಧನಗಳನ್ನು ಬಳಸುವ ಮೂಲಕ ಆತನ ದೇಹಕ್ಕೆ ಶಾಶ್ವತ ಅಥವಾ ಭಾಗಶಃ ಹಾನಿಯುಂಟುಮಾಡಿದರೆ ಅಥವಾ ವಿರೂಪಗೊಳಿಸಿದರೆ ಅಥವಾ ಸುಟ್ಟರೆ ಅಥವಾ ಅಂಗವಿಕಲಗೊಳಿಸಿದರೆ ಅಥವಾ ದುರ್ಬಲಗೊಳಿಸಿದರೆ ಅಥವಾ ತೀವ್ರ ಗಾಯ ಅಥವಾ ಶಾಶ್ವತ ನಿಶ್ಚೇಷ್ಟಿತ ಸ್ಥಿತಿಯನ್ನುಂಟು ಮಾಡಿದರೆ, ಅವನು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಹಾಗೂ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಅಂಥ ಜುಲ್ಮಾನೆಯು, ಸಂತ್ರಸ್ತೆಯ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಆಕೆಗೆ ಪುನರ್ವ್ಯವಸ್ಥೆ ಕಲ್ಪಿಸಲು ಸಾಕಾಗುವಷ್ಟು ನ್ಯಾಯಯುತವಾಗಿರತಕ್ಕದ್ದು ಮತ್ತು ಸಮಂಜಸವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯನ್ನು ಸಂತ್ರಸ್ತೆಗೆ ಸಂದಾಯ ಮಾಡತಕ್ಕದ್ದು.

(2) ಯಾರೇ ವ್ಯಕ್ತಿಗೆ ಶಾಶ್ವತ ಅಥವಾ ಭಾಗಶಃ ಹಾನಿಯುಂಟುಮಾಡುವ ಅಥವಾ ವಿರೂಪಗೊಳಿಸುವ ಅಥವಾ ಸುಡುವ ಅಥವಾ ಅಂಗವಿಕಲಗೊಳಿಸುವ ಅಥವಾ ಕುರೂಪಗೊಳಿಸುವ ಅಥವಾ ದುರ್ಬಲಗೊಳಿಸುವ ಅಥವಾ ತೀವ್ರ ಗಾಯವನ್ನುಂಟುಮಾಡುವ ಉದ್ದೇಶದಿಂದ ಆ ವ್ಯಕ್ತಿಯ ಮೇಲೆ ಆ್ಯಸಿಡನ್ನು ಎರಚುವ ಅಥವಾ ಎರಚಲು ಪ್ರಯತ್ನಿಸುವ ಅಥವಾ ಆ್ಯಸಿಡನ್ನು ಕುಡಿಸಲು ಪ್ರಯತ್ನಿಸುವ ಅಥವಾ ಯಾವುದೇ ಇತರೆ ಸಾಧನಗಳನ್ನು ಬಳಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಈ ಪ್ರಕರಣದ ಉದ್ದೇಶಗಳಿಗಾಗಿ "ಆ್ಯಸಿಡ್" ಪದವು, ಯಾವ ಪದಾರ್ಥವು ಆಮ್ಲಕಾರಕ ಅಥವಾ ಕ್ಷಾರಕ ಗುಣವುಳ್ಳ ಅಥವಾ ಸುಡುವ ಸ್ವರೂಪದ್ದಾಗಿದ್ದು, ಅದು ಕಲೆಗಳನ್ನುಂಟು ಮಾಡುವುದಕ್ಕೆ ಅಥವಾ ದೇಹವನ್ನು ವಿರೂಪಗೊಳಿಸುವುದಕ್ಕೆ ಅಥವಾ ತಾತ್ಕಾಲಿಕ ಅಥವಾ ಶಾಶ್ವತ ಅಂಗವಿಕಲತೆಯನ್ನುಂಟು ಮಾಡುವುದಕ್ಕೆ ಕಾರಣವಾಗುವ ದೈಹಿಕ ಕ್ಷತಿಯನ್ನುಂಟು ಮಾಡುವ ಸಾಮರ್ಥ್ಯವಿರುವ ಯಾವುದೇ ಪದಾರ್ಥವನ್ನು ಒಳಗೊಳ್ಳುತ್ತದೆ.

*ವಿವರಣೆ 2.-* ಈ ಪ್ರಕರಣದ ಉದ್ದೇಶಗಳಿಗಾಗಿ, ಶಾಶ್ವತ ಅಥವಾ ಭಾಗಶಃ ಹಾನಿ ಅಥವಾ ವಿರೂಪತೆಯು ಅಥವಾ ಶಾಶ್ವತ ನಿಶ್ಚೇಷ್ಟಿತ ಸ್ಥಿತಿಯು ಪೂರ್ವಸ್ಥಿತಿಗೆ ಬರಲಾರದಂಥವುಗಳು ಆಗಿರಬೇಕಾದ ಅಗತ್ಯತೆ ಇಲ್ಲ.

**125. ಇತರರ ಪ್ರಾಣಕ್ಕೆ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕೃತ್ಯ.-** ಮನುಷ್ಯನ ಪ್ರಾಣಕ್ಕೆ ಅಥವಾ ಇತರರ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವಂಥ ಯಾವುದೇ ಕೃತ್ಯವನ್ನು ಯಾರೇ ವ್ಯಕ್ತಿಯು ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಮಾಡಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರದ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು, ಆದರೆ,-

(ಎ) ಗಾಯ ಉಂಟಾದರೆ, **ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು** ಸಾವಿರ **ರೂಪಾಯಿಗಳವರೆಗೆ** ವಿಸ್ತರಿಸಬಹುದಾದ **ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;**

(ಬಿ) ತೀವ್ರ ಗಾಯ ಉಂಟಾದರೆ, ಮೂರು **ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ** ಹತ್ತು ಸಾವಿರ **ರೂಪಾಯಿಗಳವರೆಗೆ** ವಿಸ್ತರಿಸಬಹುದಾದ **ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.**

***ಅಕ್ರಮವಾಗಿ ನಿರ್ಬಂಧಿಸುವುದು ಮತ್ತು ಅಕ್ರಮವಾಗಿ ಬಂಧಿಸುವುದು***

**126. ಅಕ್ರಮವಾಗಿ ನಿರ್ಬಂಧಿಸುವುದು.-** (1) ಯಾವ ಒಂದು ದಿಕ್ಕಿನಲ್ಲಿ ಹೋಗಲು ಯಾವ ವ್ಯಕ್ತಿಯು ಅಧಿಕಾರವುಳ್ಳವನಾಗಿರುವನೋ ಆ ದಿಕ್ಕಿನಲ್ಲಿ ಹೋಗದಂತೆ ಅವನನ್ನು ಸ್ವಯಿಚ್ಛೆಯಿಂದ ಅಡ್ಡಿಪಡಿಸುವ ಯಾರೇ ವ್ಯಕ್ತಿಯು, ಆ ವ್ಯಕ್ತಿಯನ್ನು ಅಕ್ರಮವಾಗಿ ನಿರ್ಬಂಧಿಸಿರುವನೆಂದು ಹೇಳಲಾಗುತ್ತದೆ.

*ಅಪವಾದ.*- ಭೂಮಿಯ ಅಥವಾ ನೀರಿನ ಮೇಲಣ ಒಂದು ಖಾಸಗಿ ದಾರಿಯನ್ನು ಅಡ್ಡಗಟ್ಟಲು ಕಾನೂನುಬದ್ಧವಾದ ಅಧಿಕಾರ ಇರುವುದೆಂದು ಸದ್ಭಾವನೆಯಿಂದ ನಂಬಿರುವ ಯಾರೇ ವ್ಯಕ್ತಿಯು ಹಾಗೆ ಅಡ್ಡಗಟ್ಟಿದರೆ, ಆ ಕೃತ್ಯವು ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಅಪರಾಧವಾಗುವುದಿಲ್ಲ.

*ದೃಷ್ಟಾಂತ*

'ಜೆಡ್'ನಿಗೆ ಹಾದು ಹೋಗಲು ಅಧಿಕಾರವಿರುವ ದಾರಿಯನ್ನು 'ಎ'ನು ಆ ದಾರಿಯನ್ನು ಅಡ್ಡಗಟ್ಟಲು ತನಗೆ ಅಧಿಕಾರವಿದೆ ಎಂದು ತಾನು ಸದ್ಭಾವನೆಯಿಂದ ನಂಬದೆ ಅಡ್ಡಗಟ್ಟುತ್ತಾನೆ. ಅದರಿಂದಾಗಿ 'ಜೆಡ್'ನು ಹಾದುಹೋಗಲು ಆಗುತ್ತಿಲ್ಲ. 'ಎ'ನು 'ಜೆಡ್'ನನ್ನು ಅಕ್ರಮವಾಗಿ ನಿರ್ಬಂಧಿಸಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯನ್ನು ಅಕ್ರಮವಾಗಿ ನಿರ್ಬಂಧಿಸಿದ್ದರೆ, **ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು** ಸಾವಿರ **ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.**

**127. ಅಕ್ರಮವಾಗಿ ಬಂಧಿಸುವುದು.-** ಯಾವ ವ್ಯಕ್ತಿಯು ಯಾರೇ ವ್ಯಕ್ತಿಯನ್ನು ಕೆಲವೊಂದು ಸುತ್ತುವರಿದಿರುವ ಎಲ್ಲೆಗಳ ಆಚೆಗೆ ಹೋಗದಂಥ ರೀತಿಯಲ್ಲಿ ತಡೆಯಲು ಅಕ್ರಮವಾಗಿ ನಿರ್ಬಂಧಿಸುವನೋ, ಅವನು ಆ ವ್ಯಕ್ತಿಯನ್ನು "ಅಕ್ರಮವಾಗಿ ಬಂಧಿಸಿಟ್ಟಿರುತ್ತಾನೆ" ಎಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) 'ಎ'ನು 'ಜೆಡ್'ನನ್ನು ಗೋಡೆಯಿಂದ ಸುತ್ತುವರಿದಿರುವ ಒಂದು ಸ್ಥಳದೊಳಗಡೆಗೆ ಹೋಗುವಂತೆ ಮಾಡಿ, ಬೀಗ ಹಾಕುತ್ತಾನೆ. ಹೀಗೆ 'ಜೆಡ್'ನು ಗೋಡೆಯ ಎಲ್ಲೆಯ ಆಚೆಗೆ ಯಾವುದೇ ದಿಕ್ಕಿನಲ್ಲಿ ಹೋಗದ ಹಾಗಾಗಿದೆ. 'ಎ'ನು 'ಜೆಡ್'ನನ್ನು ಅಕ್ರಮವಾಗಿ ಬಂಧಿಸಿಟ್ಟಿದ್ದಾನೆಂದಾಗುತ್ತದೆ.

(ಬಿ) 'ಎ'ನು ಕಟ್ಟಡದ ಹೊರಬಾಗಿಲುಗಳಲ್ಲಿ ಬಂದೂಕು ಹಿಡಿದ ಜನರನ್ನು ನಿಲ್ಲಿಸಿರುತ್ತಾನೆ ಮತ್ತು 'ಜೆಡ್'ನು ಆ ಕಟ್ಟಡದ ಹೊರಗೆ ಹೋಗಲು ಪ್ರಯತ್ನಿಸಿದರೆ ಅವರು ಗುಂಡು ಹಾರಿಸುತ್ತಾರೆ ಎಂದು ಹೇಳುತ್ತಾನೆ. 'ಎ'ನು 'ಜೆಡ್'ನನ್ನು ಅಕ್ರಮವಾಗಿ ಬಂಧಿಸಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟಿದ್ದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯನ್ನು ಮೂರು ಅಥವಾ ಅದಕ್ಕೂ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸಿಟ್ಟಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು **ಬಗೆಯ ಕಾರಾವಾಸದಿಂದ ಅಥವಾ** ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ **ಜುಲ್ಮಾನೆಯಿಂದ** ಅಥವಾ **ಅವೆರಡರಿಂದಲೂ ದಂಡಿತನಾಗತಕ್ಕದ್ದು.**

(4) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯನ್ನು ಹತ್ತು ಅಥವಾ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸಿಟ್ಟಿದ್ದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ **ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

(5) ವ್ಯಕ್ತಿಯ ಬಿಡುಗಡೆಗಾಗಿ ಕ್ರಮಬದ್ಧವಾಗಿ ರಿಟ್ ಆಜ್ಞೆ ಮಾಡಲಾಗಿದೆಯೆಂಬುದು ಗೊತ್ತಿದ್ದರೂ, ಆ ಯಾರೇ ವ್ಯಕ್ತಿಯನ್ನು ಇನ್ನೊಬ್ಬ ಯಾರೇ ವ್ಯಕ್ತಿಯು ಅಕ್ರಮವಾಗಿ ಬಂಧಿಸಿಟ್ಟಿದ್ದರೆ, ಅವನು ಈ ಅಧ್ಯಾಯದ ಇತರ ಯಾವುದೇ ಪ್ರಕರಣದ ಮೇರೆಗೆ ಗುರಿಯಾಗಬಹುದಾದ ಯಾವುದೇ ಕಾರಾವಾಸದ ಅವಧಿಯ ಜೊತೆಗೆ, ಎರಡು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯನ್ನು ಅವನಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಗೆ ಅಥವಾ ಯಾರೇ ಲೋಕ ನೌಕರನಿಗೆ ಆ ವ್ಯಕ್ತಿಯನ್ನು ಬಂಧಿಸಿಟ್ಟಿರುವ ಸಂಗತಿಯು ಗೊತ್ತಾಗಕೂಡದು ಅಥವಾ ಈ ಹಿಂದೆ ಹೇಳಿರುವಂಥ ಆ ಯಾರೇ ವ್ಯಕ್ತಿಗೆ ಅಥವಾ ಲೋಕ ನೌಕರನಿಗೆ ಬಂಧಿಸಿಟ್ಟಿರುವ ಸ್ಥಳವು ತಿಳಿಯಕೂಡದು ಅಥವಾ ಆ ಯಾರೇ ವ್ಯಕ್ತಿಗೆ ಕಂಡುಹಿಡಿಯಲು ಸಾಧ್ಯವಾಗಕೂಡದು ಎಂಬ ಉದ್ದೇಶವನ್ನು ಸೂಚಿಸುವ ಹಾಗೆ, ಅಕ್ರಮವಾಗಿ ಬಂಧಿಸಿಟ್ಟಿದ್ದರೆ, ಅವನು ಹಾಗೆ ಅಕ್ರಮವಾಗಿ ಬಂಧಿಸಿಟ್ಟಿದ್ದಕ್ಕಾಗಿ ಗುರಿಯಾಗಬಹುದಾದ ಯಾವುದೇ ಇತರ ದಂಡನೆಯ ಜೊತೆಗೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(7) ವ್ಯಕ್ತಿಯನ್ನು ಬಂಧಿಸಿಟ್ಟುಕೊಂಡು, ಆ ವ್ಯಕ್ತಿಯಿಂದ ಅಥವಾ ಹಾಗೆ ಬಂಧನದಲ್ಲಿರುವ ವ್ಯಕ್ತಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯಿಂದ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ಬಲಾದ್ಗ್ರಹಣ ಮಾಡುವ ಅಥವಾ ಬಂಧನದಲ್ಲಿರುವ ವ್ಯಕ್ತಿಯನ್ನು ಯಾವುದೇ ಕಾನೂನುಬಾಹಿರ ಕೃತ್ಯವನ್ನು ಮಾಡುವಂತೆ ಅಥವಾ ಯಾವುದೇ ಅಪರಾಧ ಮಾಡುವುದಕ್ಕೆ ಅನುಕೂಲ ಮಾಡಿಕೊಡಬಹುದಾದ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಒತ್ತಾಯಿಸುವ ಉದ್ದೇಶದಿಂದ ಆ ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಂಡಿರುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(8) ಯಾವುದೇ ಅಪರಾಧವನ್ನು ಅಥವಾ ದುರ್ವರ್ತನೆಯನ್ನು ಕಂಡುಹಿಡಿಯಲು ನೆರವಾಗುವ ತಪ್ಪೊಪ್ಪಿಗೆಯನ್ನು ಅಥವಾ ಮಾಹಿತಿಯನ್ನು ಬಂಧನದಲ್ಲಿರುವ ವ್ಯಕ್ತಿಯಿಂದ ಅಥವಾ ಬಂಧನದಲ್ಲಿರುವವನಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯಿಂದ ಬಲವಂತ ಮಾಡಿ ಪಡೆಯುವ ಉದ್ದೇಶದಿಂದ ಅಥವಾ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ವಾಪಸ್ಸು ಕೊಡುವಂತೆ ಅಥವಾ ವಾಪಸ್ಸು ಕೊಡಿಸುವಂತೆ ಅಥವಾ ಯಾವುದೇ ಕ್ಲೇಮನ್ನು ಅಥವಾ ತಗಾದೆಯನ್ನು ಈಡೇರಿಸುವಂತೆ ಮಾಡಲು ಅಥವಾ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತೆಯನ್ನು ವಾಪಸ್ಸು ಕೊಡಲು ನೆರವಾಗುವಂಥ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಮಾಡಲು ಬಂಧನದಲ್ಲಿರುವ ವ್ಯಕ್ತಿಯನ್ನು ಅಥವಾ ಬಂಧನದಲ್ಲಿರುವವನಲ್ಲಿ ಹಿತಾಸಕ್ತಿ ಹೊಂದಿರುವವನನ್ನು ಒತ್ತಾಯಿಸುವ ಉದ್ದೇಶಕ್ಕಾಗಿ, ಆ ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಂಡಿರುವ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

### *ಆಪರಾಧಿಕ ಬಲಪ್ರಯೋಗ (criminal force) ಮತ್ತು ಹಲ್ಲೆ (assault)*

**128. ಬಲಪ್ರಯೋಗ (ಫೋರ್ಸ್).-** ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಚಲಿಸುವಂತೆ, ಆ ಚಲನೆಯು ವ್ಯತ್ಯಾಸವಾಗುವಂತೆ ಅಥವಾ ಆ ಚಲನೆಯು ನಿಲ್ಲುವಂತೆ ಮಾಡಿದರೆ ಅಥವಾ ಅವನು ಒಂದು ಪದಾರ್ಥವು ಇನ್ನೊಬ್ಬ ವ್ಯಕ್ತಿಯ ದೇಹದ ಯಾವುದೇ ಭಾಗದೊಂದಿಗೆ ಅಥವಾ ಅವನು ಧರಿಸಿರುವ ಅಥವಾ ಒಯ್ಯುತ್ತಿರುವಂಥ ಯಾವುದೇ ವಸ್ತುವಿನೊಂದಿಗೆ ಸಂಪರ್ಕ ಹೊಂದುವ ರೀತಿಯಲ್ಲಿ ಅಥವಾ ಅಂಥ ಸಂಪರ್ಕವು ಆ ಇನ್ನೊಬ್ಬನ ಸಂವೇದನೆಯ ಮೇಲೆ ಪರಿಣಾಮ ಬೀರುವ ಹಾಗೆ ಇರುವ ಯಾವುದೇ

ವಸ್ತುವಿನೊಂದಿಗೆ ಸಂಪರ್ಕಕ್ಕೆ ಬರುವಂತಾಗುವಂತೆ ಆ ಪದಾರ್ಥವು ಚಲಿಸುವಂತೆ, ಆ ಚಲನೆಯು ವ್ಯತ್ಯಾಸವಾಗುವಂತೆ ಅಥವಾ ಆ ಚಲನೆಯು ನಿಲ್ಲುವಂತೆ ಮಾಡಿದರೆ, ಆ ವ್ಯಕ್ತಿಯು, ಆ ಇನ್ನೊಬ್ಬ ವ್ಯಕ್ತಿಯ ಮೇಲೆ ಬಲಪ್ರಯೋಗ ಮಾಡುತ್ತಾನೆ ಎಂದು ಹೇಳಲಾಗುತ್ತದೆ:

ಪರಂತು, ಹಾಗೆ ಚಲಿಸುವಂತೆ, ಚಲನೆಯು ವ್ಯತ್ಯಾಸವಾಗುವಂತೆ ಅಥವಾ ಚಲನೆಯು ನಿಲ್ಲುವಂತೆ ಮಾಡಿದ ವ್ಯಕ್ತಿಯು ಈ ಕೆಳಗಿನ ಮೂರು ರೀತಿಗಳಲ್ಲೊಂದರ ಪ್ರಕಾರ, ಎಂದರೆ:-

(ಎ) ತನ್ನ ದೇಹ ಶಕ್ತಿಯನ್ನು ನೇರವಾಗಿ ಪ್ರಯೋಗಿಸಿ;

(ಬಿ) ಅವನು ಅಥವಾ ಯಾರೇ ಇತರ ವ್ಯಕ್ತಿಯು ಮುಂದೆ ಯಾವುದೇ ಕೃತ್ಯವನ್ನು ಮಾಡದೆಯೇ ಚಲನೆ, ಚಲನೆಯಲ್ಲಿ ವ್ಯತ್ಯಾಸ ಮತ್ತು ಚಲನೆಯ ನಿಲುಗಡೆಯು ಉಂಟಾಗುವ ರೀತಿಯಲ್ಲಿ ಯಾವುದೇ ವಸ್ತುವನ್ನು ಬಳಸಿ;

(ಸಿ) ಯಾವುದೇ ಪ್ರಾಣಿಯು ಚಲಿಸುವಂತೆ, ತನ್ನ ಚಲನೆಯನ್ನು ವ್ಯತ್ಯಾಸಗೊಳಿಸುವಂತೆ ಅಥವಾ ಚಲನೆಯನ್ನು ನಿಲ್ಲಿಸುವಂತೆ ಪ್ರೇರಣೆ ಮಾಡಿ

- ಚಲಿಸುವಂತೆ, ಚಲನೆ ವ್ಯತ್ಯಾಸವಾಗುವಂತೆ ಅಥವಾ ಚಲನೆ ನಿಲ್ಲುವಂತೆ ಮಾಡಿರಬೇಕು.

**129. ಆಪರಾಧಿಕ ಬಲಪ್ರಯೋಗ (ಕ್ರಿಮಿನಲ್ ಫೋರ್ಸ್).-** ಯಾರೇ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಮೇಲೆ, ಆ ವ್ಯಕ್ತಿಯ ಸಮ್ಮತಿಯಿಲ್ಲದೆ, ಯಾವುದೇ ಅಪರಾಧವನ್ನು ಮಾಡುವ ಸಲುವಾಗಿ ಅಥವಾ ಯಾವ ವ್ಯಕ್ತಿಯ ಮೇಲೆ ಬಲವನ್ನು ಪ್ರಯೋಗಿಸಲಾಗುವುದೋ ಆ ವ್ಯಕ್ತಿಗೆ ಅಂಥ ಬಲಪ್ರಯೋಗದ ಮೂಲಕ ಕ್ಷತಿ, ಭಯ ಅಥವಾ ಕಿರುಕುಳ ಉಂಟುಮಾಡುವ ಉದ್ದೇಶದಿಂದ ಅಥವಾ ಉಂಟುಮಾಡುವ ಸಂಭವವಿದೆಯೆಂದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಬಲಪ್ರಯೋಗಿಸಿದರೆ, ಅವನು ಆ ಇನ್ನೊಬ್ಬ ವ್ಯಕ್ತಿಯ ಮೇಲೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) ೞಜೆಡ್ೞನು ನದಿಯಲ್ಲಿ ಗೂಟಕ್ಕೆ ಸರಪಳಿಯಲ್ಲಿ ಕಟ್ಟಿ ನಿಲ್ಲಿಸಿರುವ ದೋಣಿಯಲ್ಲಿ ಕುಳಿತಿರುತ್ತಾನೆ. ೞಎೞನು ಉದ್ದೇಶಪೂರ್ವಕವಾಗಿ ಸರಪಳಿ ಕಟ್ಟುಗಳನ್ನು ಬಿಚ್ಚುತ್ತಾನೆ ಮತ್ತು ದೋಣಿಯು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವಂತೆ ಮಾಡುತ್ತಾನೆ. ಇಲ್ಲಿ ೞಎೞನು ೞಜೆಡ್ೞನಿಗೆ ಉದ್ದೇಶಪೂರ್ವಕವಾಗಿ ಚಲನೆಯನ್ನುಂಟು ಮಾಡುತ್ತಾನೆ ಮತ್ತು ಯಾರೇ ವ್ಯಕ್ತಿಯಿಂದ ಇತರ ಯಾವುದೇ ಕೃತ್ಯ ಆಗದಂತೆ ಚಲನೆಯುಂಟಾಗುವಂಥ ರೀತಿಯಲ್ಲಿ ಹಗ್ಗವನ್ನು ಬಿಚ್ಚುತ್ತಾನೆ. ೞಎೞನು ಈ ಮೂಲಕ ೞಜೆಡ್ೞನಿಗೆ ಉದ್ದೇಶಪೂರ್ವಕವಾಗಿ ಬಲಪ್ರಯೋಗ ಮಾಡಿದ್ದಾನೆ ಮತ್ತು ಯಾವುದೇ ಅಪರಾಧವನ್ನು ಮಾಡುವುದಕ್ಕಾಗಿ ಅಥವಾ ಈ ಬಗೆಯ ಬಲಪ್ರಯೋಗದಿಂದ ೞಜೆಡ್ೞನಿಗೆ ಕ್ಷತಿ, ಭಯ ಅಥವಾ ಕಿರುಕುಳ ಉಂಟು ಮಾಡಬೇಕೆಂಬ ಉದ್ದೇಶದಿಂದ ಅಥವಾ ಉಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ ಅವನು ೞಜೆಡ್ೞನ ಒಪ್ಪಿಗೆಯಿಲ್ಲದೆಯೇ ಹಾಗೆ ಮಾಡಿದ್ದರೆ ೞಎೞನು ೞಜೆಡ್ೞನಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ.

(ಬಿ) ೞಜೆಡ್ೞನು ಇಗ್ಗಾಲಿ ಗಾಡಿಯಲ್ಲಿ ಸವಾರಿ ಮಾಡುತ್ತಿರುತ್ತಾನೆ ೞಎೞನು ೞಜೆಡ್ೞನ ಕುದುರೆಗಳನ್ನು ಚಾವಟಿಯಿಂದ ಹೊಡೆಯುತ್ತಾನೆ ಮತ್ತು ಆ ಮೂಲಕ ಅವು ವೇಗವನ್ನು ಹೆಚ್ಚಿಸಿಕೊಂಡು ಚಲಿಸುವಂತೆ ಮಾಡುತ್ತಾನೆ. ಇಲ್ಲಿ ಪ್ರಾಣಿಗಳು ಅವುಗಳ ಚಲನೆಯನ್ನು ಬದಲಿಸಿಕೊಳ್ಳುವಂತೆ ಮಾಡಿ ೞಎೞನು ೞಜೆಡ್ೞನ ಚಲನೆಯನ್ನು ಬದಲಾಯಿಸಿದ್ದಾನೆ. ಹಾಗಾಗಿ ೞಎೞನು ೞಜೆಡ್ೞನಿಗೆ ಬಲಪ್ರಯೋಗ ಮಾಡಿದ್ದಾನೆ; ಮತ್ತು ೞಜೆಡ್ೞನಿಗೆ ಕ್ಷತಿ, ಭಯ ಅಥವಾ ಕಿರುಕುಳವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ಅಥವಾ ಉಂಟು ಮಾಡುವ ಸಂಭವವಿದೆ ಎಂಬುದು ಗೊತ್ತಿದ್ದೂ ೞಎೞನು 'ಜೆಡ್'ನ ಒಪ್ಪಿಗೆ ಇಲ್ಲದೆಯೇ ಹಾಗೆ ಮಾಡಿದ್ದರೆ ೞಎೞನು ೞಜೆಡ್ೞನಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ.

(ಸಿ) ೞಜೆಡ್ೞನು ಡೋಲಿಯಲ್ಲಿ ಹೋಗುತ್ತಿದ್ದಾನೆ. ೞಎೞನು ೞಜೆಡ್ೞನನ್ನು ಸುಲಿಗೆ ಮಾಡುವ ಉದ್ದೇಶದಿಂದ ಮರದಗಣೆಯನ್ನು ಅಡ್ಡ ಹಿಡಿದು ಡೋಲಿಯನ್ನು ನಿಲ್ಲಿಸುತ್ತಾನೆ. ಇಲ್ಲಿ ೞಎೞನು ೞಜೆಡ್ೞನ ಚಲನೆಗೆ ನಿಲುಗಡೆಯನ್ನುಂಟು ಮಾಡಿದ್ದಾನೆ ಮತ್ತು ಇದನ್ನು ಅವನು

ತನ್ನ ಸ್ವಂತ ದೈಹಿಕ ಶಕ್ತಿಯಿಂದ ಮಾಡಿರುತ್ತಾನೆ. ಆದುದರಿಂದ ಏನು ಜೆಡ್‌ನಿಗೆ ಬಲಪ್ರಯೋಗ ಮಾಡಿದ್ದಾನೆ; ಮತ್ತು ಅಪರಾಧವನ್ನು ಮಾಡುವುದಕ್ಕಾಗಿ ಏನು ಈ ಪ್ರಕಾರವಾಗಿ ಉದ್ದೇಶಪೂರ್ವಕವಾಗಿ ಜೆಡ್‌ನ ಒಪ್ಪಿಗೆಯಿಲ್ಲದೆಯೇ, ವರ್ತಿಸಿದ್ದರಿಂದ ಏನು ಜೆಡ್‌ನಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ.

(ಡಿ) ಏನು ಉದ್ದೇಶಪೂರ್ವಕವಾಗಿ ಜೆಡ್‌ನನ್ನು ರಸ್ತೆಯಲ್ಲಿ ನೂಕುತ್ತಾನೆ. ಇಲ್ಲಿ ಏನು ತನ್ನ ದೈಹಿಕ ಬಲದಿಂದ ತನ್ನ ದೇಹಕ್ಕೆ ಜೆಡ್‌ನ ದೇಹ ಸಂಪರ್ಕವಾಗುವಂತೆ ಮಾಡುತ್ತಾನೆ. ಆದ್ದರಿಂದ ಅವನು ಉದ್ದೇಶಪೂರ್ವಕವಾಗಿ ಜೆಡ್‌ನಿಗೆ ಬಲಪ್ರಯೋಗ ಮಾಡಿದ್ದಾನೆ ಮತ್ತು ಜೆಡ್‌ನಿಗೆ ಆ ಮೂಲಕ ಕ್ಷತಿ, ಭಯ ಅಥವಾ ಕಿರುಕುಳವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ಅಥವಾ ಹಾಗೆ ಉಂಟಾಗುವ ಸಂಭವವಿರುವುದೆಂಬುದು ಗೊತ್ತಿದ್ದೂ ಜೆಡ್‌ನ ಒಪ್ಪಿಗೆ ಇಲ್ಲದೆ, ಹಾಗೆ ಮಾಡಿದ್ದರೆ ಅವನು ಜೆಡ್‌ನಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ.

(ಇ) ಏನು ತಾನು ಎಸೆದ ಕಲ್ಲು ಜೆಡ್‌ನಿಗೆ ಅಥವಾ ಜೆಡ್‌ನ ಬಟ್ಟೆಗೆ, ಜೆಡ್‌ನು ತೆಗೆದುಕೊಂಡು ಹೋಗುತ್ತಿರುವ ಯಾವುದೇ ಪದಾರ್ಥಕ್ಕೆ ತಗುಲಬೇಕೆಂದು ಉದ್ದೇಶಿಸಿ ಅಥವಾ ಹಾಗಾಗುವ ಸಂಭವವಿದೆಯೆಂದು ತಿಳಿದೂ ಅಥವಾ ಅದು ನೀರಿಗೆ ಬಿದ್ದು ಜೆಡ್‌ನ ಬಟ್ಟೆಗಳಿಗೆ ಅಥವಾ ಜೆಡ್‌ನು ಒಯ್ಯುತ್ತಿರುವ ಪದಾರ್ಥಕ್ಕೆ ನೀರು ಸಿಡಿಯಲಿ ಎಂಬ ಉದ್ದೇಶದಿಂದ ಅಥವಾ ಹಾಗಾಗುವ ಸಂಭವವಿರುವುದೆಂಬುದು ಗೊತ್ತಿದ್ದೂ ಕಲ್ಲನ್ನು ಎಸೆಯುತ್ತಾನೆ. ಇಲ್ಲಿ ಕಲ್ಲೆಸೆತವನ್ನು ಯಾವುದೇ ಪದಾರ್ಥವನ್ನು ಜೆಡ್‌ನಿಗೆ ಅಥವಾ ಜೆಡ್‌ನ ಬಟ್ಟೆಗಳಿಗೆ ತಗಲುವಂತೆ ಮಾಡಿದ್ದರೆ, 'ಏನು ಜೆಡ್‌ನಿಗೆ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ ಮತ್ತು ಆ ಮೂಲಕ ಜೆಡ್‌ನಿಗೆ ಕ್ಷತಿ, ಭಯ ಅಥವಾ ಕಿರುಕುಳವನ್ನು ಉಂಟು ಮಾಡಲು ಉದ್ದೇಶಿಸಿದ್ದು, ಜೆಡ್‌ನ ಒಪ್ಪಿಗೆ ಇಲ್ಲದೆಯೆ ಹಾಗೆ ಮಾಡಿದ್ದರೆ ಏನು ಜೆಡ್‌ನಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆ.

(ಎಫ್) ಏನು ಉದ್ದೇಶಪೂರ್ವಕವಾಗಿ ಮಹಿಳೆಯ ಮುಸುಕನ್ನು ಎಳೆಯುತ್ತಾನೆ. ಇಲ್ಲಿ ಏನು ಉದ್ದೇಶಪೂರ್ವಕವಾಗಿ ಅವಳಿಗೆ ಬಲಪ್ರಯೋಗ ಮಾಡಿರುತ್ತಾನೆ ಮತ್ತು ಆ ಮೂಲಕ ಅವಳಿಗೆ ಕ್ಷತಿ, ಭಯ ಅಥವಾ ಕಿರುಕುಳವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಹಾಗಾಗುವ ಸಂಭವವಿರುವುದೆಂಬುದು ಗೊತ್ತಿದ್ದೂ ಅವಳ ಒಪ್ಪಿಗೆ ಇಲ್ಲದೆ ಏ ಹಾಗೆ ಮಾಡಿದ್ದರೆ ಏನು ಅವಳಿಗೆ ಆಪರಾಧಿಕ ಬಲಪ್ರಯೋಗ ಮಾಡಿದ್ದಾನೆಂದಾಗುತ್ತದೆ.

(ಜಿ) ಜೆಡ್‌ನು ಸ್ನಾನ ಮಾಡುತ್ತಿದ್ದಾನೆ. ಸ್ನಾನ ಮಾಡುವ ನೀರಿನಲ್ಲಿ ಏನು ಕುದಿಯುವ ನೀರನ್ನು, ಅದು ಕುದಿಯುತ್ತಿದೆಯೆಂದು ಗೊತ್ತಿದ್ದರೂ ಸುರಿಯುತ್ತಾನೆ. ಇಲ್ಲಿ ಏನು ದೈಹಿಕ ಶಕ್ತಿಯಿಂದ ಕುದಿಯುತ್ತಿರುವ ನೀರಿನಲ್ಲಿ, ಆ ನೀರು ಜೆಡ್‌ನಿಗೆ ತಗಲುವಂತೆ ಅಥವಾ ಜೆಡ್‌ನ ಸಂವೇದನಾಶಕ್ತಿಯ ಮೇಲೆ ಪರಿಣಾಮ ಬೀರುವಂತೆ ನೀರಿಗೆ ಚಲನೆಯನ್ನುಂಟು ಮಾಡುತ್ತಾನೆ. ಆದುದರಿಂದ ಏನು ಜೆಡ್‌ನಿಗೆ ಉದ್ದೇಶಪೂರ್ವಕವಾಗಿ ಬಲಪ್ರಯೋಗ ಮಾಡಿದ್ದಾನೆ ಮತ್ತು ಜೆಡ್‌ನಿಗೆ ಕ್ಷತಿ, ಭಯ ಅಥವಾ ಕಿರುಕುಳವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಹಾಗಾಗುವ ಸಂಭವವಿರುವುದೆಂಬುದು ಗೊತ್ತಿದ್ದರೂ ಜೆಡ್‌ನ ಒಪ್ಪಿಗೆಯಿಲ್ಲದೆ ಹಾಗೆ ಮಾಡಿದ್ದರೆ ಏನು ಆಪರಾಧಿಕ ಬಲಪ್ರಯೋಗ ಮಾಡಿರುತ್ತಾನೆಂದಾಗುತ್ತದೆ.

(ಹೆಚ್) ಏನು ಜೆಡ್‌ನ ಮೇಲೆ ಎಗರಿ ಬೀಳುವಂತೆ ನಾಯಿಯನ್ನು ಕೆರಳಿಸುತ್ತಾನೆ. ಜೆಡ್‌ನು ಹಾಗೆ ಕೆರಳಿಸಲು ಒಪ್ಪಿಗೆ ಕೊಟ್ಟಿರಲಿಲ್ಲ. ಇಲ್ಲಿ ಏನು ಜೆಡ್‌ನಿಗೆ ಕ್ಷತಿ, ಭಯ ಅಥವಾ ಕಿರುಕುಳವನ್ನುಂಟು ಮಾಡುವ ಉದ್ದೇಶ ಹೊಂದಿದ್ದರೆ, 'ಏನು ಜೆಡ್‌ನಿಗೆ ಆಪರಾಧಿಕ ಬಲಪ್ರಯೋಗ ಮಾಡಿರುತ್ತಾನೆಂದಾಗುತ್ತದೆ.

**130. ಹಲ್ಲೆ.-** ಯಾವುದೇ ಸಂಜ್ಞೆಯು ಅಥವಾ ಸಿದ್ಧತೆಯು, ಅಲ್ಲಿರುವ ಯಾರೇ ವ್ಯಕ್ತಿಗೆ, ಹಾಗೆ ಸಂಜ್ಞೆಯನ್ನು ಅಥವಾ ಸಿದ್ಧತೆಯನ್ನು ಮಾಡುವವನು ಆ ವ್ಯಕ್ತಿಯ ಮೇಲೆ ಆಪರಾಧಿಕ ಬಲವನ್ನು ಪ್ರಯೋಗಿಸುವನೆಂಬ ಭೀತಿಯನ್ನುಂಟು ಮಾಡುವ ಉದ್ದೇಶದಿಂದ ಅಥವಾ ಹಾಗಾಗುವ ಸಂಭವವಿದೆಯೆಂಬುದೂ ಗೊತ್ತಿದ್ದೂ ಅಂಥ ಸಂಜ್ಞೆಯನ್ನು ಅಥವಾ ಯಾವುದೇ ಸಿದ್ಧತೆಯನ್ನು ಮಾಡುವ ಯಾರೇ ವ್ಯಕ್ತಿಯು ಹಲ್ಲೆಯನ್ನು ಮಾಡುತ್ತಾನೆ ಎಂದು ಹೇಳಲಾಗುತ್ತದೆ.

*ವಿವರಣೆ.-* ಮಾತುಗಳನ್ನಾಡಿದರಷ್ಟೇ ಹಲ್ಲೆ ಎನಿಸುವುದಿಲ್ಲ. ಆದರೆ, ವ್ಯಕ್ತಿಯು ಬಳಸುವ ಶಬ್ದಗಳು ಅವನ ಸಂಜ್ಞೆ ಅಥವಾ ಸಿದ್ಧತೆಗೆ ಆ ಸಂಜ್ಞೆಗಳು ಅಥವಾ ಸಿದ್ಧತೆಗಳು ಹಲ್ಲೆ ಎನಿಸಬಹುದಾದಂಥ ಅರ್ಥವನ್ನು ಕೊಡಬಹುದು.

*ದೃಷ್ಟಾಂತಗಳು*

(ಎ) ಓಎನು ಜೆಡ್‌ನಿಗೆ ಹೊಡೆಯುತ್ತಾನೆಂಬ ನಂಬಿಕೆ ಉಂಟು ಮಾಡುವ ಉದ್ದೇಶದಿಂದ ಅಥವಾ ಜೆಡ್‌ನು ಹಾಗೆ ಓಎನು ಹಾಗೆ ಮಾಡುತ್ತಾನೆಂದು ನಂಬುವ ಸಂಭವವಿದೆಯೆಂಬುದು ಗೊತ್ತಿದ್ದೂ ಓಎನು ಜೆಡ್‌ನಿಗೆ ತನ್ನ ಮುಷ್ಠಿಯನ್ನು ತೋರಿಸುತ್ತಾನೆ. ಇಲ್ಲಿ ಓಎನು ಹಲ್ಲೆ ಮಾಡಿದ್ದಾನೆಂದಾಗುತ್ತದೆ.

(ಬಿ) ಓಎನು ನಾಯಿಯನ್ನು ಜೆಡ್‌ನ ಮೇಲೆ ಬೀಳಿಸುತ್ತಾನೆಂಬ ನಂಬಿಕೆಯನ್ನು ಜೆಡ್‌ನಿಗೆ ಉಂಟುಮಾಡುವ ಉದ್ದೇಶದಿಂದ ಅಥವಾ ಹಾಗಾಗುವ ಸಂಭವವಿರುವುದೆಂಬುದೂ ಗೊತ್ತಿದ್ದೂ ಓಎನು ಭಯಂಕರವಾದ ನಾಯಿಯ ಬಾಯಿ ಕಟ್ಟನ್ನು ಬಿಚ್ಚಲು ಆರಂಭಿಸುತ್ತಾನೆ. ಓಎನು ಜೆಡ್‌ನ ಮೇಲೆ ಹಲ್ಲೆ ಮಾಡಿದ್ದಾನೆಂದಾಗುತ್ತದೆ.

(ಸಿ) ಓಎನು ಜೆಡ್‌ನಿಗೆ "ನಾನು ನಿನಗೆ ಹೊಡೆಯುತ್ತೇನೆ" ಎಂದು ಹೇಳುತ್ತಾ ಒಂದು ಕೋಲನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ಓಎನು ಬಳಸಿದ ಮಾತುಗಳು ಯಾವ ಸಂದರ್ಭದಲ್ಲೂ ಹಲ್ಲೆ ಎನಿಸದಿದ್ದಾಗ್ಯೂ ಮತ್ತು ಇತರ ಯಾವುದೇ ವಿದ್ಯಮಾನವನ್ನೊಳಗೊಂಡಿರದ ಕೇವಲ ಸಂಜ್ಞೆಯು ಹಲ್ಲೆ ಎನಿಸದಿರಬಹುದಾದರೂ ಬಳಸಿದ ಮಾತುಗಳಿಂದ ವ್ಯಕ್ತವಾದ ಸಂಜ್ಞೆಯು ಹಲ್ಲೆ ಎನಿಸಬಹುದು.

**131. ತೀವ್ರ ಉದ್ರೇಕದಿಂದಲ್ಲದೆ ಮಾಡಿದ ಹಲ್ಲೆಗಾಗಿ ಅಥವಾ ಆಪರಾಧಿಕ ಬಲಪ್ರಯೋಗ ಮಾಡಿದ್ದಕ್ಕಾಗಿ ದಂಡನೆ.-** ಯಾರೇ ವ್ಯಕ್ತಿಯು ಉಂಟುಮಾಡಿದ ತೀವ್ರ ಮತ್ತು ಹಠಾತ್ ಉದ್ರೇಕದಿಂದಲ್ಲದೆ ಆ ವ್ಯಕ್ತಿಯ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ 1.-*

(ಎ) ಅಪರಾಧಿಯು, ಆ ಉದ್ರೇಕವು ಆ ಅಪರಾಧಕ್ಕೆ ಒಂದು ನೆಪವಾಗಬೇಕೆಂದು ಅದಕ್ಕೆ ತಾನೇ ಕಾರಣನಾಗಿದ್ದರೆ ಅಥವಾ ತಾನೇ ಸ್ವಯಿಚ್ಛೆಯಿಂದ ಅದನ್ನು ಉಂಟು ಮಾಡಿಕೊಂಡಿದ್ದರೆ; ಅಥವಾ

(ಬಿ) ಕಾನೂನಿಗನುಸಾರವಾಗಿ ಮಾಡಿದ ಅಥವಾ ಲೋಕ ನೌಕರನು ತನ್ನ ಅಧಿಕಾರವನ್ನು ಕಾನೂನುಬದ್ಧವಾಗಿ ಚಲಾಯಿಸುವಾಗ ಮಾಡಿದ ಯಾವುದೇ ಕಾರ್ಯದಿಂದ ಆ ಉದ್ರೇಕವುಂಟಾಗಿದ್ದರೆ; ಅಥವಾ

(ಸಿ) ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಕಾನೂನುಬದ್ಧವಾಗಿ ಚಲಾಯಿಸುವಾಗ ಮಾಡಿದ ಯಾವುದೇ ಕಾರ್ಯದಿಂದ ಉದ್ರೇಕವುಂಟಾಗಿದ್ದರೆ

- ಅಂಥ ತೀವ್ರ ಮತ್ತು ಹಠಾತ್ ಉದ್ರೇಕವು ಈ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ವಿಧಿಸುವ ದಂಡನೆಯನ್ನು ಕಡಿಮೆ ಮಾಡುವುದಿಲ್ಲ.

*ವಿವರಣೆ 2.-* ಉದ್ರೇಕವು ಅಪರಾಧವನ್ನು ಕಡಿಮೆಗೊಳಿಸುವಷ್ಟು ತೀವ್ರವೂ ಮತ್ತು ಹಠಾತ್ ಆದುದೂ ಆಗಿತ್ತೇ ಇಲ್ಲವೇ ಎಂಬುದು ಸಂಗತಿಯ ಪ್ರಶ್ನೆಯಾಗಿದೆ.

**132. ಲೋಕ ನೌಕರನು ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ಅವನನ್ನು ನಿರ್ಬಂಧಿಸುವ ಸಲುವಾಗಿ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿಯನ್ನು ತಡೆಯುವ ಅಥವಾ ಅದನ್ನು

ಮಾಡದಂತೆ ನಿರ್ಬಂಧಿಸುವ ಉದ್ದೇಶದಿಂದ ಅಥವಾ ಆ ವ್ಯಕ್ತಿಯು ಅಂಥ ಲೋಕ ನೌಕರನಾಗಿ ತನ್ನ ಕರ್ತವ್ಯವನ್ನು ಕಾನೂನುಬದ್ಧವಾಗಿ ನಿರ್ವಹಿಸುವಾಗ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕಾರ್ಯದ ಪರಿಣಾಮವಾಗಿ, ಅವನ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**133. ತೀವ್ರ ಉದ್ರೇಕದಿಂದಲ್ಲದೆ ವ್ಯಕ್ತಿಗೆ ಅವಮಾನ ಮಾಡುವ ಸಲುವಾಗಿ ಅವನ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು.-** ಯಾರೇ ವ್ಯಕ್ತಿಗೆ, ಅವಮಾನ ಮಾಡುವ ಉದ್ದೇಶದಿಂದ, ಯಾವ ವ್ಯಕ್ತಿಯು, ತೀವ್ರ ಮತ್ತು ಹಠಾತ್ ಉದ್ರೇಕದಿಂದಲ್ಲದೆ, ಆ ವ್ಯಕ್ತಿಯ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**134. ವ್ಯಕ್ತಿಯು ಒಯ್ಯುತ್ತಿರುವ ಸ್ವತ್ತನ್ನು ಕಳವು ಮಾಡಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು.-** ಯಾವ ವ್ಯಕ್ತಿಯು ಧರಿಸಿರುವ ಅಥವಾ ಒಯ್ಯುತ್ತಿರುವ ಯಾವುದೇ ಸ್ವತ್ತನ್ನು ಕಳವು ಮಾಡಲು ಪ್ರಯತ್ನ ಮಾಡುವಾಗ ಆ ಯಾರೇ ವ್ಯಕ್ತಿಯ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**135. ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು.-** ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆಯನ್ನು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**136. ತೀವ್ರ ಉದ್ರೇಕದಿಂದ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು.-** ವ್ಯಕ್ತಿಯು ತೀವ್ರ ಮತ್ತು ಹಠಾತ್ ಉದ್ರೇಕ ಉಂಟುಮಾಡಿದ್ದರಿಂದ ಅವನ ಮೇಲೆ ಹಲ್ಲೆ ಮಾಡುವ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವ ಯಾರೇ ವ್ಯಕ್ತಿಯು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* 131ನೇ ಪ್ರಕರಣವು ಯಾವ ವಿವರಣೆಗೆ ಒಳಪಟ್ಟಿರುವುದೋ ಅದೇ ವಿವರಣೆಗೆ ಈ ಪ್ರಕರಣವು ಒಳಪಟ್ಟಿರುತ್ತದೆ.

***ಅಪಹರಣ, ಬಲಾತ್ ಅಪಹರಣ, ಗುಲಾಮಗಿರಿ ಮತ್ತು ಬಲಾತ್ಕಾರದ ದುಡಿಮೆ***

**137. ಅಪಹರಣ.-** (1) ಅಪಹರಣವು ಎರಡು ಬಗೆಯದಾಗಿರುತ್ತದೆ: ಭಾರತದಿಂದ ಅಪಹರಿಸಿಕೊಂಡು ಹೋಗುವುದು ಮತ್ತು ಕಾನೂನುಬದ್ಧ ಪಾಲಕರ ಬಳಿ ಇರುವ ವ್ಯಕ್ತಿಯನ್ನು ಅಪಹರಿಸುವುದು,-

(ಎ) ಯಾರೇ ವ್ಯಕ್ತಿಯನ್ನು, ಆ ವ್ಯಕ್ತಿಯ ಅಥವಾ ಆ ವ್ಯಕ್ತಿಯ ಪರವಾಗಿ ಸಮ್ಮತಿಕೊಡಲು ಕಾನೂನುಸಮ್ಮತವಾಗಿ ಅಧಿಕಾರ ಉಳ್ಳ ವ್ಯಕ್ತಿಯ ಸಮ್ಮತಿ ಇಲ್ಲದೆಯೆ, ಭಾರತದ ಗಡಿಗಳಿಂದಾಚೆಗೆ ಸಾಗಿಸುವ ಯಾರೇ ವ್ಯಕ್ತಿಯು ಭಾರತದಿಂದ ಆ ವ್ಯಕ್ತಿಯನ್ನು ಅಪಹರಣ ಮಾಡಿದ್ದಾನೆ ಎಂದು ಹೇಳಲಾಗುತ್ತದೆ.

(ಬಿ) **ಯಾವು**ದೇ ಮಗು ಅಥವಾ **ಯಾರೇ ಅಸ್ವಸ್ಥಚಿತ್ತದ** ವ್ಯಕ್ತಿಯನ್ನು ಅಂಥ ಮಗು ಅಥವಾ **ಅಸ್ವಸ್ಥಚಿತ್ತದ ವ್ಯಕ್ತಿಯನ್ನು,** ಆ ವ್ಯಕ್ತಿಯು ಕಾನೂನುಬದ್ಧ ಪಾಲಕನ ರಕ್ಷಣೆಯಲ್ಲಿರುವಾಗ ಅಂಥ ಪಾಲಕನ ಸಮ್ಮತಿ ಇಲ್ಲದೆಯೇ ಕರೆದುಕೊಂಡು ಹೋಗುವ

ಅಥವಾ ಪುಸಲಾಯಿಸಿ ಕರೆದುಕೊಂಡು ಹೋಗುವ ಯಾರೇ ವ್ಯಕ್ತಿಯು ಕಾನೂನುಬದ್ಧ ಪಾಲಕನ ಬಳಿಯಿಂದ ಅಂಥ ಮಗು ಅಥವಾ ಇತರ ವ್ಯಕ್ತಿಯನ್ನು ಅಪಹರಿಸಿದ್ದಾನೆ ಎಂದು ಹೇಳಲಾಗುತ್ತದೆ.

*ವಿವರಣೆ.-* ಈ ಖಂಡದಲ್ಲಿ **"ಕಾನೂನುಬದ್ಧ ಪಾಲಕ"** ಎಂಬ ಪದಗಳು**,** ಯಾವ ವ್ಯಕ್ತಿಗೆ ಅಂಥ ಮಗು ಅಥವಾ ಇತರ ವ್ಯಕ್ತಿಯ ಪಾಲನೆಯನ್ನು ಅಥವಾ ಅಭಿರಕ್ಷೆಯನ್ನು ಕಾನೂನುಬದ್ಧವಾಗಿ ವಹಿಸಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತವೆ.

*ಅಪವಾದ.-* ತಾನೇ ಜಾರಜ ಮಗುವಿನ ತಂದೆಯೆಂದು ಸದ್ಭಾವನೆಯಿಂದ ನಂಬಿರುವ ಅಥವಾ ಅಂಥ ಮಗುವಿನ ಕಾನೂನುಬದ್ಧ ಅಭಿರಕ್ಷೆಗೆ ತಾನೇ ಹಕ್ಕುಳ್ಳವನೆಂದು ಸದ್ಭಾವನೆಯಿಂದ ನಂಬಿರುವ ಯಾರೇ ವ್ಯಕ್ತಿಯ ಕೃತ್ಯಕ್ಕೆ, ಅಂಥ ಕೃತ್ಯವನ್ನು ಅನೈತಿಕ ಅಥವಾ ಕಾನೂನುಬಾಹಿರ ಉದ್ದೇಶಕ್ಕಾಗಿ ಮಾಡಿದ್ದ ಹೊರತು, ಈ ಖಂಡವು ಅನ್ವಯವಾಗತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯನ್ನು ಭಾರತದಿಂದ ಅಥವಾ ಆ ವ್ಯಕ್ತಿಯು ಕಾನೂನುಬದ್ಧ ಪಾಲಕನ ಬಳಿ ಇದ್ದಾಗ ಅಲ್ಲಿನ ಅಪಹರಣ ಮಾಡುವ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**138. ಬಲಾತ್ ಅಪಹರಣ.-** ಯಾರೇ ವ್ಯಕ್ತಿಯನ್ನು ಯಾವುದೇ ಸ್ಥಳದಿಂದ ಹೋಗಲು ಬಲಪ್ರಯೋಗದಿಂದ ಒತ್ತಾಯಿಸುವ ಅಥವಾ ಯಾವುದೇ ವಂಚನೆಯ ವಿಧಾನದಿಂದ ಪ್ರೇರೇಪಿಸುವ ಯಾರೇ ವ್ಯಕ್ತಿಯು, ಆ ವ್ಯಕ್ತಿಯನ್ನು ಬಲಾತ್ ಅಪಹರಣ ಮಾಡಿದ್ದಾನೆಂದು ಹೇಳಲಾಗುತ್ತದೆ.

**139. ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ಮಗುವನ್ನು ಅಪಹರಣ ಮಾಡುವುದು ಅಥವಾ ಅಂಗ ಊನ ಮಾಡುವುದು.-** (1) ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ **ಮಗುವನ್ನು** ತೊಡಗಿಸುವ ಅಥವಾ ಬಳಸಿಕೊಳ್ಳುವ ಸಲುವಾಗಿ **ಯಾವುದೇ ಮಗುವನ್ನು** ಅಪಹರಣ ಮಾಡುವ ಅಥವಾ ಮಗುವಿನ ಕಾನೂನುಬದ್ಧ ಪಾಲಕನಾಗಿರದೇ ಅಂಥ ಮಗುವನ್ನು ತನ್ನ ಅಭಿರಕ್ಷೆಗೆ ತೆಗೆದುಕೊಳ್ಳುವ ಯಾರೇ ವ್ಯಕ್ತಿಯು, ಹತ್ತು **ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ, ಆಜೀವ ಕಾರಾವಾಸಕ್ಕೆ** ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ಯಾವುದೇ ಮಗುವನ್ನು ತೊಡಗಿಸುವ ಅಥವಾ ಬಳಸಿಕೊಳ್ಳುವ ಸಲುವಾಗಿ ಅಂಥ ಮಗುವನ್ನು ಅಂಗವಿಕಲಗೊಳಿಸುವ ಯಾರೇ ವ್ಯಕ್ತಿಯು, ಇಪ್ಪತ್ತು **ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜುಲ್ಮಾನೆ**ಯಿಂದ **ದಂಡನೀಯನಾಗತಕ್ಕದ್ದು.**

(3) ಮಗುವಿನ ಕಾನೂನುಬದ್ಧ ಪಾಲಕನಾಗಿರದೇ ಅಂಥ ಮಗುವನ್ನು ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ತೊಡಗಿಸುವ ಅಥವಾ ಬಳಸುವ ಯಾರೇ ವ್ಯಕ್ತಿಯು, ತದ್ವಿರುದ್ಧವಾಗಿ ರುಜುವಾತಾದ ಹೊರತು, ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ತೊಡಗಿಸಲು ಅಥವಾ ಬಳಸಲು ಆ ಮಗುವನ್ನು ಅಪಹರಣ ಮಾಡಿದ್ದಾನೆಂದು ಅಥವಾ ಅನ್ಯಥಾ ಅಭಿರಕ್ಷೆಗೆ ತೆಗೆದುಕೊಂಡಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ "ಭಿಕ್ಷೆ ಬೇಡುವುದು" ಎಂದರೆ:-

(i) ಹಾಡುವ, ಕುಣಿಯುವ, ಭವಿಷ್ಯ ಹೇಳುವ, ಕೈಚಳಕ ತೋರಿಸುವ ಅಥವಾ ವಸ್ತುಗಳ ಮಾರಾಟ ಮಾಡುವ ಸೋಗಿನಲ್ಲಿ ಅಥವಾ ಬೇರೆ ರೀತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಭಿಕ್ಷೆಯನ್ನು ಬೇಡುವುದು ಅಥವಾ ಪಡೆಯುವುದು;

(ii) ಭಿಕ್ಷೆಯನ್ನು ಬೇಡುವ ಅಥವಾ ಪಡೆಯುವ ಉದ್ದೇಶಗಳಿಗಾಗಿ ಯಾವುದೇ ಖಾಸಗಿ ಆವರಣವನ್ನು ಪ್ರವೇಶಿಸುವುದು;

(iii) ಭಿಕ್ಷೆಯನ್ನು ಪಡೆಯುವ ಅಥವಾ ಅದಕ್ಕಾಗಿ ಬಲಾದ್ಗ್ರಹಣದ ಉದ್ದೇಶದಿಂದ, ತನ್ನ ಅಥವಾ ಇತರ ಯಾರೇ ವ್ಯಕ್ತಿಯ ಅಥವಾ ಪ್ರಾಣಿಯ ಯಾವುದೇ ಹುಣ್ಣು, ಗಾಯ, ಕ್ಷತಿ, ಅಂಗವಿರೂಪತೆ ಅಥವಾ ರೋಗವನ್ನು ಹೊರತೋರಿಸುವುದು ಅಥವಾ ಪ್ರದರ್ಶಿಸುವುದು;

(iv) ಭಿಕ್ಷೆಯನ್ನು ಬೇಡುವ ಅಥವಾ ಪಡೆಯುವ ಉದ್ದೇಶಕ್ಕಾಗಿ ಅಂಥ ಮಗುವನ್ನು ಪ್ರದರ್ಶನ ವಸ್ತುವಿನಂತೆ ಬಳಸುವುದು.

**140. ಕೊಲೆ ಮಾಡುವ ಅಥವಾ ಒತ್ತೆ ಹಣ, ಇತ್ಯಾದಿ ಉದ್ದೇಶದಿಂದ ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು.-** (1) ಕೊಲೆ ಮಾಡುವುದಕ್ಕೋಸ್ಕರ ಅಥವಾ ಕೊಲೆ ಮಾಡಲಾಗುತ್ತದೆ ಎನ್ನುವ ಅಪಾಯಕ್ಕೀಡಾಗುವಂಥ ಸ್ಥಿತಿಯಲ್ಲಿಡುವುದಕ್ಕೋಸ್ಕರ ಯಾರೇ ವ್ಯಕ್ತಿಯನ್ನು ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತಗಳು*

(ಎ) 'ಜೆಡ್'ನನ್ನು ವಿಗ್ರಹಕ್ಕೆ ಬಲಿಕೊಡಬಹುದೆಂಬ ಉದ್ದೇಶದಿಂದ ಅಥವಾ ಹಾಗೆ ಆಗುವ ಸಂಭವವಿದೆಯೆಂಬುದು ಗೊತ್ತಿದ್ದರೂ 'ಎ'ನು 'ಜೆಡ್'ನನ್ನು ಭಾರತದಿಂದ ಅಪಹರಣ ಮಾಡುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಬಿ'ನನ್ನು ಕೊಲೆ ಮಾಡುವುದಕ್ಕೋಸ್ಕರ 'ಬಿ'ನನ್ನು ಅವನ ಮನೆಯಿಂದ ಬಲಾತ್ಕಾರವಾಗಿ ಅಥವಾ ಪುಸಲಾಯಿಸಿ 'ಎ'ನು ಕರೆದುಕೊಂಡು ಹೋಗುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯನ್ನು ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಅಥವಾ ಅಂಥ ಅಪಹರಣದ ಅಥವಾ ಬಲಾತ್ ಅಪಹರಣದ ನಂತರ ಆ ವ್ಯಕ್ತಿಯನ್ನು ಇಟ್ಟುಕೊಳ್ಳುವ ಮತ್ತು ಅಂಥ ವ್ಯಕ್ತಿಗೆ ಮರಣ ಅಥವಾ ಗಾಯ ಉಂಟುಮಾಡುವುದಾಗಿ ಬೆದರಿಕೆ ಹಾಕುವ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ಅಥವಾ ಮಾಡದಿರುವಂತೆ ಅಥವಾ ಒತ್ತೆ ಹಣವನ್ನು ಸಂದಾಯ ಮಾಡುವಂತೆ ಸರ್ಕಾರವನ್ನು ಅಥವಾ ಯಾವುದೇ ಹೊರ ರಾಷ್ಟ್ರವನ್ನು ಅಥವಾ ಅಂತರರಾಷ್ಟ್ರೀಯ ಸರ್ಕಾರಿ ಸಂಘಸಂಸ್ಥೆಗಳನ್ನು ಅಥವಾ ಯಾರೇ ಇತರ ವ್ಯಕ್ತಿಯನ್ನು ಒತ್ತಾಯಿಸುವ ಸಲುವಾಗಿ ಅಂಥ ವ್ಯಕ್ತಿಗೆ ಮರಣ ಅಥವಾ ಗಾಯವನ್ನುಂಟು ಮಾಡಬಹುದೆಂಬ ಅಥವಾ ಗಾಯ ಅಥವಾ ಸಾವಿಗೆ ಕಾರಣವಾಗಬಹುದೆಂದು ಸಮಂಜಸವಾಗಿ ಶಂಕಿಸಲು ಆಸ್ಪದವಾಗುವ ರೀತಿಯಲ್ಲಿ ವರ್ತಿಸುವ ಯಾರೇ ವ್ಯಕ್ತಿಯು, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಗೋಪ್ಯವಾಗಿ ಮತ್ತು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳುವ ಉದ್ದೇಶದಿಂದ ಯಾರೇ ವ್ಯಕ್ತಿಯನ್ನು ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ತೀವ್ರ ಗಾಯಕ್ಕೆ ಅಥವಾ ಗುಲಾಮಗಿರಿಗೆ ಅಥವಾ ಯಾರೇ ವ್ಯಕ್ತಿಯ ಅನೈಸರ್ಗಿಕ ಕಾಮಪಿಪಾಸೆಗೆ ಒಳಪಡಿಸಬಹುದಾದ ಅಪಾಯಕ್ಕೆ ಗುರಿಪಡಿಸಬಹುದೆಂದು ಅಥವಾ ಅಂಥ ಸ್ಥಿತಿಗೀಡುಮಾಡಬಹುದೆಂದು ಅಥವಾ ಅಂಥ ವ್ಯಕ್ತಿಯನ್ನು ಹಾಗೆ ಗುರಿಪಡಿಸುವ ಅಥವಾ ಈಡು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಯಾರೇ ವ್ಯಕ್ತಿಯನ್ನು ಅಪಹರಣ ಮಾಡುವ ಅಥವಾ ಬಲಾತ್ ಅಪಹರಣ ಮಾಡುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**141. ವಿದೇಶದಿಂದ ಹುಡುಗಿ ಅಥವಾ ಹುಡುಗನನ್ನು ತರುವುದು.-** ಭಾರತದ ಹೊರಗಿನ ಯಾವುದೇ ದೇಶದಿಂದ ಇಪ್ಪತ್ತೊಂದು ವರ್ಷ ವಯಸ್ಸಿನೊಳಗಿರುವ ಯಾರೇ ಹುಡುಗಿಯನ್ನು ಅಥವಾ ಹದಿನೆಂಟು ವರ್ಷ ವಯಸ್ಸಿನೊಳಗಿರುವ ಯಾರೇ ಹುಡುಗನನ್ನು, ಬೇರೊಬ್ಬ ವ್ಯಕ್ತಿಯೊಂದಿಗೆ ಅಕ್ರಮ ಸಂಭೋಗ ಮಾಡಲು ಆ **ಹುಡುಗಿ** ಅಥವಾ ಹುಡುಗನನ್ನು ಬಲಾತ್ಕರಿಸಬಹುದೆಂಬ ಅಥವಾ

ತಪ್ಪುದಾರಿಗೆ ಪ್ರೇರೇಪಣೆ ಮಾಡಬಹುದೆಂಬ ಉದ್ದೇಶದಿಂದ ಅಥವಾ ಆ ವ್ಯಕ್ತಿಯೊಂದಿಗೆ ಅದಕ್ಕಾಗಿ ಆ **ಹುಡುಗಿ** ಅಥವಾ ಹುಡುಗನನ್ನು ಬಲಾತ್ಕರಿಸುವ ಅಥವಾ ತಪ್ಪುದಾರಿಗೆ ಪ್ರೇರೇಪಣೆ ಮಾಡಬಹುದೆಂಬ ಸಂಭವವಿದೆಯೆಂಬುದು ಗೊತ್ತಿದ್ದರೂ ಭಾರತದೊಳಕ್ಕೆ ತರುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**142. ಅಪಹರಣಕ್ಕೀಡಾದ ಅಥವಾ ಬಲಾತ್ ಅಪಹರಣಕ್ಕೀಡಾದ ವ್ಯಕ್ತಿಯನ್ನು ಅಕ್ರಮವಾಗಿ ಬಚ್ಚಿಡುವುದು ಅಥವಾ ಬಂಧನದಲ್ಲಿಟ್ಟುಕೊಳ್ಳುವುದು.-** ಒಬ್ಬ ವ್ಯಕ್ತಿಯನ್ನು ಅಪಹರಣ ಮಾಡಲಾಗಿದೆ ಅಥವಾ ಬಲಾತ್ ಅಪಹರಣ ಮಾಡಲಾಗಿದೆ ಎಂದು ಗೊತ್ತಿದ್ದೂ, ಅಂಥ ವ್ಯಕ್ತಿಯನ್ನು ಅಕ್ರಮವಾಗಿ ಬಚ್ಚಿಡುವ ಅಥವಾ ಬಂಧಿಸಿಡುವ ಯಾರೇ ವ್ಯಕ್ತಿಯು, ಯಾವ ಉದ್ದೇಶಕ್ಕಾಗಿ ಅಥವಾ ತಿಳುವಳಿಕೆಯಿಂದ ಅಂಥ ವ್ಯಕ್ತಿಯನ್ನು ಅಪಹರಿಸಲಾಗಿತ್ತೋ ಅಥವಾ ಬಲಾತ್ ಅಪಹರಿಸಲಾಗಿತ್ತೋ ಅಂಥದೇ ಉದ್ದೇಶದಿಂದ ಬಂಧನದಲ್ಲಿರುವ ಅಂಥ ವ್ಯಕ್ತಿಯನ್ನು ಬಚ್ಚಿಟ್ಟರೆ ಅಥವಾ ಬಂಧಿಸಿಟ್ಟರೆ ಹೇಗೋ ಹಾಗೆ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

**143. ವ್ಯಕ್ತಿಗಳನ್ನು ದುರ್ವ್ಯಾಪಾರ ಮಾಡುವುದು.-** (1) ಯಾರೇ ವ್ಯಕ್ತಿಯು, ಶೋಷಣೆಯ ಉದ್ದೇಶಕ್ಕಾಗಿ,-

(ಎ) ಬೆದರಿಕೆ ಹಾಕುವ ಮೂಲಕ; ಅಥವಾ

(ಬಿ) ಬಲ ಪ್ರಯೋಗಿಸುವ ಅಥವಾ ಯಾವುದೇ ರೀತಿಯಲ್ಲಿ ದಬ್ಬಾಳಿಕೆ ಮಾಡುವ ಮೂಲಕ; ಅಥವಾ

(ಸಿ) ಬಲಾತ್ ಅಪಹರಣ ಮಾಡುವ ಮೂಲಕ; ಅಥವಾ

(ಡಿ) ಮೋಸ ಅಥವಾ ವಂಚನೆ ಮಾಡುವ ಮೂಲಕ; ಅಥವಾ

(ಇ) ಅಧಿಕಾರವನ್ನು ದುರುಪಯೋಗ ಮಾಡುವ ಮೂಲಕ; ಅಥವಾ

(ಎಫ್) ನೇಮಕಾತಿ ಮಾಡಿಕೊಂಡ, ಸಾಗಣೆ ಮಾಡಿದ ಅಥವಾ ಆಶ್ರಯ ನೀಡಿದ, ಸ್ಥಳಾಂತರ ಮಾಡಿದ ಅಥವಾ ಸ್ವೀಕರಿಸಿದ ವ್ಯಕ್ತಿಯ ಮೇಲೆ ನಿಯಂತ್ರಣ ಹೊಂದಿರುವ ಯಾರೇ ವ್ಯಕ್ತಿಯ ಸಮ್ಮತಿಯನ್ನು ಪಡೆಯುವ ಸಲುವಾಗಿ ಹಣವನ್ನು ಅಥವಾ ಪ್ರಯೋಜನಗಳನ್ನು ಕೊಡುವುದು ಅಥವಾ ಸ್ವೀಕರಿಸುವುದು ಸೇರಿದಂತೆ ಪ್ರೇರೇಪಣೆ ಮಾಡುವ ಮೂಲಕ

- ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ನೇಮಕಾತಿ ಮಾಡಿಕೊಂಡರೆ, ಸಾಗಣೆ ಮಾಡಿದರೆ, ಆಶ್ರಯ ನೀಡಿದರೆ, ಸ್ಥಳಾಂತರ ಮಾಡಿದರೆ ಅಥವಾ ಸ್ವೀಕರಿಸಿದರೆ ಅದು ದುರ್ವ್ಯಾಪಾರದ ಅಪರಾಧವಾಗುತ್ತದೆ.

*ವಿವರಣೆ 1.-* "ಶೋಷಣೆ" ಎಂಬ ಪದವು, ದೈಹಿಕ ಶೋಷಣೆಯ ಯಾವುದೇ ಕೃತ್ಯವನ್ನು ಅಥವಾ ಯಾವುದೇ ರೀತಿಯ ಲೈಂಗಿಕ ಶೋಷಣೆಯನ್ನು, ಗುಲಾಮಗಿರಿಯನ್ನು ಅಥವಾ ಗುಲಾಮಗಿರಿಗೆ, ದಾಸ್ಯಕ್ಕೆ ಸಮವಾಗಿರುವ ಆಚರಣೆಯನ್ನು ಅಥವಾ ಅಂಗಗಳನ್ನು ಬಲಾತ್ಕಾರದಿಂದ ತೆಗೆದುಹಾಕುವುದನ್ನು ಒಳಗೊಳ್ಳತಕ್ಕದ್ದು.

*ವಿವರಣೆ 2.-* ದುರ್ವ್ಯಾಪಾರದ ಅಪರಾಧವನ್ನು ನಿರ್ಣಯಿಸುವಾಗ ಸಂತ್ರಸ್ತ ವ್ಯಕ್ತಿಯ ಸಮ್ಮತಿಯು ಗೌಣವಾಗಿರುತ್ತದೆ.

(2) ದುರ್ವ್ಯಾಪಾರದ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಅಪರಾಧವು, ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳ ದುರ್ವ್ಯಾಪಾರ ಮಾಡಿರುವುದನ್ನು ಒಳಗೊಂಡಿರುವಾಗ ಅದು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾಗಿರತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಅಪರಾಧವು ಮಗುವನ್ನು ದುರ್ವ್ಯಾಪಾರ ಮಾಡಿರುವುದನ್ನು ಒಳಗೊಂಡಿರುವಾಗ ಅದು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾಗಿರತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಅಪರಾಧವು ಒಂದಕ್ಕಿಂತ ಹೆಚ್ಚು ಮಗುವನ್ನು ದುರ್ವ್ಯಾಪಾರ ಮಾಡಿರುವುದನ್ನು ಒಳಗೊಂಡಿರುವಾಗ ಅದು ಹದಿನಾಲ್ಕು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾಗಿರತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ವ್ಯಕ್ತಿಯು, ಮಗುವನ್ನು ದುರ್ವ್ಯಾಪಾರ ಮಾಡಿದ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚಿನ ಸಲ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಅಂಥ ವ್ಯಕ್ತಿಯು ಆಜೀವ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(7) ಯಾರೇ ವ್ಯಕ್ತಿಯ ದುರ್ವ್ಯಾಪಾರದಲ್ಲಿ ಲೋಕ ನೌಕರನು ಅಥವಾ ಪೊಲೀಸ್ ಅಧಿಕಾರಿಯು ತೊಡಗಿಕೊಂಡಿದ್ದರೆ, ಅಂಥ ಲೋಕ ನೌಕರನು ಅಥವಾ ಪೊಲೀಸ್ ಅಧಿಕಾರಿಯು, ಆಜೀವ ಕಾರಾವಾಸದಿಂದ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**144. ದುರ್ವ್ಯಾಪಾರಕ್ಕೊಳಗಾದ ವ್ಯಕ್ತಿಯ ಶೋಷಣೆ.-** (1) ಮಗುವು ದುರ್ವ್ಯಾಪಾರಕ್ಕೊಳಗಾಗಿದೆ ಎಂದು ತಿಳಿದಿದ್ದರೂ ಅಥವಾ ನಂಬಲು ಕಾರಣವಿದ್ದರೂ ಅಂಥ ಮಗುವನ್ನು ಯಾರೇ ವ್ಯಕ್ತಿಯು ಯಾವುದೇ ರೀತಿಯಲ್ಲಿ ಲೈಂಗಿಕ ಶೋಷಣೆಗೆ ಒಳಪಡಿಸಿದರೆ, ಅವನು ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಆತನು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು ದುರ್ವ್ಯಾಪಾರಕ್ಕೊಳಗಾಗಿದ್ದಾನೆಂದು ತಿಳಿದಿದ್ದರೂ ಅಥವಾ ನಂಬಲು ಕಾರಣವಿದ್ದರೂ ಅಂಥ ವ್ಯಕ್ತಿಯನ್ನು ಯಾವುದೇ ರೀತಿಯಲ್ಲಿ ಲೈಂಗಿಕ ಶೋಷಣೆಗೊಳಪಡಿಸುವ ಯಾರೇ ವ್ಯಕ್ತಿಯು, ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಆತನು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**145. ಗುಲಾಮರ ಬಗ್ಗೆ ರೂಢಿಗತ ವ್ಯವಹಾರ.-** ಗುಲಾಮರನ್ನು ರೂಢಿಗತವಾಗಿ ಆಮದು ಮಾಡಿಕೊಳ್ಳುವ, ರಫ್ತು ಮಾಡುವ, ಸ್ಥಳಾಂತರಿಸುವ, ಕೊಂಡುಕೊಳ್ಳುವ, ಮಾರಾಟ ಮಾಡುವ, ದುರ್ವ್ಯಾಪಾರ ಮಾಡುವ ಅಥವಾ ವ್ಯವಹರಿಸುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**146. ಕಾನೂನುಬಾಹಿರ ಕಡ್ಡಾಯ ದುಡಿಮೆ.-** ಯಾರೇ ವ್ಯಕ್ತಿಯನ್ನು ಅವನ ಇಚ್ಛೆಗೆ ವಿರುದ್ಧವಾಗಿ ದುಡಿಯಬೇಕೆಂದು ಕಾನೂನುಬಾಹಿರವಾಗಿ ಒತ್ತಾಯಿಸುವ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ VII

## ರಾಷ್ಟ್ರದ ವಿರುದ್ಧದ ಅಪರಾಧಗಳು

**147. ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡುವುದು ಅಥವಾ ಯುದ್ಧ ಹೂಡುವುದಕ್ಕೆ ಪ್ರಯತ್ನ ಮಾಡುವುದು ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡುವುದು.-** ಯಾರೇ ವ್ಯಕ್ತಿಯು, ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡಿದರೆ ಅಥವಾ ಅಂಥ ಯುದ್ಧವನ್ನು ಹೂಡಲು ಪ್ರಯತ್ನಿಸಿದರೆ ಅಥವಾ ಅಂಥ ಯುದ್ಧವನ್ನು ಹೂಡುವುದಕ್ಕೆ ದುಷ್ಪ್ರೇರಣೆ ಮಾಡಿದರೆ ಅವನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ದೃಷ್ಟಾಂತ*

'ಎ'ನು ಭಾರತ ಸರ್ಕಾರದ ವಿರುದ್ಧವಾದ ಬಂಡಾಯದಲ್ಲಿ ಸೇರುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**148. ಪ್ರಕರಣ 147ರ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಲು ಒಳಸಂಚು.-** ಯಾರೇ ವ್ಯಕ್ತಿಯು ಭಾರತದ ಒಳಗೆ ಅಥವಾ ಭಾರತದ ಹೊರಗೆ ಮತ್ತು ಆಚೆಗೆ, 147ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಲು ಒಳಸಂಚು ಮಾಡಿದರೆ ಅಥವಾ ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಆಪರಾಧಿಕ ಬಲಪ್ರಯೋಗದ ಮೂಲಕ ಅಥವಾ ಆಪರಾಧಿಕ ಬಲಪ್ರದರ್ಶನದ ಮೂಲಕ ಭಯ ಹುಟ್ಟಿಸಲು ಒಳಸಂಚು ಮಾಡಿದರೆ ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದ ಮೇರೆಗೆ ಒಳಸಂಚು ಎನಿಸಬೇಕಾದರೆ, ಅದಕ್ಕೆ ಅನುಸಾರವಾಗಿ ಯಾವುದೇ ಕೃತ್ಯವು ಅಥವಾ ಕಾನೂನುಬಾಹಿರವಾದ ಲೋಪವು ನಡೆಯುವುದು ಅಗತ್ಯವಿಲ್ಲ.

**149. ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡುವ ಉದ್ದೇಶದಿಂದ ಶಸ್ತ್ರ, ಮುಂತಾದವುಗಳನ್ನು ಸಂಗ್ರಹಿಸುವುದು.-** ಯಾರೇ ವ್ಯಕ್ತಿಯು ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡುವ ಅಥವಾ ಯುದ್ಧ ಹೂಡಲು ಸಿದ್ಧನಾಗುವ ಉದ್ದೇಶದಿಂದ ಜನರನ್ನು, ಶಸ್ತ್ರಗಳನ್ನು ಅಥವಾ ಮದ್ದುಗುಂಡುಗಳನ್ನು ಸಂಗ್ರಹಿಸಿದರೆ ಅಥವಾ ಅನ್ಯಥಾ ಯುದ್ಧ ಹೂಡಲು ಸಿದ್ಧತೆ ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**150. ಯುದ್ಧ ಹೂಡುವ ಸಂಚಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮರೆಮಾಚುವುದು.-** ಯಾರೇ ವ್ಯಕ್ತಿಯು ಯಾವುದೇ ಕೃತ್ಯದಿಂದ ಅಥವಾ ಯಾವುದೇ ಕಾನೂನುಬಾಹಿರ ಲೋಪದಿಂದ, ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡಲು ಇರುವ ಸಂಚನ್ನು ಮರೆಮಾಚುವ ಮೂಲಕ ಹಾಗೆ ಯುದ್ಧ ಹೂಡುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅಥವಾ ಅನುಕೂಲ ಕಲ್ಪಿಸುವ ಸಂಭವವಿದೆಯೆಂದು ತಿಳಿದೂ ಸಂಚನ್ನು ಮರೆಮಾಚಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**151. ಯಾವುದೇ ಕಾನೂನುಬದ್ಧ ಅಧಿಕಾರ ಚಲಾಯಿಸಲು ಅಥವಾ ಯಾವುದೇ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸದಂತೆ ಪ್ರತಿಬಂಧಿಸಲು ಬಲವಂತ ಮಾಡುವ ಉದ್ದೇಶದಿಂದ ರಾಷ್ಟ್ರಪತಿ, ರಾಜ್ಯಪಾಲ, ಮುಂತಾದವರ ಮೇಲೆ ಹಲ್ಲೆ ಮಾಡುವುದು.-** ಭಾರತದ ರಾಷ್ಟ್ರಪತಿಯು ಅಥವಾ ಯಾವುದೇ ರಾಜ್ಯದ ರಾಜ್ಯಪಾಲರು, ರಾಷ್ಟ್ರಪತಿಯಾಗಿ ಅಥವಾ ರಾಜ್ಯಪಾಲನಾಗಿ ತಾನು ಹೊಂದಿರುವ ಕಾನೂನುಬದ್ಧ ಅಧಿಕಾರಗಳ ಪೈಕಿ ಯಾವುದನ್ನಾದರೂ ಯಾವುದೇ ರೀತಿಯಲ್ಲಿ ಚಲಾಯಿಸುವಂತೆ ಅಥವಾ ಚಲಾಯಿಸದಂತೆ ಪ್ರೇರೇಪಿಸುವ ಅಥವಾ ನಿರ್ಬಂಧಿಸುವ ಉದ್ದೇಶದಿಂದ ಯಾರೇ ವ್ಯಕ್ತಿಯು, ಅಂಥ ರಾಷ್ಟ್ರಪತಿಯ ಅಥವಾ ರಾಜ್ಯಪಾಲನ ಮೇಲೆ ಹಲ್ಲೆ ಮಾಡಿದರೆ ಅಥವಾ ಆಪರಾಧಿಕ ಬಲವನ್ನು ಬಳಸಿ ಅಥವಾ ಆಪರಾಧಿಕ ಬಲವನ್ನು ತೋರಿಸಿ ಅಕ್ರಮವಾಗಿ ನಿರ್ಬಂಧಿಸಿದರೆ ಅಥವಾ ಅಕ್ರಮವಾಗಿ ನಿರ್ಬಂಧಿಸಲು ಪ್ರಯತ್ನಿಸಿದರೆ ಅಥವಾ ಭಯ ಹುಟ್ಟಿಸಿದರೆ ಅಥವಾ ಭಯ ಹುಟ್ಟಿಸಲು ಪ್ರಯತ್ನಿಸಿದರೆ, ಅವನು ಏಳು

ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**152. ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಗೆ ಅಪಾಯವನ್ನುಂಟುಮಾಡುವ ಕೃತ್ಯ.-** ಉದ್ದೇಶಪೂರ್ವಕವಾಗಿ ಅಥವಾ ತಿಳಿದೂ ತಿಳಿದೂ ಮಾತನಾಡುವ ಅಥವಾ ಲಿಖಿತ ಪದಗಳ ಮೂಲಕ ಅಥವಾ ಸಂಜ್ಞೆಗಳ **ಮೂಲಕ ಅಥವಾ** ದೃಶ್ಯರೂಪದಲ್ಲಿ ತೋರಿಸುವ ಮೂಲಕ ಅಥವಾ **ವಿದ್ಯುನ್ಮಾನ ಸಂವಹನದ ಮೂಲಕ** ಅಥವಾ ಆರ್ಥಿಕ ಸಾಧನದ ಬಳಕೆಯ ಮೂಲಕ**,** ಅಥವಾ **ಇನ್ನಾವುದೇ ರೀತಿಯಲ್ಲಿ ಪ್ರತ್ಯೇಕತೆ ಅಥವಾ ಸಶಸ್ತ್ರ ದಂಗೆ ಅಥವಾ ವಿಧ್ವಂಸಕ ಚಟುವಟಿಕೆಗಳಿಗೆ** ಪ್ರೇರೇಪಿಸುವ ಅಥವಾ ಪ್ರೇರೇಪಿಸಲು ಪ್ರಯತ್ನಿಸುವ ಅಥವಾ **ಪ್ರತ್ಯೇಕತಾವಾದಿ ಚಟುವಟಿಕೆಗಳ ಭಾವನೆಗಳನ್ನು ಉತ್ತೇಜಿಸುವ ಅಥವಾ ಭಾರತದ ಸಾರ್ವಭೌಮತ್ವ ಅಥವಾ ಏಕತೆ ಮತ್ತು ಅಖಂಡತೆಗೆ ಅಪಾಯವನ್ನುಂಟುಮಾಡುವ ಅಥವಾ** ಅಂಥ **ಯಾವುದೇ ಕೃತ್ಯದಲ್ಲಿ** ತೊಡಗುವ ಅಥವಾ ಮಾಡುವ ಯಾರೇ ವ್ಯಕ್ತಿಯು**, ಆಜೀವ ಕಾರಾವಾಸ** ಅಥವಾ ಏಳು ವರ್ಷಗಳವರೆಗೆ **ವಿಸ್ತರಿಸಬಹುದಾದ ಅವಧಿಯ** ಕಾರಾವಾಸದಿಂದ ದಂಡಿತನಾಗತಕ್ಕದ್ದು **ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

*ವಿವರಣೆ.-* ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ಚಟುವಟಿಕೆಗಳನ್ನು ಪ್ರೇರೇಪಿಸದೆ ಅಥವಾ ಪ್ರೇರೇಪಿಸಲು ಪ್ರಯತ್ನಿಸದೆ ಕಾನೂನುಬದ್ಧ ವಿಧಾನಗಳ ಮೂಲಕ ಅವುಗಳ ಮಾರ್ಪಾಡುಗಳನ್ನು ಪಡೆಯುವ ಉದ್ದೇಶದಿಂದ **ಸರ್ಕಾರದ ಕ್ರಮಗಳು ಅಥವಾ ಆಡಳಿತಾತ್ಮಕ ಅಥವಾ ಇತರ ಕ್ರಮಗಳ ಬಗ್ಗೆ ಅಸಮ್ಮತಿ ವ್ಯಕ್ತಪಡಿಸುವ** ಅಭಿಪ್ರಾಯ**ಗಳು ಈ** ಪ್ರಕರಣದಡಿಯಲ್ಲಿ **ಅಪರಾಧವಾಗುವುದಿಲ್ಲ.**

**153. ಭಾರತ ಸರ್ಕಾರದೊಂದಿಗೆ ಶಾಂತಿಯುತವಾದ ಸಂಬಂಧ ಇಟ್ಟುಕೊಂಡಿರುವ ಯಾವುದೇ ವಿದೇಶಿ ರಾಷ್ಟ್ರದ ಸರ್ಕಾರದ ವಿರುದ್ಧ ಯುದ್ಧ ಹೂಡುವುದು.-** ಭಾರತ ಸರ್ಕಾರದೊಂದಿಗೆ **ಶಾಂತಿಯುತ ಸಂಬಂಧವನ್ನು ಇಟ್ಟುಕೊಂಡಿರುವ ಯಾವುದೇ** ವಿದೇಶಿ ರಾಷ್ಟ್ರದ ಸರ್ಕಾರದ ವಿರುದ್ಧ ಯಾರೇ ವ್ಯಕ್ತಿಯು ಯುದ್ಧ ಹೂಡಿದರೆ ಅಥವಾ ಅಂಥ ಯುದ್ಧ ಹೂಡಲು ಪ್ರಯತ್ನಿಸಿದರೆ ಅಥವಾ ಯುದ್ಧ ಹೂಡಲು ದುಷ್ಪ್ರೇರಣೆ ಮಾಡಿದರೆ ಅವನು ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು, ಆ ಆಜೀವ ಕಾರಾವಾಸಕ್ಕೆ ಜುಲ್ಮಾನೆಯನ್ನೂ ಸೇರಿಸಬಹುದು ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು, ಇದರೊಂದಿಗೆ ಜುಲ್ಮಾನೆಯನ್ನೂ ಸೇರಿಸಬಹುದು ಅಥವಾ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**154. ಭಾರತ ಸರ್ಕಾರದೊಂದಿಗೆ ಶಾಂತಿಯುತವಾದ ಸಂಬಂಧವನ್ನು ಇಟ್ಟುಕೊಂಡಿರುವ ವಿದೇಶಿ ರಾಷ್ಟ್ರದ ರಾಜ್ಯಕ್ಷೇತ್ರಗಳಲ್ಲಿ ಲೂಟಿ ಮಾಡುವುದು.-** ಭಾರತ ಸರ್ಕಾರದೊಂದಿಗೆ ಶಾಂತಿಯುತವಾದ ಸಂಬಂಧವನ್ನು ಇಟ್ಟುಕೊಂಡಿರುವ ಯಾವುದೇ ವಿದೇಶಿ ರಾಷ್ಟ್ರದ ರಾಜ್ಯಕ್ಷೇತ್ರಗಳಲ್ಲಿ ಯಾರೇ ವ್ಯಕ್ತಿಯು ಲೂಟಿ ಮಾಡಿದರೆ, ಲೂಟಿ ಮಾಡಲು ಸಿದ್ಧತೆ ನಡೆಸಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಅಂಥ ಲೂಟಿ ಮಾಡುವುದಕ್ಕಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಅಥವಾ ಅಂಥ ಲೂಟಿಯಿಂದ ಆರ್ಜಿಸಿದ ಯಾವುದೇ ಸ್ವತ್ತು ಮುಟ್ಟುಗೋಲಿಗೂ ಗುರಿಯಾಗತಕ್ಕದ್ದು.

**155. ಪ್ರಕರಣ 153 ಮತ್ತು ಪ್ರಕರಣ 154ರಲ್ಲಿ ನಮೂದಿಸಿದಂತೆ ಯುದ್ಧ ಮಾಡಿ ಅಥವಾ ಲೂಟಿ ಮಾಡುವ ಮೂಲಕ ತೆಗೆದುಕೊಂಡ ಸ್ವತ್ತನ್ನು ಸ್ವೀಕರಿಸುವುದು.-** ಯಾರೇ ವ್ಯಕ್ತಿಯು, 153ನೇ ಮತ್ತು 154ನೇ ಪ್ರಕರಣಗಳಲ್ಲಿ ಹೇಳಿರುವಂಥ ಯಾವುದೇ ಅಪರಾಧಗಳನ್ನು ಮಾಡುವಾಗ ತೆಗೆದುಕೊಳ್ಳಲಾದ ಸ್ವತ್ತು ಎಂದು ತಿಳಿದೂ ತಿಳಿದೂ ಅಂಥ ಯಾವುದೇ ಸ್ವತ್ತನ್ನು ಸ್ವೀಕರಿಸಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಹಾಗೆ ಸ್ವೀಕರಿಸಿದ ಸ್ವತ್ತು ಮುಟ್ಟುಗೋಲಿಗೂ ಗುರಿಯಾಗತಕ್ಕದ್ದು.

**156. ಲೋಕ ನೌಕರನು ರಾಷ್ಟ್ರ ಕೈದಿ ಅಥವಾ ಯುದ್ಧ ಕೈದಿಗೆ ತಪ್ಪಿಸಿಕೊಂಡು ಹೋಗಲು ಸ್ವಯಿಚ್ಛೆಯಿಂದ ಅವಕಾಶ ಮಾಡಿಕೊಡುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು ರಾಷ್ಟ್ರ ಕೈದಿಯ ಅಥವಾ ಯುದ್ಧ ಕೈದಿಯ ಅಭಿರಕ್ಷೆಯನ್ನು

ಹೊಂದಿದ್ದು, ಅಂಥ ಕೈದಿಯು ಯಾವ ಸ್ಥಳದಲ್ಲಿ ಬಂಧನದಲ್ಲಿರುವನೋ ಆ ಸ್ಥಳದಿಂದ ತಪ್ಪಿಸಿಕೊಂಡು ಹೋಗಲು ಸ್ವಯಿಚ್ಛೆಯಿಂದ ಅವಕಾಶ ಮಾಡಿಕೊಟ್ಟರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**157. ಲೋಕ ನೌಕರನು ತನ್ನ ನಿರ್ಲಕ್ಷ್ಯದಿಂದ ಅಂಥ ಕೈದಿಯು ತಪ್ಪಿಸಿಕೊಂಡು ಹೋಗುವುದಕ್ಕೆ ಆಸ್ಪದ ಮಾಡಿಕೊಡುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು ರಾಷ್ಟ್ರ ಕೈದಿಯ ಅಥವಾ ಯುದ್ಧ ಕೈದಿಯ ಅಭಿರಕ್ಷೆಯನ್ನು ಹೊಂದಿದ್ದು ತನ್ನ ನಿರ್ಲಕ್ಷ್ಯದಿಂದ ಅಂಥ ಕೈದಿಯು ಯಾವ ಸ್ಥಳದಲ್ಲಿ ಬಂಧನದಲ್ಲಿರುವನೋ ಆ ಸ್ಥಳದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಆಸ್ಪದ ಮಾಡಿಕೊಟ್ಟರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಸಾದಾ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**158. ಅಂಥ ಕೈದಿಯು ತಪ್ಪಿಸಿಕೊಳ್ಳಲು ಅಥವಾ ಅವನನ್ನು ಬಿಡಿಸಿಕೊಳ್ಳಲು ಸಹಾಯ ಮಾಡುವುದು ಅಥವಾ ಅವನಿಗೆ ಆಶ್ರಯ ನೀಡುವುದು.-** ಯಾರೇ ವ್ಯಕ್ತಿಯು ಯಾರೇ ರಾಷ್ಟ್ರ ಕೈದಿಗೆ ಅಥವಾ ಯುದ್ಧ ಕೈದಿಗೆ ಕಾನೂನುಬದ್ಧ ಅಭಿರಕ್ಷೆಯಿಂದ ತಪ್ಪಿಸಿಕೊಳ್ಳಲು ತಿಳಿದೂ ತಿಳಿದೂ ಸಹಾಯ ಮಾಡಿದರೆ ಅಥವಾ ನೆರವು ನೀಡಿದರೆ ಅಥವಾ ಅಂಥ ಯಾರೇ ಕೈದಿಯನ್ನು ಬಿಡಿಸಿದರೆ ಅಥವಾ ಬಿಡಿಸಲು ಪ್ರಯತ್ನಿಸಿದರೆ ಅಥವಾ ಹಾಗೆ ಕಾನೂನುಬದ್ಧ ಅಭಿರಕ್ಷೆಯಿಂದ ತಪ್ಪಿಸಿಕೊಂಡಂಥ ಯಾರೇ ಕೈದಿಗೆ ಆಶ್ರಯ ನೀಡಿದರೆ ಅಥವಾ ಬಚ್ಚಿಟ್ಟರೆ ಅಥವಾ ಅಂಥ ಕೈದಿಯನ್ನು ಪುನಃ ಹಿಡಿಯುವ ಪ್ರಯತ್ನಕ್ಕೆ ಯಾವುದೇ ರೀತಿಯಲ್ಲಿ ಪ್ರತಿರೋಧ ಮಾಡಿದರೆ ಅಥವಾ ಪ್ರತಿರೋಧಿಸಲು ಪ್ರಯತ್ನಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಪೆರೋಲ್ ಮೇಲೆ ಬಿಡುಗಡೆಯಾಗಿರುವ ಯಾವ ರಾಷ್ಟ್ರ ಕೈದಿಗೆ ಅಥವಾ ಯುದ್ಧ ಕೈದಿಗೆ ಭಾರತದೊಳಗೆ ನಿರ್ದಿಷ್ಟ ಸರಹದ್ದುಗಳಲ್ಲಿ ಸ್ವತಂತ್ರನಾಗಿರಲು ಅನುಮತಿ ನೀಡಲಾಗಿದೆಯೋ ಆ ರಾಷ್ಟ್ರ ಕೈದಿಯು ಅಥವಾ ಯುದ್ಧ ಕೈದಿಯು ಅಂಥ ಸರಹದ್ದುಗಳ ಆಚೆಗೆ ಹೋದರೆ ಅವನು ಕಾನೂನುಬದ್ಧ ಅಭಿರಕ್ಷೆಯಿಂದ ತಪ್ಪಿಸಿಕೊಂಡಿದ್ದಾನೆಂದು ಹೇಳಲಾಗುತ್ತದೆ.

## ಅಧ್ಯಾಯ VIII

## ಭೂ ಸೇನೆ, ನೌಕಾ ಸೇನೆ ಮತ್ತು ವಾಯು ಸೇನೆಗಳಿಗೆ ಸಂಬಂಧಿಸಿದ ಅಪರಾಧಗಳು

**159. ದಂಗೆಗೆ ದುಷ್ಪ್ರೇರಣೆ ಅಥವಾ ಸೈನಿಕನನ್ನು, ನೌಕಾ ಸೈನಿಕನನ್ನು ಅಥವಾ ವಾಯುಸೇನೆಯ ಸೈನಿಕನನ್ನು ಅವನ ಕರ್ತವ್ಯದಿಂದ ವಿಮುಖನನ್ನಾಗಿ ಮಾಡಲು ಪ್ರಯತ್ನಿಸುವುದು.-** ಯಾರೇ ವ್ಯಕ್ತಿಯು, ಭಾರತ ಸರ್ಕಾರದ ಭೂ ಸೇನೆಯಲ್ಲಿ, ನೌಕಾ ಸೇನೆಯಲ್ಲಿ ಅಥವಾ ವಾಯುಸೇನೆಯಲ್ಲಿ ಇರುವ ಅಧಿಕಾರಿಗೆ, ಭೂ ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯು ಸೇನೆಯ ಸೈನಿಕನಿಗೆ ದಂಗೆ ಮಾಡಲು ದುಷ್ಪ್ರೇರಣೆ ಮಾಡಿದರೆ ಅಥವಾ ಅಂಥ ಯಾರೇ ಅಧಿಕಾರಿಯನ್ನು, ಸೈನಿಕನನ್ನು, ನೌಕಾ ಸೈನಿಕನನ್ನು ಅಥವಾ ವಾಯುಸೇನೆಯ ಸೈನಿಕನನ್ನು ಅವನ ನಿಷ್ಠೆಯಿಂದ ಅಥವಾ ಕರ್ತವ್ಯದಿಂದ ವಿಮುಖನನ್ನಾಗಿ ಮಾಡಲು ಪ್ರಯತ್ನಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**160. ದಂಗೆಗೆ ದುಷ್ಪ್ರೇರಣೆ, ಅದರ ಪರಿಣಾಮವಾಗಿ ದಂಗೆ ನಡೆದರೆ.-** ಯಾರೇ ವ್ಯಕ್ತಿಯು ಭಾರತ ಸರ್ಕಾರದ ಭೂ ಸೇನೆಯ, ನೌಕಾ ಸೇನೆಯ ಅಥವಾ ವಾಯು ಸೇನೆಯ ಯಾರೇ ಅಧಿಕಾರಿಗೆ, ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯುಸೇನೆಯ ಸೈನಿಕನಿಗೆ ದಂಗೆ ಮಾಡಲು ದುಷ್ಪ್ರೇರಣೆ ಮಾಡಿದರೆ ಮತ್ತು ಆ ದುಷ್ಪ್ರೇರಣೆಯ ಪರಿಣಾಮವಾಗಿ ದಂಗೆಯು ನಡೆದರೆ, ಅವನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**161. ಸೈನಿಕನ, ನೌಕಾಸೈನಿಕನ ಅಥವಾ ವಾಯುಸೇನೆಯ ಸೈನಿಕನ ಮೇಲಾಧಿಕಾರಿಯು ತನ್ನ ಹುದ್ದೆಯ ಕರ್ತವ್ಯ ನಿರ್ವಹಣೆ ಮಾಡುತ್ತಿರುವಾಗ ಆ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಅಧಿಕಾರಿಗೆ, ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯು ಸೈನಿಕನಿಗೆ ದುಷ್ಪ್ರೇರಣೆ.-** ಯಾರೇ ವ್ಯಕ್ತಿಯು ಭಾರತ ಸರ್ಕಾರದ ಭೂ ಸೇನೆಯ, ನೌಕಾ ಸೇನೆಯ ಅಥವಾ ವಾಯು ಸೇನೆಯ ಯಾರೇ ಅಧಿಕಾರಿಯ, ಸೈನಿಕನ, ನೌಕಾಸೈನಿಕನ ಅಥವಾ ವಾಯುಸೇನೆಯ ಸೈನಿಕನ ಮೇಲಾಧಿಕಾರಿಯು ತನ್ನ ಹುದ್ದೆಯ ಕರ್ತವ್ಯ ನಿರ್ವಹಿಸುತ್ತಿರುವಾಗ ಆ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಅಧಿಕಾರಿಗೆ, ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯು ಸೈನಿಕನಿಗೆ ದುಷ್ಪ್ರೇರಣೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**162. ಅಂಥ ಹಲ್ಲೆಗೆ ದುಷ್ಪ್ರೇರಣೆ, ಅದರ ಪರಿಣಾಮವಾಗಿ ಹಲ್ಲೆ ನಡೆದರೆ.-** ಭಾರತ ಸರ್ಕಾರದ ಭೂ ಸೇನೆಯ, ನೌಕಾ ಸೇನೆಯ ಅಥವಾ ವಾಯುಸೇನೆಯ ಯಾರೇ ಅಧಿಕಾರಿಯ, ಭೂ ಸೈನಿಕನ, ನೌಕಾಸೈನಿಕನ ಅಥವಾ ವಾಯು ಸೇನೆಯ ಸೈನಿಕನ ಮೇಲಧಿಕಾರಿಯು ತನ್ನ ಹುದ್ದೆಯ ಕರ್ತವ್ಯ ನಿರ್ವಹಿಸುತ್ತಿರುವಾಗ ಆ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಅಧಿಕಾರಿಗೆ, ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯುಸೇನೆಯ ಸೈನಿಕನಿಗೆ ಯಾರೇ ವ್ಯಕ್ತಿಯು ದುಷ್ಪ್ರೇರಣೆ ಮಾಡಿದರೆ ಮತ್ತು ಆ ದುಷ್ಪ್ರೇರಣೆಯ ಪರಿಣಾಮವಾಗಿ ಅಂಥ ಹಲ್ಲೆಯು ನಡೆದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**163. ಸೈನಿಕನು, ನೌಕಾಸೈನಿಕನು ಅಥವಾ ವಾಯುಸೇನೆಯ ಸೈನಿಕನು ದಳವನ್ನು ತ್ಯಜಿಸಿ ಹೋಗಲು ದುಷ್ಪ್ರೇರಣೆ.-** ಯಾರೇ ವ್ಯಕ್ತಿಯು, ಭಾರತ ಸರ್ಕಾರದ ಭೂ ಸೇನೆಯ, ನೌಕಾ ಸೇನೆಯ ಅಥವಾ ವಾಯು ಸೇನೆಯ ಯಾರೇ ಅಧಿಕಾರಿಗೆ, ಸೈನಿಕನಿಗೆ, ನೌಕಾಸೈನಿಕನಿಗೆ ಅಥವಾ ವಾಯುಸೇನೆಯ ಸೈನಿಕನಿಗೆ ದಳವನ್ನು ತ್ಯಜಿಸಿ ಹೋಗಲು ದುಷ್ಪ್ರೇರಣೆ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**164. ತ್ಯಜಿಸಿದವನಿಗೆ ಆಶ್ರಯ ನೀಡುವುದು.-** ಯಾರೇ ವ್ಯಕ್ತಿಯು ಇದರಲ್ಲಿ ಇನ್ನು ಮುಂದೆ ವಿನಾಯಿತಿಗೊಳಿಸಿರುವುದರ ಹೊರತು ಭಾರತ ಸರ್ಕಾರದ ಭೂ ಸೇನೆಯ, ನೌಕಾ ಸೇನೆಯ ಅಥವಾ ವಾಯು ಸೇನೆಯ ಅಧಿಕಾರಿಯು, ಸೈನಿಕನು, ನೌಕಾಸೈನಿಕನು ಅಥವಾ ವಾಯುಸೇನೆಯ ಸೈನಿಕನು ದಳವನ್ನು ತ್ಯಜಿಸಿರುವನೆಂದು ತಿಳಿದೂ ತಿಳಿದೂ ಅಥವಾ ತ್ಯಜಿಸಿರುವನೆಂದು ನಂಬಲು ಕಾರಣವಿದ್ದೂ ಅಂಥ ಅಧಿಕಾರಿಗೆ, ಸೈನಿಕನಿಗೆ, ನೌಕಾಸೈನಿಕನಿಗೆ ಅಥವಾ ವಾಯುಸೇನೆಯ ಸೈನಿಕನಿಗೆ ಆಶ್ರಯ ನೀಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ಅಪವಾದ.-* ತ್ಯಜಿಸಿದವನ ಸಂಗಾತಿಯು ಆಶ್ರಯವನ್ನು ನೀಡಿದ್ದ ಸಂದರ್ಭದಲ್ಲಿ ಈ ಉಪಬಂಧವು ಅನ್ವಯವಾಗುವುದಿಲ್ಲ.

**165. ತ್ಯಜಿಸಿದವನನ್ನು ವ್ಯಾಪಾರಿ ಹಡಗಿನ ಯಜಮಾನನ ನಿರ್ಲಕ್ಷ್ಯದ ನಿಮಿತ್ತ ಬಚ್ಚಿಡುವುದು.-** ಭಾರತ ಸರ್ಕಾರದ ಭೂ ಸೇನೆಯನ್ನು, ನೌಕಾ ಸೇನೆಯನ್ನು ಅಥವಾ ವಾಯು ಸೇನೆಯನ್ನು ತ್ಯಜಿಸಿ ಬಂದ ಸೈನಿಕನನ್ನು, ನೌಕಾಸೈನಿಕನನ್ನು ಅಥವಾ ವಾಯುಸೇನೆಯ ಸೈನಿಕನನ್ನು ಯಾವ ವ್ಯಾಪಾರಿ ಹಡಗಿನಲ್ಲಿ ಬಚ್ಚಿಡಲಾಗಿದೆಯೋ ಅದರ ಯಜಮಾನನು ಅಥವಾ ಅದರ ಆಡಳಿತವನ್ನು ಹೊಂದಿರುವ ವ್ಯಕ್ತಿಯು, ಹಾಗೆ ಬಚ್ಚಿಡಲಾಗಿದೆಯೆಂಬ ಸಂಗತಿಯನ್ನು ತಿಳಿದಿರದಿದ್ದರೂ, ಹಾಗೆ ಯಜಮಾನನಾಗಿ ಅಥವಾ ಅದರ ಆಡಳಿತವನ್ನು ಹೊಂದಿದವನಾಗಿ ತನ್ನ ಕರ್ತವ್ಯದಲ್ಲಿ ಸ್ವಲ್ಪಮಟ್ಟಿನ ನಿರ್ಲಕ್ಷತೆ ತೋರಿರದಿದ್ದರೆ ಅಥವಾ ಆ ಹಡಗಿನಲ್ಲಿ ಸ್ವಲ್ಪಮಟ್ಟಿನ ಶಿಸ್ತಿನ ಕೊರತೆ ಇರದಿದ್ದರೆ ಹಾಗೆ ಬಚ್ಚಿಟ್ಟಿರುವ ಸಂಗತಿ ಆತನಿಗೆ ತಿಳಿದು ಬರಬಹುದಾಗಿದ್ದ ಸಂದರ್ಭದಲ್ಲಿ ಅವನು ಮೂರು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**166. ಅವಿಧೇಯತೆಯ ಕೃತ್ಯವನ್ನು ಮಾಡಲು ಸೈನಿಕನಿಗೆ, ನೌಕಾಸೈನಿಕನಿಗೆ ಅಥವಾ ವಾಯುಸೇನೆಯ ಸೈನಿಕನಿಗೆ ದುಷ್ಪ್ರೇರಣೆ.-** ಭಾರತ ಸರ್ಕಾರದ ಭೂ ಸೇನೆಯ, ನೌಕಾಸೇನೆಯ ಅಥವಾ ವಾಯುಸೇನೆಯ ಅಧಿಕಾರಿಯು, ಭೂ ಸೇನೆಯ ಸೈನಿಕನು, ನೌಕಾ ಸೇನೆಯ ಸೈನಿಕನು ಅಥವಾ ವಾಯು ಸೇನೆಯ ಸೈನಿಕನು ಮಾಡುತ್ತಿರುವ ಕೃತ್ಯವು ಅವಿಧೇಯ ಕೃತ್ಯವೆಂದು ತಿಳಿದೂ ತಿಳಿದೂ ಅದನ್ನು ಮಾಡುವಂತೆ ಯಾರೇ ವ್ಯಕ್ತಿಯು ದುಷ್ಪ್ರೇರಣೆ ಮಾಡಿದರೆ ಮತ್ತು ಆ ದುಷ್ಪ್ರೇರಣೆಯ ಪರಿಣಾಮವಾಗಿ ಅಂಥ ಅವಿಧೇಯತೆಯ ಕೃತ್ಯವು ನಡೆದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**167. ಕೆಲವು ಅಧಿನಿಯಮಗಳಿಗೆ ಒಳಪಟ್ಟಿರುವ ವ್ಯಕ್ತಿಗಳು.-** ವಾಯುಸೇನಾ ಅಧಿನಿಯಮ, 1950 (1950 ರ 45), ಸೇನಾ ಅಧಿನಿಯಮ, 1950 (1950ರ 46) ಮತ್ತು ನೌಕಾ ಸೇನಾ ಅಧಿನಿಯಮ, 1957 (1957ರ 62) ಇವುಗಳಿಗೆ ಒಳಪಟ್ಟಿರುವ ಯಾರೇ ವ್ಯಕ್ತಿಯು ಅಥವಾ ಈ ಅಧ್ಯಾಯದಲ್ಲಿ ಪರಿಭಾಷಿಸಿರುವ ಯಾವುದೇ ಅಪರಾಧಕ್ಕಾಗಿ ಈ ಸಂಹಿತೆಯ ಮೇರೆಗಿನ ದಂಡನೆಗೆ ಒಳಪಡತಕ್ಕದ್ದಲ್ಲ.

**168. ಸೈನಿಕ, ನೌಕಾಸೈನಿಕ ಅಥವಾ ವಾಯುಸೇನೆಯ ಸೈನಿಕನು ಉಪಯೋಗಿಸುವ ಉಡುಪನ್ನು ಅಥವಾ ಚಿಹ್ನೆ (ಟೋಕನ್)ಯನ್ನು ಧರಿಸುವುದು.-** ಯಾರೇ ವ್ಯಕ್ತಿಯು, ಭಾರತ ಸರ್ಕಾರದ ಭೂ ಸೇನೆ, ನೌಕಾ ಸೇನೆ ಅಥವಾ ವಾಯು ಸೇನೆಯಲ್ಲಿ ಸೈನಿಕ, ನೌಕಾಸೈನಿಕ ಅಥವಾ ವಾಯುಸೇನೆಯ ಸೈನಿಕನಾಗಿರದೆ ಅಂಥ ಒಬ್ಬ ಸೈನಿಕ, ನೌಕಾಸೈನಿಕ ಅಥವಾ ವಾಯುಸೇನೆಯ ಸೈನಿಕನು ಉಪಯೋಗಿಸುವ ಯಾವುದೇ ಉಡುಪನ್ನು ಅಥವಾ ಚಿಹ್ನೆ(ಟೋಕನ್)ಯನ್ನು ಹೋಲುವಂಥ ಉಡುಪನ್ನು ಅಥವಾ ಚಿಹ್ನೆ(ಟೋಕನ್)ಯನ್ನು ತಾನು ಅಂಥ ಸೈನಿಕ, ನೌಕಾ ಸೈನಿಕ ಅಥವಾ ವಾಯುಸೇನೆಯ ಸೈನಿಕನೆಂಬ ನಂಬಿಕೆ ಹುಟ್ಟಿಸುವ ಉದ್ದೇಶದಿಂದ ಧರಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ IX

### ಚುನಾವಣೆಗಳಿಗೆ ಸಂಬಂಧಿಸಿದ ಅಪರಾಧಗಳು

**169. ಅಭ್ಯರ್ಥಿ, ಚುನಾವಣೆಗೆ ಸಂಬಂಧಿಸಿದ ಹಕ್ಕು ಪದಗಳ ಪರಿಭಾಷೆ.-** ಈ ಅಧ್ಯಾಯದ ಉದ್ದೇಶಗಳಿಗಾಗಿ,-

(ಎ) ìಅಭ್ಯರ್ಥಿî ಎಂದರೆ, ಯಾವುದೇ ಚುನಾವಣೆಗೆ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾದ ವ್ಯಕ್ತಿ;

(ಬಿ) ìಚುನಾವಣೆಗೆ ಸಂಬಂಧಿಸಿದ ಹಕ್ಕುî ಎಂದರೆ, ಯಾವುದೇ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅಥವಾ ಸ್ಪರ್ಧಿಸದಿರಲು ಅಥವಾ ತನ್ನ ಉಮೇದುವಾರಿಕೆಯನ್ನು ಹಿಂಪಡೆಯಲು ಅಥವಾ ಚುನಾವಣೆಯಲ್ಲಿ ಮತದಾನ ಮಾಡಲು ಅಥವಾ ಮಾಡದೇ ಇರಲು ವ್ಯಕ್ತಿಗೆ ಇರುವ ಹಕ್ಕು.

**170. ಲಂಚಗುಳಿತನ.-** (1) ಯಾರೇ ವ್ಯಕ್ತಿಯು,-

(i) ಚುನಾವಣೆಗೆ ಸಂಬಂಧಿಸಿದ ಯಾವುದೇ ಹಕ್ಕನ್ನು ಚಲಾಯಿಸಲು ಯಾರೇ ವ್ಯಕ್ತಿಗೆ ಅಥವಾ ಇತರ ವ್ಯಕ್ತಿಯನ್ನು ಪ್ರೇರೇಪಿಸುವ ಉದ್ದೇಶದಿಂದ ಆ ವ್ಯಕ್ತಿಗೆ ಲಂಚ ನೀಡಿದರೆ ಅಥವಾ ಅಂಥ ಯಾವುದೇ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಆ ವ್ಯಕ್ತಿಗೆ ಪ್ರತಿಫಲ ನೀಡಿದರೆ; ಅಥವಾ

(ii) ಅಂಥ ಯಾವುದೇ ಹಕ್ಕನ್ನು ಚಲಾಯಿಸಲು ಅಥವಾ ಅಂಥ ಯಾವುದೇ ಹಕ್ಕನ್ನು ಚಲಾಯಿಸುವಂತೆ ಇತರ ಯಾರೇ ವ್ಯಕ್ತಿಯನ್ನು ಪ್ರೇರೇಪಿಸಲು ಅಥವಾ ಪ್ರೇರೇಪಿಸುವುದಕ್ಕಾಗಿ ಪ್ರಯತ್ನಿಸಲು ತನಗಾಗಿ ಅಥವಾ ಇತರೆ ಯಾರೇ ವ್ಯಕ್ತಿಗಾಗಿ ಪ್ರತಿಫಲದ ರೂಪದಲ್ಲಿ ಯಾವುದೇ ಲಂಚವನ್ನು ಸ್ವೀಕರಿಸಿದರೆ

- ಅವನು ಲಂಚಗುಳಿತನದ ಅಪರಾಧ ಮಾಡಿದಂತಾಗುತ್ತದೆ:

ಪರಂತು, ಸಾರ್ವಜನಿಕ ಕಾರ್ಯನೀತಿಗೆ ಅಥವಾ ಸಾರ್ವಜನಿಕ ಕ್ರಮದ ಆಶ್ವಾಸನೆಗೆ ಸಂಬಂಧಿಸಿದ ಘೋಷಣೆಯು ಈ ಪ್ರಕರಣದ ಮೇರೆಗೆ ಅಪರಾಧವಾಗತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ಲಂಚವನ್ನು ಕೊಡುವುದಾಗಿ ಹೇಳಿದರೆ ಅಥವಾ ಕೊಡಲು ಒಪ್ಪಿದರೆ ಅಥವಾ ದೊರಕಿಸಿಕೊಡುವುದಾಗಿ ಹೇಳಿದರೆ ಅಥವಾ ದೊರಕಿಸಿಕೊಡಲು ಪ್ರಯತ್ನಿಸಿದರೆ ಅವನು ಲಂಚವನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(3) ಯಾರೇ ವ್ಯಕ್ತಿಯು ಲಂಚವನ್ನು ಪಡೆದರೆ ಅಥವಾ ಸ್ವೀಕರಿಸಲು ಒಪ್ಪಿದರೆ ಅಥವಾ ಪಡೆಯಲು ಪ್ರಯತ್ನಿಸಿದರೆ, ಅವನು ಲಂಚವನ್ನು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ವ್ಯಕ್ತಿಯು ತಾನು ಮಾಡಲು ಉದ್ದೇಶಿಸಿರದ ಕೃತ್ಯವನ್ನು ಮಾಡುವುದಕ್ಕಾಗಿ ಅಥವಾ ತಾನು ಮಾಡದಿರುವ ಕೃತ್ಯವನ್ನು ಮಾಡಲು ಪ್ರತಿಫಲವಾಗಿ ಲಂಚವನ್ನು ಸ್ವೀಕರಿಸಿದರೆ ಅವನು ಆ ಲಂಚವನ್ನು ಪ್ರತಿಫಲವೆಂದು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು.

**171. ಚುನಾವಣೆಗಳಲ್ಲಿ ಅನುಚಿತ ಪ್ರಭಾವ.-** (1) ಯಾರೇ ವ್ಯಕ್ತಿಯು ಚುನಾವಣೆಗೆ ಸಂಬಂಧಿಸಿದ ಯಾವುದೇ ಹಕ್ಕನ್ನು ಮುಕ್ತವಾಗಿ ಚಲಾಯಿಸಲು ಸ್ವಯಿಚ್ಛೆಯಿಂದ ಅಡ್ಡಿಪಡಿಸಿದರೆ ಅಥವಾ ಅಡ್ಡಿಪಡಿಸಲು ಪ್ರಯತ್ನಿಸಿದರೆ ಅವನು ಚುನಾವಣೆಯಲ್ಲಿ ಅನುಚಿತ ಪ್ರಭಾವ ಬೀರಿದ ಅಪರಾಧ ಮಾಡುತ್ತಾನೆಂದಾಗುತ್ತದೆ.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಯಾರೇ ವ್ಯಕ್ತಿಯು,-

(ಎ) ಯಾರೇ ಅಭ್ಯರ್ಥಿಗೆ ಅಥವಾ ಮತದಾರನಿಗೆ ಅಥವಾ ಯಾವ ವ್ಯಕ್ತಿಯ ಬಗ್ಗೆ ಅಭ್ಯರ್ಥಿಯು ಅಥವಾ ಮತದಾರನು ಆಸಕ್ತನಾಗಿರುವನೋ ಆ ವ್ಯಕ್ತಿಗೆ ಯಾವುದೇ ಬಗೆಯ ಕ್ಷತಿಯುಂಟು ಮಾಡುವ ಬೆದರಿಕೆ ಹಾಕಿದರೆ; ಅಥವಾ

(ಬಿ) ಅಭ್ಯರ್ಥಿಗೆ ಅಥವಾ ಮತದಾರನಿಗೆ ಅವನು ಅಥವಾ ಅವನು ಯಾವ ವ್ಯಕ್ತಿಯ ಬಗ್ಗೆ ಆಸಕ್ತನಾಗಿರುವನೋ ಆ ವ್ಯಕ್ತಿಯು ದೈವಾನುಗ್ರಹಕ್ಕೆ ಅಥವಾ ದೈವಿಕ ಅವಕೃಪೆಗೆ ಗುರಿಯಾಗುತ್ತಾನೆಂದು ಅಥವಾ ಗುರಿಪಡಿಸುವಂತೆ ಮಾಡಲಾಗುತ್ತದೆಂದು ನಂಬುವಂತೆ ಪ್ರೇರೇಪಿಸಿದರೆ ಅಥವಾ ಪ್ರೇರೇಪಿಸಲು ಪ್ರಯತ್ನಿಸಿದರೆ

- ಅವನು (1)ನೇ ಉಪಪ್ರಕರಣದ ಅರ್ಥದಲ್ಲಿ ಅಂಥ ಅಭ್ಯರ್ಥಿಯ ಅಥವಾ ಮತದಾರನ ಚುನಾವಣೆಗೆ ಸಂಬಂಧಿಸಿದ ಹಕ್ಕನ್ನು ಮುಕ್ತವಾಗಿ ಚಲಾಯಿಸಲು ಅಡ್ಡಿಪಡಿಸುತ್ತಾನೆಂದು ಭಾವಿಸತಕ್ಕದ್ದು.

(3) ಸಾರ್ವಜನಿಕ ಕಾರ್ಯನೀತಿಗೆ ಅಥವಾ ಸಾರ್ವಜನಿಕ ಕ್ರಮಕ್ಕೆ ಸಂಬಂಧಿಸಿದ ಘೋಷಣೆಯು ಅಥವಾ ಚುನಾವಣೆಗೆ ಸಂಬಂಧಿಸಿದ ಹಕ್ಕಿಗೆ ಅಡ್ಡಿಪಡಿಸುವ ಉದ್ದೇಶವಿಲ್ಲದೇ ಕಾನೂನುಸಮ್ಮತ ಹಕ್ಕನ್ನು ಮಾತ್ರ ಚಲಾಯಿಸುವುದು ಈ ಪ್ರಕರಣದ ಅರ್ಥದಲ್ಲಿ ಅಡ್ಡಿ ಎಂದು ಭಾವಿಸತಕ್ಕದ್ದಲ್ಲ.

**172. ಚುನಾವಣೆಗಳಲ್ಲಿ ಇನ್ನೊಬ್ಬನಂತೆ ನಟನೆ.-** ಯಾರೇ ವ್ಯಕ್ತಿಯು, ಒಂದು ಚುನಾವಣೆಯಲ್ಲಿ ಯಾರೇ ಜೀವಂತ ಅಥವಾ ಮೃತ ವ್ಯಕ್ತಿಯ ಹೆಸರಿನಲ್ಲಿ ಅಥವಾ ಯಾವುದೇ ಕಾಲ್ಪನಿಕ ಹೆಸರಿನಲ್ಲಿ ಮತಪತ್ರಕ್ಕಾಗಿ ವಿನಂತಿ ಮಾಡಿಕೊಂಡರೆ ಅಥವಾ ಮತದಾನ ಮಾಡಿದರೆ ಅಥವಾ ಅಂಥ ಚುನಾವಣೆಯಲ್ಲಿ ಮತದಾನ ಮಾಡಿದ ತರುವಾಯ ತನ್ನ ಹೆಸರಿನಲ್ಲಿ ಅದೇ ಚುನಾವಣೆಯಲ್ಲಿ ಮತಪತ್ರಕ್ಕಾಗಿ ವಿನಂತಿ ಮಾಡಿಕೊಂಡರೆ ಅವನು ಮತ್ತು ಅಂಥ ಯಾವುದೇ ರೀತಿಯಲ್ಲಿ ಯಾರೇ ವ್ಯಕ್ತಿಗೆ ಮತದಾನ ಮಾಡಲು ದುಷ್ಪ್ರೇರಣೆ ಮಾಡುವ, ಯಾರೇ ವ್ಯಕ್ತಿಯಿಂದ ಮತದಾನ ಮಾಡಿಸುವ ಅಥವಾ ಮಾಡಿಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಇನ್ನೊಬ್ಬನಂತೆ ನಟಿಸುವ ಅಪರಾಧವನ್ನು ಮಾಡುತ್ತಾನೆಂದಾಗುತ್ತದೆ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಒಬ್ಬ ಮತದಾರನ ಬದಲಿಗೆ ಪ್ರಾಕ್ಸಿಯಾಗಿ ಮತ ಚಲಾಯಿಸಲು ಯಾವ ವ್ಯಕ್ತಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಯಾರೇ ವ್ಯಕ್ತಿಗೆ, ಅಂಥ ಮತದಾರನ ಬದಲಿಗೆ ಪ್ರಾಕ್ಸಿಯಾಗಿ ಅವನು ಮತ ಚಲಾಯಿಸುವಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದಲ್ಲ.

**173. ಲಂಚಗುಳಿತನಕ್ಕೆ ದಂಡನೆ.-** ಯಾರೇ ವ್ಯಕ್ತಿಯು ಲಂಚಗುಳಿತನದ ಅಪರಾಧವನ್ನು ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಸತ್ಕಾರದ ರೂಪದ ಲಂಚಗುಳಿತನಕ್ಕೆ ಜುಲ್ಮಾನೆಯನ್ನು ಮಾತ್ರ ವಿಧಿಸತಕ್ಕದ್ದು.

ವಿವರಣೆ.- ಽಸತ್ಕಾರಽ ಎಂದರೆ, ಊಟ, ಪಾನೀಯ, ಮನೋರಂಜನೆ ಅಥವಾ ಸೌಕರ್ಯಗಳ ಏರ್ಪಾಟನ್ನು ಒಳಗೊಂಡ ಲಂಚದ ರೂಪದಲ್ಲಿರುವ ಲಂಚಗುಳಿತನ.

**174. ಚುನಾವಣೆಯಲ್ಲಿ ಅನುಚಿತ ಪ್ರಭಾವ ಬೀರುವುದಕ್ಕೆ ಅಥವಾ ಇನ್ನೊಬ್ಬನಂತೆ ನಟಿಸಿದ್ದಕ್ಕೆ ದಂಡನೆ.-** ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅನುಚಿತ ಪ್ರಭಾವವನ್ನು ಬೀರುವ ಅಥವಾ ಇನ್ನೊಬ್ಬನಂತೆ ನಟಿಸುವ ಅಪರಾಧವನ್ನು ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**175. ಚುನಾವಣೆಗೆ ಸಂಬಂಧಿಸಿದ ಸುಳ್ಳು ಹೇಳಿಕೆ.-** ಯಾರೇ ವ್ಯಕ್ತಿಯು ಚುನಾವಣೆಯ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮವಾಗಬೇಕೆಂಬ ಉದ್ದೇಶದಿಂದ ಯಾರೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯವನ್ನು ಅಥವಾ ನಡತೆಯನ್ನು ಕುರಿತು ಸುಳ್ಳಾಗಿರುವ ಮತ್ತು ಸುಳ್ಳೆಂದು ತಾನು ತಿಳಿದಿರುವ ಅಥವಾ ನಂಬಿರುವ ಅಥವಾ ಸತ್ಯವೆಂದು ನಂಬದಿರುವ ಯಾವುದೇ ಹೇಳಿಕೆಯನ್ನು ಸತ್ಯಸಂಗತಿಯೆಂದು ತಾತ್ಪರ್ಯವಾಗುವ ಹಾಗೆ ಮಾಡಿದರೆ ಅಥವಾ ಪ್ರಕಟಿಸಿದರೆ ಅವನು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**176. ಚುನಾವಣೆಯ ಸಂಬಂಧದಲ್ಲಿ ಕಾನೂನುಬಾಹಿರ ಸಂದಾಯಗಳು.-** ಯಾರೇ ವ್ಯಕ್ತಿಯು ಅಭ್ಯರ್ಥಿಯ ಸಾಮಾನ್ಯ ಅಥವಾ ವಿಶೇಷವಾದ ಲಿಖಿತ ಅಧಿಕಾರವಿಲ್ಲದೆ, ಅಂಥ ಅಭ್ಯರ್ಥಿಯ ಆಯ್ಕೆಗೆ ಉತ್ತೇಜನ ನೀಡುವ ಅಥವಾ ಆಯ್ಕೆಯಾಗುವಂತೆ ಮಾಡುವ ಉದ್ದೇಶದಿಂದ ಯಾವುದೇ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ ಬಗ್ಗೆ ಅಥವಾ ಯಾವುದೇ ಜಾಹೀರಾತು, ಸುತ್ತೋಲೆ ಅಥವಾ ಪ್ರಕಟಣೆಯ ನಿಮಿತ್ತ ಅಥವಾ ಇತರ ಯಾವುದೇ ರೀತಿಯಲ್ಲಿ ವೆಚ್ಚವನ್ನು ಮಾಡಿದರೆ ಅಥವಾ ವೆಚ್ಚ ಮಾಡಲು ಅಧಿಕಾರ ಕೊಟ್ಟರೆ, ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಹತ್ತು ರೂಪಾಯಿಗಳಿಗೆ ಮೀರದ ಅಂಥ ಯಾವುದೇ ವೆಚ್ಚಗಳನ್ನು ಅಧಿಕಾರವಿಲ್ಲದೆ ಮಾಡಿದ ತರುವಾಯ, ಅಂಥ ವೆಚ್ಚಗಳನ್ನು ಮಾಡಿದ ದಿನಾಂಕದಿಂದ ಹತ್ತು ದಿವಸಗಳ ಒಳಗೆ ಅಭ್ಯರ್ಥಿಯ ಲಿಖಿತ ಅನುಮೋದನೆಯನ್ನು ಪಡೆದುಕೊಂಡರೆ, ಅವನು ಅಭ್ಯರ್ಥಿಯಿಂದ ಅಧಿಕಾರ ಪಡೆದು ಆ ವೆಚ್ಚಗಳನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

**177. ಚುನಾವಣೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಇಡಲು ತಪ್ಪುವುದು.-** ಯಾವ ವ್ಯಕ್ತಿಯನ್ನು ಯಾವುದೇ ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಮಾಡಿದ ವೆಚ್ಚಗಳ ಲೆಕ್ಕಪತ್ರಗಳನ್ನು ಇಡಬೇಕೆಂದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಕಾನೂನಿನ ಬಲವುಳ್ಳ ಯಾವುದೇ ನಿಯಮದ ಮೂಲಕ ಅಗತ್ಯಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಲೆಕ್ಕಪತ್ರಗಳನ್ನು ಇಡಲು ತಪ್ಪಿದ್ದಲ್ಲಿ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ X

### ನಾಣ್ಯ, ಕರೆನ್ಸಿ-ನೋಟುಗಳು, ಬ್ಯಾಂಕ್-ನೋಟುಗಳು ಮತ್ತು ಸರ್ಕಾರಿ ಸ್ಟಾಂಪುಗಳಿಗೆ ಸಂಬಂಧಿಸಿದ ಅಪರಾಧಗಳು

**178. ನಾಣ್ಯ, ಸರ್ಕಾರಿ ಸ್ಟಾಂಪುಗಳು, ಕರೆನ್ಸಿ-ನೋಟುಗಳು ಅಥವಾ ಬ್ಯಾಂಕ್-ನೋಟುಗಳ ಖೋಟಾ ತಯಾರಿಕೆ.-** ಯಾರೇ ವ್ಯಕ್ತಿಯು, ಯಾವುದೇ ಕರೆನ್ಸಿ-ನೋಟು ಅಥವಾ ಬ್ಯಾಂಕ್-ನೋಟು, ರಾಜಸ್ವದ ಉದ್ದೇಶಕ್ಕಾಗಿ ಸರ್ಕಾರವು ಹೊರಡಿಸಿರುವ ನಾಣ್ಯ, ಸ್ಟಾಂಪಿನ **ಖೋಟಾ ತಯಾರಿಕೆ ಮಾಡಿದರೆ ಅಥವಾ ಖೋಟಾ ತಯಾರಿಕೆಯ ವಿಧಾನದ ಭಾಗವಾಗಿ ಯಾವುದೇ ಕ್ರಿಯೆಯನ್ನು**

**ತಪ್ಪೆಂದು ಗೊತ್ತಿದ್ದೂ ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

*ವಿವರಣೆ.-* ಈ ಅಧ್ಯಾಯದ ಉದ್ದೇಶಕ್ಕಾಗಿ,-

(1) "ಬ್ಯಾಂಕ್-ನೋಟು" ಎಂಬ ಪದಾವಳಿವು ವಿಶ್ವದ ಯಾವುದೇ ಭಾಗದಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಯಾರೇ ವ್ಯಕ್ತಿಯು ನೀಡಿದ ಅಥವಾ ಯಾವುದೇ ದೇಶದ ಪ್ರಾಧಿಕಾರದ ಅಥವಾ ಸಾರ್ವಭೌಮ ಅಧಿಕಾರದ ಮೂಲಕ ಅಥವಾ ಅಧಿಕಾರದ ಮೇರೆಗೆ ಹೊರಡಿಸಲಾದ ಹಣಕ್ಕೆ ತತ್ಸಮಾನವಾಗಿ ಅಥವಾ ಹಣದ ಬದಲಿಯಾಗಿ ಬಳಸಲು ಉದ್ದೇಶಿಸಿದ ಬೇಡಿಕೆಯ ಮೇಲೆ ಧಾರಕನಿಗೆ ಪಾವತಿಸುವ ಪ್ರೋಮಿಸರಿ ನೋಟ್ ಅಥವಾ ವಚನಬದ್ಧತೆಯನ್ನು ಒಳಗೊಳ್ಳುತ್ತದೆ;

(2) "ನಾಣ್ಯ" ಎಂಬ ಪದವು ನಾಣ್ಯ ತಯಾರಿಕೆ ಅಧಿನಿಯಮ, 2011 (2011ರ 11)ರ 2ನೇ ಪ್ರಕರಣದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು ಮತ್ತು ಇದರಲ್ಲಿ ತತ್ಕಾಲದಲ್ಲಿ ಹಣವೆಂದು ಬಳಕೆ ಮಾಡುವ ಮತ್ತು ಹಾಗೆ ಬಳಕೆ ಮಾಡುವ ಉದ್ದೇಶದಿಂದ ಯಾವುದೇ ದೇಶದ ಪ್ರಾಧಿಕಾರವು ಅಥವಾ ಸಾರ್ವಭೌಮ ಅಧಿಕಾರವು ಮುದ್ರೆ ಹಾಕಿದ ಮತ್ತು ಹೊರಡಿಸಿದ ಲೋಹವು ಒಳಗೊಂಡಿರುತ್ತದೆ.

(3) ಒಂದು ವರ್ಗದ ಸಾಚಾ ಸ್ಟಾಂಪು ಇನ್ನೊಂದು ವರ್ಗದ ಸಾಚಾ ಸ್ಟಾಂಪಿನಂತೆಯೇ ತೋರುವ ಹಾಗೆ ಮಾಡಿ, "ಖೋಟಾ ಸರ್ಕಾರಿ ಸ್ಟಾಂಪು" ತಯಾರಿಕೆ ಮಾಡುವ ವ್ಯಕ್ತಿಯು ಈ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(4) ಯಾವ ವ್ಯಕ್ತಿಯು ವಂಚನೆ ಮಾಡುವ ಉದ್ದೇಶದಿಂದ ಈ ಅಪರಾಧವನ್ನು ಮಾಡುತ್ತಾನೋ ಅಥವಾ ಆ ಅಪರಾಧದಿಂದಾಗಿ ವಂಚನೆ ಮಾಡುವುದಕ್ಕೆ ಅವಕಾಶವಾಗಬಹುದೆಂಬುದು ಗೊತ್ತಿದ್ದರೂ, ನಿಜವಾದ ನಾಣ್ಯವನ್ನು ಬೇರೊಂದು ನಾಣ್ಯದಂತೆ ಕಾಣುವಂತೆ ಮಾಡುತ್ತಾನೋ ಆ ವ್ಯಕ್ತಿಯು ಖೋಟಾ ನಾಣ್ಯ ತಯಾರಿಕೆ ಅಪರಾಧವನ್ನು ಮಾಡುತ್ತಾನೆಂದಾಗುತ್ತದೆ.

(5) "ಖೋಟಾ ನಾಣ್ಯ ತಯಾರಿಕೆ" ಅಪರಾಧವು ನಾಣ್ಯದ ತೂಕವನ್ನು ತಗ್ಗಿಸುವ ಅಥವಾ ಮಿಶ್ರಣವನ್ನು ವ್ಯತ್ಯಾಸಗೊಳಿಸುವ ಅಥವಾ ರೂಪವನ್ನು ಬದಲಾಯಿಸುವುದನ್ನು ಒಳಗೊಂಡಿದೆ.

**179. ನಕಲಿ ಅಥವಾ ಖೋಟಾ ನಾಣ್ಯ, ಸರ್ಕಾರಿ ಸ್ಟಾಂಪು, ಕರೆನ್ಸಿ-ನೋಟುಗಳು ಅಥವಾ ಬ್ಯಾಂಕ್-ನೋಟುಗಳನ್ನು ಅಸಲಿಯಂತೆ ಬಳಸುವುದು.-** ಯಾವುದೇ ನಕಲಿ ಅಥವಾ ಖೋಟಾ ನಾಣ್ಯ, ಸ್ಟಾಂಪು, ಕರೆನ್ಸಿ-ನೋಟು ಅಥವಾ ಬ್ಯಾಂಕ್-ನೋಟುಗಳು ನಕಲಿ ಅಥವಾ ಖೋಟಾ ಎಂದು ತಿಳಿದಿದ್ದೂ ಅಥವಾ ನಂಬುವುದಕ್ಕೆ ಕಾರಣ ಹೊಂದಿದ್ದೂ, ಯಾರೇ ವ್ಯಕ್ತಿಗೆ ಆಮದು ಅಥವಾ ರಫ್ತು ಮಾಡುವ ಅಥವಾ ಮಾರಾಟ ಅಥವಾ ಬಟವಾಡೆ ಮಾಡುವ ಅಥವಾ ಯಾರೇ ವ್ಯಕ್ತಿಯಿಂದ ಖರೀದಿಸುವ ಅಥವಾ ಸ್ವೀಕರಿಸುವ ಅಥವಾ ಅನ್ಯಥಾ ಅವುಗಳನ್ನು ಅಸಲಿಯಂತೆ ದುರ್ವ್ಯಾಪಾರ ಅಥವಾ ಬಳಕೆ ಮಾಡುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**180. ನಕಲಿ ಅಥವಾ ಖೋಟಾ ನಾಣ್ಯ, ಸರ್ಕಾರಿ ಸ್ಟಾಂಪು, ಕರೆನ್ಸಿ-ನೋಟುಗಳು ಅಥವಾ ಬ್ಯಾಂಕ್-ನೋಟುಗಳನ್ನು ಹೊಂದಿರುವುದು.-** ಯಾವುದೇ ನಕಲಿ ಅಥವಾ ಖೋಟಾ ನಾಣ್ಯ, ಸ್ಟಾಂಪು, ಕರೆನ್ಸಿ-ನೋಟು ಅಥವಾ ಬ್ಯಾಂಕ್- ನೋಟುಗಳನ್ನು ಅವುಗಳು ನಕಲಿ ಅಥವಾ ಖೋಟಾ ಎಂದು ತಿಳಿದಿದ್ದೂ ಅಥವಾ ನಕಲಿ ಎಂದು ನಂಬಲು ಕಾರಣ ಹೊಂದಿದ್ದೂ, ಅವುಗಳನ್ನು ಅಸಲಿಯಂತೆ ಬಳಸುವ ಅಥವಾ ಅದನ್ನು ಅಸಲಿಯಂತೆ ಬಳಸಬಹುದೆಂಬ ಉದ್ದೇಶದಿಂದ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ **ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.**

*ವಿವರಣೆ.-* ಯಾರೇ ವ್ಯಕ್ತಿಯು ನಕಲಿ ಅಥವಾ ಖೋಟಾ ನಾಣ್ಯ, ಸ್ಟಾಂಪ್, ಕರೆನ್ಸಿ-ನೋಟು ಅಥವಾ ಬ್ಯಾಂಕ್-ನೋಟುಗಳನ್ನು ಕಾನೂನುಬದ್ಧ ಮೂಲದಿಂದ ಪಡೆದು ಹೊಂದಿರುವುದಾಗಿ ರುಜುವಾತುಪಡಿಸಿದರೆ, ಅದು ಈ ಪ್ರಕರಣದ ಮೇರೆಗೆ ಅಪರಾಧವಾಗತಕ್ಕದ್ದಲ್ಲ.

**181. ನಾಣ್ಯ, ಸರ್ಕಾರಿ ಸ್ಟಾಂಪು, ಕರೆನ್ಸಿ-ನೋಟುಗಳ ಅಥವಾ ಬ್ಯಾಂಕ್-ನೋಟುಗಳ ನಕಲಿ ಅಥವಾ ಖೋಟಾ ತಯಾರಿಕೆಗಾಗಿ ವಸ್ತುಗಳು ಅಥವಾ ಉಪಕರಣಗಳನ್ನು ನಿರ್ಮಿಸುವುದು ಅಥವಾ ಸ್ವಾಧೀನದಲ್ಲಿಟ್ಟುಕೊಳ್ಳುವುದು.-** ಯಾರೇ ವ್ಯಕ್ತಿಯು, ಯಾವುದೇ ಕರೆನ್ಸಿ-ನೋಟು ಅಥವಾ ಬ್ಯಾಂಕ್-ನೋಟು, ರಾಜಸ್ವದ ಉದ್ದೇಶಕ್ಕಾಗಿ ಸರ್ಕಾರವು ಹೊರಡಿಸಿರುವ ನಾಣ್ಯ, ಸ್ಟಾಂಪಿನ ನಕಲಿ ಅಥವಾ ಖೋಟಾ ತಯಾರಿಕೆಗಾಗಿ ಯಾವುದೇ ಯಂತ್ರ, ಅಚ್ಚನ್ನು ಅಥವಾ ಉಪಕರಣವನ್ನು **ಬಳಸುವ ಉದ್ದೇಶಕ್ಕಾಗಿ ಅಥವಾ ಉಪಯೋಗಿಸಲು ಉದ್ದೇಶಿಸಲಾಗಿದೆಯೆಂಬುದು ಗೊತ್ತಿದ್ದರೂ ಅಥವಾ ಹಾಗೆಂದೂ ನಂಬಲು ಕಾರಣವಿದ್ದರೂ,** ಆ ಯಾವುದೇ ಯಂತ್ರ, ಅಚ್ಚು ಅಥವಾ ಉಪಕರಣ ಅಥವಾ ಸರಕನ್ನು ನಿರ್ಮಿಸಿದರೆ ಅಥವಾ ದುರಸ್ತಿಪಡಿಸಿದರೆ **ಅಥವಾ ಅದನ್ನು ನಿರ್ಮಿಸುವ ಅಥವಾ ದುರಸ್ತಿಪಡಿಸುವ ವಿಧಾನದ ಯಾವುದೇ ಕ್ರಿಯೆಯನ್ನು ಮಾಡಿದರೆ ಅಥವಾ ಅದನ್ನು ಕೊಂಡುಕೊಂಡರೆ, ಮಾರಾಟ ಮಾಡಿದರೆ ಅಥವಾ ವಿಲೆ ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.**

**182. ಕರೆನ್ಸಿ-ನೋಟುಗಳು ಅಥವಾ ಬ್ಯಾಂಕ್-ನೋಟುಗಳನ್ನು ಹೋಲುವ ದಸ್ತಾವೇಜುಗಳನ್ನು ತಯಾರಿಸುವುದು ಅಥವಾ ಬಳಸುವುದು.-** (1) ಯಾವುದೇ ಕರೆನ್ಸಿ-ನೋಟು ಅಥವಾ ಬ್ಯಾಂಕ್-ನೋಟನ್ನು ವಂಚನೆ ಮಾಡುವ ಉದ್ದೇಶದಿಂದ ನೋಟೆಂದು ತಾತ್ಪರ್ಯವಾಗುವ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಹೋಲಿಕೆಯಾಗುವ ಅಥವಾ ಹಾಗೆ ವಂಚಿಸಲು ಹತ್ತಿರ ಹತ್ತಿರ ಹೋಲಿಕೆಯಾಗುವ ಯಾವುದೇ ದಸ್ತಾವೇಜನ್ನು ಯಾವುದಾದರೂ ಉದ್ದೇಶಕ್ಕಾಗಿ ತಯಾರಿಸುವ ಅಥವಾ ತಯಾರಿಸುವಂತೆ ಮಾಡುವ ಅಥವಾ ಬಳಸುವ ಅಥವಾ ಇತರೆ ಯಾರೇ ವ್ಯಕ್ತಿಗೆ ವಿಲೇವಾರಿ ಮಾಡುವ ವ್ಯಕ್ತಿಯು, ಮೂನ್ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವ ದಸ್ತಾವೇಜನ್ನು ತಯಾರಿಸುವುದು ಅಪರಾಧವಾಗಿರುವುದೋ ಅಂಥ ದಸ್ತಾವೇಜಿನ ಮೇಲೆ ಯಾರ ಹೆಸರು ಕಂಡುಬರುತ್ತದೆಯೋ ಅಂಥ ಯಾರೇ ವ್ಯಕ್ತಿಯು, ಕಾನೂನುಬದ್ಧ ಕಾರಣವಿಲ್ಲದೆ ಅದನ್ನು ಮುದ್ರಿಸಿರುವ ಅಥವಾ ಅನ್ಯಥಾ ಮುದ್ರಿಸುವಂತೆ ಮಾಡಿರುವ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಬಹಿರಂಗಪಡಿಸುವಂತೆ ಪೊಲೀಸ್ ಅಧಿಕಾರಿಯು ಅಗತ್ಯಪಡಿಸಿದಾಗ ಬಹಿರಂಗಪಡಿಸಲು ನಿರಾಕರಿಸಿದರೆ, ಅವನು ಆರು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವ ದಸ್ತಾವೇಜಿನ ಸಂಬಂಧದಲ್ಲಿ ಯಾವ ವ್ಯಕ್ತಿಯ ವಿರುದ್ಧ ಅಪರಾಧವನ್ನು ಹೊರಿಸಲಾಗಿದೆಯೋ, ಆ ದಸ್ತಾವೇಜಿನ ಮೇಲೆ ಅಥವಾ ಆ ದಸ್ತಾವೇಜಿಗೆ ಸಂಬಂಧಿಸಿದಂತೆ ಬಳಸಲಾದ ಅಥವಾ ವಿತರಿಸಲಾದ ಯಾವುದೇ ಇತರೆ ದಸ್ತಾವೇಜಿನ ಮೇಲೆ ಯಾವುದೇ ವ್ಯಕ್ತಿಯ ಹೆಸರು ಕಂಡುಬಂದಲ್ಲಿ, ತದ್ವಿರುದ್ಧವಾದುದು ರುಜುವಾತಾಗುವವರೆಗೆ ಆ ವ್ಯಕ್ತಿಯು ದಸ್ತಾವೇಜನ್ನು **ತಯಾರಿಸಲು ಕಾರಣನಾಗಿದ್ದಾನೆ ಎಂದು ಭಾವಿಸಬಹುದು.**

**183. ಸರ್ಕಾರಕ್ಕೆ ನಷ್ಟವುಂಟು ಮಾಡುವ ಉದ್ದೇಶದಿಂದ ಸರ್ಕಾರಿ ಸ್ಟಾಂಪುಗಳನ್ನು ಅಂಟಿಸಿರುವ ವಸ್ತುಗಳಿಂದ ಬರಹವನ್ನು ತೊಡೆದು ಹಾಕುವುದು ಅಥವಾ ದಸ್ತಾವೇಜಿಗಾಗಿ ಉಪಯೋಗಿಸುವ ಸ್ಟಾಂಪನ್ನು ಅದರಿಂದ ತೆಗೆದು ಹಾಕುವುದು.-** ಯಾರೇ ವ್ಯಕ್ತಿಯು, ಮೋಸದಿಂದ ಅಥವಾ ಸರ್ಕಾರಕ್ಕೆ ನಷ್ಟವುಂಟು ಮಾಡಬೇಕೆಂಬ ಉದ್ದೇಶದಿಂದ ಸರ್ಕಾರವು ರಾಜಸ್ವದ ಉದ್ದೇಶಕ್ಕಾಗಿ ಹೊರಡಿಸಿದ ಯಾವುದೇ ಸ್ಟಾಂಪನ್ನು ಅಂಟಿಸಿರುವ ಯಾವುದೇ ವಸ್ತುವಿನಿಂದ, ಅಂಥ ಸ್ಟಾಂಪನ್ನು ಬಳಸಲಾಗಿದ್ದ ಯಾವುದೇ ಬರಹ ಅಥವಾ ದಸ್ತಾವೇಜಿನಿಂದ ತೆಗೆದು ಹಾಕಿದರೆ ಅಥವಾ ತೊಡೆದು ಹಾಕಿದರೆ, ಅಂಥ ಬರಹಕ್ಕಾಗಿ ಅಥವಾ ದಸ್ತಾವೇಜಿಗಾಗಿ ಬಳಸಿರುವ ಸ್ಟಾಂಪನ್ನು

ಬೇರೊಂದು ಬರಹಕ್ಕಾಗಿ ಅಥವಾ ದಸ್ತಾವೇಜಿಗಾಗಿ ಬಳಸಬೇಕೆಂಬ ಉದ್ದೇಶದಿಂದ, ಆ ಬರಹದಿಂದ ಅಥವಾ ಆ ದಸ್ತಾವೇಜಿನಿಂದ ತೆಗೆದುಹಾಕಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**184. ಮೊದಲು ಬಳಸಲಾಗಿದೆಯೆಂದು ಗೊತ್ತಾದ ಸರ್ಕಾರಿ ಸ್ಟಾಂಪನ್ನು ಬಳಸುವುದು.-** ಯಾರೇ ವ್ಯಕ್ತಿಯು, ಮೋಸದಿಂದ ಅಥವಾ ಸರ್ಕಾರಕ್ಕೆ ನಷ್ಟವುಂಟು ಮಾಡಬೇಕೆಂಬ ಉದ್ದೇಶದಿಂದ, ಸರ್ಕಾರವು ರಾಜಸ್ವದ ಉದ್ದೇಶಕ್ಕಾಗಿ ಹೊರಡಿಸಿದ ಸ್ಟಾಂಪನ್ನು, ಅದನ್ನು ಆ ಮುಂಚೆಯೇ ಬಳಸಲಾಗಿದೆಯೆಂದು ಗೊತ್ತಿದ್ದೂ ಯಾವುದೇ ಉದ್ದೇಶಕ್ಕಾಗಿ ಬಳಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**185. ಸ್ಟಾಂಪನ್ನು ಬಳಸಲಾಗಿದೆಯೆಂಬುದನ್ನು ತೋರಿಸುವ ಗುರುತನ್ನು ಅಳಿಸಿ ಹಾಕುವುದು.-** ಯಾರೇ ವ್ಯಕ್ತಿಯು, ಮೋಸದಿಂದ ಅಥವಾ ಸರ್ಕಾರಕ್ಕೆ ನಷ್ಟವುಂಟು ಮಾಡಬೇಕೆಂಬ ಉದ್ದೇಶದಿಂದ, ಸರ್ಕಾರವು ರಾಜಸ್ವದ ಉದ್ದೇಶಕ್ಕಾಗಿ ಹೊರಡಿಸಿದ ಸ್ಟಾಂಪಿನಿಂದ, ಆ ಸ್ಟಾಂಪನ್ನು ಬಳಸಲಾಗಿದೆಯೆಂದು ತೋರಿಸಲು ಅದರ ಮೇಲೆ ಹಾಕಿರುವ ಅಥವಾ ಮುದ್ರೆಯೊತ್ತಿರುವ ಯಾವುದೇ ಗುರುತನ್ನು ಅಳಿಸಿದರೆ ಅಥವಾ ತೆಗೆದುಹಾಕಿದರೆ ಅಥವಾ ಯಾವ ಸ್ಟಾಂಪಿನಿಂದ ಅಂಥ ಗುರುತನ್ನು ಅಳಿಸಿ ಹಾಕಲಾಗಿದೆಯೋ ಅಥವಾ ತೆಗೆದುಹಾಕಲಾಗಿದೆಯೋ ಆ ಯಾವುದೇ ಸ್ಟಾಂಪನ್ನು ಗೊತ್ತಿದ್ದೂ ತನ್ನಲ್ಲಿಟ್ಟುಕೊಂಡಿದ್ದರೆ ಅಥವಾ ಮಾರಾಟ ಮಾಡಿದರೆ ಅಥವಾ ವಿಲೆ ಮಾಡಿದರೆ ಅಥವಾ ಬಳಸಲಾಗಿದೆಯೆಂದು ತನಗೆ ಗೊತ್ತಿರುವ ಅಂಥ ಯಾವುದೇ ಸ್ಟಾಂಪನ್ನು ಮಾರಾಟ ಮಾಡಿದರೆ ಅಥವಾ ವಿಲೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**186. ನಕಲಿ ಸ್ಟಾಂಪುಗಳ ನಿಷೇಧ.- (1) ಯಾರೇ ವ್ಯಕ್ತಿಯು,-**

(ಎ) ಯಾವುದೇ ನಕಲಿ ಸ್ಟಾಂಪನ್ನು ತಯಾರಿಸಿದರೆ, ನಕಲಿಯೆಂಬುದು ಗೊತ್ತಿದ್ದೂ ಅದನ್ನು ಚಲಾವಣೆ ಮಾಡಿದರೆ, ಅದರ ಮಾರಾಟ ವ್ಯವಹಾರದಲ್ಲಿ ತೊಡಗಿದರೆ ಅಥವಾ ಅದನ್ನು ಮಾರಾಟ ಮಾಡಿದರೆ ಅಥವಾ ಯಾವುದೇ ಅಂಚೆಯ ಉದ್ದೇಶಕ್ಕಾಗಿ ಅದು ನಕಲಿ ಸ್ಟಾಂಪೆಂದು ಗೊತ್ತಿದ್ದೂ ಬಳಸಿದರೆ; ಅಥವಾ

(ಬಿ) ಕಾನೂನುಸಮ್ಮತ ಕಾರಣವಿಲ್ಲದೆಯೇ, ಯಾವುದೇ ನಕಲಿ ಸ್ಟಾಂಪನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

(ಸಿ) ಯಾವುದೇ ನಕಲಿ ಸ್ಟಾಂಪನ್ನು ತಯಾರಿಸಿದರೆ ಅಥವಾ ಕಾನೂನುಸಮ್ಮತ ಕಾರಣವಿಲ್ಲದೆಯೇ ಅದನ್ನು ತಯಾರಿಸುವುದಕ್ಕಾಗಿ ಯಾವುದೇ ಅಚ್ಚನ್ನು, ಪಟ್ಟಿಕೆಯನ್ನು, ಉಪಕರಣವನ್ನು ಅಥವಾ ಸಾಮಗ್ರಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ

- ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವುದೇ ನಕಲಿ ಸ್ಟಾಂಪನ್ನು ತಯಾರಿಸುವುದಕ್ಕಾಗಿ, ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವ ಅಂಥ ಯಾವುದೇ ಸ್ಟಾಂಪನ್ನು, ಅಚ್ಚನ್ನು, ಪಟ್ಟಿಕೆಯನ್ನು, ಉಪಕರಣವನ್ನು ಅಥವಾ ಸಾಮಗ್ರಿಯನ್ನು ಅಭಿಗ್ರಹಣ ಮಾಡಬಹುದು ಮತ್ತು ಹಾಗೆ ಅಭಿಗ್ರಹಣ ಮಾಡಿದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(3) ಈ ಪ್ರಕರಣದಲ್ಲಿ 'ನಕಲಿ ಸ್ಟಾಂಪು' ಎಂದರೆ, ಅಂಚೆಯ ದರವನ್ನು ನಮೂದಿಸುವ ಉದ್ದೇಶದಿಂದ ಸರ್ಕಾರವು ಹೊರಡಿಸಿದೆಯೆಂದು ಸುಳ್ಳಾಗಿ ತಾತ್ಪರ್ಯವಾಗುವ ಯಾವುದೇ ಸ್ಟಾಂಪು ಅಥವಾ ಆ ಉದ್ದೇಶಕ್ಕಾಗಿ ಸರ್ಕಾರವು ಹೊರಡಿಸಿದ ಯಾವುದೇ ಸ್ಟಾಂಪಿನ, ಕಾಗದದ ಮೇಲೆ ಅಥವಾ ಬೇರೆ ಯಾವುದರ ಮೇಲಾದರೂ ಮಾಡಿದ, ಯಾವುದೇ ಯಥಾಪ್ರತಿ ಅಥವಾ ಅನುಕರಣೆ ಅಥವಾ ಯಥಾರೂಪಣೆ.

(4) ಈ ಪ್ರಕರಣದಲ್ಲಿ ಮತ್ತು 178 ರಿಂದ 181ರವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳಲ್ಲಿ ಮತ್ತು 183 ರಿಂದ 185ರವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳಲ್ಲಿ "ಸರ್ಕಾರ" ಎಂಬ ಪದವು, ಅಂಚೆಯ ದರವನ್ನು ನಮೂದಿಸುವ ಉದ್ದೇಶಕ್ಕಾಗಿ ಹೊರಡಿಸಿದ ಯಾವುದೇ ಸ್ಟಾಂಪಿಗೆ ಸಂಬಂಧದಲ್ಲಿ ಅಥವಾ ಅದರ ಉಲ್ಲೇಖವಾಗಿ ಸರ್ಕಾರ ಎಂಬ ಪದವನ್ನು ಬಳಸಿದಾಗ, 2ನೇ ಪ್ರಕರಣದ (12)ನೇ ಉಪಖಂಡದಲ್ಲಿ ಏನೇ ಇದ್ದರೂ, ಭಾರತದ ಯಾವುದೇ ಭಾಗದಲ್ಲಿ ಅಥವಾ ಯಾವುದೇ ವಿದೇಶದಲ್ಲಿ ಸರ್ಕಾರದ ಆಡಳಿತವನ್ನು ನಡೆಸಲು ಕಾನೂನಿನಿಂದ ಅಧಿಕಾರ ಪಡೆದಿರುವ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು.

**187. ಟಂಕಸಾಲೆಯಲ್ಲಿ ನಿಯೋಜಿತನಾದ ವ್ಯಕ್ತಿಯು, ಕಾನೂನಿನ ಮೂಲಕ ನಿಗದಿಪಡಿಸಿರುವ ತೂಕ ಮತ್ತು ಮಿಶ್ರಣಕ್ಕಿಂತ ಭಿನ್ನವಾದ ತೂಕದ ಮತ್ತು ಮಿಶ್ರಣದ ನಾಣ್ಯವಾಗುವಂತೆ ಮಾಡುವುದು.-** ಭಾರತದಲ್ಲಿ ಕಾನೂನುಬದ್ಧವಾಗಿ ಸ್ಥಾಪಿಸಲ್ಪಟ್ಟ ಟಂಕಸಾಲೆಯಲ್ಲಿ ನಿಯೋಜಿತನಾಗಿರುವ ಯಾರೇ ವ್ಯಕ್ತಿಯು, ಆ ಟಂಕಸಾಲೆಯಿಂದ ಹೊರಡಿಸುವ ನಾಣ್ಯವು ಕಾನೂನಿನ ಮೂಲಕ ನಿಗದಿಪಡಿಸಿರುವ ತೂಕಕ್ಕಿಂತ ಮತ್ತು ಮಿಶ್ರಣಕ್ಕಿಂತ ಭಿನ್ನವಾದ ತೂಕದ ಮತ್ತು ಮಿಶ್ರಣದ ನಾಣ್ಯವಾಗುವಂತೆ ಮಾಡುವ ಉದ್ದೇಶದಿಂದ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಕಾನೂನುಬದ್ಧವಾಗಿ ತಾನು ಮಾಡಬೇಕಾದುದನ್ನು ಮಾಡದೆ ಹೋದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**188. ನಾಣ್ಯ ತಯಾರಿಕೆಯ ಉಪಕರಣವನ್ನು ಟಂಕಸಾಲೆಯಿಂದ ಕಾನೂನುಬಾಹಿರವಾಗಿ ಹೊರಗೆ ಒಯ್ಯುವುದು.-** ಯಾರೇ ವ್ಯಕ್ತಿಯು, ಭಾರತದಲ್ಲಿ ಕಾನೂನುಬದ್ಧವಾಗಿ ಸ್ಥಾಪಿಸಲ್ಪಟ್ಟ ಟಂಕಸಾಲೆಯಿಂದ ನಾಣ್ಯ ತಯಾರಿಕೆಯ ಯಾವುದೇ ಸಲಕರಣೆಯನ್ನು ಅಥವಾ ಉಪಕರಣವನ್ನು ಕಾನೂನುಬದ್ಧವಾದ ಅಧಿಕಾರವಿಲ್ಲದೆ ಹೊರಗೆ ಒಯ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

## ಅಧ್ಯಾಯ XI

## ಸಾರ್ವಜನಿಕ ನೆಮ್ಮದಿಯ ವಿರುದ್ಧವಾದ ಅಪರಾಧಗಳು

**189. ಕಾನೂನುಬಾಹಿರ ಕೂಟ.-** (1) ಐದು ಅಥವಾ ಹೆಚ್ಚು ಜನರ ಕೂಟವನ್ನು, ಅಂಥ ಕೂಟದಲ್ಲಿ ಸೇರಿದ ವ್ಯಕ್ತಿಗಳ ಏಕೋದ್ದೇಶವು,-

(ಎ) ಆಪರಾಧಿಕ ಬಲದಿಂದ ಅಥವಾ ಆಪರಾಧಿಕ ಬಲಪ್ರದರ್ಶನದಿಂದ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಅಥವಾ ಸಂಸತ್ತಿಗೆ ಅಥವಾ ಯಾವುದೇ ರಾಜ್ಯದ ವಿಧಾನಮಂಡಲಕ್ಕೆ ಅಥವಾ ಲೋಕ ನೌಕರನಾಗಿ ತನ್ನ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುತ್ತಿರುವಂಥ ಲೋಕ ನೌಕರನಿಗೆ ಭಯವನ್ನು ಹುಟ್ಟಿಸುವುದಾಗಿದ್ದರೆ; ಅಥವಾ

(ಬಿ) ಯಾವುದೇ ಕಾನೂನಿನ ಅಥವಾ ಯಾವುದೇ ಕಾನೂನು ಪ್ರಕ್ರಿಯೆಯ ಜಾರಿಯನ್ನು ಪ್ರತಿರೋಧಿಸುವುದಾಗಿದ್ದರೆ; ಅಥವಾ

(ಸಿ) ಯಾವುದೇ ಕೇಡನ್ನು ಅಥವಾ ಆಪರಾಧಿಕ ಅತಿಕ್ರಮಣ ಪ್ರವೇಶವನ್ನು ಅಥವಾ ಇತರ ಅಪರಾಧವನ್ನು ಮಾಡುವುದಾಗಿದ್ದರೆ; ಅಥವಾ

(ಡಿ) ಯಾರೇ ವ್ಯಕ್ತಿಯ ಮೇಲೆ ಆಪರಾಧಿಕ ಬಲವನ್ನು ಪ್ರಯೋಗಿಸುವ ಮೂಲಕ ಅಥವಾ ಆಪರಾಧಿಕ ಬಲವನ್ನು ಪ್ರದರ್ಶಿಸುವ ಮೂಲಕ, ಯಾವುದೇ ಸ್ವತ್ತಿನ ಸ್ವಾಧೀನತೆಯನ್ನು ತೆಗೆದುಕೊಳ್ಳುವುದಾಗಿದ್ದರೆ ಅಥವಾ ಪಡೆಯುವುದಾಗಿದ್ದರೆ ಅಥವಾ ಯಾರೇ ವ್ಯಕ್ತಿಯು, ದಾರಿಯ ಅಥವಾ ನೀರಿನ ಬಳಕೆಯ ಹಕ್ಕಿನ ಅಥವಾ ಅವನ ಅನುಭೋಗದಲ್ಲಿ ಇರುವ ಅಥವಾ ಸ್ವಾಧೀನದಲ್ಲಿ ಇರುವ ಇತರ ಅಮೂರ್ತ ಹಕ್ಕಿನ ಅನುಭೋಗವನ್ನು ತಪ್ಪಿಸುವುದಾಗಿದ್ದರೆ ಅಥವಾ ಯಾವುದೇ ಹಕ್ಕನ್ನು ಅಥವಾ ಇದೆಯೆಂದು ಭಾವಿಸಿರುವ ಹಕ್ಕನ್ನು ಕಾರ್ಯಗತಗೊಳಿಸುವುದಾಗಿದ್ದರೆ; ಅಥವಾ

(ಇ) ಆಪರಾಧಿಕ ಬಲವನ್ನು ಪ್ರಯೋಗಿಸುವ ಮೂಲಕ ಅಥವಾ ಆಪರಾಧಿಕ ಬಲವನ್ನು ಪ್ರದರ್ಶಿಸುವ ಮೂಲಕ ಯಾರೇ ವ್ಯಕ್ತಿಯನ್ನು, ಅವನು ಮಾಡುವುದಕ್ಕೆ ಕಾನೂನುಬದ್ಧವಾಗಿರದ ಕೆಲಸವನ್ನು ಮಾಡುವಂತೆ ಅಥವಾ ಅವನು ಕಾನೂನುಬದ್ಧವಾಗಿ ಮಾಡುವುದಕ್ಕೆ ಹಕ್ಕುಳ್ಳ ಕೆಲಸವನ್ನು ಮಾಡದಿರುವಂತೆ ಒತ್ತಾಯಿಸುವುದಾಗಿದ್ದರೆ

- 'ಕಾನೂನುಬಾಹಿರ ಕೂಟ'ವೆಂದು ಕರೆಯಲಾಗುತ್ತದೆ.

*ವಿವರಣೆ.*- ಒಟ್ಟು ಸೇರಿದಾಗ ಕಾನೂನುಬಾಹಿರವಲ್ಲದ ಕೂಟವು, ಆ ತರುವಾಯ ಕಾನೂನುಬಾಹಿರ ಕೂಟವೆಂದೆನಿಸಿಕೊಳ್ಳಬಹುದು.

(2) ಯಾವುದೇ ಕೂಟವು ಕಾನೂನುಬಾಹಿರ ಕೂಟವಾಗಬಹುದೆಂಬ ಸಂಗತಿಗಳನ್ನು ಅರಿತಿದ್ದೂ, ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಆ ಕೂಟಕ್ಕೆ ಸೇರಿದರೆ ಅಥವಾ ಅದರಲ್ಲಿ ಮುಂದುವರಿದರೆ, ಅವನು ಕಾನೂನುಬಾಹಿರ ಕೂಟದ ಸದಸ್ಯನಾಗಿರುವನು ಎಂದು ಹೇಳಲಾಗುತ್ತದೆ. ಅಂಥ ಸದಸ್ಯನು ಆರು ತಿಂಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಕಾನೂನುಬಾಹಿರ ಕೂಟವನ್ನು ಕಾನೂನಿನ ಮೂಲಕ ನಿಯಮಿಸಲಾದ ರೀತಿಯಲ್ಲಿ ಚೆದುರಿ ಹೋಗಲು ಸಮಾದೇಶ ಮಾಡಲಾಗಿದೆಯೆಂದು ತಿಳಿದೂ ಯಾರೇ ವ್ಯಕ್ತಿಯು ಒಂದು ಕಾನೂನುಬಾಹಿರ ಕೂಟವನ್ನು ಸೇರಿದರೆ ಅಥವಾ ಅದರಲ್ಲಿ ಮುಂದುವರಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಅಪರಾಧ ಮಾಡುವುದಕ್ಕಾಗಿ ಯಾವ ಮಾರಕ ಆಯುಧವನ್ನು ಅಥವಾ ಅಂಥದೇ ಯಾವುದನ್ನು ಬಳಕೆ ಮಾಡಿದಾಗ ಮರಣವನ್ನು ಉಂಟು ಮಾಡುವ ಸಂಭವವಿದೆಯೋ, ಆ ಮಾರಕ ಆಯುಧವನ್ನು ಅಥವಾ ಅಂಥದೇ ವಸ್ತುವನ್ನು ಹೊಂದಿರುವ ಯಾರೇ ವ್ಯಕ್ತಿಯು ಕಾನೂನುಬಾಹಿರ ಕೂಟದ ಸದಸ್ಯನಾಗಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(5) ಯಾರೇ ವ್ಯಕ್ತಿಯು ಸಾರ್ವಜನಿಕ ಶಾಂತಿಯನ್ನು ಕದಡುವ ಸಂಭವವಿರುವ ಐದು ಅಥವಾ ಹೆಚ್ಚು ವ್ಯಕ್ತಿಗಳ ಕೂಟಕ್ಕೆ ಚೆದುರಲು ಕಾನೂನುಬದ್ಧವಾಗಿ ಸಮಾದೇಶ ಮಾಡಿದ ತರುವಾಯ ಅಂಥ ಕೂಟವನ್ನು ತಿಳಿದೂ ಸೇರಿದರೆ ಅಥವಾ ಅದರಲ್ಲಿ ಮುಂದುವರಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.*- ಕೂಟವು (1)ನೇ ಉಪ**ಪ್ರಕರಣದ** ಅರ್ಥದಲ್ಲಿ ಕಾನೂನುಬಾಹಿರ ಕೂಟವಾಗಿದ್ದರೆ, ಅಪರಾಧಿಯು (3)**ನೇ ಉಪಪ್ರಕರಣದ** ಮೇರೆಗೆ ದಂಡನೀಯನಾಗತಕ್ಕದ್ದು.

(6) ಯಾವುದೇ ಕಾನೂನುಬಾಹಿರ ಕೂಟಕ್ಕೆ ಸೇರಲು ಅಥವಾ ಅದರ ಸದಸ್ಯನಾಗಲು ಯಾರೇ ವ್ಯಕ್ತಿಯನ್ನು, ಬಾಡಿಗೆಯ ಮೇಲೆ ಗೊತ್ತು ಮಾಡುವ ಅಥವಾ ನೇಮಕ ಮಾಡುವ ಅಥವಾ ನಿಯೋಜಿಸಿಕೊಳ್ಳುವ ಅಥವಾ ಹಾಗೆ ಬಾಡಿಗೆಗೆ ಗೊತ್ತು ಮಾಡಲು ಅಥವಾ ನೇಮಕ ಮಾಡಲು ಅಥವಾ ನಿಯೋಜಿಸಲು ಪ್ರೋತ್ಸಾಹಿಸುವ ಅಥವಾ ಪರೋಕ್ಷ ಸಮ್ಮತಿ ಕೊಡುವ ಯಾರೇ ವ್ಯಕ್ತಿಯು, ಆ ಕಾನೂನುಬಾಹಿರ ಕೂಟದಲ್ಲಿ ಸೇರಿದ್ದ ವ್ಯಕ್ತಿಯಾಗಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಹಾಗೆಯೇ ದಂಡಿತನಾಗತಕ್ಕದ್ದು ಮತ್ತು ಅಂಥ ಕಾನೂನುಬಾಹಿರ ಕೂಟದಲ್ಲಿ ಸೇರಿದ್ದ ವ್ಯಕ್ತಿಯಾಗಿ ಹಾಗೆ ಬಾಡಿಗೆಗೆ ಗೊತ್ತು ಮಾಡುವ, ನೇಮಕ ಮಾಡುವ ಅಥವಾ ನಿಯೋಜಿಸುವ ಕೃತ್ಯದ ಅನುಸಾರ ಮಾಡಬಹುದಾದ ಯಾವುದೇ ಅಪರಾಧಕ್ಕಾಗಿ ಅವನು ಅಂಥ ಕಾನೂನುಬಾಹಿರ ಕೂಟದಲ್ಲಿ ಸೇರಿದ್ದ ವ್ಯಕ್ತಿಯಾಗಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಹಾಗೆಯೇ ಅಥವಾ ಅಂಥ ಅಪರಾಧವನ್ನು ಅವನೇ ಮಾಡಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಹಾಗೆಯೇ ದಂಡಿತನಾಗತಕ್ಕದ್ದು.

(7) ಯಾರೇ ವ್ಯಕ್ತಿಯು, ತನ್ನ ಅಧಿಭೋಗದಲ್ಲಿ ಅಥವಾ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಯಾವುದೇ ಮನೆಯಲ್ಲಿ ಅಥವಾ ಆವರಣಗಳಲ್ಲಿ ಯಾರೇ ವ್ಯಕ್ತಿಗಳನ್ನು, ಒಂದು ಕಾನೂನುಬಾಹಿರ ಕೂಟವನ್ನು ಸೇರಲು ಅಥವಾ ಅದರ ಸದಸ್ಯರಾಗಲು ಬಾಡಿಗೆಗೆ ಗೊತ್ತು ಮಾಡಲಾಗಿದೆ, ನೇಮಕ ಮಾಡಲಾಗಿದೆ ಅಥವಾ ನಿಯೋಜಿಸಲಾಗಿದೆ ಅಥವಾ ಬಾಡಿಗೆಗೆ ಗೊತ್ತು ಮಾಡಲಾಗುತ್ತದೆ, ನೇಮಕ ಮಾಡಲಾಗುತ್ತದೆ ಅಥವಾ ನಿಯೋಜಿಸಲಾಗುತ್ತದೆ ಎಂಬುದು ಗೊತ್ತಿದ್ದೂ, ಅವರಿಗೆ ಆಶ್ರಯ ನೀಡಿದರೆ, ಅವರನ್ನು ಬರಮಾಡಿಕೊಂಡರೆ ಅಥವಾ ಒಟ್ಟುಗೂಡಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(8) ಯಾರೇ ವ್ಯಕ್ತಿಯು, **(1)ನೇ ಉಪಪ್ರಕರಣದಲ್ಲಿ** ನಿರ್ದಿಷ್ಟಪಡಿಸಿದ ಯಾವುದೇ ಕೃತ್ಯವನ್ನು ಮಾಡಲು ಅಥವಾ ಮಾಡುವಲ್ಲಿ ಸಹಾಯ ಮಾಡಲು ನೇಮಿಸಿಕೊಂಡರೆ ಅಥವಾ ಬಾಡಿಗೆಯ ಮೇಲೆ ನಿಯೋಜಿತನಾದರೆ ಅಥವಾ ನೇಮಿಸಲ್ಪಡಲು ಕೇಳಿಕೊಂಡರೆ ಅಥವಾ ಪ್ರಯತ್ನಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(9) ಉಪಪ್ರಕರಣ (8)ರಲ್ಲಿ ಉಲ್ಲೇಖಿಸಲಾದಂತೆ ನೇಮಕಗೊಂಡಿರುವ ಅಥವಾ ಬಾಡಿಗೆಯ ಮೇಲೆ ನಿಯೋಜಿತನಾಗಿರುವ ಯಾರೇ ವ್ಯಕ್ತಿಯು, ಯಾವುದೇ ಮಾರಕ ಆಯುಧ ಸಮೇತ ಅಥವಾ ಆ ಆಯುಧವನ್ನು ಬಳಸುವುದರಿಂದ ಮರಣ ಉಂಟಾಗುವ ಸಂಭವವಿರುವ ಯಾವುದೇ ಆಯುಧ ಸಮೇತ ಹೋದರೆ ಅಥವಾ ಹಾಗೆ ತಾನು ಹೋಗಲು ನೇಮಿತನಾಗಿದ್ದರೆ ಅಥವಾ ಹಾಗೆ ಹೋಗಲು ಮುಂದೆ ಬಂದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**190. ಕಾನೂನುಬಾಹಿರ ಕೂಟದ ಪ್ರತಿಯೊಬ್ಬ ಸದಸ್ಯನು ಏಕೋದ್ದೇಶವನ್ನು ಈಡೇರಿಸುವಲ್ಲಿ ಮಾಡಿದ ಅಪರಾಧದ ತಪ್ಪಿತಸ್ಥನಾಗುವುದು.-** ಕಾನೂನುಬಾಹಿರ ಕೂಟದ ಯಾರೇ ಸದಸ್ಯನು ಆ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಅಪರಾಧವನ್ನು ಮಾಡಿದರೆ ಅಥವಾ ಆ ಉದ್ದೇಶವನ್ನು ಈಡೇರಿಸುವಲ್ಲಿ ಅಪರಾಧವನ್ನು ಮಾಡುವ ಸಂಭವವಿದೆಯೆಂದು ಆ ಕೂಟದ ಸದಸ್ಯರು ತಿಳಿದಿದ್ದೂ ಆ ಅಪರಾಧವನ್ನು ಮಾಡುವ ಸಮಯದಲ್ಲಿ ಆ ಕೂಟದ ಸದಸ್ಯನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಆ ಅಪರಾಧದ ತಪ್ಪಿತಸ್ಥನಾಗುತ್ತಾನೆ.

**191. ದೊಂಬಿ.-** (1) ಒಂದು ಕಾನೂನುಬಾಹಿರ ಕೂಟವು ಅಥವಾ ಅದರ ಯಾರೇ ಸದಸ್ಯನು ಅಂಥ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸಿದರೆ, ಅಂಥ ಕೂಟದ ಪ್ರತಿಯೊಬ್ಬ ಸದಸ್ಯನು ದೊಂಬಿ ಮಾಡಿದ ಅಪರಾಧದ ಬಗ್ಗೆ ತಪ್ಪಿತಸ್ಥನಾಗುತ್ತಾನೆ.

(2) ದೊಂಬಿ ಮಾಡಿದ ಅಪರಾಧಕ್ಕಾಗಿ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮಾರಕ ಆಯುಧದಿಂದ ಅಥವಾ ಅಂಥದ್ದೇ ವಸ್ತುವನ್ನು ಬಳಸುವುದರಿಂದ ಮರಣ ಉಂಟಾಗುವ ಸಂಭವವಿರುವ ಯಾವುದೇ ವಸ್ತುವಿನಿಂದ ಶಸ್ತ್ರಸಜ್ಜಿತವಾಗಿ ದೊಂಬಿ ಮಾಡಿದ ಅಪರಾಧದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**192. ದೊಂಬಿ ಮಾಡಿಸುವ ಉದ್ದೇಶದಿಂದ, ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಲೆಕ್ಕಿಸದೆ ಪ್ರಚೋದನೆ ನೀಡುವುದು- ದೊಂಬಿಯು ನಡೆದರೆ; ದೊಂಬಿಯು ನಡೆಯದಿದ್ದರೆ.-** ಯಾರೇ ವ್ಯಕ್ತಿಯು, ದ್ವೇಷಪೂರ್ವಕವಾಗಿ ಅಥವಾ ಯಾವುದೇ ಕಾನೂನುಬಾಹಿರ ಕೃತ್ಯ ಮಾಡುವ ಮೂಲಕ ಅದರ ಪರಿಣಾಮವನ್ನು ಲೆಕ್ಕಿಸದೆ, ದೊಂಬಿ ಅಪರಾಧ ಮಾಡಿಸುವ ಉದ್ದೇಶದಿಂದ ಅಥವಾ ದೊಂಬಿ ಉಂಟಾಗುವ ಸಂಭವವಿದೆಯೆಂದು ತಿಳಿದೂ ಯಾರೇ ವ್ಯಕ್ತಿಗೆ ಪ್ರಚೋದನೆ ನೀಡಿದರೆ ಮತ್ತು ಅಂಥ

ಪ್ರಚೋದನೆಯಿಂದಾಗಿ ದೊಂಬಿ ಅಪರಾಧವು ನಡೆದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಂಥ ದೊಂಬಿ ಅಪರಾಧವು ನಡೆಯದಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**193. ಕಾನೂನುಬಾಹಿರ ಕೂಟ ಅಥವಾ ದೊಂಬಿ ನಡೆದ ಭೂಮಿಯ ಒಡೆಯ ಅಥವಾ ಅಧಿಭೋಗದಾರ, ಇತ್ಯಾದಿಯವರ ಹೊಣೆಗಾರಿಕೆ.-** (1) ಯಾವುದೇ ಕಾನೂನುಬಾಹಿರ ಕೂಟವು ಅಥವಾ ದೊಂಬಿಯು ನಡೆದಾಗ ಅಂಥ ಕಾನೂನುಬಾಹಿರ ಕೂಟ ಸೇರಿದ ಅಥವಾ ದೊಂಬಿ ನಡೆದ ಭೂಮಿಯ ಒಡೆಯನು ಅಥವಾ ಅಧಿಭೋಗದಾರನು ಮತ್ತು ಆ ಭೂಮಿಯ ಬಗ್ಗೆ ಯಾವುದೇ ಹಿತಾಸಕ್ತಿ ಹೊಂದಿರುವ ಅಥವಾ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಅಥವಾ ಅವನ ಏಜೆಂಟನು ಅಥವಾ ವ್ಯವಸ್ಥಾಪಕನು ಅಂಥ ಅಪರಾಧವು ನಡೆಯುತ್ತಿದೆಯೆಂಬುದು ಅಥವಾ ನಡೆದಿದೆಯೆಂಬುದು ಗೊತ್ತಿದ್ದೂ ಅಥವಾ ಅದು ನಡೆಯುವ ಸಂಭವವಿದೆಯೆಂದು ನಂಬಲು ಕಾರಣವಿದ್ದೂ ತನ್ನ ಅಥವಾ ತಮಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟರ ಮಟ್ಟಿಗಾದರೂ ಅತ್ಯಂತ ಸಮೀಪದಲ್ಲಿರುವ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಗೆ ಅದರ ಬಗ್ಗೆ ಆದಷ್ಟು ಬೇಗನೆ ಸೂಚನೆಯನ್ನು ಕೊಡದಿದ್ದರೆ ಮತ್ತು ಆ ಅಪರಾಧವು ನಡೆಯುವುದರಲ್ಲಿತ್ತೆಂದು ಅವನಿಗೆ ಅಥವಾ ಅವರಿಗೆ ನಂಬಲು ಕಾರಣವಿದ್ದು ಅದನ್ನು ಪ್ರತಿಬಂಧಿಸಲು ತನಗೆ ಅಥವಾ ತಮಗೆ ಸಾಧ್ಯವಿರುವ ಎಲ್ಲ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿದ್ದರೆ ಮತ್ತು ಅದು ಸಂಭವಿಸಿದ ಪ್ರಸಂಗದಲ್ಲಿ, ದೊಂಬಿಯನ್ನು ಅಥವಾ ಕಾನೂನುಬಾಹಿರ ಕೂಟವನ್ನು ಚೆದುರಿಸಲು ಅಥವಾ ದಮನ ಮಾಡಲು ತನಗೆ ಅಥವಾ ತಮಗೆ ಸಾಧ್ಯವಿರುವ ಎಲ್ಲ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿದ್ದರೆ, ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಯಾವ ಭೂಮಿಯ ಸಂಬಂಧದಲ್ಲಿ ದೊಂಬಿ ನಡೆಯಿತೋ ಆ ಭೂಮಿಯ ಒಡೆಯನಾಗಿರುವ ಅಥವಾ ಅಧಿಭೋಗದಾರನಾಗಿರುವ ಅಥವಾ ಆ ಭೂಮಿಯಲ್ಲಿ ಅಥವಾ ಆ ದೊಂಬಿಗೆ ಕಾರಣವಾದ ಯಾವುದೇ ವಿವಾದದ ವಿಷಯದಲ್ಲಿ ಯಾವುದೇ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಅಥವಾ ಅದರಿಂದ ಯಾವುದೇ ಪ್ರಯೋಜನವನ್ನು ಸ್ವೀಕರಿಸಿರುವ ಅಥವಾ ಪಡೆದಿರುವ ಯಾರೇ ವ್ಯಕ್ತಿಯ ಪ್ರಯೋಜನಕ್ಕಾಗಿ ಅಥವಾ ಅವನ ಪರವಾಗಿ ಯಾವುದೇ ದೊಂಬಿಯನ್ನು ಮಾಡಿದಾಗಲೆಲ್ಲಾ ಅಥವಾ ಆ ವ್ಯಕ್ತಿಯು ಅಥವಾ ಅವನ ಏಜೆಂಟನು ಅಥವಾ ವ್ಯವಸ್ಥಾಪಕನು ಅಂಥ ದೊಂಬಿಯು ನಡೆಯುವ ಸಂಭವವಿದೆಯೆಂದು ನಂಬಲು ಕಾರಣವಿದ್ದೂ ಅಥವಾ ಆ ದೊಂಬಿಯನ್ನು ನಡೆಸಿದ ಆ ಕಾನೂನುಬಾಹಿರ ಕೂಟವು ಸೇರುವ ಸಂಭವವಿದ್ದಿತ್ತೆಂದು ನಂಬಲು ಕಾರಣವಿದ್ದೂ, ಅಂಥ ಕೂಟವು ಅಥವಾ ದೊಂಬಿಯು ನಡೆಯುವುದನ್ನು ಪ್ರತಿಬಂಧಿಸಲು ಮತ್ತು ಅದನ್ನು ದಮನ ಮಾಡಲು ಮತ್ತು ಚೆದುರಿಸಲು ಅನುಕ್ರಮವಾಗಿ ಅವನಿಗೆ ಅಥವಾ ಅವರಿಗೆ ಸಾಧ್ಯವಿರುವ ಎಲ್ಲಾ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿದ್ದರೆ ಅಂಥ ವ್ಯಕ್ತಿಯು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ಯಾವ ಭೂಮಿಯ ಸಂಬಂಧದಲ್ಲಿ ದೊಂಬಿ ನಡೆಯಿತೋ ಆ ಭೂಮಿಯ ಒಡೆಯನಾಗಿರುವ ಅಥವಾ ಅಧಿಭೋಗದಾರನಾಗಿರುವ ಅಥವಾ ಆ ಭೂಮಿಯಲ್ಲಿ ಅಥವಾ ಆ ದೊಂಬಿಗೆ ಕಾರಣವಾದ ಯಾವುದೇ ವಿವಾದದ ವಿಷಯದಲ್ಲಿ ಯಾವುದೇ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಅಥವಾ ಅದರಿಂದ ಯಾವುದೇ ಪ್ರಯೋಜನವನ್ನು ಸ್ವೀಕರಿಸಿರುವ ಅಥವಾ ಪಡೆದಿರುವ ಯಾರೇ ವ್ಯಕ್ತಿಯ ಪ್ರಯೋಜನಕ್ಕಾಗಿ ಅಥವಾ ಅವನ ಪರವಾಗಿ ಯಾವುದೇ ದೊಂಬಿಯನ್ನು ಮಾಡಿದಾಗಲೆಲ್ಲಾ ಅಥವಾ ಅವನ ಏಜೆಂಟನು ಅಥವಾ ವ್ಯವಸ್ಥಾಪಕನು ಅಂಥ ದೊಂಬಿಯು ನಡೆಯುವ ಸಂಭವವಿದೆಯೆಂದು ನಂಬಲು ಕಾರಣವಿದ್ದೂ ಅಥವಾ ಆ ದೊಂಬಿಯನ್ನು ನಡೆಸಿದ ಆ ಕಾನೂನುಬಾಹಿರ ಕೂಟವು ಸೇರುವ ಸಂಭವವಿದ್ದಿತ್ತೆಂದು ನಂಬಲು ಕಾರಣವಿದ್ದೂ, ಅಂಥ ಕೂಟವು ಅಥವಾ ದೊಂಬಿಯು ನಡೆಯುವುದನ್ನು ಪ್ರತಿಬಂಧಿಸಲು ಮತ್ತು ಅದನ್ನು ದಮನ ಮಾಡಲು ಮತ್ತು ಚೆದುರಿಸಲು ಅವನಿಗೆ ಅಥವಾ ಅವರಿಗೆ ಸಾಧ್ಯವಿರುವ ಎಲ್ಲಾ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿದ್ದರೆ ಅಂಥ ವ್ಯಕ್ತಿಯ ಏಜೆಂಟನು ಅಥವಾ ವ್ಯವಸ್ಥಾಪಕನು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**194. ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟ.-** (1) ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಡಿ ಸಾರ್ವಜನಿಕ ಶಾಂತಿಯನ್ನು ಕದಡಿದರೆ, ಅವರು ìಸಾರ್ವಜನಿಕ ಸ್ಥಳದಲ್ಲಿ ಹೊಡೆದಾಡುತ್ತಾರೆî ಎಂದು ಹೇಳಲಾಗುತ್ತದೆ.

(2) ಯಾರೇ ವ್ಯಕ್ತಿಯು ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಡಿದರೆ, ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**195. ದೊಂಬಿ, ಇತ್ಯಾದಿಯನ್ನು ದಮನ ಮಾಡುತ್ತಿರುವ ಲೋಕ ನೌಕರನ ಮೇಲೆ ಹಲ್ಲೆ ಮಾಡುವುದು ಅಥವಾ ಅವನಿಗೆ ಅಡ್ಡಿಪಡಿಸುವುದು.-** (1) ಲೋಕ ನೌಕರನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಯಾರೇ ಲೋಕ ನೌಕರನ ಮೇಲೆ, ಅವನು ಕಾನೂನುಬಾಹಿರ ಕೂಟವನ್ನು ಚೆದುರಿಸಲು ಅಥವಾ ದೊಂಬಿಯನ್ನು ಅಥವಾ ಸಾರ್ವಜನಿಕ ಸ್ಥಳದಲ್ಲಿ ನಡೆಯುವ ಹೊಡೆದಾಟವನ್ನು ದಮನ ಮಾಡಲು ಪ್ರಯತ್ನಿಸುತ್ತಿರುವಾಗ ಯಾರೇ ವ್ಯಕ್ತಿಯು, ಅವನ ಮೇಲೆ ಹಲ್ಲೆ ಮಾಡಿದರೆ ಅಥವಾ ಆತನಿಗೆ ಅಡ್ಡಿಪಡಿಸಿದರೆ **ಅಥವಾ ಆಪರಾಧಿಕ ಬಲವನ್ನು ಪ್ರಯೋಗಿಸಿದರೆ,** ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ **ಜುಲ್ಮಾನೆಯಿಂದ** ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಲೋಕ ನೌಕರನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಯಾರೇ ಲೋಕ ನೌಕರನ ಮೇಲೆ, ಅವನು ಕಾನೂನುಬಾಹಿರ ಕೂಟವನ್ನು ಚೆದುರಿಸಲು ಅಥವಾ ದೊಂಬಿಯನ್ನು ಅಥವಾ ಸಾರ್ವಜನಿಕ ಸ್ಥಳದಲ್ಲಿ ನಡೆಯುವ ಹೊಡೆದಾಟವನ್ನು ದಮನ ಮಾಡಲು ಪ್ರಯತ್ನಿಸುತ್ತಿರುವಾಗ ಯಾರೇ ವ್ಯಕ್ತಿಯು, ಅವನ ಮೇಲೆ **ಹಲ್ಲೆ ಮಾಡುವ ಬೆದರಿಕೆ ಹಾಕಿದರೆ** ಅಥವಾ ಅಡ್ಡಿಪಡಿಸಲು ಪ್ರಯತ್ನಿಸಿದರೆ **ಅಥವಾ ಆಪರಾಧಿಕ ಬಲವನ್ನು ಪ್ರಯೋಗಿಸುವುದಾಗಿ** ಬೆದರಿಕೆ ಒಡ್ಡಿದರೆ ಅಥವಾ ಪ್ರಯೋಗಿಸಲು ಪ್ರಯತ್ನಿಸಿದರೆ**,** ಅವನು ಒಂದು **ವರ್ಷದ**ವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ **ಜುಲ್ಮಾನೆಯಿಂದ** ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**196. ವಿವಿಧ ಗುಂಪುಗಳ ನಡುವೆ ಧರ್ಮ, ಮೂಲವಂಶ, ಜನ್ಮಸ್ಥಳ, ನಿವಾಸ, ಭಾಷೆ, ಇತ್ಯಾದಿಗಳ ಆಧಾರದ ಮೇಲೆ ದ್ವೇಷವನ್ನು ಉಂಟು ಮಾಡುವುದು ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು.-** (1) ಯಾರೇ ವ್ಯಕ್ತಿಯು,-

(ಎ) ಆಡಿದ ಮಾತುಗಳಿಂದ ಇಲ್ಲವೆ ಬರೆದ ಶಬ್ದಗಳಿಂದ ಅಥವಾ ಸಂಜ್ಞೆಗಳಿಂದ ಅಥವಾ ದೃಶ್ಯ ನಿರೂಪಣೆಗಳಿಂದ ಅಥವಾ ವಿದ್ಯುನ್ಮಾನ ಸಂವಹನಗಳ ಮೂಲಕ ಅಥವಾ ಬೇರೆ ರೀತಿಯಲ್ಲಿ ಧರ್ಮ, ಮೂಲವಂಶ, ಜನ್ಮಸ್ಥಳ, ನಿವಾಸ, ಭಾಷೆ, ಜಾತಿ, ಸಮುದಾಯದ ಅಥವಾ ಇತರ ಯಾವುದೇ ಆಧಾರದ ಮೇಲೆ ವಿವಿಧ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪುಗಳ ನಡುವೆ ಅಥವಾ ಜಾತಿಗಳ ಅಥವಾ ಸಮುದಾಯಗಳ ನಡುವೆ ಅಸೌಹಾರ್ದತೆ ಅಥವಾ ವೈರ, ದ್ವೇಷ ಅಥವಾ ವೈಮನಸ್ಯದ ಭಾವನೆಗಳು ಉಂಟಾಗುವುದಕ್ಕೆ ಉತ್ತೇಜನ ನೀಡಿದರೆ ಅಥವಾ ಉಂಟಾಗುವುದಕ್ಕೆ ಉತ್ತೇಜನ ನೀಡಲು ಪ್ರಯತ್ನಿಸಿದರೆ; ಅಥವಾ

(ಬಿ) ವಿವಿಧ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪುಗಳ ನಡುವಣ ಅಥವಾ ಜಾತಿ ಅಥವಾ ಸಮುದಾಯಗಳ ನಡುವಣ ಸೌಹಾರ್ದಕ್ಕೆ ಬಾಧಕವಾಗುವ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಅದರಿಂದ ಸಾರ್ವಜನಿಕ ನೆಮ್ಮದಿಯನ್ನು ಕದಡಿದರೆ ಅಥವಾ ಕದಡುವ ಸಂಭವವಿದ್ದರೆ; ಅಥವಾ

(ಸಿ) ಯಾವುದೇ ಅಭ್ಯಾಸವನ್ನು, ಚಲನವಲನವನ್ನು, ಕವಾಯತನ್ನು ಅಥವಾ ಅಂಥದೇ ಇತರೆ ಚಟುವಟಿಕೆಯನ್ನು, ಅಂಥ ಚಟುವಟಿಕೆಯಲ್ಲಿ ಭಾಗವಹಿಸುವವರು ಯಾವುದೇ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿನ ವಿರುದ್ಧ ಅಥವಾ ಜಾತಿಯ ಅಥವಾ ಸಮುದಾಯದ ವಿರುದ್ಧ ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸಬೇಕೆಂಬ ಅಥವಾ ಪ್ರಯೋಗಿಸಲು ತರಬೇತಿ ಪಡೆಯಬೇಕೆಂಬ ಉದ್ದೇಶದಿಂದ ಅಥವಾ ಅಂಥ ಚಟುವಟಿಕೆಯಲ್ಲಿ

ಭಾಗವಹಿಸುವವರು ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಅಥವಾ ಪ್ರಯೋಗಿಸಲು ತರಬೇತಿ ಪಡೆಯುವ ಸಂಭವವಿದೆಯೆಂಬುದು ಗೊತ್ತಿದ್ದರೂ ಸಂಘಟಿಸಿದರೆ ಅಥವಾ ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಉದ್ದೇಶದಿಂದ ಅಥವಾ ಅಂಥ ಚಟುವಟಿಕೆಯಲ್ಲಿ ಭಾಗವಹಿಸುವವರು ಆಪರಾಧಿಕ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ಅಂಥ ಚಟುವಟಿಕೆಯಲ್ಲಿ ಭಾಗವಹಿಸಿದರೆ ಮತ್ತು ಅಂಥ ಚಟುವಟಿಕೆಯು ಯಾವುದೇ ಕಾರಣಕ್ಕಾಗಿ, ಅಂಥ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪಿನವರಲ್ಲಿ ಅಥವಾ ಜಾತಿಯ ಅಥವಾ ಸಮುದಾಯದ ಜನರಲ್ಲಿ ಭಯವನ್ನು ಅಥವಾ ಗಾಬರಿಯನ್ನು ಅಥವಾ ಅಭದ್ರತೆಯ ಭಾವನೆಯನ್ನು ಉಂಟು ಮಾಡಿದರೆ ಅಥವಾ ಉಂಟು ಮಾಡುವ ಸಂಭವವಿದ್ದರೆ

- ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಯಾವುದೇ ಪೂಜಾಸ್ಥಳದಲ್ಲಿ ಅಥವಾ ಧಾರ್ಮಿಕ ಪೂಜೆಯನ್ನು ಅಥವಾ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸುವುದರಲ್ಲಿ ನಿರತವಾದ ಯಾವುದೇ ಕೂಟದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧವನ್ನು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**197. ರಾಷ್ಟ್ರೀಯ ಅಖಂಡತೆಗೆ ಬಾಧಕವಾಗುವ ಆರೋಪಣೆಗಳು, ದೃಢವಾದ ಪ್ರತಿಪಾದನೆಗಳು.-** (1) ಯಾರೇ ವ್ಯಕ್ತಿಯು, ಆಡಿದ ಮಾತು ಅಥವಾ ಬರೆದ ಶಬ್ದಗಳಿಂದ ಅಥವಾ ಸಂಜ್ಞೆಗಳಿಂದ ಅಥವಾ ದೃಶ್ಯ ನಿರೂಪಣೆಗಳಿಂದ ಅಥವಾ ವಿದ್ಯುನ್ಮಾನ ಸಂವಹನದ ಮೂಲಕ ಅಥವಾ ಅನ್ಯಥಾ,-

(ಎ) ವ್ಯಕ್ತಿಗಳ ಯಾವುದೇ ವರ್ಗವು, ಯಾವುದೇ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪು ಅಥವಾ ಜಾತಿಯ ಅಥವಾ ಸಮುದಾಯದ ಸದಸ್ಯರಾಗಿರುವ ಕಾರಣದಿಂದ ಕಾನೂನು ಪ್ರಕಾರ ಸ್ಥಾಪಿತವಾಗಿರುವ ಭಾರತ ಸಂವಿಧಾನದ ಬಗ್ಗೆ ನಿಜವಾದ ಶ್ರದ್ಧೆಯನ್ನು ಮತ್ತು ನಿಷ್ಠೆಯನ್ನು ಹೊಂದಿರಲಾರ ಅಥವಾ ಭಾರತ ಸಾರ್ವಭೌಮತೆ ಮತ್ತು ಅಖಂಡತೆಯನ್ನು ಎತ್ತಿಹಿಡಿಯಲಾರ ಎಂದಾಗಲಿ ಯಾವುದೇ ಆರೋಪಣೆಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ; ಅಥವಾ

(ಬಿ) ವ್ಯಕ್ತಿಗಳ ಯಾವುದೇ ವರ್ಗವು, ಯಾವುದೇ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪು ಅಥವಾ ಜಾತಿಯ ಅಥವಾ ಸಮುದಾಯದ ಸದಸ್ಯರಾಗಿರುವ ಕಾರಣದಿಂದ ಭಾರತದ ಪ್ರಜೆಗಳಾಗಿ ಅವರಿಗಿರುವ ಹಕ್ಕುಗಳನ್ನು ನಿರಾಕರಿಸತಕ್ಕದ್ದೆಂದು ಅಥವಾ ಅಂಥ ಹಕ್ಕುಗಳನ್ನು ತಪ್ಪಿಸತಕ್ಕದ್ದೆಂದು ದೃಢವಾದ ಪ್ರತಿಪಾದನೆ ಮಾಡಿದರೆ, ಸಲಹೆ ಕೊಟ್ಟರೆ, ತಿಳುವಳಿಕೆ ಕೊಟ್ಟರೆ, ಪ್ರಚಾರ ಮಾಡಿದರೆ ಅಥವಾ ಪ್ರಕಟಿಸಿದರೆ; ಅಥವಾ

(ಸಿ) ವ್ಯಕ್ತಿಗಳ ಯಾವುದೇ ವರ್ಗವು ಯಾವುದೇ ಧಾರ್ಮಿಕ, ಮೂಲವಂಶೀಯ, ಭಾಷಿಕ ಅಥವಾ ಪ್ರಾದೇಶಿಕ ಗುಂಪು ಅಥವಾ ಜಾತಿಯ ಅಥವಾ ಸಮುದಾಯದ ಸದಸ್ಯರಾಗಿರುವ ಕಾರಣದಿಂದ ಅವರ ಬಾಧ್ಯತೆಗೆ ಸಂಬಂಧಿಸಿದಂತೆ ಯಾವುದೇ ದೃಢವಾದ ಪ್ರತಿಪಾದನೆಯನ್ನು ಮಾಡಿದರೆ, ಸಲಹೆ ಕೊಟ್ಟರೆ, ಪ್ರಾರ್ಥನೆ ಅಥವಾ ವಿನಂತಿಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ ಮತ್ತು ಅಂಥ ಪ್ರತಿಪಾದನೆಯು, ಸಲಹೆಯು, ಪ್ರಾರ್ಥನೆಯು ಅಥವಾ ವಿನಂತಿಯು ಅಂಥ ಸದಸ್ಯರ ಮತ್ತು ಇತರ ವ್ಯಕ್ತಿಗಳ ಮಧ್ಯೆ ಅಸೌಹಾರ್ದತೆಯನ್ನು ಅಥವಾ ವೈರತ್ವ ಅಥವಾ ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಉಂಟು ಮಾಡಿದರೆ ಅಥವಾ ಉಂಟು ಮಾಡುವ ಸಂಭವವಿದ್ದರೆ; ಅಥವಾ

(ಡಿ) **ಭಾರತದ ಸಾರ್ವಭೌಮತೆ, ಏಕತೆ ಮತ್ತು ಅಖಂಡತೆ ಅಥವಾ ಭದ್ರತೆಗೆ ಅಪಾಯವನ್ನುಂಟುಮಾಡುವ ಸುಳ್ಳು ಅಥವಾ ದಾರಿತಪ್ಪಿಸುವ ಮಾಹಿತಿಯನ್ನು** ನೀಡಿದರೆ **ಅಥವಾ ಪ್ರಕಟಿಸಿದರೆ**

- ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಯಾವುದೇ ಪೂಜಾಸ್ಥಳದಲ್ಲಿ ಅಥವಾ ಧಾರ್ಮಿಕ ಪೂಜೆಯನ್ನು ಅಥವಾ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸುವುದರಲ್ಲಿ ನಿರತವಾದ ಯಾವುದೇ ಕೂಟದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧವನ್ನು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

## ಅಧ್ಯಾಯ XI

## ಲೋಕ ನೌಕರರು ಮಾಡಿದ ಅಥವಾ ಅವರಿಗೆ ಸಂಬಂಧಿಸಿದ ಅಪರಾಧಗಳು

**198. ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಉದ್ದೇಶದಿಂದ ಲೋಕ ನೌಕರನು ಕಾನೂನನ್ನು ಪಾಲಿಸದಿರುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ಯಾವ ರೀತಿ ವರ್ತಿಸಬೇಕೆಂಬ ಬಗೆಗಿನ ಕಾನೂನಿನ ಯಾವುದೇ ನಿರ್ದೇಶನವನ್ನು, ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಉದ್ದೇಶದಿಂದ ಗೊತ್ತಿದ್ದೂ ಪಾಲಿಸದಿದ್ದರೆ ಅಥವಾ ಹಾಗೆ ಪಾಲಿಸದಿರುವುದರಿಂದ ಯಾರೇ ವ್ಯಕ್ತಿಗೆ ಕ್ಷತಿಯುಂಟಾಗುವ ಸಂಭವವಿದೆಯೆಂದು ಗೊತ್ತಿದ್ದೂ ಪಾಲಿಸದಿದ್ದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

### *ದೃಷ್ಟಾಂತ*

ನ್ಯಾಯಾಲಯವು 'ಜೆಡ್'ನ ಪರವಾಗಿ ಘೋಷಿಸಿದ ಡಿಕ್ರಿಯನ್ನು ಪಾಲಿಸುವ ಸಲುವಾಗಿ ಡಿಕ್ರಿಯನ್ನು ಅಮಲ್ಜಾರಿ ಮಾಡುವಾಗ ಸ್ವತ್ತನ್ನು ವಶಪಡಿಸಿಕೊಳ್ಳುವಂತೆ ಕಾನೂನಿನ ಮೂಲಕ ನಿರ್ದೇಶಿತನಾಗಿದ್ದ ಅಧಿಕಾರಿಯಾಗಿರುವ 'ಎ'ನು ಆ ಕಾನೂನಿನ ನಿರ್ದೇಶನಗಳನ್ನು ಪಾಲಿಸದಿದ್ದರೆ, 'ಜೆಡ್'ನಿಗೆ ಕ್ಷತಿಯುಂಟಾಗುವುದೆಂಬುದು ತಿಳಿದಿದ್ದರೂ 'ಎ'ನು ಆ ನಿರ್ದೇಶನಗಳನ್ನು ಪಾಲಿಸುವುದಿಲ್ಲ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆ.

**199. ಲೋಕ ನೌಕರನು ಕಾನೂನು ಮೇರೆಗಿನ ನಿರ್ದೇಶನವನ್ನು ಪಾಲಿಸದಿರುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು,-

(ಎ) ಕಾನೂನಿನ ಯಾವ ನಿರ್ದೇಶನವು ಅಪರಾಧ ಅಥವಾ ಇತರ ಯಾವುದೇ ವಿಷಯದ ತನಿಖೆಯ ಉದ್ದೇಶಕ್ಕಾಗಿ ಯಾವುದೇ ಸ್ಥಳದಲ್ಲಿ ಯಾರೇ ವ್ಯಕ್ತಿಯ ಹಾಜರಾತಿಯನ್ನು ಅಗತ್ಯಪಡಿಸುವುದನ್ನು ಪ್ರತಿಬಂಧಿಸುವ ಕಾನೂನಿನ ನಿರ್ದೇಶನವನ್ನು ಗೊತ್ತಿದ್ದೂ ಪಾಲಿಸದಿದ್ದರೆ; ಅಥವಾ

(ಬಿ) ಯಾರೇ ವ್ಯಕ್ತಿಗೆ ಪ್ರತಿಕೂಲವಾಗುವಂತೆ, ತನಿಖೆಯನ್ನು ನಡೆಸತಕ್ಕ ರೀತಿಯನ್ನು ವಿನಿಯಮಿಸುವ ಕಾನೂನಿನ ಯಾವುದೇ ಇತರ ನಿರ್ದೇಶನವನ್ನು ತಿಳಿದೂ ತಿಳಿದೂ ಪಾಲಿಸದಿದ್ದರೆ; ಅಥವಾ

(ಸಿ) 64ನೇ ಪ್ರಕರಣದ, 65ನೇ ಪ್ರಕರಣದ, **66ನೇ ಪ್ರಕರಣದ, 67ನೇ ಪ್ರಕರಣದ, 68ನೇ ಪ್ರಕರಣದ, 70ನೇ ಪ್ರಕರಣದ, 71ನೇ ಪ್ರಕರಣದ, 74ನೇ ಪ್ರಕರಣದ, 76ನೇ ಪ್ರಕರಣದ, 77ನೇ ಪ್ರಕರಣದ, 79ನೇ ಪ್ರಕರಣದ, 124ನೇ ಪ್ರಕರಣದ, 143ನೇ ಪ್ರಕರಣದ ಅಥವಾ 144ನೇ ಪ್ರಕರಣದ ಮೇರೆಗೆ ದಂಡನೀಯವಾದ ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದಂತೆ** ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ**,** 2023 (2023ರ 46)ರ 173ನೇ ಪ್ರಕರಣದ (1)ನೇ ಉಪಪ್ರಕರಣದ **ಮೇರೆಗೆ ಆತನಿಗೆ ನೀಡಿದ ಯಾವುದೇ ಮಾಹಿತಿಯನ್ನು ದಾಖಲಿಸಲು ವಿಫಲನಾದರೆ**

- ಆತನು ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**200. ಸಂತ್ರಸ್ತ ವ್ಯಕ್ತಿಗೆ ಚಿಕಿತ್ಸೆ ಕೊಡದಿರುವುದಕ್ಕಾಗಿ ದಂಡನೆ.-** ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವು, ಸ್ಥಳೀಯ ಸಂಸ್ಥೆಗಳು ಅಥವಾ ಯಾರೇ ಇತರೆ ವ್ಯಕ್ತಿಯು ನಡೆಸುತ್ತಿರುವ ಸಾರ್ವಜನಿಕ ಅಥವಾ ಖಾಸಗಿ ಆಸ್ಪತ್ರೆಯ ಪ್ರಭಾರದಲ್ಲಿರುವ ಯಾರೇ ವ್ಯಕ್ತಿಯು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ**,** 2023 (2023ರ 46)ರ 397ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ**,** ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**201. ಕ್ಷತಿಯುಂಟು ಮಾಡುವ ಉದ್ದೇಶದಿಂದ ಲೋಕ ನೌಕರನು ತಪ್ಪು ದಸ್ತಾವೇಜನ್ನು ರೂಪಿಸುವುದು.-** ಲೋಕ ನೌಕರನಾದ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ತಯಾರಿಸುವ ಅಥವಾ ಭಾಷಾಂತರಿಸುವ ಹೊಣೆಯನ್ನು ಅವನಿಗೆ ವಹಿಸಿಕೊಟ್ಟಿರುವಾಗ, ಅವನು ಆ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಯು, ಸರಿಯಲ್ಲವೆಂದು ಗೊತ್ತಿದ್ದೂ ಅಥವಾ ನಂಬಿಯೂ ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಉದ್ದೇಶದಿಂದ ಅಥವಾ ಕ್ಷತಿಯುಂಟು ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಹಾಗೆ ರೂಪಿಸಿದರೆ, ತಯಾರಿಸಿದರೆ ಅಥವಾ ಭಾಷಾಂತರಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**202. ಲೋಕ ನೌಕರನು ಕಾನೂನುಬಾಹಿರವಾಗಿ ವ್ಯಾಪಾರದಲ್ಲಿ ತೊಡಗುವುದು.-** ಲೋಕ ನೌಕರನಾದ ಮತ್ತು ಅಂಥ ಲೋಕ ನೌಕರನಾಗಿ ವ್ಯಾಪಾರದಲ್ಲಿ ತೊಡಗಿರಕೂಡದೆಂದು ಕಾನೂನು ಪ್ರಕಾರ ನಿರ್ಬಂಧಿತನಾಗಿರುವ ಯಾರೇ ವ್ಯಕ್ತಿಯು ವ್ಯಾಪಾರದಲ್ಲಿ ತೊಡಗಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಸಮುದಾಯ ಸೇವೆಯಿಂದಲೂ ದಂಡಿತನಾಗತಕ್ಕದ್ದು.

**203. ಲೋಕ ನೌಕರನು ಕಾನೂನುಬಾಹಿರವಾಗಿ ಸ್ವತ್ತನ್ನು ಕೊಳ್ಳುವುದು ಅಥವಾ ಆ ಬಗ್ಗೆ ಹರಾಜಿನಲ್ಲಿ ಕೂಗುವುದು.-** ಲೋಕ ನೌಕರನಾದ ಮತ್ತು ಅಂಥ ಲೋಕ ನೌಕರನಾಗಿ ಯಾವುದೇ ಸ್ವತ್ತನ್ನು ಕೊಳ್ಳಕೂಡದು ಅಥವಾ ಆ ಬಗ್ಗೆ ಹರಾಜಿನಲ್ಲಿ ಕೂಗಬಾರದೆಂದು ಕಾನೂನು ಪ್ರಕಾರ ನಿರ್ಬಂಧಿತನಾಗಿರುವ ಯಾರೇ ವ್ಯಕ್ತಿಯು ತನ್ನ ಹೆಸರಿನಲ್ಲಿ ಅಥವಾ ಇನ್ನೊಬ್ಬರ ಹೆಸರಿನಲ್ಲಿ ಅಥವಾ ಜಂಟಿಯಾಗಿ ಅಥವಾ ಇತರರೊಂದಿಗೆ ಪಾಲುದಾರಿಕೆಯಲ್ಲಿ ಆ ಸ್ವತ್ತನ್ನು ಕೊಂಡರೆ ಅಥವಾ ಆ ಬಗ್ಗೆ ಹರಾಜಿನಲ್ಲಿ ಕೂಗಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಹಾಗೆ ಕೊಂಡುಕೊಂಡ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

**204. ಲೋಕ ನೌಕರನಂತೆ ನಟನೆ.-** ಯಾರೇ ವ್ಯಕ್ತಿಯು ಹುದ್ದೆಯಲ್ಲಿ ತಾನು ಇಲ್ಲವೆಂದು ಗೊತ್ತಿದ್ದರೂ, ಯಾವುದೇ ಅಂಥ ನಿರ್ದಿಷ್ಟ ಹುದ್ದೆಯಲ್ಲಿ ಲೋಕ ನೌಕರನಾಗಿ ಇರುವೆನೆಂಬಂತೆ ನಟಿಸಿದರೆ ಅಥವಾ ಅಂಥ ಹುದ್ದೆಯಲ್ಲಿರುವ ಇತರ ಯಾರೇ ವ್ಯಕ್ತಿಯಂತೆ ಸುಳ್ಳಾಗಿ ನಟಿಸಿದರೆ ಮತ್ತು ಅಂಥ ಸೋಗಿನ ಸ್ವರೂಪದಲ್ಲಿ ಯಾವುದೇ ಕೃತ್ಯವನ್ನು ಅಂಥ ಹುದ್ದೆಯ ನೆಪದಲ್ಲಿ ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅವನು ಆರು ತಿಂಗಳಿಗೆ ಕಡಿಮೆ ಇಲ್ಲದ**,** ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**205**. **ಲೋಕ ನೌಕರನು ಧರಿಸುವ ಪೋಷಾಕನ್ನು ಅಥವಾ ಹಾಕಿಕೊಳ್ಳುವ ಚಿಹ್ನೆಯನ್ನು ವಂಚನೆ ಮಾಡುವ ಉದ್ದೇಶದಿಂದ ಧರಿಸುವುದು ಅಥವಾ ಹಾಕಿಕೊಳ್ಳುವುದು.-** ಲೋಕ ನೌಕರರ ವಿಶಿಷ್ಟ ವರ್ಗಕ್ಕೆ ಸೇರಿರದ ಯಾರೇ ವ್ಯಕ್ತಿಯು, ಲೋಕ ನೌಕರರ ಆ ವರ್ಗವು ಧರಿಸುವ ಯಾವುದೇ ಪೋಷಾಕು ಅಥವಾ ಹಾಕಿಕೊಳ್ಳುವ ಚಿಹ್ನೆಯನ್ನೇ ಹೋಲುವ ಯಾವುದೇ ಪೋಷಾಕು ಅಥವಾ ಚಿಹ್ನೆಯನ್ನು, ತಾನು ಲೋಕ ನೌಕರರ ಆ ವರ್ಗದವನೆಂದು ನಂಬುತ್ತಾರೆಂಬ ಉದ್ದೇಶದಿಂದ ಅಥವಾ ಹಾಗೆ ನಂಬುವ ಸಾಧ್ಯತೆ ಇದೆಯೆಂದು ತಿಳಿದೂ ಆ

ಪೋಷಾಕನ್ನು ಧರಿಸಿದರೆ ಅಥವಾ ಚಿಹ್ನೆಯನ್ನು ಹಾಕಿಕೊಂಡರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ XII

## ಲೋಕ ನೌಕರರ ಕಾನೂನುಸಮ್ಮತ ಅಧಿಕಾರಕ್ಕೆ ಅವಿಧೇಯತೆ

**206. ಸಮನ್ಸ್ ಜಾರಿಗೊಳಿಸುವುದರಿಂದ ಅಥವಾ ಇತರ ವ್ಯವಹರಣೆಗಳಿಂದ ತಪ್ಪಿಸಿಕೊಳ್ಳಲು ತಲೆಮರೆಸಿಕೊಳ್ಳುವುದು.-** ಲೋಕ ನೌಕರನಾಗಿ ಸಮನ್ಸನ್ನು, ನೋಟೀಸನ್ನು ಅಥವಾ ಆದೇಶವನ್ನು ಹೊರಡಿಸಲು ಕಾನೂನುಸಮ್ಮತವಾಗಿ ಸಕ್ಷಮನಾಗಿರುವಂಥ ಯಾರೇ ಲೋಕ ನೌಕರನು, ಹಾಗೆ ಲೋಕ ನೌಕರನಾಗಿ ಹೊರಡಿಸಿದ ಅಂಥ ಸಮನಿನ, ನೋಟೀಸಿನ ಅಥವಾ ಆದೇಶದ ಜಾರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ತಲೆಮರೆಸಿಕೊಂಡಿರುವ ಯಾರೇ ವ್ಯಕ್ತಿಯು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅಂಥ ಸಮನ್ಸ್ ಅಥವಾ ನೋಟೀಸು ಅಥವಾ ಆದೇಶವು ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗುವ ಬಗ್ಗೆ ಅಥವಾ ನ್ಯಾಯಾಲಯದಲ್ಲಿ ಒಂದು ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸುವುದಕ್ಕೆ ಸಂಬಂಧಿಸಿದ್ದಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**207. ಸಮನ್ಸ್ ಜಾರಿಯಾಗುವುದನ್ನು ಅಥವಾ ಇತರ ವ್ಯವಹರಣೆಯನ್ನು ಅಥವಾ ಅದರ ಪ್ರಕಟಣೆಯನ್ನು ಪ್ರತಿಬಂಧಿಸುವುದು.-** ಯಾರೇ ವ್ಯಕ್ತಿಯು, ತನ್ನ ಮೇಲೆ ಅಥವಾ ಯಾರೇ ಇತರ ವ್ಯಕ್ತಿಯ ಮೇಲೆ ಸಮನ್ಸ್, ನೋಟೀಸು ಅಥವಾ ಆದೇಶವನ್ನು ಹೊರಡಿಸಲು ಕಾನೂನುಸಮ್ಮತವಾಗಿ ಸಕ್ಷಮನಾಗಿರುವ ಯಾರೇ ಲೋಕ ನೌಕರನು, ಹಾಗೆ ಲೋಕ ನೌಕರನಾಗಿ ಹೊರಡಿಸಿರುವ ಅಂಥ ಯಾವುದೇ ಸಮನ್ಸ್, ನೋಟೀಸಿನ ಅಥವಾ ಆದೇಶದ ಜಾರಿಯನ್ನು ಯಾವುದೇ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಪ್ರತಿಬಂಧಿಸಿದರೆ ಅಥವಾ ಅಂಥ ಸಮನ್ಸನ್ನು, ನೋಟೀಸನ್ನು ಅಥವಾ ಆದೇಶವನ್ನು ಯಾವುದೇ ಸ್ಥಳದಲ್ಲಿ ಕಾನೂನುಸಮ್ಮತ ರೀತಿಯಲ್ಲಿ ಅಂಟಿಸುವುದನ್ನು ಉದ್ದೇಶಪೂರ್ವಕವಾಗಿ ಪ್ರತಿಬಂಧಿಸಿದರೆ ಅಥವಾ ಯಾವ ಸ್ಥಳದಲ್ಲಿ ಅಂಥ ಸಮನ್ಸನ್ನು, ನೋಟೀಸನ್ನು ಅಥವಾ ಆದೇಶವನ್ನು ಕಾನೂನುಸಮ್ಮತ ರೀತಿಯಲ್ಲಿ ಅಂಟಿಸಲಾಗಿದೆಯೋ ಆ ಯಾವುದೇ ಸ್ಥಳದಿಂದ ಅದನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಿದರೆ ಅಥವಾ ಯಾವುದೇ ಉದ್ಘೋಷಣೆಯನ್ನು ಮಾಡುವಂತೆ ನಿರ್ದೇಶಿಸಲು ಕಾನೂನುಸಮ್ಮತ ರೀತಿಯಲ್ಲಿ ಸಕ್ಷಮನಾಗಿರುವ ಯಾರೇ ಲೋಕ ನೌಕರನು, ತನ್ನ ಅಧಿಕಾರದ ಮೇರೆಗೆ ಯಾವುದೇ ಕಾನೂನುಸಮ್ಮತ ಉದ್ಘೋಷಣೆ ಮಾಡುವುದನ್ನು ಉದ್ದೇಶಪೂರ್ವಕವಾಗಿ ಪ್ರತಿಬಂಧಿಸಿದರೆ, ಅವನು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಸಮನ್ಸನ್ನು, ನೋಟೀಸನ್ನು, ಆದೇಶವನ್ನು ಅಥವಾ ಉದ್ಘೋಷಣೆಯನ್ನು ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗಲು ಅಥವಾ ನ್ಯಾಯಾಲಯದಲ್ಲಿ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸುವುದಕ್ಕೆ ಸಂಬಂಧಿಸಿದ್ದಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**208. ಲೋಕ ನೌಕರನು ಹೊರಡಿಸಿದ ಆದೇಶವನ್ನು ಪಾಲಿಸದೆ ಗೈರುಹಾಜರಾಗುವುದು.-** ಸಮನ್ಸನ್ನು, ನೋಟೀಸನ್ನು, ಆದೇಶವನ್ನು ಅಥವಾ ಉದ್ಘೋಷಣೆಯನ್ನು ಹೊರಡಿಸಲು ಕಾನೂನುಸಮ್ಮತವಾಗಿ ಸಕ್ಷಮನಾಗಿರುವ ಯಾರೇ ಲೋಕ ನೌಕರನು, ಅಂಥ ನೌಕರನಾಗಿ

ಹೊರಡಿಸಿದ ಸಮನ್ಸಿಗೆ, ನೋಟೀಸಿಗೆ, ಆದೇಶಕ್ಕೆ ಅಥವಾ ಉದ್ಘೋಷಣೆಗೆ ವಿಧೇಯನಾಗಿ ಖುದ್ದಾಗಿ ಅಥವಾ ಏಜೆಂಟನ ಮೂಲಕ ನಿರ್ದಿಷ್ಟ ಸ್ಥಳದಲ್ಲಿ ಮತ್ತು ಸಮಯದಲ್ಲಿ ಹಾಜರಾಗಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು, ಉದ್ದೇಶಪೂರ್ವಕವಾಗಿ ಆ ಸ್ಥಳದಲ್ಲಿ ಅಥವಾ ಸಮಯದಲ್ಲಿ ಹಾಜರಾಗಲು ತಪ್ಪಿದರೆ ಅಥವಾ ಅವನು ಹಾಜರಾಗಲು ಬದ್ಧನಾಗಿರುವ ಸ್ಥಳದಿಂದ ಕಾನೂನುಸಮ್ಮತ ರೀತಿಯಲ್ಲಿ ಅವನು ನಿರ್ಗಮಿಸಬೇಕಾದ ಸಮಯಕ್ಕೆ ಮುಂಚಿತವಾಗಿಯೇ ನಿರ್ಗಮಿಸಿದರೆ, ಅವನು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಸಮನ್ಸ್, ನೋಟೀಸ್, ಆದೇಶವು ಅಥವಾ ಉದ್ಘೋಷಣೆಯು ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗುವುದಕ್ಕೆ ಸಂಬಂಧಿಸಿದುದ್ದಾಗಿದ್ದಲ್ಲಿ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಉಚ್ಚ ನ್ಯಾಯಾಲಯವು ತನ್ನ ಮುಂದೆ ಹಾಜರಾಗಲೇಬೇಕೆಂದು ಲಿಖಿತದಲ್ಲಿ ಹೊರಡಿಸಿದ ಕರೆ ಆಜ್ಞೆಗೆ ವಿಧೇಯನಾಗಿ ಆ ನ್ಯಾಯಾಲಯದ ಮುಂದೆ ಕಾನೂನುಸಮ್ಮತವಾಗಿ ಹಾಜರಾಗಲು ಬದ್ಧನಾಗಿರುವ 'ಎ'ನು ಹಾಜರಾಗಲು ಉದ್ದೇಶಪೂರ್ವಕವಾಗಿ ತಪ್ಪುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) ಜಿಲ್ಲಾ ನ್ಯಾಯಾಧೀಶನು ಹೊರಡಿಸಿದ ಸಮನ್ಸಿಗೆ ವಿಧೇಯನಾಗಿ ಜಿಲ್ಲಾ ನ್ಯಾಯಾಧೀಶನ ಮುಂದೆ ಸಾಕ್ಷಿದಾರನಾಗಿ ಹಾಜರಾಗಲು ಕಾನೂನುಸಮ್ಮತವಾಗಿ ಬದ್ಧನಾಗಿರುವ 'ಎ'ನು ಹಾಗೆ ಹಾಜರಾಗಲು ಉದ್ದೇಶಪೂರ್ವಕವಾಗಿ ತಪ್ಪುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**209. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ 84ನೇ ಪ್ರಕರಣದ ಮೇರೆಗೆ ಹೊರಡಿಸಲಾಗಿರುವ ಉದ್ಘೋಷಣೆಗೆ ಪ್ರತಿಯಾಗಿ ಹಾಜರಾಗದಿರುವುದು.-** ಯಾರೇ ವ್ಯಕ್ತಿಯು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ 46)ರ 84ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ಉದ್ಘೋಷಣೆಯ ಮೂಲಕ ಅಗತ್ಯಪಡಿಸಲಾದಂತೆ ನಿರ್ದಿಷ್ಟ ಸ್ಥಳದಲ್ಲಿ ಮತ್ತು ನಿರ್ದಿಷ್ಟ ವೇಳೆಯಲ್ಲಿ ಹಾಜರಾಗಲು ತಪ್ಪಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಸಮುದಾಯ ಸೇವೆಯಿಂದಲೂ ದಂಡಿತನಾಗತಕ್ಕದ್ದು ಮತ್ತು ಆತನನ್ನು ಉದ್ಘೋಷಿತ ಅಪರಾಧಿಯೆಂದು ಹೇಳಿ ಆ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಹೊರಡಿಸಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**210. ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಲೋಕ ನೌಕರನ ಮುಂದೆ ಹಾಜರುಪಡಿಸಲು ಕಾನೂನುಸಮ್ಮತವಾಗಿ ಬದ್ಧನಾದ ವ್ಯಕ್ತಿಯು ಹಾಗೆ ಹಾಜರುಪಡಿಸಲು ತಪ್ಪುವುದು.-** ಯಾರೇ ಲೋಕ ನೌಕರನಿಗೆ, ಹಾಗೆ ಅವನು ಲೋಕ ನೌಕರನಾಗಿರುವಾಗ, ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸಲು ಅಥವಾ ಒಪ್ಪಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಹಾಗೆ ಹಾಜರುಪಡಿಸಲು ಅಥವಾ ಒಪ್ಪಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಮತ್ತು ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಬೇಕಾಗಿದ್ದರೆ ಅಥವಾ ಒಪ್ಪಿಸಬೇಕಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತ*

ಜಿಲ್ಲಾ ನ್ಯಾಯಾಲಯದ ಮುಂದೆ ದಸ್ತಾವೇಜನ್ನು ಹಾಜರುಪಡಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುವ 'ಎ'ನು ಉದ್ದೇಶಪೂರ್ವಕವಾಗಿ ಹಾಗೆ ಹಾಜರುಪಡಿಸಲು ತಪ್ಪುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**211. ಲೋಕ ನೌಕರನಿಗೆ ಸೂಚನೆ ಅಥವಾ ಮಾಹಿತಿಯನ್ನು ನೀಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ವ್ಯಕ್ತಿಯು ಹಾಗೆ ಮಾಡಲು ತಪ್ಪುವುದು.-** ಯಾರೇ ಲೋಕ ನೌಕರನಿಗೆ ಹಾಗೆ ಅವನು ಲೋಕ ನೌಕರನಾಗಿರುವಾಗ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸೂಚನೆಯನ್ನು ನೀಡಲು ಅಥವಾ ಮಾಹಿತಿಯನ್ನು ಒದಗಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಕಾನೂನು ಅಗತ್ಯಪಡಿಸಿದ ರೀತಿಯಲ್ಲಿ ಮತ್ತು ಸಮಯದಲ್ಲಿ ಆ ಬಗ್ಗೆ ಸೂಚನೆಯನ್ನು ನೀಡಲು ಅಥವಾ ಮಾಹಿತಿಯನ್ನು ಒದಗಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಯಾವುದರ ಸೂಚನೆ ಅಥವಾ ಮಾಹಿತಿಯನ್ನು ನೀಡಬೇಕೆಂದು ಅಗತ್ಯಪಡಿಸಲಾಗಿದೆಯೋ ಅದು ಅಪರಾಧ ಮಾಡುವುದಕ್ಕೆ ಸಂಬಂಧಿಸಿದ್ದರೆ ಅಥವಾ ಅಪರಾಧವು ಸಂಭವಿಸುವುದನ್ನು ಪ್ರತಿಬಂಧಿಸುವ ಉದ್ದೇಶದಿಂದ ಅದು ಅಗತ್ಯವಾಗಿದ್ದರೆ ಅಥವಾ ಅಪರಾಧಿಯನ್ನು ದಸ್ತಗಿರಿ ಮಾಡುವುದಕ್ಕೆ ಅದು ಅಗತ್ಯವಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಸಿ) ನೀಡುವುದಕ್ಕೆ ಅಗತ್ಯಪಡಿಸಿದ ಸೂಚನೆ ಅಥವಾ ಮಾಹಿತಿಯನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ 46)ರ 394ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶದ ಮೂಲಕ ಅಗತ್ಯಪಡಿಸಿದ್ದಲ್ಲಿ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**212. ಸುಳ್ಳು ಮಾಹಿತಿಯನ್ನು ಒದಗಿಸುವುದು.-** ಯಾರೇ ಲೋಕ ನೌಕರನಿಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಆ ವಿಷಯಕ್ಕೆ ಸಂಬಂಧಿಸಿದ, ಸುಳ್ಳೆಂದು ತನಗೆ ತಿಳಿದಿರುವ ಅಥವಾ ಸುಳ್ಳೆಂದು ನಂಬಲು ತನಗೆ ಕಾರಣವಿರುವ ಮಾಹಿತಿಯನ್ನು ನಿಜವೆಂಬುದಾಗಿ ಒದಗಿಸಿದರೆ, ಅವನು,-

(ಎ) ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಯಾವ ಮಾಹಿತಿಯನ್ನು ಒದಗಿಸಲು ಅವನು ಕಾನೂನುಸಮ್ಮತವಾಗಿ ಬದ್ಧನಾಗಿರುವನೋ ಆ ಮಾಹಿತಿಯು ಅಪರಾಧ ನಡೆದಿರುವುದಕ್ಕೆ ಸಂಬಂಧಿಸಿದ್ದರೆ ಅಥವಾ ಅಪರಾಧ ನಡೆಯುವುದನ್ನು ತಡೆಯುವ ಉದ್ದೇಶಕ್ಕಾಗಿ ಅಥವಾ ಅಪರಾಧಿಯನ್ನು ದಸ್ತಗಿರಿ ಮಾಡುವುದಕ್ಕಾಗಿ ಅಗತ್ಯವಾಗಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಹಿಡುವಳಿದಾರನಾದ 'ಎ'ನು ತನ್ನ ಎಸ್ಟೇಟಿನ ಎಲ್ಲೆಗಳಲ್ಲಿ ಕೊಲೆಯು ನಡೆದಿದೆಯೆಂಬುದು ಗೊತ್ತಿದ್ದೂ, ಹಾವು ಕಚ್ಚಿದ್ದರ ಪರಿಣಾಮವಾಗಿ ಆ ಮರಣವು ಆಕಸ್ಮಿಕವಾಗಿ ಸಂಭವಿಸಿತು ಎಂದು ಆ ಜಿಲ್ಲೆಯ ಮ್ಯಾಜಿಸ್ಟ್ರೇಟನಿಗೆ ಉದ್ದೇಶಪೂರ್ವಕವಾಗಿ ತಪ್ಪು ಸುದ್ದಿ ಕೊಡುತ್ತಾನೆ. 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

(ಬಿ) ಗ್ರಾಮ ಕಾವಲುಗಾರನಾದ 'ಎ'ನಿಗೆ ಸಮೀಪದ ಸ್ಥಳವೊಂದರಲ್ಲಿ ವಾಸಿಸುವ ಶ್ರೀಮಂತ ವ್ಯಾಪಾರಿಯಾದ 'ಜೆಡ್' ಎಂಬುವನ ಮನೆಯಲ್ಲಿ ದರೋಡೆ ಮಾಡುವ ಸಲುವಾಗಿ ಬಹಳಷ್ಟು ಜನ ಅಪರಿಚಿತರ ಗುಂಪೊಂದು ತನ್ನ ಗ್ರಾಮದೊಳಗಿಂದ ಹಾದು ಹೋಗಿದೆ ಎಂಬುದು ತಿಳಿದಿದೆ. ಇಲ್ಲಿ ಅವನು ಆ ಸಂಗತಿಯನ್ನು ಕುರಿತು ಬೇಗನೆ ಮತ್ತು ಸಕಾಲದಲ್ಲಿ, ಅತ್ಯಂತ ಸಮೀಪದಲ್ಲಿರುವ ಪೊಲೀಸ್ ಠಾಣಾಧಿಕಾರಿಗೆ ಸುದ್ದಿಯನ್ನು ಕೊಡಲು ಬದ್ಧನಾಗಿದ್ದನು. ಆದರೆ, ಬೇರೆ ದಿಕ್ಕಿನಲ್ಲಿರುವ ದೂರದ ಒಂದು ಸ್ಥಳದಲ್ಲಿ ದರೋಡೆ ಮಾಡುವ ಉದ್ದೇಶದಿಂದ ಸಂಶಯಾಸ್ಪದ ವ್ಯಕ್ತಿಗಳ ಗುಂಪೊಂದು ಆ ಗ್ರಾಮದೊಳಗಿನಿಂದ ಹಾದು ಹೋಯಿತು ಎಂದು ಅವನು ಉದ್ದೇಶಪೂರ್ವಕವಾಗಿ, ಆ ಪೊಲೀಸ್ ಅಧಿಕಾರಿಗೆ ತಪ್ಪು ಮಾಹಿತಿ ನೀಡಿರುತ್ತಾನೆ. ಇಲ್ಲಿ 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧದ ತಪ್ಪಿತಸ್ಥನಾಗಿದ್ದಾನೆ.

*ವಿವರಣೆ.-* 211ನೇ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ "ಅಪರಾಧ" ಎಂಬ ಪದವು, ಭಾರತದ ಹೊರಗೆ ಮಾಡಿದ್ದ ಯಾವ ಕೃತ್ಯವನ್ನು ಭಾರತದ ಒಳಗೆ ಮಾಡಿದ್ದರೆ ಈ ಮುಂದಿನ ಯಾವುವೇ ಪ್ರಕರಣಗಳ ಮೇರೆಗೆ ಎಂದರೆ, 103, 105, 307, 309ನೇ ಪ್ರಕರಣದ (2), (3) ಮತ್ತು (4)ನೇ ಉಪಪ್ರಕರಣಗಳು, 310ನೇ ಪ್ರಕರಣದ (2), (3), (4) ಮತ್ತು (5)ನೇ ಉಪಪ್ರಕರಣಗಳು, 311ನೇ ಪ್ರಕರಣ, 312ನೇ ಪ್ರಕರಣ, 326ನೇ ಪ್ರಕರಣದ (ಎಫ್) ಮತ್ತು (ಜಿ) ಖಂಡಗಳು, 331ನೇ ಪ್ರಕರಣದ (4), (6), (7) ಮತ್ತು (8)ನೇ ಉಪಪ್ರಕರಣಗಳು, 332ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳು ಇವುಗಳಲ್ಲಿ ಯಾವುದರ ಮೇರೆಗೆ ದಂಡನೀಯವಾಗುತ್ತಿತ್ತೋ ಆ ಕೃತ್ಯವನ್ನು ಒಳಗೊಳ್ಳುತ್ತದೆ ಮತ್ತು "ಅಪರಾಧಿ" ಎಂಬ ಪದವು ಅಂಥ ಯಾವುದೇ ಕೃತ್ಯವನ್ನು ಮಾಡಿದ್ದಕ್ಕಾಗಿ ಯಾವ ವ್ಯಕ್ತಿಯನ್ನು ತಪ್ಪಿತಸ್ಥನೆಂದು ಆಪಾದಿಸಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**213. ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವಂತೆ ಲೋಕ ನೌಕರನು ಕ್ರಮಬದ್ಧವಾಗಿ ಅಗತ್ಯಪಡಿಸಿದಾಗ ಹಾಗೆ ಮಾಡಲು ನಿರಾಕರಿಸುವುದು.-** ಯಾರೇ ವ್ಯಕ್ತಿಗೆ ಸತ್ಯವನ್ನು ಹೇಳಲು ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವಂತೆ ಅಗತ್ಯಪಡಿಸಲು ಕಾನೂನುಬದ್ಧವಾಗಿ ಸಕ್ಷಮನಾದ ಲೋಕ ನೌಕರನು ಹಾಗೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಿದಾಗ ಹಾಗೆ ಮಾಡಲು ಅವನು ನಿರಾಕರಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**214. ಪ್ರಶ್ನೆ ಕೇಳಲು ಅಧಿಕೃತನಾದ ಲೋಕ ನೌಕರನಿಗೆ ಉತ್ತರಿಸಲು ನಿರಾಕರಿಸುವುದು.-** ಯಾರೇ ಲೋಕ ನೌಕರನಿಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಸತ್ಯವನ್ನು ಹೇಳಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಲೋಕ ನೌಕರನಾಗಿ ತನ್ನ ಕಾನೂನುಸಮ್ಮತ ಅಧಿಕಾರಗಳನ್ನು ಚಲಾಯಿಸುವ ಯಾರೇ ಅಂಥ ಲೋಕ ನೌಕರನು ಆ ವಿಷಯಕ್ಕೆ ಸಂಬಂಧಿಸಿ ತನಗೆ ಕೇಳಿದ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ನಿರಾಕರಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**215. ಹೇಳಿಕೆಗೆ ಸಹಿ ಹಾಕಲು ನಿರಾಕರಿಸುವುದು.-** ಯಾರೇ ವ್ಯಕ್ತಿಯು, ತಾನು ಕೊಟ್ಟ ಹೇಳಿಕೆಗೆ ಸಹಿ ಹಾಕಬೇಕೆಂದು ಅಗತ್ಯಪಡಿಸಲು ಕಾನೂನುಬದ್ಧನಾಗಿ ಸಕ್ಷಮನಾಗಿರುವ ಯಾರೇ ಲೋಕ ನೌಕರನು ಆ ಹೇಳಿಕೆಗೆ ಸಹಿ ಹಾಕಲು ಆ ವ್ಯಕ್ತಿಯನ್ನು ಅಗತ್ಯಪಡಿಸಿದಾಗ, ಆ ವ್ಯಕ್ತಿಯು ಹಾಗೆ ಮಾಡಲು ನಿರಾಕರಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ

ಸಾದಾ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**216. ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿಸಲು ಅಧಿಕೃತನಾದ ಲೋಕ ನೌಕರನ ಅಥವಾ ವ್ಯಕ್ತಿಯ ಮುಂದೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಸುಳ್ಳು ಹೇಳಿಕೆ ಕೊಡುವುದು.-** ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿಸಲು ಕಾನೂನಿನ ಮೂಲಕ ಅಧಿಕೃತನಾದ ಯಾರೇ ಲೋಕ ನೌಕರನ ಅಥವಾ ಇತರ ವ್ಯಕ್ತಿಯ ಮುಂದೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸತ್ಯವನ್ನೇ ಹೇಳುವೆನೆಂದು ಪ್ರಮಾಣ ಅಥವಾ ಪ್ರತಿಜ್ಞೆ ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು, ಆ ಲೋಕ ನೌಕರನಿಗೆ ಅಥವಾ ಆ ಇತರ ವ್ಯಕ್ತಿಗೆ ಆ ವಿಷಯಕ್ಕೆ ಸಂಬಂಧಿಸಿದ, ಸುಳ್ಳಾಗಿರುವ ಅಥವಾ ಸುಳ್ಳಾಗಿರುವುದೆಂದು ತನಗೆ ತಿಳಿದಿರುವ ಅಥವಾ ತಾನು ನಂಬಿರುವ ಅಥವಾ ನಿಜವೆಂದು ತಾನು ನಂಬದಿರುವ ಯಾವುದೇ ಹೇಳಿಕೆಯನ್ನು ಕೊಟ್ಟರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**217. ಲೋಕ ನೌಕರನು ತನ್ನ ಕಾನೂನುಬದ್ಧ ಅಧಿಕಾರವನ್ನು ಬಳಸುವಂತೆ ಮಾಡಿ ಇನ್ನೊಬ್ಬ ವ್ಯಕ್ತಿಗೆ ಕೆಡುಕನ್ನುಂಟುಮಾಡುವ ಉದ್ದೇಶದಿಂದ ಸುಳ್ಳು ಮಾಹಿತಿ ಒದಗಿಸುವುದು.-** ಯಾರೇ ವ್ಯಕ್ತಿಯು ಸುಳ್ಳೆಂದು ತಾನು ತಿಳಿದ ಅಥವಾ ನಂಬುವ ಯಾವುದೇ ಮಾಹಿತಿಯನ್ನು ಯಾರೇ ಲೋಕ ನೌಕರನಿಗೆ, ಆ ಲೋಕ ನೌಕರನು,-

(ಎ) ಅಂಥ ಮಾಹಿತಿಗೆ ಸಂಬಂಧಿಸಿದ ಸಂಗತಿಗಳ ನಿಜವಾದ ಪರಿಸ್ಥಿತಿಯು ಅವನಿಗೆ ತಿಳಿದಿದ್ದರೆ, ಅಂಥ ಲೋಕ ನೌಕರನಾಗಿ ಅವನು ಮಾಡಬಾರದ ಅಥವಾ ಮಾಡಲು ತಪ್ಪಬಾರದ ಯಾವುದನ್ನಾದರೂ ಮಾಡುವಂತೆ ಅಥವಾ ಮಾಡಲು ತಪ್ಪುವಂತೆ; ಅಥವಾ

(ಬಿ) ಅಂಥ ಲೋಕ ನೌಕರನ ಕಾನೂನುಬದ್ಧ ಅಧಿಕಾರವನ್ನು ಯಾರೇ ವ್ಯಕ್ತಿಗೆ ಕೆಡುಕು ಅಥವಾ ಕಿರುಕುಳವುಂಟು ಮಾಡಲು ಬಳಸುವಂತೆ ಮಾಡುವ ಉದ್ದೇಶದಿಂದ ಅಥವಾ ಆ ಮೂಲಕ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ ಒದಗಿಸಿದರೆ

- ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) 'ಜೆಡ್'ನು ಮ್ಯಾಜಿಸ್ಟ್ರೇಟನಿಗೆ ಅಧೀನನಾದ ಪೊಲೀಸ್ ಅಧಿಕಾರಿಯಾಗಿದ್ದು, ಅವನು ತನ್ನ ಕರ್ತವ್ಯವನ್ನು ನಿರ್ಲಕ್ಷಿಸಿದ ಅಥವಾ ದುರ್ವರ್ತನೆಯ ತಪ್ಪಿತಸ್ಥನಾಗಿರುವನೆಂದು 'ಏ'ನು ಮ್ಯಾಜಿಸ್ಟ್ರೇಟನಿಗೆ ತಿಳಿಸುತ್ತಾನೆ. ಹಾಗೆ ತಿಳಿಸಿರುವ ಮಾಹಿತಿಯು ಸುಳ್ಳೆಂದು ಗೊತ್ತಿದ್ದರೂ, ಅದರಿಂದಾಗಿ ಆ ಮ್ಯಾಜಿಸ್ಟ್ರೇಟನು 'ಜೆಡ್'ನನ್ನು ಪದಚ್ಯುತಗೊಳಿಸುವ ಸಂಭವವಿದೆಯೆಂದು ತಿಳಿದೂ, 'ಏ'ನು ಮ್ಯಾಜಿಸ್ಟ್ರೇಟನಿಗೆ ಅಂಥ ಮಾಹಿತಿಯನ್ನು ತಿಳಿಸುತ್ತಾನೆ. ಇಲ್ಲಿ 'ಏ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಜೆಡ್' ಎಂಬುವನು ಗುಪ್ತ ಸ್ಥಳದಲ್ಲಿ ಕಾನೂನಿನಿಂದ ನಿಷೇಧಿತವಾದ ಉಪ್ಪನ್ನು ಇಟ್ಟಿರುವನು ಎಂದು ಲೋಕ ನೌಕರನಿಗೆ 'ಏ'ನು ತಿಳಿಸುತ್ತಾನೆ. ತಾನು ಹಾಗೆ ತಿಳಿಸಿದ ಮಾಹಿತಿಯು ಸುಳ್ಳೆಂದೂ ಗೊತ್ತಿದ್ದರೂ, ಅದರಿಂದ 'ಜೆಡ್'ನ ಆವರಣಗಳಲ್ಲಿ ಶೋಧನೆ ನಡೆಯುವ ಮತ್ತು 'ಜೆಡ್'ನಿಗೆ ಕಿರುಕುಳ ಉಂಟಾಗುವ ಸಂಭವವಿದೆಯೆಂದು ಗೊತ್ತಿದ್ದರೂ ಹಾಗೆಂದು, 'ಏ'ನು ಲೋಕ ನೌಕರನಿಗೆ ತಿಳಿಸುತ್ತಾನೆ. ಇಲ್ಲಿ 'ಏ'ನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಸಿ) ಒಂದು ನಿರ್ದಿಷ್ಟ ಹಳ್ಳಿಯ ಸಮೀಪದಲ್ಲಿ ಕೆಲವರು ತನ್ನ ಮೇಲೆ ಹಲ್ಲೆ ಮಾಡಿದರೆಂದೂ ಮತ್ತು ಸುಲಿಗೆ ಮಾಡಿದರೆಂದು 'ಏ'ನು ಪೋಲಿಸರಿಗೆ ಸುಳ್ಳು ಸುದ್ದಿ ಕೊಡುತ್ತಾನೆ. ತನ್ನ ಮೇಲೆ ಹಲ್ಲೆ ಮಾಡಿದವರಲ್ಲಿ ಯಾರೇ ವ್ಯಕ್ತಿಯ ಹೆಸರನ್ನು ಅವನು ಹೇಳುವುದಿಲ್ಲ. ಹೀಗೆ ಸುಳ್ಳು ಮಾಹಿತಿ ಒದಗಿಸಿದ್ದಕ್ಕಾಗಿ ಪೋಲಿಸರು ಆ ಬಗ್ಗೆ ಹಳ್ಳಿಯಲ್ಲಿ ವಿಚಾರಣೆ ನಡೆಸುತ್ತಾರೆಂದೂ, ಶೋಧನೆ ಮಾಡುತ್ತಾರೆಂದೂ,

ಆ ಮೂಲಕ ಹಳ್ಳಿಗರಿಗೆ ಅಥವಾ ಅವರಲ್ಲಿ ಕೆಲವರಿಗೆ ಕಿರುಕುಳವುಂಟಾಗುವ ಸಂಭವವಿದೆಯೆಂಬುದು ಅವನಿಗೆ ಗೊತ್ತಿದೆ. ಇಲ್ಲಿ ಓನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**218. ಲೋಕ ನೌಕರನು ತನಗಿರುವ ಕಾನೂನುಬದ್ಧ ಅಧಿಕಾರದ ಮೇರೆಗೆ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಆತನಿಗೆ ಪ್ರತಿರೋಧಿಸುವುದು.-** ಯಾರೇ ಲೋಕ ನೌಕರನು ತನಗೆ ಇರುವ ಕಾನೂನುಬದ್ಧ ಅಧಿಕಾರದ ಮೇರೆಗೆ ಯಾವುದೇ ಸ್ವತ್ತನ್ನು ವಶಪಡಿಸಿಕೊಳ್ಳುವಾಗ, ಅವನು ಅಂಥ ಲೋಕ ನೌಕರನೆಂಬುದು ಗೊತ್ತಿದ್ದರೂ ಅಥವಾ ಹಾಗೆಂದು ನಂಬಲು ಕಾರಣವಿದ್ದರೂ, ಹಾಗೆ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರತಿರೋಧ ಒಡ್ಡುವ ಯಾರೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**219. ಲೋಕ ನೌಕರನು ತನಗಿರುವ ಅಧಿಕಾರದ ಮೇರೆಗೆ ಮಾರಾಟಕ್ಕೆ ಇಟ್ಟಿರುವ ಸ್ವತ್ತನ್ನು ಮಾರಾಟ ಮಾಡಲು ಆತನಿಗೆ ಅಡ್ಡಿಪಡಿಸುವುದು.-** ಯಾರೇ ಲೋಕ ನೌಕರನು ತನಗಿರುವ ಕಾನೂನುಬದ್ಧ ಅಧಿಕಾರದ ಮೇರೆಗೆ, ಹಾಗೆ ಅವನು ಲೋಕ ನೌಕರನಾಗಿರುವ ಪ್ರಯುಕ್ತ, ಮಾರಾಟಕ್ಕೆ ಇಟ್ಟಿರುವ ಯಾವುದೇ ಸ್ವತ್ತಿನ ಮಾರಾಟಕ್ಕೆ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುವ ಯಾರೇ ವ್ಯಕ್ತಿಯು, ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**220. ಲೋಕ ನೌಕರನು ತನಗಿರುವ ಅಧಿಕಾರದ ಮೇರೆಗೆ ಮಾರಾಟಕ್ಕೆ ಇಟ್ಟಿರುವ ಸ್ವತ್ತನ್ನು ಕಾನೂನುಬಾಹಿರವಾಗಿ ಖರೀದಿ ಮಾಡುವುದು ಅಥವಾ ಆ ಬಗ್ಗೆ ಹರಾಜಿನಲ್ಲಿ ಸವಾಲು ಕೂಗುವುದು.-** ಲೋಕ ನೌಕರನು ತನ್ನ ಕಾನೂನುಬದ್ಧ ಅಧಿಕಾರದ ಮೇರೆಗೆ ತಾನು ಅಂಥ ಲೋಕ ನೌಕರನಾಗಿ ನಡೆಸಿದ ಸ್ವತ್ತಿನ ಯಾವುದೇ ಮಾರಾಟದಲ್ಲಿ, ಯಾರೇ ವ್ಯಕ್ತಿಯು ಆ ಸ್ವತ್ತನ್ನು ಖರೀದಿ ಮಾಡಲು ಕಾನೂನು ಪ್ರಕಾರ ಅಸಮರ್ಥನಾಗಿರುವನೆಂಬುದು ಗೊತ್ತಿದ್ದರೂ, ತನಗಾಗಿ ಅಥವಾ ಇನ್ನೊಬ್ಬರಿಗಾಗಿ ಯಾರೇ ವ್ಯಕ್ತಿಯ ಹೆಸರಿನಲ್ಲಿ ಆ ಸ್ವತ್ತನ್ನು ಖರೀದಿ ಮಾಡಿದರೆ ಅಥವಾ ಆ ಬಗ್ಗೆ ಹರಾಜಿನಲ್ಲಿ ಸವಾಲು ಕೂಗಿದರೆ ಅಥವಾ ಅಂಥ ಸ್ವತ್ತಿನ ಬಗ್ಗೆ ಸವಾಲು ಕೂಗುವ ಮೂಲಕ ತಾನು ಯಾವ ಬಾಧ್ಯತೆಗಳಿಗೆ ಒಳಗಾಗಬೇಕಿದೆಯೋ ಅವುಗಳನ್ನು ನೆರವೇರಿಸುವ ಉದ್ದೇಶವಿಲ್ಲದೆಯೇ ಹಾಗೆ ಸವಾಲು ಕೂಗಿದರೆ, ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**221. ಲೋಕ ನೌಕರನು ತನ್ನ ಸಾರ್ವಜನಿಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವನಿಗೆ ಅಡ್ಡಿಪಡಿಸುವುದು.-** ಯಾರೇ ಲೋಕ ನೌಕರನು ತನ್ನ ಸಾರ್ವಜನಿಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವನಿಗೆ ಸ್ವಯಿಚ್ಛೆಯಿಂದ ಅಡ್ಡಿಪಡಿಸುವ ಯಾರೇ ವ್ಯಕ್ತಿಯು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರದ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**222. ಲೋಕ ನೌಕರನಿಗೆ ಸಹಾಯವನ್ನು ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು ಅವನಿಗೆ ಸಹಾಯ ಮಾಡದಿರುವುದು.-** ಯಾರೇ ಲೋಕ ನೌಕರನಿಗೆ, ಅವನು ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುವಾಗ ನೆರವಾಗಲು ಅಥವಾ ನೆರವು ಒದಗಿಸಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ನೆರವಾಗದಿದ್ದರೆ, ಅವನು,-

(ಎ) ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರದ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಮತ್ತು ಅಂಥ ನೆರವನ್ನು ಕೇಳಲು ಕಾನೂನುಸಮ್ಮತವಾಗಿ ಸಕ್ಷಮನಾದ ಲೋಕ ನೌಕರನು, ನ್ಯಾಯಾಲಯವು ಕಾನೂನುಸಮ್ಮತವಾಗಿ ಹೊರಡಿಸಿದ ಯಾವುದೇ ಆದೇಶಿಕೆಯನ್ನು ಜಾರಿ ಮಾಡುವ ಅಥವಾ ಅಪರಾಧ ನಡೆಯುವುದನ್ನು ತಡೆಯುವ ಅಥವಾ ದೊಂಬಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟವನ್ನು ದಮನ ಮಾಡುವ ಅಥವಾ ಅಪರಾಧದ

ಆರೋಪಿತನಾದ ಅಥವಾ ತಪ್ಪಿತಸ್ಥನಾದ ಅಥವಾ ಕಾನೂನುಬದ್ಧ ಅಭಿರಕ್ಷೆಯಿಂದ ತಪ್ಪಿಸಿಕೊಂಡಿದ್ದಕ್ಕಾಗಿ ತಪ್ಪಿತಸ್ಥನಾದ ವ್ಯಕ್ತಿಯನ್ನು ದಸ್ತಗಿರಿ ಮಾಡುವ ಉದ್ದೇಶಗಳಿಗಾಗಿ ಅವನಿಂದ ನೆರವನ್ನು ಕೋರಿದಾಗ ಉದ್ದೇಶಪೂರ್ವಕವಾಗಿ ನೆರವಾಗದಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**223. ಲೋಕ ನೌಕರನು ವಿಧ್ಯುಕ್ತವಾಗಿ ಉದ್ಘೋಷಿಸಿದ ಆದೇಶಕ್ಕೆ ಅವಿಧೇಯತೆ.-** ಆದೇಶವನ್ನು ಹೊರಡಿಸಲು ಕಾನೂನುಬದ್ಧನಾಗಿ ಸಶಕ್ತನಾದ ಲೋಕ ನೌಕರನು ಉದ್ಘೋಷಿಸಿದಂಥ ಯಾವುದೇ ಆದೇಶದಿಂದ, ನಿರ್ದಿಷ್ಟ ಕೃತ್ಯವನ್ನು ಮಾಡದಿರಲು ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ಆಡಳಿತದಲ್ಲಿರುವ ನಿರ್ದಿಷ್ಟ ಸ್ವತ್ತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ವ್ಯವಸ್ಥೆಯನ್ನು ಮಾಡಲು ತನಗೆ ನಿರ್ದೇಶನ ಇದೆಯೆಂಬುದು ತಿಳಿದಿದ್ದರೂ ಅಂಥ ನಿರ್ದೇಶನಕ್ಕೆ ಅವಿಧೇಯತೆ ತೋರುವ ಯಾರೇ ವ್ಯಕ್ತಿಯು,-

(ಎ) ಹಾಗೆ ಅವಿಧೇಯತೆ ತೋರಿದ ಪರಿಣಾಮವಾಗಿ, ಕಾನೂನುಸಮ್ಮತವಾಗಿ ನಿಯೋಜಿತನಾದ ಯಾರೇ ವ್ಯಕ್ತಿಗೆ ಅಡ್ಡಿಯನ್ನು, ಕಿರುಕುಳವನ್ನು ಅಥವಾ ಕ್ಷತಿಯನ್ನು ಉಂಟುಮಾಡಿದರೆ ಅಥವಾ ಅಡ್ಡಿಯ, ಕಿರುಕುಳದ ಅಥವಾ ಕ್ಷತಿಯ ಅಪಾಯವನ್ನು ಉಂಟುಮಾಡಿದರೆ ಅಥವಾ ಉಂಟಾಗುವಂತೆ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರದ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಮತ್ತು ಅಂಥ ಅವಿಧೇಯತೆಯಿಂದ ಮನುಷ್ಯನ ಪ್ರಾಣಕ್ಕೆ, ಆರೋಗ್ಯಕ್ಕೆ ಅಥವಾ ಸುರಕ್ಷೆಗೆ ಅಪಾಯ ಉಂಟಾದರೆ ಅಥವಾ ಉಂಟಾಗುವಂತೆ ಮಾಡಿದರೆ ಅಥವಾ ದೊಂಬಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟವನ್ನು ಉಂಟುಮಾಡಿದರೆ ಅಥವಾ ಉಂಟಾಗುವಂತೆ ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* ಅಪರಾಧಿಯು ಹಾನಿಯನ್ನು ಉಂಟುಮಾಡಬೇಕೆಂದು ಉದ್ದೇಶಿಸುವುದಾಗಲಿ, ತನ್ನ ಅವಿಧೇಯತೆಯು ಹಾನಿಯನ್ನು ಉಂಟುಮಾಡುವ ಸಂಭವವಿದೆಯೆಂದು ಆಲೋಚಿಸುವುದಾಗಲಿ ಅವಶ್ಯಕವಿಲ್ಲ. ಅವನು ಯಾವ ಆದೇಶಕ್ಕೆ ಅವಿಧೇಯತೆ ತೋರುವನೋ ಆ ಆದೇಶವು ಮತ್ತು ತನ್ನ ಅವಿಧೇಯತೆಯು ಹಾನಿಯುಂಟು ಮಾಡುವುದೆಂದು ಅಥವಾ ಉಂಟುಮಾಡುವ ಸಂಭವವಿದೆಯೆಂಬುದು ತಿಳಿದಿದ್ದರೆ ಸಾಕು.

## *ದೃಷ್ಟಾಂತ*

ಆದೇಶವನ್ನು ಘೋಷಿಸಲು ಕಾನೂನುಬದ್ಧವಾಗಿ ಸಶಕ್ತನಾದ ಲೋಕ ನೌಕರನು ಧಾರ್ಮಿಕ ಮೆರವಣಿಗೆಯು ಒಂದು ನಿರ್ದಿಷ್ಟ ಬೀದಿಯ ಮೂಲಕ ಹಾದು ಹೋಗಕೂಡದು ಎಂದು ನಿರ್ದೇಶಿಸುವಂಥ ಆದೇಶವನ್ನು ಘೋಷಿಸುತ್ತಾನೆ. ಓ(ನು ಆ ನಿರ್ದೇಶನವನ್ನು ತಿಳಿದೂ ತಿಳಿದೂ ಅವಿಧೇಯತೆ ತೋರಿ ಆ ಮೂಲಕ ದಂಗೆಯ ಅಪಾಯವನ್ನುಂಟು ಮಾಡುತ್ತಾನೆ. ಓ(ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**224. ಲೋಕ ನೌಕರನಿಗೆ ಕ್ಷತಿಯುಂಟುಮಾಡುವ ಬೆದರಿಕೆ.-** ಯಾರೇ ವ್ಯಕ್ತಿಯು, ಯಾರೇ ಲೋಕ ನೌಕರನಿಗೆ ಅಥವಾ ಆ ಲೋಕ ನೌಕರನಲ್ಲಿ ಹಿತಾಸಕ್ತಿ ಹೊಂದಿರುವನೆಂದು ತಾನು ನಂಬಿರುವ ಆ ಯಾರೇ ವ್ಯಕ್ತಿಗೆ ಆ ಲೋಕ ನೌಕರನ ಪ್ರಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯವನ್ನು ಮಾಡುವಂತೆ ಅಥವಾ ಮಾಡದಿರುವಂತೆ ಮಾಡಲು ಅಥವಾ ಯಾವುದೇ ಕಾರ್ಯವನ್ನು ಮಾಡುವಾಗ ವಿಳಂಬ ಮಾಡುವಂತೆ ಪ್ರೇರಣೆ ಮಾಡುವ ಉದ್ದೇಶಕ್ಕಾಗಿ ಕ್ಷತಿಯುಂಟುಮಾಡುವ ಬೆದರಿಕೆ ಹಾಕಿದರೆ, ಅವನು ಎರಡು

ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**225. ರಕ್ಷಣೆ ಪಡೆಯಲು ಲೋಕ ನೌಕರನಿಗೆ ಅರ್ಜಿ ಸಲ್ಲಿಸದ ಹಾಗೆ ತಡೆಯಲು ವ್ಯಕ್ತಿಯನ್ನು ಪ್ರೇರೇಪಿಸಲು ಕ್ಷತಿಯುಂಟು ಮಾಡುವ ಬೆದರಿಕೆ.-** ಯಾರೇ ವ್ಯಕ್ತಿಯು ಯಾವುದೇ ಕ್ಷತಿ ವಿರುದ್ಧ ರಕ್ಷಣೆ ಪಡೆಯಲು, ಅಂಥ ರಕ್ಷಣೆ ನೀಡಲು ಅಥವಾ ಅಂಥ ರಕ್ಷಣೆಯನ್ನು ನೀಡುವಂತೆ ಮಾಡಲು ಕಾನೂನುಸಮ್ಮತವಾಗಿ ಸಶಕ್ತನಾದ ಯಾರೇ ಲೋಕ ನೌಕರನಿಗೆ ಕಾನೂನುಸಮ್ಮತವಾದ ಅರ್ಜಿಯನ್ನು ಸಲ್ಲಿಸದ ಹಾಗೆ ಅಥವಾ ಕೊಡದ ಹಾಗೆ ಪ್ರೇರೇಪಿಸುವ ಉದ್ದೇಶದಿಂದ ಆ ಲೋಕ ನೌಕರನಿಗೆ ಯಾವುದೇ ಕ್ಷತಿಯುಂಟು ಮಾಡುವುದಾಗಿ ಬೆದರಿಕೆ ಹಾಕುವ ಯಾರೇ ವ್ಯಕ್ತಿಯು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**226. ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುವಂತೆ ಒತ್ತಾಯಿಸಿ ಅಥವಾ ಅದಕ್ಕೆ ಅಡ್ಡಿಪಡಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವುದು.-** ಯಾರೇ ವ್ಯಕ್ತಿಯು, ಯಾರೇ ಲೋಕ ನೌಕರನಿಗೆ, ಆತನ ಅಧಿಕೃತ ಕರ್ತವ್ಯವನ್ನು ಚಲಾಯಿಸುವಂತೆ ಒತ್ತಾಯಿಸುವ ಅಥವಾ ಅದಕ್ಕೆ ಅಡ್ಡಿಪಡಿಸುವ ಉದ್ದೇಶದಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಸಮುದಾಯ ಸೇವೆಯಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ XIV

## ಸುಳ್ಳು ಸಾಕ್ಷ್ಯ ಮತ್ತು ಲೋಕ ನ್ಯಾಯದ ವಿರುದ್ಧದ ಅಪರಾಧಗಳು

**227. ಸುಳ್ಳು ಸಾಕ್ಷ್ಯ ಕೊಡುವುದು.- ಪ್ರಮಾಣ ಮಾಡಿ ಅಥವಾ ಕಾನೂನಿನ** ಸ್ಪಷ್ಟ ಉಪಬಂಧದ ಪ್ರಕಾರ ಸತ್ಯವನ್ನು ಹೇಳಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಸುಳ್ಳು ವಿವರಣೆಯನ್ನು ಮತ್ತು ಸುಳ್ಳೆಂದು ತನಗೆ ಗೊತ್ತಿದ್ದರೂ ಅಥವಾ ನಂಬಿದ್ದರೂ ಅಥವಾ ಸತ್ಯವೆಂದು ತಾನೇ ನಂಬದಿರುವ ಯಾವುದೇ ಹೇಳಿಕೆಯನ್ನು ನೀಡಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುವನೆಂದು ಹೇಳಲಾಗುತ್ತದೆ.

*ವಿವರಣೆ 1.-* ಮೌಖಿಕ ಅಥವಾ ಅನ್ಯಥಾ ನೀಡಿದ ಹೇಳಿಕೆಯು ಈ ಪ್ರಕರಣದ ಅರ್ಥದಲ್ಲಿ ಹೇಳಿಕೆಯೆಂದಾಗುತ್ತದೆ.

*ವಿವರಣೆ 2.-* ದೃಢೀಕರಿಸುವ ವ್ಯಕ್ತಿಯ ನಂಬಿಕೆಗೆ ಸಂಬಂಧಿಸಿದ ಸುಳ್ಳು ಹೇಳಿಕೆಯು ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ತಾನು ನಂಬದಿದ್ದ ಸಂಗತಿಯನ್ನು ನಂಬುವುದಾಗಿ ಹೇಳುವ ಮತ್ತು ತನಗೆ ಗೊತ್ತಿಲ್ಲದ ಸಂಗತಿಯನ್ನು ಗೊತ್ತಿದೆಯೆಂದು ಹೇಳುವ ವ್ಯಕ್ತಿಯೂ ಸುಳ್ಳು ಸಾಕ್ಷ್ಯ ನೀಡಿದ ತಪ್ಪಿತಸ್ಥನಾಗಬಹುದು.

### *ದೃಷ್ಟಾಂತಗಳು*

(ಎ) ಒಂದು ಸಾವಿರ ರೂಪಾಯಿ ಮೊತ್ತದ ಮೇಲೆ ʻಜೆಡ್ʼಗೆ ಇಲ್ಲದಿರುವಂಥ ಯಾವ ನ್ಯಾಯವಾದ ಕ್ಲೇಮು ʻಬಿʼಗೆ ಇರುತ್ತದೋ, ಆ ಕ್ಲೇಮನ್ನು ಸಮರ್ಥಿಸಿ ʻಎʼನು ಅಧಿವಿಚಾರಣೆಯಲ್ಲಿ ಪ್ರಮಾಣ ಮಾಡಿ ಸುಳ್ಳು ಹೇಳುತ್ತಾನೆ. ಹೀಗೆ ʻಎʼನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆಂದಾಗುತ್ತದೆ.

(ಬಿ) ʻಎʼನು ಪ್ರಮಾಣ ಮಾಡಿ ಸತ್ಯವನ್ನು ಹೇಳಲು ಬದ್ಧನಾಗಿದ್ದು, ನಿರ್ದಿಷ್ಟ ಸಹಿಯು ʻಜೆಡ್ʼನ ಕೈಬರಹದ್ದೆಂದು ತಾನು ನಂಬದಿದ್ದರೂ ಆ ಸಹಿಯು ʻಜೆಡ್ʼನದು ಎಂದು ನಂಬುತ್ತೇನೆಂದು ಹೇಳುತ್ತಾನೆ. ಇಲ್ಲಿ ʻಎʼನು ತಾನು ಸುಳ್ಳೆಂದು ತಿಳಿದಿರುವುದನ್ನು ಸತ್ಯವೆಂದು ಹೇಳುತ್ತಾನೆ. ಆದಕಾರಣ ಅವನು ಸುಳ್ಳು ಸಾಕ್ಷ್ಯ ಕೊಟ್ಟಿರುತ್ತಾನೆಂದಾಗುತ್ತದೆ.

(ಸಿ) ಏನು ಜೆಡ್‌ನ ಕೈ ಬರವಣಿಗೆಯ ಸಾಮಾನ್ಯ ಲಕ್ಷಣಗಳನ್ನು ಬಲ್ಲವನಾಗಿದ್ದು, ನಿರ್ದಿಷ್ಟ ಸಹಿಯು ಜೆಡ್‌ನ ಕೈ ಬರವಣಿಗೆಯೆಂದು ನಂಬುವುದಾಗಿ ಸದ್ಭಾವನೆಯಿಂದ ಹೇಳುತ್ತಾನೆ. ಇಲ್ಲಿ ಏನ ಹೇಳಿಕೆಯು ಕೇವಲ ಅವನ ನಂಬಿಕೆಗೆ ಸಂಬಂಧಪಟ್ಟದ್ದು ಮತ್ತು ಅವನ ನಂಬಿಕೆಗೆ ಸಂಬಂಧಿಸಿದಂತೆ ಸತ್ಯವಾದುದು. ಆದಕಾರಣ ಆ ಸಹಿಯು ಜೆಡ್‌ನ ಕೈ ಬರವಣಿಗೆಯಲ್ಲದಿರಬಹುದಾಗಿದ್ದರೂ ಏನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿಲ್ಲವೆಂದಾಗುತ್ತದೆ.

(ಡಿ) ಏನು ಪ್ರಮಾಣ ಮಾಡಿ ಸತ್ಯವನ್ನು ಹೇಳಲು ಬದ್ಧನಾಗಿದ್ದು, ಜೆಡ್‌ನು ನಿರ್ದಿಷ್ಟ ದಿನದಂದು, ನಿರ್ದಿಷ್ಟ ಸ್ಥಳದಲ್ಲಿ ಇದ್ದನೆಂದು, ಆ ವಿಚಾರದಲ್ಲಿ ಏನೂ ಗೊತ್ತಿಲ್ಲದಿದ್ದರೂ ಹೇಳುತ್ತಾನೆ. ಆ ದಿನದಂದು ಆ ಸ್ಥಳದಲ್ಲಿ ಜೆಡ್‌ನು ಇರಲಿ ಇಲ್ಲದಿರಲಿ ಏನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆಂದಾಗುತ್ತದೆ.

(ಇ) ಪ್ರಮಾಣ ಮಾಡುವ ಮೂಲಕ ಹೇಳಿಕೆಯ ಅಥವಾ ದಸ್ತಾವೇಜಿನ ಅರ್ಥ ವಿವರಣೆಯನ್ನು ಅಥವಾ ಭಾಷಾಂತರವನ್ನು ಸರಿಯಾಗಿ ಮಾಡಲು ಬದ್ಧನಾಗಿರುವ ಅರ್ಥ ವಿವರಣೆಕಾರನಾದ ಅಥವಾ ಭಾಷಾಂತರಕಾರನಾದ ಏನು ಸರಿಯಲ್ಲದ ಅಥವಾ ಸರಿಯೆಂದು ನಂಬಿರದ ಅರ್ಥ ವಿವರಣೆಯನ್ನು ಅಥವಾ ಭಾಷಾಂತರವನ್ನು, ಸರಿಯಾದ ಅರ್ಥ ವಿವರಣೆ ಅಥವಾ ಭಾಷಾಂತರವೆಂಬುದಾಗಿ ಹೇಳುತ್ತಾನೆ ಅಥವಾ ಪ್ರಮಾಣೀಕರಿಸುತ್ತಾನೆ. ಏನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದಾನೆಂದಾಗುತ್ತದೆ.

**228. ಸುಳ್ಳು ಸಾಕ್ಷ್ಯ ಸೃಷ್ಟನೆ.-** ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ಲೋಕ ನೌಕರನಾಗಿರುವಂಥ ವ್ಯಕ್ತಿಯ ಮುಂದೆ ಅಥವಾ ಮಧ್ಯಸ್ಥಗಾರನ ಮುಂದೆ ಕಾನೂನುಪ್ರಕಾರ ನಡೆಸಿದ ವ್ಯವಹರಣೆಯಲ್ಲಿ ಒಂದು ಸನ್ನಿವೇಶವು, ಸುಳ್ಳು ದಾಖಲೆಯು ಅಥವಾ ಸುಳ್ಳು ಹೇಳಿಕೆಯು ಸಾಕ್ಷ್ಯವಾಗಿ ಸೇರ್ಪಡೆಯಾಗಬೇಕೆಂಬ ಮತ್ತು ಅಂಥ ಸನ್ನಿವೇಶವು, ಸುಳ್ಳು ದಾಖಲೆಯು ಅಥವಾ ಸುಳ್ಳು ಹೇಳಿಕೆಯು ಹಾಗೆ ಸಾಕ್ಷ್ಯದಲ್ಲಿ ಸೇರ್ಪಡೆಯಾಗಿ, ಅಂಥ ವ್ಯವಹರಣೆಯಲ್ಲಿ ಸಾಕ್ಷ್ಯದ ಮೇಲೆ ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾದಂಥ ಯಾರೇ ವ್ಯಕ್ತಿಗೆ ಅಂಥ ವ್ಯವಹರಣೆಯ ಪರಿಣಾಮಕ್ಕೆ ಸಂಬಂಧಿಸಿದ ಯಾವುದೇ ಮುಖ್ಯ ಅಂಶವನ್ನು ಕುರಿತು ತಪ್ಪು ಅಭಿಪ್ರಾಯಕ್ಕೆ ಎಡೆ ಮಾಡಿಕೊಡುವಂತೆ ಮಾಡಬೇಕೆಂಬ ಉದ್ದೇಶದಿಂದ ಯಾರೇ ವ್ಯಕ್ತಿಯು ಅಂಥ ಯಾವುದೇ ಸನ್ನಿವೇಶವು ಉಂಟಾಗುವಂತೆ ಮಾಡಿದರೆ ಅಥವಾ ಯಾವುದೇ ಪುಸ್ತಕದಲ್ಲಿ ಅಥವಾ ಯಾವುದೇ ದಾಖಲೆಯಲ್ಲಿ ಅಥವಾ ವಿದ್ಯುನ್ಮಾನ ದಾಖಲೆಯಲ್ಲಿ ಯಾವುದೇ ಸುಳ್ಳು ನಮೂದನೆಯನ್ನು ಮಾಡಿದರೆ ಅಥವಾ ಸುಳ್ಳು ನಮೂದನೆ ಅಥವಾ ಸುಳ್ಳು ಹೇಳಿಕೆ ಇರುವ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ತಯಾರಿಸಿದರೆ, ಅವನು "ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದ್ದಾನೆ" ಎಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) ಜೆಡ್‌ನ ಪೆಟ್ಟಿಗೆಯಲ್ಲಿ ಆಭರಣಗಳಿರುವುದು ಪತ್ತೆಯಾಗಿ, ಆ ಸನ್ನಿವೇಶದ ಪರಿಣಾಮವಾಗಿ ಜೆಡ್‌ನು ಕಳವು ಮಾಡಿದ್ದಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಬೇಕೆಂಬ ಉದ್ದೇಶದಿಂದ ಏನು ಜೆಡ್‌ನ ಪೆಟ್ಟಿಗೆಯಲ್ಲಿ ಆಭರಣಗಳನ್ನು ಹಾಕುತ್ತಾನೆ. ಹೀಗೆ ಏನು ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದ್ದಾನೆಂದಾಗುತ್ತದೆ.

(ಬಿ) ನ್ಯಾಯಾಲಯದಲ್ಲಿ ಪುಷ್ಟೀಕರಣ ಸಾಕ್ಷ್ಯವಾಗಿ ಉಪಯೋಗಿಸಬೇಕು ಎಂಬ ಉದ್ದೇಶದಿಂದ ಏನು ತನ್ನ ಅಂಗಡಿಯ ಲೆಕ್ಕದ ಪುಸ್ತಕದಲ್ಲಿ ಸುಳ್ಳು ದಾಖಲೆ ಬರೆಯುತ್ತಾನೆ. ಏನು ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದ್ದಾನೆಂದಾಗುತ್ತದೆ.

(ಸಿ) ಜೆಡ್‌ನನ್ನು ಆಪರಾಧಿಕ ಒಳಸಂಚಿನ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಅಂಥ ಆಪರಾಧಿಕ ಒಳಸಂಚಿನಲ್ಲಿ ಸಹಭಾಗಿಯಾಗಿರುವವನಿಗೆ ಜೆಡ್‌ನು ಬರೆದಿರುವನೆಂದು ತಾತ್ಪರ್ಯವಾಗುವ ಹಾಗೆ ಏನು ಜೆಡ್‌ನ ಕೈ ಬರವಣಿಗೆಯಂತೆಯೇ ಬರವಣಿಗೆ ಇರುವ ಪತ್ರ ಬರೆಯುತ್ತಾನೆ ಮತ್ತು ಪೊಲೀಸ್ ಅಧಿಕಾರಿಗಳು ಯಾವ ಸ್ಥಳದಲ್ಲಿ ಆ ಪತ್ರವನ್ನು ಶೋಧಿಸಬಹುದೆಂದು ಅವನಿಗೆ ಗೊತ್ತಿರುತ್ತದೋ ಆ ಸ್ಥಳದಲ್ಲಿ ಆ ಪತ್ರವನ್ನು ಇಡುತ್ತಾನೆ. ಹೀಗೆ ಏನು ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದ್ದಾನೆಂದಾಗುತ್ತದೆ.

**229. ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ದಂಡನೆ.-** (1) ಯಾರೇ ವ್ಯಕ್ತಿಯು, ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ ಬಳಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಕರಣಕ್ಕೆ ಹೊರತಾದ ಯಾವುದೇ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಸಾವಿರದವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ 1.-* ಸೇನಾ ನ್ಯಾಯಾಲಯದ ಮುಂದಿರುವ ಅಧಿವಿಚಾರಣೆಯು ನ್ಯಾಯಿಕ ವ್ಯವಹರಣೆಯಾಗಿರುತ್ತದೆ.

*ವಿವರಣೆ 2.-* ನ್ಯಾಯಾಲಯದ ಮುಂದಿರುವ ವ್ಯವಹರಣೆಗೆ ಪ್ರಾರಂಭಿಕವಾಗಿ ಕಾನೂನು ಪ್ರಕಾರ ನಿರ್ದೇಶಿತವಾದ ತನಿಖೆಯು ನ್ಯಾಯಾಲಯದ ಮುಂದೆ ನಡೆಯದಿದ್ದರೂ ಅಂಥ ತನಿಖೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುತ್ತದೆ.

*ದೃಷ್ಟಾಂತ*

'ಜೆಡ್'ನನ್ನು ಅಧಿವಿಚಾರಣೆಗಾಗಿ ಒಪ್ಪಿಸಬೇಕೆ ಎಂಬುದನ್ನು ನಿಶ್ಚಯಿಸುವ ಉದ್ದೇಶದಿಂದ ಮ್ಯಾಜಿಸ್ಟ್ರೇಟನ ಮುಂದೆ ನಡೆಯುತ್ತಿರುವ ವಿಚಾರಣೆಯಲ್ಲಿ 'ಎ'ನು ಸುಳ್ಳೆಂದು ತನಗೆ ತಿಳಿದಿರುವ ಹೇಳಿಕೆಯನ್ನು ಪ್ರಮಾಣ ಮಾಡಿ ಹೇಳುತ್ತಾನೆ. ಈ ವಿಚಾರಣೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುವುದರಿಂದ 'ಎ'ನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆಂದಾಗುತ್ತದೆ.

*ವಿವರಣೆ 3.-* ಕಾನೂನಿಗೆ ಅನುಸಾರವಾಗಿ ನ್ಯಾಯಾಲಯವು ನಿರ್ದೇಶಿಸಿದ ಮತ್ತು ನ್ಯಾಯಾಲಯದ ಅಧಿಕಾರದ ಮೇರೆಗೆ ಮಾಡಿದ ತನಿಖೆಯು ಆ ನ್ಯಾಯಾಲಯದ ಮುಂದೆ ನಡೆಯದಿದ್ದರೂ, ಅಂಥ ತನಿಖೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುತ್ತದೆ.

*ದೃಷ್ಟಾಂತ*

ಭೂಮಿಯ ಎಲ್ಲೆಗಳನ್ನು ಸ್ಥಳದಲ್ಲೇ ನಿಶ್ಚಯಿಸಲು ನ್ಯಾಯಾಲಯವು ಪ್ರತಿನಿಯೋಜಿಸಿದ ಅಧಿಕಾರಿಯ ಮುಂದೆ ನಡೆದ ವಿಚಾರಣೆಯಲ್ಲಿ 'ಎ'ನು ಸುಳ್ಳೆಂದು ತನಗೆ ತಿಳಿದಿರುವ ಹೇಳಿಕೆಯನ್ನು ಪ್ರಮಾಣ ಮಾಡಿ ನೀಡುತ್ತಾನೆ. ಈ ವಿಚಾರಣೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುವುದರಿಂದ 'ಎ'ನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆಂದಾಗುತ್ತದೆ.

**230. ಮರಣದಂಡನೆಯ ನಿರ್ಣಯಕ್ಕೆ ಬರುವಂತೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು.-** (1) ಸುಳ್ಳು ಸಾಕ್ಷ್ಯವನ್ನು ಕೊಟ್ಟು ಅಥವಾ ಸೃಷ್ಟಿಸಿ ಆ ಮೂಲಕ ತತ್ಕಾಲದಲ್ಲಿ ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಮರಣದಂಡನೆಯನ್ನು ವಿಧಿಸಬಹುದಾದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯ ಅಪರಾಧ ನಿರ್ಣಯವಾಗುವಂತೆ ಮಾಡುವ ಉದ್ದೇಶದಿಂದ ಅಥವಾ ಹಾಗೆ ಉಂಟುಮಾಡುವ ಸಂಭವವಿದೆಯೆಂದು ತಿಳಿದೂ ಆ ರೀತಿ ಸುಳ್ಳು ಸಾಕ್ಷ್ಯವನ್ನು ಯಾರೇ ವ್ಯಕ್ತಿಯು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಂಥ ಸುಳ್ಳು ಸಾಕ್ಷ್ಯದ ಪರಿಣಾಮವಾಗಿ ಅಮಾಯಕ ವ್ಯಕ್ತಿಯ ವಿರುದ್ಧ ಅಪರಾಧ ನಿರ್ಣಯವಾಗಿ ಅವನನ್ನು ಗಲ್ಲಿಗೇರಿಸಲ್ಪಟ್ಟರೆ, ಅಂಥ ಸುಳ್ಳು ಸಾಕ್ಷ್ಯವನ್ನು ಕೊಡುವ ವ್ಯಕ್ತಿಯು ಮರಣದಂಡನೆಯಿಂದ ಅಥವಾ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಯಿಂದ ದಂಡಿತನಾಗತಕ್ಕದ್ದು.

**231. ಆಜೀವ ಕಾರಾವಾಸದಿಂದ ಅಥವಾ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ನಿರ್ಣಯವಾಗುವಂತೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು.-** ಸುಳ್ಳು ಸಾಕ್ಷ್ಯವನ್ನು ಕೊಟ್ಟು ಅಥವಾ ಸೃಷ್ಟಿಸಿ ಆ ಮೂಲಕ ತತ್ಕಾಲದಲ್ಲಿ ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಮರಣದಂಡನೀಯವಲ್ಲದ, ಆದರೆ ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳ ಅವಧಿಯ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಅಪರಾಧ ನಿರ್ಣಯವಾಗುವಂತೆ ಮಾಡುವ ಉದ್ದೇಶದಿಂದ ಅಥವಾ ನಿರ್ಣಯಕ್ಕೆ ಬರುವ ಸಂಭವವಿದೆಯೆಂಬುದು ಗೊತ್ತಿದ್ದರೂ ಆ ರೀತಿ ಸುಳ್ಳು ಸಾಕ್ಷ್ಯವನ್ನು ಯಾರೇ ವ್ಯಕ್ತಿಯು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಆ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು ಯಾವ ದಂಡನೆಗೆ ಗುರಿಯಾಗತಕ್ಕದ್ದೋ ಆ ದಂಡನೆಗೆ ಗುರಿಯಾಗತಕ್ಕದ್ದು.

*ದೃಷ್ಟಾಂತ*

ದರೋಡೆಗಾಗಿ ಜೆಡ್‌ನು ಅಪರಾಧಿಯೆಂದು ನಿರ್ಣೀತನಾಗಬೇಕೆಂಬ ಉದ್ದೇಶದಿಂದ ಎನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ಕೊಡುತ್ತಾನೆ. ದರೋಡೆಗಾಗಿನ ದಂಡನೆಯು, ಜುಲ್ಮಾನೆ ಸಹಿತವಾದ ಅಥವಾ ಜುಲ್ಮಾನೆ ರಹಿತವಾದ ಆಜೀವ ಕಾರಾವಾಸದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದ ದಂಡನೆಯಾಗಿರುತ್ತದೆ. ಆದಕಾರಣ ಎನು ಜುಲ್ಮಾನೆ ಸಹಿತವಾದ ಅಥವಾ ಜುಲ್ಮಾನೆ ರಹಿತವಾದ ಆಜೀವ ಕಾರಾವಾಸಕ್ಕೆ ಅಥವಾ ಕಾರಾವಾಸಕ್ಕೆ ಗುರಿಯಾಗುತ್ತಾನೆ.

**232. ಸುಳ್ಳು ಸಾಕ್ಷ್ಯವನ್ನು ಕೊಡುವಂತೆ ಯಾರೇ ವ್ಯಕ್ತಿಗೆ ಬೆದರಿಕೆ ಹಾಕುವುದು.-** (1) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯ ದೇಹಕ್ಕೆ, ಖ್ಯಾತಿಗೆ ಅಥವಾ ಸ್ವತ್ತಿಗೆ ಅಥವಾ ಆ ವ್ಯಕ್ತಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯನ್ನು ಸುಳ್ಳು ಸಾಕ್ಷ್ಯವನ್ನು ಕೊಡುವಂತೆ ಮಾಡುವ ಉದ್ದೇಶದಿಂದ ಆತನ ದೇಹಕ್ಕೆ ಅಥವಾ ಖ್ಯಾತಿಗೆ ಕ್ಷತಿಯುಂಟು ಮಾಡುವುದಾಗಿ ಬೆದರಿಕೆ ಹಾಕಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಂಥ ಸುಳ್ಳು ಸಾಕ್ಷ್ಯದ ಪರಿಣಾಮವಾಗಿ ಅಮಾಯಕ ವ್ಯಕ್ತಿಯನ್ನು ಅಪರಾಧ ನಿರ್ಣೀತನೆಂದು ನಿರ್ಣಯಿಸಿ ಮರಣದಂಡನೆಯನ್ನು ಅಥವಾ ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಾಗ, ಹಾಗೆ ಬೆದರಿಕೆ ಹಾಕಿದ ವ್ಯಕ್ತಿಯು, ಅಮಾಯಕ ವ್ಯಕ್ತಿಗೆ ವಿಧಿಸಿದ ಅದೇ ರೀತಿಯ ಹಾಗೂ ಅದೇ ಅವಧಿಯ ದಂಡನೆಯಿಂದ ಹಾಗೂ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**233. ಸುಳ್ಳೆಂದು ತಿಳಿದಿರುವ ಸಾಕ್ಷ್ಯವನ್ನು ಬಳಸುವುದು.-** ಯಾರೇ ವ್ಯಕ್ತಿಯು, ಸುಳ್ಳೆಂದು ಅಥವಾ ಸೃಷ್ಟಿಸಲಾದುದು ಎಂದು ತನಗೆ ಗೊತ್ತಿರುವ ಯಾವುದೇ ಸಾಕ್ಷ್ಯವನ್ನು ಸತ್ಯವಾದುದೆಂದು ಅಥವಾ ನೈಜವಾದುದೆಂದು ಭ್ರಷ್ಟತೆಯಿಂದ ಬಳಸಿದರೆ ಅಥವಾ ಬಳಸಲು ಪ್ರಯತ್ನಿಸಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಅಥವಾ ಸೃಷ್ಟಿಸಿದ್ದರೆ ಯಾವ ದಂಡನೆಗೆ ಗುರಿಯಾಗುತ್ತಿದ್ದನೋ ಅದೇ ರೀತಿಯ ದಂಡನೆಗೆ ಗುರಿಯಾಗತಕ್ಕದ್ದು.

**234. ಸುಳ್ಳು ಪ್ರಮಾಣಪತ್ರವನ್ನು ಕೊಡುವುದು ಅಥವಾ ಅದಕ್ಕೆ ಸಹಿ ಹಾಕುವುದು.-** ಯಾವ ಪ್ರಮಾಣಪತ್ರವನ್ನು ಕಾನೂನಿಗೆ ಅನುಸಾರವಾಗಿ ಕೊಡಬೇಕೆಂದು ಅಥವಾ ಅದಕ್ಕೆ ಸಹಿ ಹಾಕಿರಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಪ್ರಮಾಣಪತ್ರವನ್ನು ಅಥವಾ ಯಾವ ಸಂಗತಿಗೆ ಸಂಬಂಧಿಸಿದ ಪ್ರಮಾಣಪತ್ರವನ್ನು ಕಾನೂನಿಗನುಸಾರವಾಗಿ ಸಾಕ್ಷ್ಯವಾಗಿ ಸ್ವೀಕರಿಸಲಾಗುತ್ತದೋ, ಆ ಯಾವುದೇ ಸಂಗತಿಗೆ ಸಂಬಂಧಿಸಿದಂಥ ಪ್ರಮಾಣಪತ್ರವನ್ನು, ಆ ಪ್ರಮಾಣಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳಾಗಿರುವುದೆಂದು

ಗೊತ್ತಿದ್ದರೂ ಅಥವಾ ನಂಬಿದ್ದರೂ, ಅಂಥ ಪ್ರಮಾಣಪತ್ರವನ್ನು ಯಾರೇ ವ್ಯಕ್ತಿಯು ಕೊಟ್ಟರೆ ಅಥವಾ ಅದಕ್ಕೆ ಸಹಿ ಹಾಕಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

**235. ಸುಳ್ಳೆಂದು ಗೊತ್ತಿರುವ ಪ್ರಮಾಣಪತ್ರವನ್ನು ಸತ್ಯವಾದುದೆಂದು ಬಳಸುವುದು.-** ಯಾರೇ ವ್ಯಕ್ತಿಯು ಪ್ರಮಾಣಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳೆಂದು ಗೊತ್ತಿದ್ದರೂ, ಅಂಥ ಆ ಯಾವುದೇ ಪ್ರಮಾಣಪತ್ರವನ್ನು ಭ್ರಷ್ಟತೆಯಿಂದ ಬಳಸಿದರೆ ಅಥವಾ ಬಳಸಲು ಪ್ರಯತ್ನಿಸಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

**236. ಕಾನೂನಿಗನುಸಾರವಾಗಿ ಸಾಕ್ಷ್ಯವಾಗಿ ಸ್ವೀಕರಿಸಬಹುದಾದ ಘೋಷಣೆಯಲ್ಲಿ ಮಾಡಿರುವ ಸುಳ್ಳು ಹೇಳಿಕೆ.-** ಯಾವುದೇ ನ್ಯಾಯಾಲಯವು ಅಥವಾ ಯಾರೇ ಲೋಕ ನೌಕರನು ಅಥವಾ ಇತರ ವ್ಯಕ್ತಿಯು, ಯಾವ ಘೋಷಣೆಯನ್ನು ಯಾವುದೇ ಸಂಗತಿಯ ಸಾಕ್ಷ್ಯವಾಗಿ ಸ್ವೀಕರಿಸಲು ಕಾನೂನಿಗನುಸಾರವಾಗಿ ಬದ್ಧನಾಗಿರುವನೋ ಅಥವಾ ಅಧಿಕೃತನಾಗಿರುವನೋ ಅಂಥ ಘೋಷಣೆಯನ್ನು ಮಾಡಿದ ಅಥವಾ ಅದಕ್ಕೆ ಸಹಿ ಹಾಕಿದ ಯಾರೇ ವ್ಯಕ್ತಿಯು ಯಾವ ವಿಷಯದ ಬಗ್ಗೆ ಆ ಘೋಷಣೆಯನ್ನು ಮಾಡಲಾಗಿದೆಯೋ ಅಥವಾ ಬಳಸಲಾಗಿದೆಯೋ ಆ ವಿಷಯದ ಯಾವುದೇ ಮುಖ್ಯಾಂಶವನ್ನು ಕುರಿತು ಸುಳ್ಳಿನದಾಗಿರುವ ಮತ್ತು ಸುಳ್ಳೆಂದು ತನಗೆ ಗೊತ್ತಿರುವ ಅಥವಾ ನಂಬಿರುವ ಅಥವಾ ಸತ್ಯವೆಂದು ನಂಬದಿರುವ ಯಾವುದೇ ಹೇಳಿಕೆಯನ್ನು ಆ ಘೋಷಣೆಯಲ್ಲಿ ಮಾಡಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**237. ಅಂಥ ಘೋಷಣೆಯು ಸುಳ್ಳೆಂದು ಗೊತ್ತಿದ್ದರೂ ಅದನ್ನು ಸತ್ಯವಾದುದೆಂದು ಬಳಸುವುದು.-** ಯಾರೇ ವ್ಯಕ್ತಿಯು ಅಂಥ ಯಾವುದೇ ಘೋಷಣೆಯು ಯಾವುದೇ ಮುಖ್ಯಾಂಶದಲ್ಲಿ ಸುಳ್ಳೆಂದು ಗೊತ್ತಿದ್ದರೂ ಅದನ್ನು ಭ್ರಷ್ಟತೆಯಿಂದ ಬಳಸಿದರೆ ಅಥವಾ ಬಳಸಲು ಪ್ರಯತ್ನಿಸಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

*ವಿವರಣೆ.-* ಕ್ರಮಬದ್ಧವಾಗಿಲ್ಲವೆಂಬ ಕಾರಣ ಮಾತ್ರದಿಂದಲೇ ಯಾವ ಘೋಷಣೆಯನ್ನು ಅನುಮತಿಸಿರಲಿಲ್ಲವೋ ಆ ಘೋಷಣೆಯು 236ನೇ ಪ್ರಕರಣದ ಮತ್ತು ಈ ಪ್ರಕರಣದ ಅರ್ಥದೊಳಗೆ ಘೋಷಣೆಯಾಗಿರುತ್ತದೆ.

**238. ಅಪರಾಧದ ಸಾಕ್ಷ್ಯವನ್ನು ಇಲ್ಲದಂತೆ ಮಾಡುವುದು ಅಥವಾ ಅಪರಾಧಿಯನ್ನು ರಕ್ಷಿಸಲು ಸುಳ್ಳು ಮಾಹಿತಿ ಕೊಡುವುದು.-** ಅಪರಾಧವನ್ನು ಮಾಡಲಾಗಿದೆಯೆಂಬುದು ತನಗೆ ತಿಳಿದಿರುವ ಅಥವಾ ತಾನೇ ನಂಬುವ ಕಾರಣವಿದ್ದರೂ ಆ ಅಪರಾಧ ನಡೆದಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ಯಾರೇ ವ್ಯಕ್ತಿಯು ಆ ಅಪರಾಧಿಯನ್ನು ಕಾನೂನುಸಮ್ಮತ ದಂಡನೆಯಿಂದ ರಕ್ಷಿಸುವ ಉದ್ದೇಶದಿಂದ ಇಲ್ಲದಂತೆ ಮಾಡಿದರೆ ಅಥವಾ ಆ ಉದ್ದೇಶದಿಂದ ಆ ಅಪರಾಧಕ್ಕೆ ಸಂಬಂಧಿಸಿದ ಸುಳ್ಳೆಂದು ತನಗೆ ತಿಳಿದಿರುವ ಅಥವಾ ತಾನೇ ನಂಬುವ ಯಾವುದೇ ಮಾಹಿತಿಯನ್ನು ಕೊಟ್ಟರೆ, ಅವನು,-

(ಎ) ಮಾಡಲಾಗಿದೆಯೆಂದು ತನಗೆ ತಿಳಿದಿರುವ ಅಥವಾ ತಾನೇ ನಂಬುವ ಅಪರಾಧವು ಮರಣದಂಡನೀಯ ಅಪರಾಧವಾಗಿದ್ದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಆ ಅಪರಾಧವು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಸಿ) ಆ ಅಪರಾಧವು ಹತ್ತು ವರ್ಷಗಳಿಗೆ ವಿಸ್ತರಿಸದ ಯಾವುದೇ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಕಾರಾವಾಸದ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತ*

ಬಿ'ನು ಜೆಡ್'ನನ್ನು ಕೊಲೆ ಮಾಡಿರುವನೆಂದು ತಿಳಿದಿದ್ದರೂ, ಬಿ'ನನ್ನು ದಂಡನೆಯಿಂದ ರಕ್ಷಿಸುವ ಉದ್ದೇಶದಿಂದ ಶವವನ್ನು ಬಚ್ಚಿಡಲು ಬಿ'ನಿಗೆ ಓ'ನು ಸಹಾಯ ಮಾಡುತ್ತಾನೆ. ಆದ್ದರಿಂದ ಓ'ನು ಏಳು ವರ್ಷಗಳವರೆಗಿನ ಎರಡರಲ್ಲೊಂದು ಬಗೆಯ ಕಾರಾವಾಸ ದಂಡನೆಗೆ ಮತ್ತು ಜುಲ್ಮಾನೆಗೂ ಸಹ ಗುರಿಯಾಗಬೇಕಾಗುತ್ತದೆ.

**239. ಮಾಹಿತಿಯನ್ನು ನೀಡಲು ಬದ್ಧನಾಗಿರುವ ವ್ಯಕ್ತಿಯು ಅಪರಾಧದ ಮಾಹಿತಿಯನ್ನು ನೀಡಲು ಉದ್ದೇಶಪೂರ್ವಕವಾಗಿ ತಪ್ಪುವುದು.-** ಅಪರಾಧವನ್ನು ಮಾಡಲಾಗಿದೆಯೆಂಬುದು ಗೊತ್ತಿದ್ದರೂ ಅಥವಾ ನಂಬಲು ಕಾರಣವಿದ್ದರೂ, ಆ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ನೀಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯು ಆ ಮಾಹಿತಿಯನ್ನು ನೀಡಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**240. ನಡೆದ ಅಪರಾಧಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಯನ್ನು ನೀಡುವುದು.-** ಯಾರೇ ವ್ಯಕ್ತಿಯು, ಅಪರಾಧವನ್ನು ಮಾಡಲಾಗಿದೆಯೆಂಬುದು ತನಗೆ ಗೊತ್ತಿದ್ದರೂ ಅಥವಾ ನಂಬಲು ಕಾರಣವಿದ್ದರೂ, ಆ ಅಪರಾಧಕ್ಕೆ ಸಂಬಂಧಿಸಿದಂತೆ ಸುಳ್ಳೆಂದು ತನಗೆ ಗೊತ್ತಿರುವ ಅಥವಾ ತಾನು ನಂಬುವ ಯಾವುದೇ ಮಾಹಿತಿಯನ್ನು ಕೊಟ್ಟರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* 238ನೇ ಮತ್ತು 239ನೇ ಪ್ರಕರಣಗಳಲ್ಲಿ ಮತ್ತು ಈ ಪ್ರಕರಣದಲ್ಲಿ ಬರುವ "ಅಪರಾಧ" ಎಂಬ ಪದವು ಭಾರತದ ಹೊರಗೆ ನಡೆದ ಯಾವ ಕೃತ್ಯವು ಭಾರತದ ಒಳಗೆ ನಡೆದಿದ್ದರೆ, ಈ ಮುಂದಿನ ಪ್ರಕರಣಗಳ ಪೈಕಿ ಎಂದರೆ, 103, 105, 307ನೇ ಪ್ರಕರಣಗಳು, 309ನೇ ಪ್ರಕರಣದ (2)ನೇ, (3)ನೇ ಮತ್ತು (4)ನೇ ಉಪಪ್ರಕರಣಗಳು, 310ನೇ ಪ್ರಕರಣದ (2)ನೇ, (3)ನೇ, (4)ನೇ ಮತ್ತು (5)ನೇ ಉಪಪ್ರಕರಣಗಳು, 311, 312ನೇ ಪ್ರಕರಣಗಳು, 326ನೇ ಪ್ರಕರಣದ (ಎಫ್) ಮತ್ತು (ಜಿ) ಖಂಡಗಳು, 331ನೇ ಪ್ರಕರಣದ (4)ನೇ, (6)ನೇ, (7)ನೇ ಮತ್ತು (8)ನೇ ಉಪಪ್ರಕರಣಗಳು, 332ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳ ಪೈಕಿ ಯಾವುದರ ಮೇರೆಗೆ ದಂಡನೀಯವಾಗುತ್ತದೋ ಆ ಯಾವುದೇ ಕೃತ್ಯವನ್ನು ಒಳಗೊಳ್ಳುತ್ತದೆ.

**241. ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಸಾಕ್ಷ್ಯವಾಗಿ ಹಾಜರುಪಡಿಸುವುದನ್ನು ತಡೆಯಲು ಅದನ್ನು ನಾಶಪಡಿಸುವುದು.-** ನ್ಯಾಯಾಲಯದಲ್ಲಿ ಅಥವಾ ಲೋಕ ನೌಕರನ ಮುಂದೆ, ಅವನು ಹಾಗೆ ಲೋಕ ನೌಕರನಾಗಿರುವಾಗ ಕಾನೂನುಸಮ್ಮತವಾಗಿ ನಡೆದ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸುವಂತೆ ಕಾನೂನುಬದ್ಧವಾಗಿ ಒತ್ತಾಯಿಸಬಹುದಾದ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಯಾರೇ ವ್ಯಕ್ತಿಯು ಈ ಹಿಂದೆ ಹೇಳಿರುವ ನ್ಯಾಯಾಲಯದ ಅಥವಾ ಲೋಕ ನೌಕರನ ಮುಂದೆ ಸಾಕ್ಷ್ಯವಾಗಿ ಹಾಜರುಪಡಿಸುವುದನ್ನು ಅಥವಾ ಬಳಸುವುದನ್ನು ತಡೆಯುವ ಉದ್ದೇಶದಿಂದ ಅಥವಾ ಹಾಗೆ ಹಾಜರುಪಡಿಸಲು ಕಾನೂನುಬದ್ಧವಾಗಿ ಯಾರಿಗೆ ಸಮನ್ಸ್ ನೀಡಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಆ ತರುವಾಯ, ಆ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಮುಚ್ಚಿಟ್ಟರೆ ಅಥವಾ ನಾಶಪಡಿಸಿದರೆ ಅಥವಾ ಪೂರ್ಣವಾಗಿ ಅಥವಾ ಭಾಗಶಃ ಅಳಿಸಿ ಹಾಕಿದರೆ ಅಥವಾ ಓದಲಾರದ ಹಾಗೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**242. ದಾವೆಯಲ್ಲಿ ಅಥವಾ ಪ್ರಾಸಿಕ್ಯೂಷನ್ನಿನಲ್ಲಿ ಕೃತ್ಯದ ಅಥವಾ ವ್ಯವಹರಣೆಯ ಉದ್ದೇಶಕ್ಕಾಗಿ ಇನ್ನೊಬ್ಬನಂತೆ ನಟಿಸುವುದು.-** ಯಾರೇ ವ್ಯಕ್ತಿಯು ಇನ್ನೊಬ್ಬನಂತೆ ಕಪಟದಿಂದ ವ್ಯವಹರಿಸಿದರೆ ಮತ್ತು ಅಂಥ ಸ್ವಕಲ್ಪಿತ ಸೋಗಿನಿಂದ, ಯಾವುದೇ ದಾವೆಯಲ್ಲಿ ಅಥವಾ ಅಪರಾಧಿಕ ಪ್ರಾಸಿಕ್ಯೂಷನ್‌ನಲ್ಲಿ ಯಾವುದೇ ಒಪ್ಪಿಗೆಯನ್ನು ಅಥವಾ ಹೇಳಿಕೆಯನ್ನು ಕೊಟ್ಟರೆ ಅಥವಾ ತೀರ್ಪಿಗೆ ಒಪ್ಪಿಗೆ ಕೊಟ್ಟರೆ ಅಥವಾ ಯಾವುದೇ ಆದೇಶಿಕೆ ಹೊರಡಿಸುವಂತೆ ಮಾಡಿದರೆ ಅಥವಾ ಜಾಮೀನುದಾರನಾದರೆ ಅಥವಾ ಭದ್ರತೆ ಕೊಟ್ಟರೆ ಅಥವಾ ಇನ್ನಾವುದೇ

ಕಾರ್ಯವನ್ನು ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**243. ಸ್ವತ್ತು ಮುಟ್ಟುಗೋಲಾದಂತೆ ಜಪ್ತಿಯನ್ನು ತಡೆಯಲು ಅಥವಾ ಡಿಕ್ರಿ ಅಥವಾ ಆದೇಶದ ಜಾರಿಯಲ್ಲಿ ಸ್ವತ್ತು ಜಪ್ತಿಯಾಗುವುದನ್ನು ತಡೆಯಲು ಅದನ್ನು ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು.-** ಯಾರೇ ವ್ಯಕ್ತಿಯು, ಯಾವುದೇ ಸ್ವತ್ತನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು, ಯಾವುದೇ ನ್ಯಾಯಾಲಯವು ಅಥವಾ ಸಕ್ಷಮ ಪ್ರಾಧಿಕಾರವು ಘೋಷಿಸಿದ ಅಥವಾ ಘೋಷಿಸುವ ಸಂಭವವಿರುವುದೆಂದು ತನಗೆ ತಿಳಿದಿರುವ ದಂಡಾದೇಶದ ಮೇರೆಗೆ ಮುಟ್ಟುಗೋಲಾಗಿ ಅಥವಾ ಜುಲ್ಮಾನೆಯ ತೀರಿಕೆಗಾಗಿ ತೆಗೆದುಕೊಳ್ಳದಂತೆ ಅಥವಾ ಸಿವಿಲ್ ದಾವೆಯಲ್ಲಿ ನ್ಯಾಯಾಲಯವು ಮಾಡಿದ ಅಥವಾ ಮಾಡುವ ಸಂಭವವಿದೆಯೆಂದು ತನಗೆ ತಿಳಿದಿರುವ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿ ಮಾಡುವಾಗ ತೆಗೆದುಕೊಳ್ಳದಂತೆ ಮಾಡಲು ಅಂಥ ಸ್ವತ್ತನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಮೋಸದಿಂದ ಸಾಗಿಸಿದರೆ, ಬಚ್ಚಿಟ್ಟರೆ ಅಥವಾ ಯಾರೇ ವ್ಯಕ್ತಿಗೆ ವರ್ಗಾಯಿಸಿದರೆ ಅಥವಾ ವಶಕ್ಕೊಪ್ಪಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**244. ಸ್ವತ್ತು ಮುಟ್ಟುಗೋಲಾದಂತೆ ಜಪ್ತಿಯನ್ನು ತಡೆಯಲು ಅಥವಾ ಡಿಕ್ರಿ ಅಥವಾ ಆದೇಶದ ಜಾರಿಯಲ್ಲಿ ಸ್ವತ್ತು ಜಪ್ತಿಯಾಗುವುದನ್ನು ತಡೆಯಲು ಅದನ್ನು ಮೋಸದಿಂದ ಕ್ಲೇಮು ಮಾಡುವುದು.-** ಯಾರೇ ವ್ಯಕ್ತಿಯು ಸ್ವತ್ತನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ನ್ಯಾಯಾಲಯವು ಅಥವಾ ಯಾವುದೇ ಸಕ್ಷಮ ಪ್ರಾಧಿಕಾರವು ಘೋಷಿಸಿದ ಅಥವಾ ಘೋಷಿಸುವ ಸಂಭವವಿರುವುದೆಂದು ತನಗೆ ತಿಳಿದಿರುವ ದಂಡಾದೇಶದ ಮೇರೆಗೆ ಮುಟ್ಟುಗೋಲಾಗಿ ಅಥವಾ ಜುಲ್ಮಾನೆಯ ತೀರಿಕೆಗಾಗಿ ತೆಗೆದುಕೊಳ್ಳದಂತೆ ಅಥವಾ ಸಿವಿಲ್ ದಾವೆಯಲ್ಲಿ ನ್ಯಾಯಾಲಯವು ಮಾಡಿದ ಅಥವಾ ಮಾಡುವ ಸಂಭವವಿರುವುದೆಂದು ತನಗೆ ತಿಳಿದಿರುವ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿ ಮಾಡುವಾಗ, ಆ ಯಾವುದೇ ಸ್ವತ್ತನ್ನು ಅಥವಾ ಅದರಲ್ಲಿನ ಹಿತಾಸಕ್ತಿಯನ್ನು ತೆಗೆದುಕೊಳ್ಳದಂತೆ ಮಾಡುವ ಉದ್ದೇಶದಿಂದ, ಆ ಸ್ವತ್ತಿಗೆ ಅಥವಾ ಅದರಲ್ಲಿನ ಹಿತಾಸಕ್ತಿಗೆ ತನಗೆ ಯಾವುದೇ ಹಕ್ಕು ಅಥವಾ ಹಕ್ಕುಳ್ಳ ಕ್ಲೇಮು ಇಲ್ಲವೆಂದು ಗೊತ್ತಿದ್ದರೂ, ಅದನ್ನು ಮೋಸದಿಂದ ಅಂಗೀಕರಿಸಿದರೆ, ಸ್ವೀಕರಿಸಿದರೆ ಅಥವಾ ಕ್ಲೇಮು ಮಾಡಿದರೆ ಅಥವಾ ಆ ಸ್ವತ್ತಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ಬಗೆಗಿನ ಹಕ್ಕಿನ ಬಗ್ಗೆ ಮೋಸದಿಂದ ವರ್ತಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**245. ಬಾಕಿಯಿರದ ಮೊತ್ತಕ್ಕಾಗಿ ಮೋಸದಿಂದ ಡಿಕ್ರಿಯನ್ನು ಪಡೆದುಕೊಳ್ಳುವುದು.-** ಯಾರೇ ವ್ಯಕ್ತಿಯು, ಬಾಕಿಯಿರದ ಮೊತ್ತಕ್ಕಾಗಿ ಅಥವಾ ಬಾಕಿಯಿರುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕಾಗಿ ಅಥವಾ ಯಾವ ಸ್ವತ್ತಿಗೆ ಅಥವಾ ಸ್ವತ್ತಿನಲ್ಲಿನ ಹಿತಾಸಕ್ತಿಗೆ ತನಗೆ ಹಕ್ಕಿಲ್ಲವೋ ಅಂಥ ಸ್ವತ್ತಿಗಾಗಿ ಅಥವಾ ಸ್ವತ್ತಿನಲ್ಲಿನ ಹಿತಾಸಕ್ತಿಗಾಗಿ, ಯಾರೇ ವ್ಯಕ್ತಿಯ ವಿರುದ್ಧ ದಾವೆಯಲ್ಲಿ ಮೋಸದಿಂದ ಡಿಕ್ರಿ ಅಥವಾ ಆದೇಶವು ಆಗುವಂತೆ ಮಾಡಿದರೆ ಅಥವಾ ಮಾಡಲು ಕಾರಣವಾದರೆ ಅಥವಾ ಆ ಮೊತ್ತವನ್ನು ತೀರಿಸಿದ ತರುವಾಯವೂ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ಆ ಮೊತ್ತವನ್ನು ತೀರಿಸಲಾಗಿದೆಯೋ ಆ ವಿಷಯಕ್ಕಾಗಿ ಆತನ ವಿರುದ್ಧ ಮೋಸದಿಂದ ಡಿಕ್ರಿ ಅಥವಾ ಆದೇಶವನ್ನು ಜಾರಿ ಮಾಡಿಸಿದರೆ ಅಥವಾ ಮಾಡಿಸಲು ಕಾರಣವಾದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತ*

'ಎ'ನು 'ಜೆಡ್'ನ ವಿರುದ್ಧ ದಾವೆ ಹೂಡುತ್ತಾನೆ. 'ಎ'ನು ತನ್ನ ವಿರುದ್ಧ ಡಿಕ್ರಿಯನ್ನು ಪಡೆಯುವ ಸಂಭವವಿದೆಯೆಂದು 'ಜೆಡ್'ಗೆ ಗೊತ್ತಾಗಿ 'ಬಿ'ನಿಗೆ 'ಜೆಡ್' ವಿರುದ್ಧ ನ್ಯಾಯವಾದ ಕ್ಲೇಮು ಇರದಿದ್ದರೂ, 'ಬಿ'ನ ದಾವೆಯಲ್ಲಿ ತನ್ನ ವಿರುದ್ಧ ಹೆಚ್ಚಿನ ಮೊಬಲಗಿಗೆ ತೀರ್ಪು ಬರುವಂತೆ 'ಜೆಡ್' ಮೋಸದಿಂದ ಅವಕಾಶ ಕಲ್ಪಿಸಿಕೊಡುತ್ತಾನೆ. 'ಎ'ನ ಡಿಕ್ರಿಯಲ್ಲಿ ಪಡೆಯಬಹುದಾದ 'ಜೆಡ್'ನ ಸ್ವತ್ತಿನ ಮಾರಾಟದಿಂದ ಬಂದ ಉತ್ಪತ್ತಿಯಲ್ಲಿ 'ಬಿ'ನು ಅವನ ಸ್ವಂತಕ್ಕಾಗಿಯೋ ಅಥವಾ 'ಜೆಡ್'ನ ಪ್ರಯೋಜನಕ್ಕಾಗಿಯೋ ಪಾಲು ಪಡೆಯಬೇಕು ಎನ್ನುವುದು 'ಜೆಡ್'ನ ಉದ್ದೇಶ. 'ಜೆಡ್'ನು ಈ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**246. ನ್ಯಾಯಾಲಯದಲ್ಲಿ ಅಪ್ರಾಮಾಣಿಕವಾಗಿ ಸುಳ್ಳು ಕ್ಲೇಮು ಮಾಡುವುದು.-** ಯಾರೇ ವ್ಯಕ್ತಿಯು, ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಅಥವಾ ಇನ್ನೊಬ್ಬ ವ್ಯಕ್ತಿಗೆ ಕ್ಷತಿಯನ್ನು ಅಥವಾ ಕಿರುಕುಳವನ್ನು ಉಂಟುಮಾಡುವ ಉದ್ದೇಶದಿಂದ, ನ್ಯಾಯಾಲಯದಲ್ಲಿ ಸುಳ್ಳೆಂದು ತನಗೆ ತಿಳಿದಿರುವ ಕ್ಲೇಮನ್ನು ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**247. ಬಾಕಿಯಿರದ ಮೊತ್ತಕ್ಕಾಗಿ ಮೋಸದಿಂದ ಡಿಕ್ರಿ ಪಡೆಯುವುದು.-** ಯಾರೇ ವ್ಯಕ್ತಿಯು, ತನಗೆ ಬಾಕಿಯಿರದ ಮೊತ್ತಕ್ಕಾಗಿ ಅಥವಾ ಬಾಕಿಯಿರುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕಾಗಿ ಅಥವಾ ಯಾವ ಸ್ವತ್ತಿಗೆ ಅಥವಾ ಸ್ವತ್ತಿನಲ್ಲಿನ ಹಿತಾಸಕ್ತಿಗೆ ತನಗೆ ಹಕ್ಕಿಲ್ಲವೋ ಆ ಯಾವುದೇ ಸ್ವತ್ತು ಅಥವಾ ಸ್ವತ್ತಿನಲ್ಲಿನ ಹಿತಾಸಕ್ತಿಗಾಗಿ ಯಾರೇ ವ್ಯಕ್ತಿಯ ವಿರುದ್ಧ ಮೋಸದಿಂದ ಡಿಕ್ರಿಯನ್ನು ಅಥವಾ ಆದೇಶವನ್ನು ಪಡೆದರೆ ಅಥವಾ ಆ ಮೊತ್ತವನ್ನು ತೀರಿಸಿದ ತರುವಾಯವೂ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ಆ ಮೊತ್ತವನ್ನು ತೀರಿಸಲಾಗಿದೆಯೋ ಆ ವಿಷಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಮೋಸದಿಂದ ಡಿಕ್ರಿ ಅಥವಾ ಆದೇಶವನ್ನು ಜಾರಿ ಮಾಡಿಸಿದರೆ ಅಥವಾ ಅಂಥ ಕೃತ್ಯವು ತನ್ನ ಹೆಸರಿನಲ್ಲಿ ನಡೆಯಲು ಮೋಸದಿಂದ ಅವಕಾಶ ಮಾಡಿಕೊಟ್ಟರೆ ಅಥವಾ ಅನುಮತಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**248. ಕ್ಷತಿಯುಂಟು ಮಾಡಬೇಕೆಂಬ ಉದ್ದೇಶದಿಂದ ಅಪರಾಧದ ಬಗ್ಗೆ ಸುಳ್ಳು ಆಪಾದನೆ.-** ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಉದ್ದೇಶದಿಂದ ಆ ವ್ಯಕ್ತಿಯ ವಿರುದ್ಧ ಆಪರಾಧಿಕ ವ್ಯವಹರಣೆಗೆ ಅಥವಾ ಅಪರಾಧದ ಬಗ್ಗೆ ಆಪಾದನೆಗೆ ನ್ಯಾಯಸಮ್ಮತ ಅಥವಾ ಕಾನೂನುಬದ್ಧವಾದ ಆಧಾರಗಳು ಇಲ್ಲವೆಂದು ಗೊತ್ತಿದ್ದರೂ ಅಂಥ ಯಾವುದೇ ಆಪರಾಧಿಕ ವ್ಯವಹರಣೆಗಳನ್ನು ಹೂಡಿದರೆ ಅಥವಾ ಹೂಡುವಂತೆ ಮಾಡಿದರೆ ಅಥವಾ ಅಪರಾಧವನ್ನು ಮಾಡಿರುವುದಾಗಿ ಸುಳ್ಳು ಆಪಾದನೆ ಮಾಡಿದರೆ, ಅವನು,-

(ಎ) ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷ ಅಥವಾ ಅದಕ್ಕೂ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಬಗ್ಗೆ ಸುಳ್ಳು ಆಪಾದನೆ ಮಾಡಿ ಅಂಥ ಆಪರಾಧಿಕ ವ್ಯವಹರಣೆಯನ್ನು ಹೂಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**249. ಅಪರಾಧಿಗೆ ಆಶ್ರಯ ನೀಡುವುದು.-** ಯಾರೇ ವ್ಯಕ್ತಿಯು, ಅಪರಾಧವು ನಡೆದಾಗ, ಅಪರಾಧಿಯೆಂದು ತನಗೆ ತಿಳಿದಿರುವ ಅಥವಾ ಹಾಗೆ ನಂಬಲು ಕಾರಣವಿರುವ ಯಾರೇ ವ್ಯಕ್ತಿಯನ್ನು ಕಾನೂನುಸಮ್ಮತವಾದ ದಂಡನೆಗೊಳಗಾಗದಂತೆ ಅವನನ್ನು ಮರೆಮಾಚುವ ಉದ್ದೇಶದಿಂದ ಅವನಿಗೆ ಆಶ್ರಯ ನೀಡಿದರೆ ಅಥವಾ ಅವನನ್ನು ಬಚ್ಚಿಟ್ಟರೆ,-

(ಎ) ಆ ಅಪರಾಧವು ಮರಣ ದಂಡನೀಯವಾದುದಾಗಿದ್ದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಆ ಅಪರಾಧವು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(ಸಿ) ಆ ಅಪರಾಧವು ಹತ್ತು ವರ್ಷದ್ದಲ್ಲದ, ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾರಾವಾಸದ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಉಪಬಂಧಿಸಿರುವ ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.*- ಈ ಪ್ರಕರಣದಲ್ಲಿ ಬರುವ 'ಅಪರಾಧ' ಎಂಬ ಪದವು, ಭಾರತದ ಹೊರಗೆ ನಡೆದ ಯಾವುದೇ ಕೃತ್ಯವು, ಭಾರತದ ಒಳಗೆ ನಡೆದಿದ್ದರೆ ಈ ಮುಂದಿನ ಪ್ರಕರಣಗಳ ಮೇರೆಗೆ ಎಂದರೆ, 103, 105, 307, 309ನೇ ಪ್ರಕರಣದ (2), (3) ಮತ್ತು (4)ನೇ ಉಪಪ್ರಕರಣಗಳು, 310ನೇ ಪ್ರಕರಣದ (2), (3), (4) ಮತ್ತು (5)ನೇ ಉಪಪ್ರಕರಣಗಳು, 311, 312, 326ನೇ ಪ್ರಕರಣದ (ಎಫ್) ಮತ್ತು (ಜಿ) ಖಂಡಗಳು, 331ನೇ ಪ್ರಕರಣದ (4), (6), (7) ಮತ್ತು (8)ನೇ ಉಪಪ್ರಕರಣಗಳು, 332ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳು, ಇವುಗಳ ಪೈಕಿ ಯಾವುದಾದರೊಂದರ ಮೇರೆಗೆ ದಂಡನೀಯವಾಗುತ್ತಿತ್ತೋ ಆ ಯಾವುದೇ ಕೃತ್ಯವನ್ನೊಳಗೊಳ್ಳುತ್ತದೆ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಅಂಥ ಪ್ರತಿಯೊಂದು ಕೃತ್ಯವು ಆ ವ್ಯಕ್ತಿಯು ಅದನ್ನು ಭಾರತದ ಒಳಗೆ ಮಾಡಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದರೆ ಹೇಗೆ ದಂಡನೀಯವಾಗುತ್ತಿತ್ತೋ ಹಾಗೆಯೇ ದಂಡನೀಯವಾಗುವುದೆಂದು ಭಾವಿಸತಕ್ಕದ್ದು.

*ಅಪವಾದ.*- ಅಪರಾಧಿಯ ಗಂಡ ಅಥವಾ ಹೆಂಡತಿಯು ಆಶ್ರಯ ನೀಡಿರುವ ಅಥವಾ ಬಚ್ಚಿಟ್ಟಿರುವ ಯಾವುದೇ ಸಂದರ್ಭಕ್ಕೆ ಈ ಉಪಬಂಧವು ಅನ್ವಯವಾಗುವುದಿಲ್ಲ.

*ದೃಷ್ಟಾಂತ*

'ಬಿ'ನು ದರೋಡೆ ಮಾಡಿದ್ದಾನೆಂದು 'ಎ'ನಿಗೆ ತಿಳಿದಿದೆ. 'ಬಿ'ಯು ಕಾನೂನುಸಮ್ಮತವಾದ ದಂಡನೆಗೊಳಗಾಗದಂತೆ 'ಬಿ'ಯನ್ನು ಮರೆಮಾಚುವುದಕ್ಕಾಗಿ 'ಎ'ನು ಅವನನ್ನು ತಿಳಿದು ತಿಳಿದೂ ಬಚ್ಚಿಡುತ್ತಾನೆ. ಇಲ್ಲಿ 'ಬಿ'ನು ಆಜೀವ ಕಾರಾವಾಸಕ್ಕೆ ಗುರಿಯಾಗಬೇಕಾಗಿರುವುದರಿಂದ 'ಎ'ನು ಮೂರು ವರ್ಷಗಳಿಗೆ ಮೀರದ ಅವಧಿಯವರೆಗಿನ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗಬೇಕಾಗುತ್ತದೆ ಮತ್ತು ಜುಲ್ಮಾನೆಗೂ ಸಹ ಗುರಿಯಾಗಬೇಕಾಗುತ್ತದೆ.

**250**. **ಅಪರಾಧಿಯನ್ನು ದಂಡನೆಯಿಂದ ರಕ್ಷಿಸಲು ಕಾಣಿಕೆ, ಇತ್ಯಾದಿಗಳನ್ನು ತೆಗೆದುಕೊಳ್ಳುವುದು.-** ಯಾರೇ ವ್ಯಕ್ತಿಯು, ಅಪರಾಧವನ್ನು ಬಚ್ಚಿಡುವುದಕ್ಕಾಗಿ ಅಥವಾ ಯಾವುದೇ ಅಪರಾಧದ ಬಗ್ಗೆ ಕಾನೂನುಸಮ್ಮತ ದಂಡನೆಯಿಂದ ಯಾರೇ ವ್ಯಕ್ತಿಯನ್ನು ರಕ್ಷಿಸುವುದಕ್ಕಾಗಿ ಅಥವಾ ಆ ವ್ಯಕ್ತಿಯನ್ನು ಕಾನೂನುಸಮ್ಮತ ದಂಡನೆಗೆ ಒಳಪಡಿಸುವ ಉದ್ದೇಶಕ್ಕಾಗಿ ಆ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ನಡೆಸದಿರುವುದಕ್ಕಾಗಿ ಪ್ರತಿಫಲದ ರೂಪದಲ್ಲಿ ತನಗಾಗಿ ಅಥವಾ ಯಾರೇ ಇತರ ವ್ಯಕ್ತಿಗಾಗಿ ಯಾವುದೇ ರುಷುವತ್ತನ್ನು ಅಥವಾ ಯಾವುದೇ ಸ್ವತ್ತಿನ ಪುನರ್ ಪ್ರಾಪ್ತಿಯನ್ನು, ಸ್ವೀಕರಿಸಿದರೆ ಅಥವಾ ಪಡೆಯಲು ಪ್ರಯತ್ನಿಸಿದರೆ ಅಥವಾ ಸ್ವೀಕರಿಸಲು ಒಪ್ಪಿದರೆ, ಅವನು,-

(ಎ) ಆ ಅಪರಾಧವು ಮರಣ ದಂಡನೀಯವಾದುದಾಗಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಅಪರಾಧವು ಆಜೀವ ಕಾರಾವಾಸದಿಂದ ಮತ್ತು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಸಿ) ಆ ಅಪರಾಧವು ಹತ್ತು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾರಾವಾಸದ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಉಪಬಂಧಿಸಿರುವ ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**251. ಅಪರಾಧಿಯನ್ನು ರಕ್ಷಿಸುವುದಕ್ಕೆ ಪ್ರತಿಫಲವಾಗಿ ಕಾಣಿಕೆ ನೀಡುವುದು ಅಥವಾ ಸ್ವತ್ತನ್ನು ವಾಪಸ್ಸು ಕೊಡುವುದು.-** ಒಬ್ಬ ವ್ಯಕ್ತಿಯ ಅಪರಾಧವನ್ನು ಬಚ್ಚಿಡುವುದಕ್ಕಾಗಿ ಅಥವಾ ಯಾವುದೇ ಅಪರಾಧದ ಬಗ್ಗೆ ಕಾನೂನುಸಮ್ಮತ ದಂಡನೆಯಿಂದ ಯಾರೇ ವ್ಯಕ್ತಿಯನ್ನು ರಕ್ಷಿಸುವುದಕ್ಕಾಗಿ ಅಥವಾ ಆ ವ್ಯಕ್ತಿಯನ್ನು ಕಾನೂನುಸಮ್ಮತ ದಂಡನೆಗೆ ಒಳಪಡಿಸುವ ಉದ್ದೇಶಕ್ಕಾಗಿ ಆ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ನಡೆಸದಿರುವುದಕ್ಕಾಗಿ ಪ್ರತಿಫಲದ ರೂಪದಲ್ಲಿ ಯಾವುದೇ ರುಷುವತ್ತನ್ನು ಯಾರೇ ವ್ಯಕ್ತಿಗೆ ಕೊಡುವ ಅಥವಾ ಕೊಡಿಸುವ ಅಥವಾ ನೀಡುವ ಅಥವಾ ಕೊಡಲು ಅಥವಾ ಕೊಡಿಸಲು ಒಪ್ಪಿಕೊಳ್ಳುವ ಅಥವಾ ಯಾರೇ ವ್ಯಕ್ತಿಗೆ ಯಾವುದೇ ಸ್ವತ್ತನ್ನು ವಾಪಸ್ಸು ಕೊಡುವ ಅಥವಾ ಕೊಡುವಂತೆ ಮಾಡುವ ಯಾರೇ ವ್ಯಕ್ತಿಯು,-

(ಎ) ಆ ಅಪರಾಧವು ಮರಣ ದಂಡನೀಯವಾದುದಾಗಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಅಪರಾಧವು ಆಜೀವ ಕಾರಾವಾಸದಿಂದ ಮತ್ತು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ **ಅವಧಿಯ** ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಸಿ) ಆ ಅಪರಾಧವು ಹತ್ತು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾರಾವಾಸದ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಉಪಬಂಧಿಸಿರುವ ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ಅಪವಾದ.-* ಈ ಪ್ರಕರಣದ ಮತ್ತು 250ನೇ ಪ್ರಕರಣದ ಉಪಬಂಧಗಳು, ಕಾನೂನುಬದ್ಧವಾಗಿ ರಾಜಿಯಾಗಬಹುದಾದಂಥ ಯಾವುದೇ ಸಂದರ್ಭಕ್ಕೆ ಅನ್ವಯವಾಗುವುದಿಲ್ಲ.

**252. ಕಳುವಾದ ಸ್ವತ್ತು, ಇತ್ಯಾದಿಗಳನ್ನು ಹಿಂಪಡೆಯುವುದಕ್ಕೆ ಸಹಾಯ ಮಾಡಲು ಕಾಣಿಕೆ ತೆಗೆದುಕೊಳ್ಳುವುದು.-** ಈ ಸಂಹಿತೆಯ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದಿಂದಾಗಿ ವ್ಯಕ್ತಿಯು ಕಳೆದುಕೊಂಡಿರುವ ಯಾವುದೇ ಚರ ಸ್ವತ್ತನ್ನು ಹಿಂಪಡೆಯಲು ಆ ವ್ಯಕ್ತಿಗೆ ಸಹಾಯ ಮಾಡುವವನಂತೆ ನಟಿಸಿ ಅಥವಾ ಸಹಾಯ ಮಾಡುವುದಕ್ಕಾಗಿ ಯಾರೇ ವ್ಯಕ್ತಿಯು ಯಾವುದೇ ರುಷುವತ್ತನ್ನು ತೆಗೆದುಕೊಂಡರೆ ಅಥವಾ ತೆಗೆದುಕೊಳ್ಳಲು ಒಪ್ಪಿದರೆ ಅಥವಾ ಸಮ್ಮತಿಸಿದರೆ, ಆ ವ್ಯಕ್ತಿಯು ಆ ಅಪರಾಧಿಯನ್ನು ದಸ್ತಗಿರಿ ಮಾಡಿಸಿ, ಆ ಅಪರಾಧದ ಅಪರಾಧಿಯೆಂದು ನಿರ್ಣೀತಗೊಳಿಸಲು ತನ್ನ ಅಧೀನದಲ್ಲಿರುವ ಎಲ್ಲ ಸಾಧನೋಪಾಯಗಳನ್ನು ಬಳಸಿದ್ದ ಹೊರತು, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**253. ಅಭಿರಕ್ಷೆಯಿಂದ ತಪ್ಪಿಸಿಕೊಂಡಿರುವ ಅಥವಾ ದಸ್ತಗಿರಿಗಾಗಿ ಆದೇಶ ಹೊರಡಿಸಿರುವ ಅಪರಾಧಿಗೆ ಆಶ್ರಯ ಕೊಡುವುದು.-** ಅಪರಾಧಿ ಎಂದು ನಿರ್ಣೀತನಾದ ಅಥವಾ ಅಪರಾಧದ ಬಗ್ಗೆ ಆರೋಪಿತನಾದ ಯಾರೇ ವ್ಯಕ್ತಿಯು ಆ ಅಪರಾಧಕ್ಕಾಗಿ ಕಾನೂನುಬದ್ಧ ಅಭಿರಕ್ಷೆಯಲ್ಲಿದ್ದು, ಅಂಥ ಅಭಿರಕ್ಷೆಯಿಂದ ತಪ್ಪಿಸಿಕೊಂಡಾಗ ಅಥವಾ ಲೋಕ ನೌಕರನು, ಅಂಥ ಲೋಕ ನೌಕರನಾಗಿ ತನಗಿರುವ ಕಾನೂನುಬದ್ಧ ಅಧಿಕಾರಗಳನ್ನು ಚಲಾಯಿಸಿ ಯಾವುದೇ ಅಪರಾಧಕ್ಕಾಗಿ ನಿರ್ದಿಷ್ಟ ವ್ಯಕ್ತಿಯನ್ನು ದಸ್ತಗಿರಿ ಮಾಡಬೇಕೆಂದು ಆದೇಶಿಸಿದಾಗ ಹಾಗೆ ತಪ್ಪಿಸಿಕೊಂಡಿರುವುದು ಅಥವಾ ದಸ್ತಗಿರಿಗೆ ಆದೇಶ ಹೊರಡಿಸಿರುವ ಸಂಗತಿ ಗೊತ್ತಿದ್ದರೂ, ಆ ವ್ಯಕ್ತಿಯು ದಸ್ತಗಿರಿಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಯಾರೇ ವ್ಯಕ್ತಿಯು ಆ ವ್ಯಕ್ತಿಗೆ ಆಶ್ರಯ ನೀಡಿದರೆ ಅಥವಾ ಅವನನ್ನು ಬಚ್ಚಿಟ್ಟರೆ ಅವನು ಈ ಮುಂದೆ ಹೇಳಿದ ರೀತಿಯಲ್ಲಿ ದಂಡಿತನಾಗತಕ್ಕದ್ದು, ಎಂದರೆ:-

(ಎ) ಯಾವ ಅಪರಾಧಕ್ಕಾಗಿ ಆ ವ್ಯಕ್ತಿಯನ್ನು ಅಭಿರಕ್ಷೆಯಲ್ಲಿಡಲಾಗಿತ್ತೋ ಅಥವಾ ಆ ವ್ಯಕ್ತಿಯ ದಸ್ತಗಿರಿಗೆ ಆದೇಶಿಸಲಾಗಿದೆಯೋ ಆ ಅಪರಾಧವು ಮರಣದಂಡನೀಯವಾದುದಾಗಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಆ ಅಪರಾಧವು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗಿನ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಅವನು ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು;

(ಸಿ) ಆ ಅಪರಾಧವು ಹತ್ತು ವರ್ಷಗಳಿಗೆ ಮೀರದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾರಾವಾಸದ ಕಾಲು ಭಾಗದವರೆಗೆ ವಿಸ್ತರಿಸಬಹುದಾದ ಉಪಬಂಧಿಸಿರುವ ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದಲ್ಲಿನ "ಅಪರಾಧ" ಎಂಬ ಪದವು ವ್ಯಕ್ತಿಯು ಯಾವ ಕೃತ್ಯಕ್ಕಾಗಿ ಅಥವಾ ಲೋಪಕ್ಕಾಗಿ ಭಾರತದ ಒಳಗೆ ತಪ್ಪಿತಸ್ಥನಾಗಿದ್ದರೆ ದಂಡನೀಯನಾಗುತ್ತಿದ್ದನೋ ಮತ್ತು ಪ್ರತ್ಯರ್ಪಣೆಗೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ಅಥವಾ ಅನ್ಯಥಾ ಭಾರತದಲ್ಲಿ ದಸ್ತಗಿರಿಗೆ ಅಥವಾ ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟುಕೊಳ್ಳುವುದಕ್ಕೆ ಗುರಿಯಾಗುತ್ತಿದ್ದನೋ ಅಂಥ ಯಾವುದೇ ಕೃತ್ಯದ ಅಥವಾ ಲೋಪದ ತಪ್ಪಿತಸ್ಥನೆಂದು ಭಾರತದ ಹೊರಗೆ ಆಪಾದಿತನಾಗಿದ್ದರೆ ಅಂಥ ಕೃತ್ಯವನ್ನು ಅಥವಾ ಲೋಪವನ್ನು ಒಳಗೊಳ್ಳುತ್ತದೆ ಮತ್ತು ಈ ಪ್ರಕರಣದ ಉದ್ದೇಶಕ್ಕಾಗಿ ಅಂಥ ಪ್ರತಿಯೊಂದು ಕೃತ್ಯವನ್ನು ಅಥವಾ ಲೋಪವನ್ನು ಅದರ ಬಗ್ಗೆ ಆಪಾದಿತ ವ್ಯಕ್ತಿಯು ಭಾರತದ ಒಳಗೆ ತಪ್ಪಿತಸ್ಥನಾಗಿದ್ದಿದ್ದರೆ ಹೇಗೆ ದಂಡನೀಯವಾಗುತ್ತಿತ್ತೋ ಹಾಗೆ ದಂಡನೀಯವೆಂದು ಭಾವಿಸತಕ್ಕದ್ದು.

*ಅಪವಾದ.-* ಈ ಪ್ರಕರಣದ ಉಪಬಂಧಗಳು, ದಸ್ತಗಿರಿಯಾಗಬೇಕಾಗಿರುವ ವ್ಯಕ್ತಿಯ ಗಂಡ ಅಥವಾ ಹೆಂಡತಿಯು ಹಾಗೆ ಆಶ್ರಯ ನೀಡುವ ಅಥವಾ ಬಚ್ಚಿಡುವ ಸಂದರ್ಭಕ್ಕೆ ಅನ್ವಯವಾಗುವುದಿಲ್ಲ.

**254. ಸುಲಿಗೆಕೋರರಿಗೆ ಅಥವಾ ದರೋಡೆಕೋರರಿಗೆ ಆಶ್ರಯ ನೀಡಿದ್ದಕ್ಕಾಗಿ ದಂಡನೆ.-** ಯಾರೇ ವ್ಯಕ್ತಿಗಳು ಸುಲಿಗೆ ಅಥವಾ ದರೋಡೆ ಮಾಡಲಿರುವರೆಂದು ಅಥವಾ ಇತ್ತೀಚೆಗೆ ಮಾಡಿದ್ದಾರೆಂದು ಗೊತ್ತಿದ್ದರೂ ಅಥವಾ ನಂಬಲು ಕಾರಣವಿದ್ದರೂ, ಹಾಗೆ ಸುಲಿಗೆ ಅಥವಾ ದರೋಡೆ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ಅಥವಾ ಅವರನ್ನು ಅಥವಾ ಅವರಲ್ಲಿ ಯಾರನ್ನಾದರೂ ದಂಡನೆಗೆ ಒಳಗಾಗದಂತೆ ರಕ್ಷಿಸುವ ಉದ್ದೇಶದಿಂದ ಅವರಿಗೆ ಅಥವಾ ಅವರಲ್ಲಿ ಯಾರಿಗಾದರೂ ಯಾರೇ ವ್ಯಕ್ತಿಯು ಆಶ್ರಯ ನೀಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದ ಉದ್ದೇಶಗಳಿಗಾಗಿ ಸುಲಿಗೆಯನ್ನು ಅಥವಾ ದರೋಡೆಯನ್ನು ಭಾರತದಲ್ಲಿ ಅಥವಾ ಭಾರತದ ಹೊರಗೆ ಮಾಡಬೇಕೆಂದು ಉದ್ದೇಶಿಸಿರುವುದು ಅಥವಾ ಮಾಡಲಾಗಿದೆಯೆಂಬುದು ಮುಖ್ಯವಲ್ಲ.

*ಅಪವಾದ.-* ಈ ಪ್ರಕರಣದ ಉಪಬಂಧಗಳು, ಅಪರಾಧಿಯ ಗಂಡ ಅಥವಾ ಹೆಂಡತಿಯು ಆಶ್ರಯ ನೀಡಿದ ಸಂದರ್ಭಕ್ಕೆ ಅನ್ವಯವಾಗುವುದಿಲ್ಲ.

**255. ವ್ಯಕ್ತಿಗೆ ದಂಡನೆಯಾಗದಂತೆ ಅಥವಾ ಅವನ ಸ್ವತ್ತು ಮುಟ್ಟುಗೋಲಾಗದಂತೆ ರಕ್ಷಿಸುವ ಉದ್ದೇಶದಿಂದ ಲೋಕ ನೌಕರನು ಕಾನೂನಿನ ನಿರ್ದೇಶನವನ್ನು ಉಲ್ಲಂಘಿಸುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ಅಂಥ ಲೋಕ ನೌಕರನಾಗಿ ತಾನು ಯಾವ ರೀತಿ ವರ್ತಿಸಬೇಕೆಂಬ ಬಗೆಗಿನ ಯಾವುದೇ ಕಾನೂನಿನ ನಿರ್ದೇಶನವು ಗೊತ್ತಿದ್ದರೂ, ಯಾರೇ ವ್ಯಕ್ತಿಯನ್ನು ಕಾನೂನುಸಮ್ಮತ ದಂಡನೆಯಿಂದ ರಕ್ಷಿಸಬೇಕೆಂಬ ಉದ್ದೇಶದಿಂದ ಅಥವಾ ಹಾಗೆ ಅವನನ್ನು ರಕ್ಷಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ಅಥವಾ

ಅವನು ಗುರಿಯಾಗಬೇಕಾದ ದಂಡನೆಗಿಂತ ಕಡಿಮೆ ದಂಡನೆಗೆ ಗುರಿ ಮಾಡಬೇಕೆಂಬ ಉದ್ದೇಶದಿಂದ ಅಥವಾ ಆ ಮೂಲಕ ಯಾವುದೇ ಸ್ವತ್ತು ಮುಟ್ಟುಗೋಲಾಗದಂತೆ ಅಥವಾ ಅದು ಕಾನೂನುಪ್ರಕಾರ ಹೊಣೆಯಾಗಬೇಕಾದ ಭಾರದಿಂದ ರಕ್ಷಿಸುವ ಉದ್ದೇಶದಿಂದ ಅಥವಾ ಹಾಗೆ ರಕ್ಷಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ, ಅದನ್ನು ಉಲ್ಲಂಘಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**256. ವ್ಯಕ್ತಿಗೆ ದಂಡನೆಯಾಗದಂತೆ ಅಥವಾ ಅವನ ಸ್ವತ್ತು ಮುಟ್ಟುಗೋಲಾಗದಂತೆ ರಕ್ಷಿಸುವ ಉದ್ದೇಶದಿಂದ ಲೋಕ ನೌಕರನು ಸರಿಯಲ್ಲದ ದಾಖಲೆಯನ್ನು ಅಥವಾ ಬರಹವನ್ನು ರೂಪಿಸುವುದು.-** ಯಾರೇ ವ್ಯಕ್ತಿಯು, ತಾನು ಲೋಕ ನೌಕರನಾಗಿ ಯಾವುದೇ ದಾಖಲೆಯನ್ನು ಅಥವಾ ಇತರ ಬರಹವನ್ನು ರೂಪಿಸುವ ಹೊಣೆಗಾರಿಕೆಯಿದ್ದು, ಸರಿಯಲ್ಲದ್ದೆಂದು ತನಗೆ ತಿಳಿದಿರುವ ರೀತಿಯಲ್ಲಿ ಆ ದಾಖಲೆಯನ್ನು ಅಥವಾ ಬರಹವನ್ನು ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ನಷ್ಟ ಅಥವಾ ಕ್ಷತಿಯುಂಟುಮಾಡುವ ಉದ್ದೇಶದಿಂದ ಅಥವಾ ನಷ್ಟ ಅಥವಾ ಕ್ಷತಿ ಉಂಟುಮಾಡುವ ಸಂಭವವಿರುವುದೆಂದು ಗೊತ್ತಿದ್ದರೂ ಅಥವಾ ಯಾರೇ ವ್ಯಕ್ತಿಯನ್ನು ಕಾನೂನುಸಮ್ಮತ ದಂಡನೆಯಿಂದ ರಕ್ಷಿಸುವ ಉದ್ದೇಶದಿಂದ ಅಥವಾ ಹಾಗೆ ರಕ್ಷಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ಅಥವಾ ಯಾವುದೇ ಸ್ವತ್ತು ಮುಟ್ಟುಗೋಲಾಗದಂತೆ ಅಥವಾ ಕಾನೂನುಪ್ರಕಾರ ಅದು ಹೊಣೆಯಾಗಬೇಕಾದ ಭಾರದಿಂದ ರಕ್ಷಿಸುವ ಉದ್ದೇಶದಿಂದ ಅಥವಾ ಹಾಗೆ ರಕ್ಷಿಸುವ ಸಂಭವವಿದೆಯೆಂಬುದು ಗೊತ್ತಿದ್ದರೂ ರೂಪಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**257. ನ್ಯಾಯಿಕ ವ್ಯವಹರಣೆಯಲ್ಲಿ ಲೋಕ ನೌಕರನು ಕಾನೂನಿಗೆ ತದ್ವಿರುದ್ಧವಾದ ವರದಿ, ಮುಂತಾದವುಗಳನ್ನು ಭ್ರಷ್ಟತೆಯಿಂದ ಸಿದ್ಧಪಡಿಸುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ ಯಾವುದೇ ವರದಿ, ಆದೇಶ, ನಿರ್ಣಯ ಅಥವಾ ತೀರ್ಮಾನವು ಕಾನೂನಿಗೆ ತದ್ವಿರುದ್ಧವಾದುದು ಎಂಬುದು ಗೊತ್ತಿದ್ದರೂ, ಅದನ್ನು ಭ್ರಷ್ಟತೆಯಿಂದ ಅಥವಾ ದ್ವೇಷದಿಂದ ಸಿದ್ಧಪಡಿಸಿದರೆ ಅಥವಾ ಘೋಷಿಸಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**258. ಅಧಿಕಾರವುಳ್ಳ ವ್ಯಕ್ತಿಯು ತಾನು ಕಾನೂನಿಗೆ ತದ್ವಿರುದ್ಧವಾಗಿ ವರ್ತಿಸುತ್ತಿರುವನೆಂಬುದು ಗೊತ್ತಿದ್ದರೂ, ವ್ಯಕ್ತಿಯನ್ನು ಅಧಿವಿಚಾರಣೆಗೆ ಅಥವಾ ಬಂಧನಕ್ಕೆ ಒಪ್ಪಿಸುವುದು.-** ವ್ಯಕ್ತಿಗಳನ್ನು ಅಧಿವಿಚಾರಣೆಗೆ ಅಥವಾ ಬಂಧನಕ್ಕೆ ಒಪ್ಪಿಸುವ ಅಥವಾ ವ್ಯಕ್ತಿಗಳನ್ನು ಬಂಧನದಲ್ಲಿಡುವ ಕಾನೂನುಸಮ್ಮತ ಅಧಿಕಾರವುಳ್ಳ ಯಾವುದೇ ಹುದ್ದೆಯಲ್ಲಿರುವ ಯಾರೇ ವ್ಯಕ್ತಿಯು ಭ್ರಷ್ಟತೆಯಿಂದ ಅಥವಾ ದ್ವೇಷದಿಂದ ಆ ಅಧಿಕಾರವನ್ನು ಚಲಾಯಿಸುವಾಗ ಕಾನೂನಿಗೆ ತದ್ವಿರುದ್ಧವಾಗಿ ತಾನು ವರ್ತಿಸುತ್ತಿರುವನೆಂಬುದು ಗೊತ್ತಿದ್ದರೂ ಯಾರೇ ವ್ಯಕ್ತಿಯನ್ನು ಅಧಿವಿಚಾರಣೆಗೆ ಅಥವಾ ಬಂಧನಕ್ಕೆ ಒಪ್ಪಿಸಿದರೆ ಅಥವಾ ಯಾರೇ ವ್ಯಕ್ತಿಯನ್ನು ಬಂಧನದಲ್ಲಿ ಇಟ್ಟರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**259. ಅಪರಾಧಿಯನ್ನು ದಸ್ತಗಿರಿ ಮಾಡಲು ಬದ್ಧನಾದ ಲೋಕ ನೌಕರನು ಉದ್ದೇಶಪೂರ್ವಕವಾಗಿ ದಸ್ತಗಿರಿ ಮಾಡದಿರುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು ತಾನು ಅಂಥ ಲೋಕ ನೌಕರನಾಗಿ, ಅಪರಾಧಕ್ಕಾಗಿ ಆಪಾದಿತನಾದ ಅಥವಾ ಅಪರಾಧಕ್ಕಾಗಿ ದಸ್ತಗಿರಿಯಾಗಬೇಕಾದ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅಥವಾ ಬಂಧನದಲ್ಲಿಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು, ಉದ್ದೇಶಪೂರ್ವಕವಾಗಿ ಅಂಥ ವ್ಯಕ್ತಿಯನ್ನು ಬಂಧಿಸಲು ತಪ್ಪಿದರೆ ಅಥವಾ ಅಂಥ ವ್ಯಕ್ತಿಯು ಅಂಥ ಬಂಧನದಿಂದ ತಪ್ಪಿಸಿಕೊಂಡು ಹೋಗುವುದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಸುಮ್ಮನಿದ್ದರೆ ಅಥವಾ ತಪ್ಪಿಸಿಕೊಂಡು ಹೋಗುವುದಕ್ಕೆ ಅಥವಾ ತಪ್ಪಿಸಿಕೊಂಡು ಹೋಗುವ ಪ್ರಯತ್ನಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ, ಅವನು,-

(ಎ) ಬಂಧನದಲ್ಲಿರುವ ವ್ಯಕ್ತಿಯು ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು ಮರಣ ದಂಡನೀಯ ಅಪರಾಧದ ಆಪಾದಿತನಾಗಿದ್ದರೆ ಅಥವಾ ದಸ್ತಗಿರಿಯಾಗಬೇಕಾಗಿದ್ದರೆ, ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಅಥವಾ

(ಬಿ) ಬಂಧನದಲ್ಲಿರುವ ವ್ಯಕ್ತಿಯು ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಆಪಾದಿತನಾಗಿದ್ದರೆ ಅಥವಾ ದಸ್ತಗಿರಿಯಾಗಿದ್ದರೆ, ಅವನು ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಅಥವಾ

(ಸಿ) ಬಂಧನದಲ್ಲಿರುವ ವ್ಯಕ್ತಿಯು ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು, ಹತ್ತು ವರ್ಷಗಳಿಗೆ ಕಡಿಮೆ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಆಪಾದಿತನಾಗಿದ್ದರೆ ಅಥವಾ ದಸ್ತಗಿರಿಯಾಗಬೇಕಾಗಿದ್ದರೆ, ಅವನು ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**260. ದಂಡನೆಯ ಆದೇಶದ ಮೇರೆಗೆ ಅಥವಾ ಯಾವ ವ್ಯಕ್ತಿಯನ್ನು ಕಾನೂನುಬದ್ಧವಾಗಿ ಬಂಧನಕ್ಕೆ ಒಪ್ಪಿಸಬೇಕಾಗಿದೆಯೋ ಆ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಬದ್ಧನಾದ ಲೋಕ ನೌಕರನು ಉದ್ದೇಶಪೂರ್ವಕವಾಗಿ ದಸ್ತಗಿರಿ ಮಾಡದಿರುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ದಂಡನೆಯ ಆದೇಶಕ್ಕೆ ಒಳಗಾಗಿರುವ ಅಥವಾ ಕಾನೂನುಬದ್ಧವಾಗಿ ಯಾವ ವ್ಯಕ್ತಿಯನ್ನು ಅಭಿರಕ್ಷೆಗೆ ಒಪ್ಪಿಸಬೇಕಾಗಿದೆಯೋ ಆ ಯಾರೇ ವ್ಯಕ್ತಿಯನ್ನು ತಾನು ಅಂಥ ಲೋಕ ನೌಕರನಾಗಿ ದಸ್ತಗಿರಿ ಮಾಡಲು ಅಥವಾ ಬಂಧನದಲ್ಲಿಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು, ಉದ್ದೇಶಪೂರ್ವಕವಾಗಿ ಅಂಥ ವ್ಯಕ್ತಿಯನ್ನು ಬಂಧಿಸಲು ತಪ್ಪಿದರೆ ಅಥವಾ ಅಂಥ ವ್ಯಕ್ತಿಯು ಅಂಥ ಬಂಧನದಿಂದ ತಪ್ಪಿಸಿಕೊಂಡು ಹೋಗುವುದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಸುಮ್ಮನಿದ್ದರೆ ಅಥವಾ ತಪ್ಪಿಸಿಕೊಂಡು ಹೋಗುವುದಕ್ಕೆ ಅಥವಾ ತಪ್ಪಿಸಿಕೊಂಡು ಹೋಗುವ ಪ್ರಯತ್ನಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ, ಅವನು,-

(ಎ) ಬಂಧನದಲ್ಲಿರುವ ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಅಥವಾ

(ಬಿ) ಬಂಧನದಲ್ಲಿರುವ ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು ನ್ಯಾಯಾಲಯದ ದಂಡನೆಯ ಆದೇಶದಿಂದ ಅಥವಾ ಅಂಥ ದಂಡನೆಯ ಪ್ರಮಾಣವನ್ನು ತಗ್ಗಿಸಿದ್ದರಿಂದಾಗಿ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗಿನ ಅಥವಾ ಅದಕ್ಕೂ ಹೆಚ್ಚಿನ ಅವಧಿಯ ಕಾರಾವಾಸಕ್ಕೆ ಗುರಿಯಾಗಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಜುಲ್ಮಾನೆ ಸಹಿತವಾದ ಅಥವಾ ರಹಿತವಾದ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಅಥವಾ

(ಸಿ) ಬಂಧನದಲ್ಲಿರುವ ಅಥವಾ ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು ನ್ಯಾಯಾಲಯದ ದಂಡನೆಯ ಆದೇಶದಿಂದ ಹತ್ತು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸಕ್ಕೆ ಗುರಿಯಾಗಿದ್ದರೆ ಅಥವಾ ಆ ವ್ಯಕ್ತಿಯನ್ನು ಕಾನೂನುಬದ್ಧವಾಗಿ ಅಭಿರಕ್ಷೆಗೆ ಒಪ್ಪಿಸಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**261. ಬಂಧನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇರುವವನು ಲೋಕ ನೌಕರನ ನಿರ್ಲಕ್ಷ್ಯದಿಂದಾಗಿ ತಪ್ಪಿಸಿಕೊಂಡು ಹೋಗುವುದು.-** ಯಾವುದೇ ಅಪರಾಧಕ್ಕಾಗಿ ಆಪಾದಿತನಾದ ಅಥವಾ ಅಪರಾಧಿಯೆಂದು ನಿರ್ಣೀತನಾದ ಅಥವಾ ಕಾನೂನುಬದ್ಧವಾಗಿ ಅಭಿರಕ್ಷೆಗೆ

ಒಪ್ಪಿಸಲಾದ ಯಾರೇ ವ್ಯಕ್ತಿಯನ್ನು ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು ತಾನು ಅಂಥ ಲೋಕ ನೌಕರನಾಗಿ, ಬಂಧನದಲ್ಲಿಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು, ಅಂಥ ವ್ಯಕ್ತಿಯು ಬಂಧನದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ನಿರ್ಲಕ್ಷ್ಯದಿಂದ ಆಸ್ಪದ ಮಾಡಿಕೊಟ್ಟರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**262. ವ್ಯಕ್ತಿಯು ತಾನು ಕಾನೂನುಬದ್ಧವಾಗಿ ದಸ್ತಗಿರಿಯಾಗುವುದಕ್ಕೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು.-** ಯಾರೇ ವ್ಯಕ್ತಿಯು ಯಾವ ಅಪರಾಧಕ್ಕಾಗಿ ಆಪಾದಿತನಾಗಿರುವನೋ ಅಥವಾ ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ಅಪರಾಧಕ್ಕಾಗಿ ತಾನು ಕಾನೂನುಬದ್ಧವಾಗಿ ಬಂಧನಕ್ಕೆ ಒಳಗಾಗುವುದಕ್ಕೆ ಉದ್ದೇಶಪೂರ್ವಕವಾಗಿ ಯಾವುದೇ ಪ್ರತಿರೋಧವನ್ನು ಅಥವಾ ಕಾನೂನುಬಾಹಿರವಾದ ಅಡ್ಡಿಯನ್ನು ಒಡ್ಡಿದರೆ ಅಥವಾ ಅಂಥ ಯಾವುದೇ ಅಪರಾಧಕ್ಕಾಗಿ ಅವನನ್ನು ಕಾನೂನುಬದ್ಧವಾಗಿ ತಡೆಹಿಡಿದಿಟ್ಟುಕೊಂಡಿದ್ದ ಯಾವುದೇ ಅಭಿರಕ್ಷೆಯಿಂದ ತಪ್ಪಿಸಿಕೊಂಡರೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದ ಮೇರೆಗಿನ ದಂಡನೆಯು, ಬಂಧನಕ್ಕೆ ಒಳಗಾಗಬೇಕಾದ ಅಥವಾ ತಡೆಹಿಡಿದಿಟ್ಟುಕೊಳ್ಳುವುದಕ್ಕೆ ಒಳಗಾಗಬೇಕಾಗಿದ್ದ ವ್ಯಕ್ತಿಯು ಯಾವ ಅಪರಾಧಕ್ಕಾಗಿ ಆಪಾದಿತನಾಗಿದ್ದನೋ ಅಥವಾ ಅಪರಾಧಿಯೆಂದು ನಿರ್ಣೀತನಾಗಿದ್ದನೋ ಆ ಅಪರಾಧಕ್ಕಾಗಿ ವಿಧಿಸಿದ ದಂಡನೆಯ ಜೊತೆಗೆ ಇರುತ್ತದೆ.

**263. ಇನ್ನೊಬ್ಬ ವ್ಯಕ್ತಿಯ ಕಾನೂನುಬದ್ಧ ದಸ್ತಗಿರಿಗೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು.-** ಯಾರೇ ವ್ಯಕ್ತಿಯು, ಅಪರಾಧಕ್ಕಾಗಿ ಯಾರೇ ಇತರ ವ್ಯಕ್ತಿಯ ಕಾನೂನುಬದ್ಧ ದಸ್ತಗಿರಿಗೆ ಉದ್ದೇಶಪೂರ್ವಕವಾಗಿ ಯಾವುದೇ ಪ್ರತಿರೋಧವನ್ನು ಅಥವಾ ಕಾನೂನುಬಾಹಿರವಾಗಿ ಅಡ್ಡಿಯನ್ನು ಒಡ್ಡಿದರೆ ಅಥವಾ ಆ ವ್ಯಕ್ತಿಯನ್ನು ಅಪರಾಧಕ್ಕಾಗಿ ಕಾನೂನುಬದ್ಧವಾಗಿ ಯಾವ ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟುಕೊಳ್ಳಲಾಗಿತ್ತೋ ಆ ಯಾವುದೇ ಅಭಿರಕ್ಷೆಯಿಂದ ಕಾನೂನಿಗೆ ವಿರುದ್ಧವಾಗಿ ಬಿಡಿಸಿದರೆ ಅಥವಾ ಬಿಡಿಸಲು ಪ್ರಯತ್ನಿಸಿದರೆ, ಅವನು,-

(ಎ) ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು; ಅಥವಾ

(ಬಿ) ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು, ಅಥವಾ ಯಾವ ವ್ಯಕ್ತಿಯನ್ನು ಬಿಡಿಸಲಾಗಿದೆಯೋ ಅಥವಾ ಬಿಡಿಸಲು ಪ್ರಯತ್ನಿಸಲಾಗಿದೆಯೋ ಆ ವ್ಯಕ್ತಿಯು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಆಪಾದಿತನಾದರೆ ಅಥವಾ ದಸ್ತಗಿರಿಯಾಗಬೇಕಾಗಿದ್ದರೆ, ಆ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಅಥವಾ

(ಸಿ) ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು, ಅಥವಾ ಯಾವ ವ್ಯಕ್ತಿಯನ್ನು ಬಿಡಿಸಲಾಗಿದೆಯೋ ಅಥವಾ ಬಿಡಿಸಲು ಪ್ರಯತ್ನಿಸಲಾಗಿದೆಯೋ ಆ ವ್ಯಕ್ತಿಯು, ಮರಣ ದಂಡನೀಯವಾದ ಅಪರಾಧದ ಆಪಾದಿತನಾದರೆ ಅಥವಾ ದಸ್ತಗಿರಿಯಾಗಬೇಕಾಗಿದ್ದರೆ, ಆ ಯಾರೇ ವ್ಯಕ್ತಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಅಥವಾ

(ಡಿ) ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು, ಅಥವಾ ಯಾವ ವ್ಯಕ್ತಿಯನ್ನು ಬಿಡಿಸಲಾಗಿದೆಯೋ ಅಥವಾ ಬಿಡಿಸಲು ಪ್ರಯತ್ನಿಸಲಾಗಿದೆಯೋ ಆ ವ್ಯಕ್ತಿಯು, ನ್ಯಾಯಾಲಯದ ದಂಡನೆಯ ಆದೇಶದ ಮೇರೆಗೆ ಅಥವಾ ಅಂಥ ದಂಡನೆಯ ಪ್ರಮಾಣವನ್ನು ತಗ್ಗಿಸಿದ್ದರಿಂದಾಗಿ ಆಜೀವ ಕಾರಾವಾಸಕ್ಕೆ ಅಥವಾ ಹತ್ತು ವರ್ಷಗಳ ಅಥವಾ ಅದಕ್ಕೂ ಮೇಲ್ಪಟ್ಟ

ಅವಧಿಯವರೆಗಿನ ಕಾರಾವಾಸಕ್ಕೆ ಗುರಿಯಾಗಿದ್ದರೆ, ಆ ಯಾರೇ ವ್ಯಕ್ತಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಅಥವಾ

(ಇ) ದಸ್ತಗಿರಿಯಾಗಬೇಕಾಗಿದ್ದ ವ್ಯಕ್ತಿಯು, ಅಥವಾ ಯಾವ ವ್ಯಕ್ತಿಯನ್ನು ಬಿಡಿಸಲಾಗಿದೆಯೋ ಅಥವಾ ಬಿಡಿಸಲು ಪ್ರಯತ್ನಿಸಲಾಗಿದೆಯೋ ಆ ವ್ಯಕ್ತಿಯು ಮರಣದಂಡನೆಗೆ ಗುರಿಯಾಗಿದ್ದರೆ, ಆ ಯಾರೇ ವ್ಯಕ್ತಿಯು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**264. ಯಾವ ಸಂದರ್ಭಗಳಿಗೆ ಅನ್ಯಥಾ ಉಪಬಂಧ ಕಲ್ಪಿಸಿಲ್ಲವೋ ಅಂಥ ಸಂದರ್ಭಗಳಲ್ಲಿ ಲೋಕ ನೌಕರನು ದಸ್ತಗಿರಿ ಮಾಡದಿರುವುದು ಅಥವಾ ತಪ್ಪಿಸಿಕೊಂಡು ಹೋಗಲು ಆಸ್ಪದ ಮಾಡಿಕೊಡುವುದು.-** ಲೋಕ ನೌಕರನಾಗಿರುವ ಯಾರೇ ವ್ಯಕ್ತಿಯು, ತಾನು ಅಂಥ ಲೋಕ ನೌಕರನಾಗಿದ್ದು 259ನೇ ಪ್ರಕರಣ, 260ನೇ ಪ್ರಕರಣ ಅಥವಾ 261ನೇ ಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಯಾವ ಸಂದರ್ಭಕ್ಕೆ ಉಪಬಂಧ ಕಲ್ಪಿಸಿಲ್ಲವೋ ಆ ಯಾವುದೇ ಸಂದರ್ಭದಲ್ಲಿ, ಯಾವ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅಥವಾ ಬಂಧನದಲ್ಲಿಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು, ಆ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ತಪ್ಪಿದರೆ ಅಥವಾ ಆ ವ್ಯಕ್ತಿಯು ಬಂಧನಕ್ಕೆ ಒಳಗಾಗದಂತೆ ತಪ್ಪಿಸಿಕೊಂಡು ಹೋಗಲು ಆಸ್ಪದ ಮಾಡಿಕೊಟ್ಟರೆ,-

(ಎ) ಅವನು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ; ಮತ್ತು

(ಬಿ) ಅವನು ನಿರ್ಲಕ್ಷ್ಯದಿಂದ ಹಾಗೆ ಮಾಡಿದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**265. ಯಾವ ಸಂದರ್ಭಗಳಿಗೆ ಅನ್ಯಥಾ ಉಪಬಂಧ ಕಲ್ಪಿಸಿಲ್ಲವೋ ಅಂಥ ಸಂದರ್ಭಗಳಲ್ಲಿ ಕಾನೂನುಬದ್ಧವಾಗಿ ದಸ್ತಗಿರಿಗೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು ಅಥವಾ ತಪ್ಪಿಸಿಕೊಳ್ಳುವುದು ಅಥವಾ ಬಿಡಿಸಿಕೊಳ್ಳುವುದು.-** 262ನೇ ಪ್ರಕರಣ ಅಥವಾ 263ನೇ ಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಯಾವ ಸಂದರ್ಭಕ್ಕೆ ಉಪಬಂಧ ಕಲ್ಪಿಸಿಲ್ಲವೋ ಆ ಯಾವುದೇ ಸಂದರ್ಭದಲ್ಲಿ, ಯಾರೇ ವ್ಯಕ್ತಿಯು, ತನ್ನ ಅಥವಾ ಯಾರೇ ಇತರ ವ್ಯಕ್ತಿಯ ಕಾನೂನುಬದ್ಧ ದಸ್ತಗಿರಿಗೆ ಉದ್ದೇಶಪೂರ್ವಕವಾಗಿ ಪ್ರತಿರೋಧ ಒಡ್ಡಿದರೆ ಅಥವಾ ಕಾನೂನುಬಾಹಿರವಾಗಿ ಅಡ್ಡಿಪಡಿಸಿದರೆ ಅಥವಾ ತನ್ನನ್ನು ಯಾವ ಅಭಿರಕ್ಷೆಯಲ್ಲಿ ಕಾನೂನುಬದ್ಧವಾಗಿ ತಡೆಹಿಡಿದಿಟ್ಟುಕೊಳ್ಳಲಾಗಿದೆಯೋ ಆ ಯಾವುದೇ ಅಭಿರಕ್ಷೆಯಿಂದ ತಪ್ಪಿಸಿಕೊಂಡರೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಅಥವಾ ಯಾರೇ ಇತರ ವ್ಯಕ್ತಿಯನ್ನು ಯಾವ ಅಭಿರಕ್ಷೆಯಲ್ಲಿ ಕಾನೂನುಬದ್ಧವಾಗಿ ತಡೆಹಿಡಿದಿಟ್ಟುಕೊಳ್ಳಲಾಗಿದೆಯೋ ಆ ಯಾವುದೇ ಅಭಿರಕ್ಷೆಯಿಂದ ಕಾನೂನಿಗೆ ವಿರುದ್ಧವಾಗಿ ಬಿಡಿಸಿದರೆ ಅಥವಾ ಬಿಡಿಸಲು ಪ್ರಯತ್ನಿಸಿದರೆ, ಆ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**266. ದಂಡನೆಯನ್ನು ಮಾಫಿ ಮಾಡಿದ ಷರತ್ತಿನ ಉಲ್ಲಂಘನೆ.-** ಷರತ್ತಿಗೊಳಪಟ್ಟ ದಂಡನೆಯ ಮಾಫಿಯನ್ನು ಒಪ್ಪಿದ ಯಾರೇ ವ್ಯಕ್ತಿಯು ಅಂಥ ಮಾಫಿಯನ್ನು ಯಾವ ಷರತ್ತಿನ ಮೇಲೆ ನೀಡಲಾಯಿತೋ ಅಂಥ ಯಾವುದೇ ಷರತ್ತನ್ನು ಗೊತ್ತಿದ್ದೂ ಉಲ್ಲಂಘಿಸಿದರೆ, ಯಾವ ದಂಡನೆಗೆ ಅವನು ಮೊದಲು ಗುರಿಯಾಗಿದ್ದನೋ ಆ ದಂಡನೆಯ ಯಾವುದೇ ಭಾಗವನ್ನು ಈಗಾಗಲೇ ಅನುಭವಿಸಿರದಿದ್ದರೆ ಆ ದಂಡನೆಯಿಂದ ದಂಡಿತನಾಗತಕ್ಕದ್ದು ಮತ್ತು ದಂಡನೆಯ ಯಾವುದೇ ಭಾಗವನ್ನು ಅನುಭವಿಸಿದ್ದರೆ ಅವನು ಅನುಭವಿಸದೆ ಉಳಿದಿರುವ ದಂಡನೆಯಿಂದ ದಂಡಿತನಾಗತಕ್ಕದ್ದು.

**267. ನ್ಯಾಯಿಕ ವ್ಯವಹರಣೆಯನ್ನು ನಡೆಸುತ್ತಿರುವ ಲೋಕ ನೌಕರನಿಗೆ ಉದ್ದೇಶಪೂರ್ವಕವಾಗಿ ಅವಮಾನ ಮಾಡುವುದು ಅಥವಾ ಅವನ ಕೆಲಸಕ್ಕೆ ಅಡ್ಡ ಬರುವುದು.-** ಲೋಕ ನೌಕರನು ನಡೆಸುತ್ತಿರುವ ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ, ಅಂಥ ಲೋಕ

ನೌಕರನಿಗೆ ಉದ್ದೇಶಪೂರ್ವಕವಾಗಿ ಯಾರೇ ವ್ಯಕ್ತಿಯು ಅವಮಾನ ಮಾಡಿದರೆ ಅಥವಾ ಆ ಲೋಕ ನೌಕರನ ಕೆಲಸಕ್ಕೆ ಅಡ್ಡಿಪಡಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**268. ಅಸೆಸರ್‌ನಂತೆ ನಟಿಸುವುದು.-** ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಯಂತೆ ಸೋಗು ಹಾಕಿ ಅಥವಾ ಅನ್ಯಥಾ, ಯಾವ ಸನ್ನಿವೇಶದಲ್ಲಿ ಅಸೆಸರ್‌ನಾಗಿ ಆಯ್ಕೆಯಾಗಲು, ಯಾವುದೇ ಪಟ್ಟಿಗೆ ಸೇರಲು ಅಥವಾ ಪ್ರಮಾಣವಚನ ಸ್ವೀಕರಿಸಲು ಕಾನೂನು ಪ್ರಕಾರ ತನಗೆ ಹಕ್ಕಿಲ್ಲವೆಂದು ಗೊತ್ತಿದ್ದರೂ ಆ ಸನ್ನಿವೇಶದಲ್ಲಿ ಉದ್ದೇಶಪೂರ್ವಕವಾಗಿ ತಾನು ಅಸೆಸರ್‌ನಾಗಿ ಆಯ್ಕೆಯಾಗುವ ಹಾಗೆ, ಪಟ್ಟಿಗೆ ಸೇರುವ ಹಾಗೆ ಅಥವಾ ಪ್ರಮಾಣವಚನ ಸ್ವೀಕರಿಸುವ ಹಾಗೆ ಮಾಡಿದರೆ ಅಥವಾ ಗೊತ್ತಿದ್ದರೂ ಹಾಗೆ ಆಗಲು ಆಸ್ಪದ ಮಾಡಿಕೊಟ್ಟರೆ ಅಥವಾ ಹಾಗೆ ತಾನು ಕಾನೂನಿಗೆ ವಿರುದ್ಧವಾಗಿ ಆಯ್ಕೆಯಾಗಿರುವನೆಂಬುದು, ಪಟ್ಟಿಗೆ ಸೇರಿರುವನೆಂಬುದು ಅಥವಾ ಪ್ರಮಾಣವಚನ ಸ್ವೀಕರಿಸಿರುವನೆಂಬುದು ಗೊತ್ತಿದ್ದರೂ ಅಂಥ ಅಸೆಸರ್‌ನಾಗಿ ತಾನಾಗಿಯೇ ಸೇವೆ ಸಲ್ಲಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**269. ಜಾಮೀನು ಬಂಧಪತ್ರ (bail bond) ಅಥವಾ ಬಂಧಪತ್ರದ (bond) ಮೇಲೆ ಬಿಡುಗಡೆಯಾಗಿರುವ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗಲು ತಪ್ಪುವುದು.-** ಅಪರಾಧಕ್ಕಾಗಿ ಆಪಾದಿತನಾಗಿರುವ ಮತ್ತು ಜಾಮೀನು ಬಂಧಪತ್ರ ಅಥವಾ ಬಂಧಪತ್ರದ ಮೇಲೆ ಬಿಡುಗಡೆಯಾಗಿರುವ ಯಾರೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ (ಇದನ್ನು ರುಜುವಾತುಪಡಿಸುವ ಹೊಣೆ ಆತನ ಮೇಲೆ ಇರತಕ್ಕದ್ದು) ಜಾಮೀನಿನ ಅಥವಾ ಬಂಧಪತ್ರದ ನಿಬಂಧನೆಗಳಿಗನುಸಾರವಾಗಿ ನ್ಯಾಯಾಲಯಕ್ಕೆ ಹಾಜರಾಗಲು ತಪ್ಪಿದರೆ, ಆತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.*- ಈ ಪ್ರಕರಣದ ಮೇರೆಗಿನ ದಂಡನೆಯು,-

(ಎ) ಯಾವ ಅಪರಾಧಿಯ ಮೇಲೆ ಯಾವ ಅಪರಾಧವನ್ನು ಹೊರಿಸಲಾಗಿದೆಯೋ ಆ ಅಪರಾಧಿಯು ಆ ಅಪರಾಧದ ಅಪರಾಧಿ ಎಂದು ನಿರ್ಣೀತನಾದಾಗ ಯಾವ ದಂಡನೆಗೆ ಗುರಿಯಾಗಿರುವನೋ ಆ ದಂಡನೆಯ ಜೊತೆಗೆ ಹೆಚ್ಚುವರಿಯಾಗಿರುತ್ತದೆ; ಮತ್ತು

(ಬಿ) ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಳ್ಳಲು ನ್ಯಾಯಾಲಯಕ್ಕೆ ಇರುವ ಅಧಿಕಾರಕ್ಕೆ ಬಾಧಕವಾಗುವುದಿಲ್ಲ.

## ಅಧ್ಯಾಯ XV

### ಸಾರ್ವಜನಿಕ ಆರೋಗ್ಯ, ಸುರಕ್ಷತೆ, ಸೌಕರ್ಯ, ಸಭ್ಯತೆ ಮತ್ತು ನೀತಿಗಳ ಮೇಲೆ ಪರಿಣಾಮ ಬೀರುವ ಅಪರಾಧಗಳು

**270. ಸಾರ್ವಜನಿಕ ಉಪದ್ರವ.-** ಸಾರ್ವಜನಿಕರಿಗೆ ಅಥವಾ ಸಮೀಪದಲ್ಲಿ ವಾಸ ಮಾಡುವ ಅಥವಾ ಸ್ವತ್ತನ್ನು ಸ್ವಾಧೀನದಲ್ಲಿ ಹೊಂದಿರುವ ಜನಸಾಮಾನ್ಯರಿಗೆ ಸರ್ವೇಸಾಮಾನ್ಯ ಯಾವುದೇ ಕ್ಷತಿ, ಅಪಾಯ ಅಥವಾ ಕಿರುಕುಳವನ್ನು ಉಂಟುಮಾಡುವ ಅಥವಾ ಯಾವುದೇ ಸಾರ್ವಜನಿಕ ಹಕ್ಕನ್ನು ಉಪಯೋಗಿಸುವ ಅವಕಾಶವನ್ನು ಹೊಂದಿರಬಹುದಾದಂಥ ವ್ಯಕ್ತಿಗಳಿಗೆ ಕ್ಷತಿ, ಅಡ್ಡಿ, ಅಪಾಯ ಅಥವಾ ಕಿರುಕುಳವನ್ನು ಅವಶ್ಯವಾಗಿ ಮಾಡಿಯೇ ಮಾಡುವಂಥ ಯಾವುದೇ ಕೃತ್ಯವನ್ನು ಮಾಡಿದ್ದಕ್ಕಾಗಿ ಅಥವಾ ಕಾನೂನುಬಾಹಿರವಾದ ಲೋಪಕ್ಕಾಗಿ ತಪ್ಪಿತಸ್ಥನಾಗಿರುವ ವ್ಯಕ್ತಿಯು ಸಾರ್ವಜನಿಕರಿಗೆ ಉಪದ್ರವ ಉಂಟು ಮಾಡಿದ ತಪ್ಪಿತಸ್ಥನಾಗುತ್ತಾನೆ, ಆದರೆ ಸಾಮಾನ್ಯವಾದ ಉಪದ್ರವದ ಕೃತ್ಯವು ಏನೋ ಒಂದು ಸೌಕರ್ಯವನ್ನು ಅಥವಾ ಪ್ರಯೋಜನವನ್ನು ಒದಗಿಸಿದೆಯೆಂಬ ಕಾರಣಕ್ಕಾಗಿ ಅದನ್ನು ಕ್ಷಮಿಸುವಂತಿಲ್ಲ.

**271. ಪ್ರಾಣಕ್ಕೆ ಅಪಾಯಕಾರಿಯಾದ ರೋಗದ ಸೋಂಕನ್ನು ಹರಡುವ ಸಂಭವವಿರುವ ನಿರ್ಲಕ್ಷ್ಯದ ಕೃತ್ಯ.-** ಯಾರೇ ವ್ಯಕ್ತಿಯು, ಪ್ರಾಣಕ್ಕೆ ಅಪಾಯಕಾರಿಯಾದ ಯಾವುದೇ ರೋಗದ ಸೋಂಕನ್ನು ಹರಡುವ ಸಂಭವವಿರುವ ಮತ್ತು ಹಾಗೆಂದು ತನಗೆ ತಿಳಿದಿರುವ ಅಥವಾ ಹಾಗೆಂದು ನಂಬಲು ಕಾರಣ ಹೊಂದಿರುವ ಯಾವುದೇ ಕೃತ್ಯವನ್ನು ಕಾನೂನುಬಾಹಿರವಾಗಿ ಅಥವಾ ನಿರ್ಲಕ್ಷ್ಯದಿಂದ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**272. ಪ್ರಾಣಕ್ಕೆ ಅಪಾಯಕಾರಿಯಾದ ರೋಗದ ಸೋಂಕನ್ನು ಹರಡುವ ಸಂಭವವಿರುವ ದ್ವೇಷಪೂರ್ವಕ ಕೃತ್ಯ.-** ಯಾರೇ ವ್ಯಕ್ತಿಯು, ಪ್ರಾಣಕ್ಕೆ ಅಪಾಯಕಾರಿಯಾದ ಯಾವುದೇ ರೋಗದ ಸೋಂಕನ್ನು ಹರಡುವ ಸಂಭವವಿರುವ ಮತ್ತು ಹಾಗೆಂದು ತನಗೆ ತಿಳಿದಿರುವ ಅಥವಾ ಹಾಗೆಂದು ನಂಬಲು ಕಾರಣ ಹೊಂದಿರುವ ಯಾವುದೇ ಕೃತ್ಯವನ್ನು ದ್ವೇಷಪೂರ್ವಕವಾಗಿ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**273. ರೋಗಿ ಸಂಸರ್ಗ ನಿಷೇಧ (ಕ್ವಾರಂಟೈನ್) ಸ್ಥಳದ ನಿಯಮವನ್ನು ಉಲ್ಲಂಘಿಸುವುದು.-** ಯಾವುದೇ ಬಗೆಯ ಸಾರಿಗೆಯನ್ನು ರೋಗಿ ಸಂಸರ್ಗ ನಿಷೇಧ (ಕ್ವಾರಂಟೈನ್) ಸ್ಥಳದ ಸ್ಥಿತಿಯಲ್ಲಿ ಇರಿಸಲು ಅಥವಾ ರೋಗಿ ಸಂಸರ್ಗ ನಿಷೇಧ (ಕ್ವಾರಂಟೈನ್) ಸ್ಥಳದ ಸ್ಥಿತಿಯಲ್ಲಿ ಯಾವುದೇ ಅಂಥ ಸಾರಿಗೆಯು ಪರಸ್ಪರ ಸಂಪರ್ಕವನ್ನು ನಿಯಂತ್ರಿಸಲು ಅಥವಾ ಸೋಂಕು ರೋಗವು ಇರುವ ಸ್ಥಳಗಳಿಗೂ ಇತರ ಸ್ಥಳಗಳಿಗೂ ನಡುವೆ ಸಂಪರ್ಕವನ್ನು ನಿಯಂತ್ರಿಸುವುದಕ್ಕಾಗಿ ಸರ್ಕಾರವು ರಚಿಸಿದ ಯಾವುದೇ ನಿಯಮವನ್ನು ಯಾರೇ ವ್ಯಕ್ತಿಯು ಗೊತ್ತಿದ್ದೂ ಉಲ್ಲಂಘಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**274. ಮಾರಾಟ ಮಾಡಲು ಉದ್ದೇಶಿಸಿರುವ ಆಹಾರದ ಅಥವಾ ಪಾನೀಯದ ಕಲಬೆರಕೆ.-** ಯಾವುದೇ ಆಹಾರದ ಅಥವಾ ಪಾನೀಯ ಪದಾರ್ಥವನ್ನು, ಆಹಾರ ಅಥವಾ ಪಾನೀಯ ಪದಾರ್ಥವೆಂದು ಮಾರಾಟ ಮಾಡುವ ಉದ್ದೇಶದಿಂದ ಅಥವಾ ಆ ಪದಾರ್ಥವು ಆಹಾರವೆಂದು ಅಥವಾ ಪಾನೀಯವೆಂದು ಮಾರಾಟ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಅಂಥ ಪದಾರ್ಥವು ಹಾನಿಕರ ಆಹಾರವಾಗುವಂತೆ ಅಥವಾ ಪಾನೀಯವಾಗುವಂತೆ ಯಾರೇ ವ್ಯಕ್ತಿಯು ಕಲಬೆರಕೆ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**275. ಹಾನಿಕರವಾದ ಆಹಾರದ ಅಥವಾ ಪಾನೀಯದ ಮಾರಾಟ.-** ಹಾನಿಕಾರಕಗೊಳಿಸಲಾದ ಅಥವಾ ಹಾನಿಕರವಾಗಿರುವ ಅಥವಾ ಆಹಾರವಾಗಿ ಅಥವಾ ಪಾನೀಯವಾಗಿ ಬಳಸಲು ಅನರ್ಹವಾದ ಸ್ಥಿತಿಯಲ್ಲಿರುವ ಯಾವುದೇ ಪದಾರ್ಥವು, ಆಹಾರವಾಗಿ ಅಥವಾ ಪಾನೀಯವಾಗಿ ಬಳಸಲು ಹಾನಿಕರವಾಗಿದೆಯೆಂದು ಗೊತ್ತಿದ್ದರೂ ಅಥವಾ ಹಾಗೆ ನಂಬಲು ಕಾರಣವಿದ್ದರೂ ಅಂಥ ಯಾವುದೇ ಪದಾರ್ಥವನ್ನು ಆಹಾರವೆಂದು ಅಥವಾ ಪಾನೀಯವೆಂದು ಯಾರೇ ವ್ಯಕ್ತಿಯು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**276. ಔಷಧಗಳ ಕಲಬೆರಕೆ.-** ಯಾವುದೇ ಔಷಧವನ್ನು ಅಥವಾ ವೈದ್ಯಕೀಯ ತಯಾರಿಕೆಯನ್ನು ಯಾವುದೇ ಔಷಧಿಯ ಉದ್ದೇಶಕ್ಕಾಗಿ, ಅದು ಕಲಬೆರಕೆಯಾಗಿಲ್ಲವೇನೋ ಎಂಬಂತೆ ಅದನ್ನು ಮಾರಾಟವಾಗಬೇಕೆಂಬ ಅಥವಾ ಬಳಕೆಯಾಗಬೇಕೆಂಬ ಉದ್ದೇಶದಿಂದ ಅಥವಾ ಅದು ಹಾಗೆ ಮಾರಾಟವಾಗುವ ಅಥವಾ ಬಳಕೆಯಾಗುವ ಸಂಭವವಿದೆಯೆಂದು ಗೊತ್ತಿದ್ದರೂ, ಆ ಯಾವುದೇ

ಔಷಧದ ಅಥವಾ ವೈದ್ಯಕೀಯ ತಯಾರಿಕೆಯ ಸತ್ವವನ್ನು ತಗ್ಗಿಸುವಂತೆ ಅಥವಾ ಅದರ ಕ್ರಿಯಾಶಕ್ತಿಯನ್ನು ಬದಲಾಯಿಸುವಂತೆ ಅಥವಾ ಅದನ್ನು ಹಾನಿಕಾರಕಗೊಳಿಸುವಂತೆ ಯಾರೇ ವ್ಯಕ್ತಿಯು ಕಲಬೆರಕೆ ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**277. ಕಲಬೆರಕೆ ಮಾಡಿದ ಔಷಧಗಳ ಮಾರಾಟ.-** ಯಾವುದೇ ಔಷಧವನ್ನು ಅಥವಾ ವೈದ್ಯಕೀಯ ತಯಾರಿಕೆಯ ಸತ್ವವನ್ನು ತಗ್ಗಿಸುವ ಅಥವಾ ಅವುಗಳ ಕ್ರಿಯಾಶಕ್ತಿಯನ್ನು ಬದಲಾಯಿಸುವ ಅಥವಾ ಅವುಗಳನ್ನು ಹಾನಿಕಾರಕಗೊಳಿಸುವ ರೀತಿಯಲ್ಲಿ ಕಲಬೆರಕೆ ಮಾಡಲಾಗಿದೆಯೆಂಬುದು ಗೊತ್ತಿದ್ದರೂ, ಯಾರೇ ವ್ಯಕ್ತಿಯು ಅವುಗಳನ್ನು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿದರೆ ಅಥವಾ ಅವು ಕಲಬೆರಕೆಯಲ್ಲವೆಂಬಂತೆ ಯಾವುದೇ ಔಷಧಾಲಯದಿಂದ ಔಷಧಿಯ ಉದ್ದೇಶಗಳಿಗಾಗಿ ಕೊಟ್ಟರೆ ಅಥವಾ ಕಲಬೆರಕೆಯಾಗಿದೆಯೆಂಬುದನ್ನು ತಿಳಿಯದ ಯಾರೇ ವ್ಯಕ್ತಿಯು ಅವುಗಳನ್ನು ಔಷಧಿಯ ಉದ್ದೇಶಕ್ಕಾಗಿ ಬಳಸುವಂತೆ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**278. ಒಂದು ಔಷಧವನ್ನು ಬೇರೊಂದು ಔಷಧವೆಂದು ಅಥವಾ ತಯಾರಿಕೆಯೆಂದು ಮಾರಾಟ ಮಾಡುವುದು.-** ಯಾವುದೇ ಔಷಧವನ್ನು ಅಥವಾ ವೈದ್ಯಕೀಯ ತಯಾರಿಕೆಯನ್ನು ಬೇರೊಂದು ಔಷಧ ಅಥವಾ ವೈದ್ಯಕೀಯ ತಯಾರಿಕೆಯೆಂದು ಔಷಧಿಯ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯೂ ತಿಳಿದೂ ತಿಳಿದೂ ಮಾರಾಟ ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿದರೆ ಅಥವಾ ಔಷಧಾಲಯದಿಂದ ಕೊಟ್ಟರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**279. ಸಾರ್ವಜನಿಕ ಚಿಲುಮೆ ಅಥವಾ ಜಲಾಶಯದ ನೀರನ್ನು ಮಲೀನಗೊಳಿಸುವುದು.-** ಸಾರ್ವಜನಿಕ ಚಿಲುಮೆಯನ್ನು ಅಥವಾ ಜಲಾಶಯದ ನೀರನ್ನು ಸಾಮಾನ್ಯವಾಗಿ ಯಾವ ಉದ್ದೇಶಗಳಿಗಾಗಿ ಬಳಸಲಾಗುವುದೋ ಆ ಉದ್ದೇಶಗಳಿಗಾಗಿ ಅದು ಕಡಿಮೆ ಯೋಗ್ಯವಾಗುವ ಹಾಗೆ ಅದನ್ನು ಯಾರೇ ವ್ಯಕ್ತಿಯು ಸ್ವಯಿಚ್ಛೆಯಿಂದ ಕಲುಷಿತಗೊಳಿಸಿದರೆ ಅಥವಾ ಮಲೀನಗೊಳಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**280. ವಾತಾವರಣವನ್ನು ಆರೋಗ್ಯಕ್ಕೆ ಹಾನಿಕರವಾಗುವಂತೆ ಮಾಡುವುದು.-** ಯಾವುದೇ ಸ್ಥಳದ ವಾತಾವರಣವನ್ನು ಅದರ ಅಕ್ಕಪಕ್ಕದಲ್ಲಿ ವಾಸ ಮಾಡುವ ಅಥವಾ ವ್ಯವಹಾರ ನಡೆಸುವ ಅಥವಾ ಸಾರ್ವಜನಿಕ ರಸ್ತೆಯಿಂದ ಹಾದು ಹೋಗುವ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಆರೋಗ್ಯಕ್ಕೆ ಹಾನಿಕರವಾಗುವಂತೆ ಯಾರೇ ವ್ಯಕ್ತಿಯು ಕೆಡಿಸಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**281. ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ವಾಹನ ಚಲಾಯಿಸುವುದು ಅಥವಾ ಸವಾರಿ ಮಾಡುವುದು.-** ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟು ಮಾಡುವ ಸಂಭವವಿರುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾರೇ ವ್ಯಕ್ತಿಯು ವಾಹನ ಚಲಾಯಿಸಿದರೆ ಅಥವಾ ಸವಾರಿ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**282. ನೌಕೆಯನ್ನು ದುಡುಕಿನಿಂದ ಚಲಾಯಿಸುವುದು.-** ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟು ಮಾಡುವ ಹಾಗೆ ಯಾವುದೇ ನೌಕೆಯನ್ನು ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾರೇ

ವ್ಯಕ್ತಿಯು ಚಲಾಯಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**283. ಮಾರ್ಗ ತಪ್ಪಿಸುವ ಬೆಳಕು, ಗುರುತು ಅಥವಾ ತೇಲು ಬುರುಡೆಯನ್ನು ಪ್ರದರ್ಶಿಸುವುದು.-** ಯಾರೇ ವ್ಯಕ್ತಿಯು ಮಾರ್ಗ ತಪ್ಪಿಸುವ ಬೆಳಕನ್ನು, ಗುರುತನ್ನು ಅಥವಾ ತೇಲು ಬುರುಡೆಯನ್ನು ಯಾರೇ ನಾವಿಕನಿಗೆ ಮಾರ್ಗ ತಪ್ಪಿಸುವ ಉದ್ದೇಶದಿಂದ ತೋರ್ಪಡಿಸಿದರೆ ಅಥವಾ ಹಾಗೆ ತೋರ್ಪಡಿಸುವುದರಿಂದ ಅವನು ದಾರಿ ತಪ್ಪುವ ಸಂಭವವಿದೆಯೆಂಬುದು ಗೊತ್ತಿದ್ದರೂ ತೋರ್ಪಡಿಸಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**284. ಬಾಡಿಗೆ ಪಡೆದು ವ್ಯಕ್ತಿಯನ್ನು ಸುರಕ್ಷಿತವಲ್ಲದ ಅಥವಾ ಹೆಚ್ಚು ಭಾರ ಹೇರಿದ ನೌಕೆಯಲ್ಲಿ ನೀರಿನ ಮೂಲಕ ಸಾಗಿಸುವುದು.-** ಯಾರೇ ವ್ಯಕ್ತಿಯ ಪ್ರಾಣಕ್ಕೆ ಅಪಾಯವಾಗುವ ಸ್ಥಿತಿಯಲ್ಲಿರುವ ಅಥವಾ ಹಾಗಾಗುವಂತೆ ಭಾರ ಹೇರಿರುವ ಯಾವುದೇ ನೌಕೆಯಲ್ಲಿ ಆ ಯಾರೇ ವ್ಯಕ್ತಿಯನ್ನು ಬಾಡಿಗೆಗಾಗಿ ಹಾಗಂತ ಗೊತ್ತಿದ್ದರೂ ಅಥವಾ ನಿರ್ಲಕ್ಷ್ಯದಿಂದ ಅವನನ್ನು ನೀರಿನ ಮೂಲಕ ಯಾರೇ ವ್ಯಕ್ತಿಯು ಸಾಗಿಸಿದರೆ ಅಥವಾ ಸಾಗಿಸುವಂತೆ ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**285. ಸಾರ್ವಜನಿಕ ದಾರಿಯಲ್ಲಿ ಅಥವಾ ನೌಕಾ ಸಂಚಾರದ ಮಾರ್ಗದಲ್ಲಿ ಅಪಾಯ ಅಥವಾ ಅಡ್ಡಿ.-** ಯಾರೇ ವ್ಯಕ್ತಿಯು, ಯಾವುದೇ ಕೃತ್ಯವನ್ನು ಮಾಡುವ ಮೂಲಕ ಅಥವಾ ತನ್ನ ಸ್ವಾಧೀನದಲ್ಲಿರುವ ಅಥವಾ ಪ್ರಭಾರದಲ್ಲಿರುವ ಯಾವುದೇ ಸ್ವತ್ತನ್ನು ವ್ಯವಸ್ಥಿತವಾಗಿಟ್ಟುಕೊಳ್ಳದಿರುವ ಮೂಲಕ ಯಾವುದೇ ಸಾರ್ವಜನಿಕ ದಾರಿಯಲ್ಲಿ ಅಥವಾ ಯಾವುದೇ ನೌಕಾ ಸಂಚಾರದ ಮಾರ್ಗದಲ್ಲಿ ಯಾರೇ ವ್ಯಕ್ತಿಗೆ ಅಪಾಯ, ಅಡ್ಡಿ ಅಥವಾ ಕ್ಷತಿಯುಂಟುಮಾಡಿದರೆ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**286. ವಿಷ ಪದಾರ್ಥಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟು ಮಾಡುವ ಹಾಗೆ, ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವುದೇ ವಿಷ ಪದಾರ್ಥಕ್ಕೆ ಸಂಬಂಧಿಸಿದಂತೆ ಕೃತ್ಯವನ್ನು ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿ ಇರುವ ಯಾವುದೇ ವಿಷ ಪದಾರ್ಥಕ್ಕೆ ಸಂಬಂಧಿಸಿದಂತೆ, ಅಂಥ ವಿಷ ಪದಾರ್ಥದಿಂದ ಮನುಷ್ಯನ ಪ್ರಾಣಕ್ಕೆ ಉಂಟಾಗಬಹುದಾದಂಥ ಅಪಾಯವನ್ನು ತಡೆಯಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**287. ಬೆಂಕಿ ಅಥವಾ ದಹನಶೀಲ ವಸ್ತುವಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟಾಗುವ ಹಾಗೆ, ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಬೆಂಕಿಗೆ ಅಥವಾ ಯಾವುದೇ ದಹನಶೀಲ ವಸ್ತುವಿಗೆ ಸಂಬಂಧಿಸಿದಂತೆ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿರುವ ಬೆಂಕಿ ಅಥವಾ ಯಾವುದೇ ದಹನಶೀಲ ವಸ್ತುವಿಗೆ ಸಂಬಂಧಿಸಿದಂತೆ ಅಂಥ ಬೆಂಕಿಯಿಂದ ಅಥವಾ ದಹನಶೀಲ ವಸ್ತುವಿನಿಂದ ಮನುಷ್ಯನ ಪ್ರಾಣಕ್ಕೆ ಉಂಟಾಗಬಹುದಾದ ಅಪಾಯವನ್ನು ತಡೆಯಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದರೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**288. ಸ್ಫೋಟಕ ಪದಾರ್ಥಗಳಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟಾಗುವ ಹಾಗೆ, ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವುದೇ ಸ್ಫೋಟಕ ಪದಾರ್ಥಕ್ಕೆ ಸಂಬಂಧಿಸಿದಂತೆ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿರುವ ಯಾವುದೇ ಸ್ಫೋಟಕ ಪದಾರ್ಥಕ್ಕೆ ಸಂಬಂಧಿಸಿದಂತೆ ಅಂಥ ಸ್ಫೋಟಕ ಪದಾರ್ಥದಿಂದ ಮನುಷ್ಯನ ಪ್ರಾಣಕ್ಕೆ ಉಂಟಾಗಬಹುದಾದ ಅಪಾಯವನ್ನು ತಡೆಯಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದರೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**289. ಯಂತ್ರೋಪಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟಾಗುವ ಹಾಗೆ, ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವುದೇ ಯಂತ್ರೋಪಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿರುವ ಅಥವಾ ಮೇಲ್ವಿಚಾರಣೆಯಲ್ಲಿರುವ ಯಾವುದೇ ಯಂತ್ರೋಪಕರಣಕ್ಕೆ ಸಂಬಂಧಿಸಿದಂತೆ ಅಂಥ ಯಂತ್ರೋಪಕರಣದಿಂದ ಮನುಷ್ಯನ ಪ್ರಾಣಕ್ಕೆ ಉಂಟಾಗಬಹುದಾದ ಅಪಾಯವನ್ನು ತಡೆಯಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದರೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**290. ಕಟ್ಟಡಗಳನ್ನು ಕೆಡವಿ ಹಾಕುವುದು, ದುರಸ್ತಿ ಮಾಡುವುದು ಅಥವಾ ನಿರ್ಮಾಣ ಮಾಡುವುದು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ಯಾವುದೇ ಕಟ್ಟಡವನ್ನು ಕೆಡವಿ ಹಾಕುವಾಗ, ದುರಸ್ತಿ ಮಾಡುವಾಗ ಅಥವಾ ನಿರ್ಮಾಣ ಮಾಡುವಾಗ ಅಂಥ ಕಟ್ಟಡವು ಅಥವಾ ಅದರ ಯಾವುದೇ ಭಾಗವು ಬೀಳುವುದರಿಂದ ಮನುಷ್ಯನ ಪ್ರಾಣಕ್ಕೆ ಉಂಟಾಗಬಹುದಾದ ಯಾವುದೇ ಅಪಾಯದಿಂದ ರಕ್ಷಿಸಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದರೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**291. ಪ್ರಾಣಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ.-** ಯಾರೇ ವ್ಯಕ್ತಿಯು, ತನ್ನ ಸ್ವಾಧೀನದಲ್ಲಿರುವ ಯಾವುದೇ ಪ್ರಾಣಿಗೆ ಸಂಬಂಧಿಸಿದಂತೆ, ಆ ಪ್ರಾಣಿಯಿಂದ ಮನುಷ್ಯನ ಪ್ರಾಣಕ್ಕೆ ಸಂಭವಿಸಬಹುದಾದ ಅಪಾಯವನ್ನು ಅಥವಾ ತೀವ್ರ ಗಾಯದ ಅಪಾಯವನ್ನು ತಡೆಯಲು ಸಾಕಷ್ಟು ವ್ಯವಸ್ಥೆಯನ್ನು ಮಾಡಬೇಕೆಂಬುದು ಗೊತ್ತಿದ್ದರೂ ಮಾಡದಿದ್ದರೆ ಅಥವಾ ನಿರ್ಲಕ್ಷ್ಯದಿಂದ ಹಾಗೆ ಮಾಡಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**292. ಸಾರ್ವಜನಿಕ ಉಪದ್ರವಕ್ಕಾಗಿ ಅನ್ಯಥಾ ದಂಡನೆಯನ್ನು** ಉಪಬಂಧಿಸಿರದ **ಸಂದರ್ಭಗಳಲ್ಲಿ ದಂಡನೆ.-** ಈ ಸಂಹಿತೆಯ ಮೂಲಕ ಅನ್ಯಥಾ ದಂಡನೀಯವಾಗಿರದ ಯಾವುದೇ ಸಾರ್ವಜನಿಕ ಉಪದ್ರವವನ್ನುಂಟು ಮಾಡುವ ಯಾರೇ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**293. ಉಪದ್ರವವನ್ನು ನಿಲ್ಲಿಸಲು ನಿರ್ಬಂಧಕಾಜ್ಞೆಯನ್ನು ಹೊರಡಿಸಿದ ತರುವಾಯವೂ ಉಪದ್ರವವನ್ನು ಮುಂದುವರಿಸುವುದು.-** ಸಾರ್ವಜನಿಕ ಉಪದ್ರವವನ್ನು ನಿಲ್ಲಿಸುವುದಕ್ಕಾಗಿ ನಿರ್ಬಂಧಕಾಜ್ಞೆಯನ್ನು ಹೊರಡಿಸಿದ್ದರೂ ಕಾನೂನುಸಮ್ಮತ ಅಧಿಕಾರವನ್ನು ಹೊಂದಿರುವ ಯಾರೇ ಲೋಕ ನೌಕರನು ಅಂಥ ಉಪದ್ರವವನ್ನು ಪುನಃ ಮಾಡಕೂಡದೆಂದು ಅಥವಾ ಮುಂದುವರಿಸಕೂಡದೆಂದು

ಆಜ್ಞಾಪಿಸಿದ್ದಾಗ್ಯೂ, ಯಾರೇ ವ್ಯಕ್ತಿಯು ಹಾಗೆ ಉಪದ್ರವವನ್ನು ಪುನಃ ಮಾಡಿದರೆ ಅಥವಾ ಮಾಡುವುದನ್ನು ಮುಂದುವರಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**294. ಅಶ್ಲೀಲ ಪುಸ್ತಕ, ಮುಂತಾದವುಗಳ ಮಾರಾಟ, ಇತ್ಯಾದಿ.- (**1) ವಿದ್ಯುನ್ಮಾನ ರೂಪದಲ್ಲಿನ ಯಾವುದೇ ವಿಷಯದ ಪ್ರದರ್ಶನವೂ ಸೇರಿದಂತೆ ಯಾವುದೇ ಪುಸ್ತಕ, ಕಿರುಹೊತ್ತಿಗೆ, ಪತ್ರಿಕೆ, ಲೇಖನ, ಚಿತ್ರ, ವರ್ಣಚಿತ್ರ, ನಿರೂಪಣೆ, ಆಕೃತಿ ಅಥವಾ ಯಾವುದೇ ಇತರ ವಸ್ತುವು ಕಾಮಪ್ರಚೋದಕವಾದುದಾಗಿದ್ದರೆ ಅಥವಾ ಲೈಂಗಿಕ ಆಸಕ್ತಿಯನ್ನು ಸೆಳೆಯುವಂಥದ್ದಾಗಿದ್ದರೆ ಅಥವಾ ಅದರಿಂದುಂಟಾಗುವ ಪರಿಣಾಮವು ಅಥವಾ (ಅದರಲ್ಲಿ ಎರಡು ಅಥವಾ ಹೆಚ್ಚು ಭಿನ್ನ ಭಿನ್ನ ವಸ್ತುವಿಷಯಗಳನ್ನು ಒಳಗೊಂಡಿರುವಲ್ಲಿ) ಅವುಗಳಲ್ಲಿ ಯಾವುದಾದರೂ ಒಂದರಿಂದ ಉಂಟಾಗುವ ಪರಿಣಾಮವು, ಎಲ್ಲ ಸುಸಂಗತ ಸಂದರ್ಭ ಸನ್ನಿವೇಶಗಳನ್ನು ಒಟ್ಟಾಗಿ ಪರಿಗಣಿಸಿದಾಗ, ಅಂಥದ್ದನ್ನು ಓದುವ, ನೋಡುವ ಅಥವಾ ಕೇಳುವ ಸಂಭವವಿರುವ ವ್ಯಕ್ತಿಗಳನ್ನು ನೀತಿಗೆಡಿಸುವಂಥದಾಗಿದ್ದರೆ ಅಥವಾ ಭ್ರಷ್ಟಗೊಳಿಸುವಂಥದಾಗಿದ್ದರೆ, ಅವುಗಳನ್ನು (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಅಶ್ಲೀಲವೆಂದು ಭಾವಿಸತಕ್ಕದ್ದು.

(2) ಯಾರೇ ವ್ಯಕ್ತಿಯು,-

(ಎ) ಯಾವುದೇ ಅಶ್ಲೀಲ ಪುಸ್ತಕ, ಕಿರುಹೊತ್ತಿಗೆ, ಪತ್ರಿಕೆ, ಲೇಖನ, ಚಿತ್ರ, ವರ್ಣಚಿತ್ರ, ನಿರೂಪಣೆ, ಆಕೃತಿ ಅಥವಾ ಇತರ ಯಾವುದೇ ಬಗೆಯ ಅಶ್ಲೀಲ ವಸ್ತುವನ್ನು ಮಾರಾಟ ಮಾಡಿದರೆ, ಬಾಡಿಗೆಗೆ ಕೊಟ್ಟರೆ, ವಿತರಣೆ ಮಾಡಿದರೆ, ಬಹಿರಂಗವಾಗಿ ಪ್ರದರ್ಶಿಸಿದರೆ ಅಥವಾ ಯಾವುದೇ ರೀತಿಯಲ್ಲಿ ಪ್ರಸಾರ ಮಾಡಿದರೆ ಅಥವಾ ಮಾರಾಟದ, ಬಾಡಿಗೆಯ, ವಿತರಣೆಯ, ಬಹಿರಂಗ ಪ್ರದರ್ಶನದ ಅಥವಾ ಪ್ರಸಾರದ ಉದ್ದೇಶಗಳಿಗಾಗಿ ಅವುಗಳನ್ನು ರಚಿಸಿದರೆ, ತಯಾರಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡರೆ; ಅಥವಾ

(ಬಿ) ಯಾವುದೇ ಅಶ್ಲೀಲ ವಸ್ತುವನ್ನು ಮೇಲೆ ಹೇಳಿದ ಯಾವುದೇ ಉದ್ದೇಶಕ್ಕಾಗಿ ಅಥವಾ ಅಂಥ ವಸ್ತುವನ್ನು ಮಾರಾಟ ಮಾಡಲಾಗುವುದೆಂದು, ಬಾಡಿಗೆಗೆ ಕೊಡಲಾಗುವುದೆಂದು, ವಿತರಣೆ ಮಾಡಲಾಗುವುದೆಂದು ಅಥವಾ ಬಹಿರಂಗವಾಗಿ ಪ್ರದರ್ಶಿಸಲಾಗುವುದೆಂದು ಅಥವಾ ಯಾವುದೇ ರೀತಿಯಲ್ಲಿ ಪ್ರಸಾರ ಮಾಡಲಾಗುವುದೆಂದು ಗೊತ್ತಿದ್ದರೂ ಅಥವಾ ಹಾಗೆ ಆಗುವುದೆಂದು ನಂಬಲು ಕಾರಣವಿದ್ದರೂ, ಅವುಗಳನ್ನು ಆಮದು ಮಾಡಿಕೊಂಡರೆ, ರಫ್ತು ಮಾಡಿದರೆ ಅಥವಾ ಸಾಗಿಸಿದರೆ; ಅಥವಾ

(ಸಿ) ಯಾವ ವ್ಯವಹಾರವು ನಡೆಯುತ್ತಿರುವುದೋ ಅಂಥ ವ್ಯವಹಾರದಿಂದ ಅಂಥ ಯಾವುದೇ ಅಶ್ಲೀಲ ವಸ್ತುವನ್ನು ಮೇಲೆ ಹೇಳಿದ ಉದ್ದೇಶಗಳಲ್ಲಿ ಯಾವುದೇ ಉದ್ದೇಶಕ್ಕಾಗಿ ರಚಿಸಲಾಗುವುದೆಂದು, ತಯಾರಿಸಲಾಗುವುದೆಂದು, ಖರೀದಿಸಲಾಗುವುದೆಂದು, ಇಟ್ಟುಕೊಳ್ಳಲಾಗುವುದೆಂದು, ಆಮದು ಮಾಡಲಾಗುವುದೆಂದು, ರಫ್ತು ಮಾಡಲಾಗುವುದೆಂದು, ಸಾಗಿಸಲಾಗುವುದೆಂದು, ಬಹಿರಂಗವಾಗಿ ಪ್ರದರ್ಶಿಸಲಾಗುವುದೆಂದು ಅಥವಾ ಯಾವುದೇ ರೀತಿಯಲ್ಲಿ ಪ್ರಸಾರ ಮಾಡಲಾಗುವುದೆಂದು ಗೊತ್ತಿದ್ದರೂ ಅಥವಾ ಹಾಗೆ ಆಗುವುದೆಂದು ನಂಬಲು ಕಾರಣವಿದ್ದರೂ, ಅಂಥ ವ್ಯವಹಾರದಲ್ಲಿ ಭಾಗವಹಿಸಿದರೆ ಅಥವಾ ಅಂಥ ವ್ಯವಹಾರದಿಂದ ಲಾಭವನ್ನು ಪಡೆದರೆ; ಅಥವಾ

(ಡಿ) ಈ ಪ್ರಕರಣದ ಮೇರೆಗೆ ಅಪರಾಧವಾಗುವ ಯಾವುದೇ ಕೃತ್ಯದಲ್ಲಿ ಯಾರೇ ವ್ಯಕ್ತಿಯು ತೊಡಗಿರುವುದು ಅಥವಾ ತೊಡಗಲು ಸಿದ್ಧನಾಗಿರುವುದು ಅಥವಾ ಅಂಥ ಯಾವುದೇ ಅಶ್ಲೀಲ ವಸ್ತುವನ್ನು ಆ ವ್ಯಕ್ತಿಯಿಂದ ಅಥವಾ ಆ ವ್ಯಕ್ತಿಯ ಮೂಲಕ ದೊರಕಿಸಿಕೊಳ್ಳಬಹುದೆಂದು ಜಾಹೀರಾತುಪಡಿಸಿದರೆ ಅಥವಾ ಯಾವುದೇ ರೀತಿಯಲ್ಲಿ ತಿಳಿಯಪಡಿಸಿದರೆ; ಅಥವಾ

(ಇ) ಈ ಪ್ರಕರಣದ ಮೇರೆಗೆ ಅಪರಾಧವಾಗುವ ಯಾವುದೇ ಕೃತ್ಯವನ್ನು ಮಾಡುವುದಾಗಿ ಹೇಳಿದರೆ ಅಥವಾ ಯಾವುದೇ ಕೃತ್ಯವನ್ನು ಮಾಡಲು ಪ್ರಯತ್ನಿಸಿದರೆ

- ಅವನು ಮೊದಲನೆಯ ಸಲ ಅಪರಾಧಿಯೆಂದು ನಿರ್ಣೀತನಾದಾಗ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲ ಅಥವಾ ಆ ತರುವಾಯ ಅಪರಾಧಿಯೆಂದು ನಿರ್ಣೀತನಾದಾಗ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

*ಅಪವಾದ.*- ಈ ಪ್ರಕರಣವು,-

(ಎ) (i) ಪುಸ್ತಕ, ಕಿರುಹೊತ್ತಿಗೆ, ಪತ್ರಿಕೆ, ಲೇಖನ, ಚಿತ್ರ, ವರ್ಣಚಿತ್ರ, ನಿರೂಪಣೆ ಅಥವಾ ಆಕೃತಿಯ ಪ್ರಕಟಣೆಯು, ವಿಜ್ಞಾನ, ಸಾಹಿತ್ಯ, ಕಲೆ ಅಥವಾ ಜ್ಞಾನಾರ್ಜನೆಯ ಅಥವಾ ಸಾರ್ವತ್ರಿಕ ಆಸಕ್ತಿಯ ಇತರ ವಸ್ತುವಿಷಯಗಳ ಹಿತದೃಷ್ಟಿಯಿಂದ ಸಾರ್ವಜನಿಕ ಒಳಿತಿಗಾಗಿ ಮಾಡಿರುವುದು ಸಮರ್ಥನೀಯವೆಂದು ಸಾಬೀತಾಗಿರುವ; ಅಥವಾ

(ii) ಧಾರ್ಮಿಕ ಉದ್ದೇಶಗಳಿಗಾಗಿ ಸದ್ಭಾವನೆಯಿಂದ ಇಡಲಾಗಿರುವ ಅಥವಾ ಬಳಸಲಾಗಿರುವ

- ಅಂಥ ಯಾವುದೇ ಪುಸ್ತಕ, ಕಿರುಹೊತ್ತಿಗೆ, ಪತ್ರಿಕೆ, ಲೇಖನ, ಚಿತ್ರ, ವರ್ಣಚಿತ್ರ, ನಿರೂಪಣೆ ಅಥವಾ ಆಕೃತಿಗೆ;

(ಬಿ) (i) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷಗಳ ಅಧಿನಿಯಮ, 1958 (1958ರ 24)ರ ಅರ್ಥ ವ್ಯಾಪ್ತಿಯಲ್ಲಿ ಬರುವ ಯಾವುದೇ ಪ್ರಾಚೀನ ಸ್ಮಾರಕದ ಮೇಲೆ ಅಥವಾ ಅದರಲ್ಲಿ; ಅಥವಾ

(ii) ಯಾವುದೇ ದೇವಸ್ಥಾನದಲ್ಲಿ ಅಥವಾ ಪ್ರತಿಮೆಗಳನ್ನು ಒಯ್ಯಲು ಬಳಸಿದ ಅಥವಾ ಯಾವುದೇ ಧಾರ್ಮಿಕ ಉದ್ದೇಶಕ್ಕಾಗಿ ಇಟ್ಟಿರುವ ಅಥವಾ ಬಳಸಿದ ಯಾವುದೇ ರಥದ ಮೇಲೆ ಅಥವಾ ಅದರಲ್ಲಿ

- ರೂಪಿಸಿದ, ಕಡೆದ, ಬಣ್ಣದಲ್ಲಿ ಬರೆದ ಅಥವಾ ಅನ್ಯಥಾ ನಿರೂಪಿತವಾದ ಯಾವುದೇ ನಿರೂಪಣೆಗಳಿಗೆ

- ವ್ಯಾಪ್ತವಾಗುವುದಿಲ್ಲ.

**295. ಮಕ್ಕಳಿಗೆ ಅಶ್ಲೀಲ ವಸ್ತುಗಳನ್ನು ಮಾರಾಟ ಮಾಡುವುದು, ಇತ್ಯಾದಿ.-** 294ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಯಾವುದೇ ಅಶ್ಲೀಲ ವಸ್ತುವನ್ನು ಯಾವುದೇ ಮಕ್ಕಳಿಗೆ, ಯಾರೇ ವ್ಯಕ್ತಿಯು ಮಾರಾಟ ಮಾಡಿದರೆ, ಬಾಡಿಗೆಗೆ ಕೊಟ್ಟರೆ, ವಿತರಣೆ ಮಾಡಿದರೆ, ಪ್ರದರ್ಶಿಸಿದರೆ ಅಥವಾ ಪ್ರಸಾರ ಮಾಡಿದರೆ ಅಥವಾ ಹಾಗೆ ಮಾಡುವುದಾಗಿ ಹೇಳಿದರೆ ಅಥವಾ ಹಾಗೆ ಮಾಡಲು ಪ್ರಯತ್ನಿಸಿದರೆ, ಅವನು ಮೊದಲನೇ ಸಲ ಅಪರಾಧಿಯೆಂದು ನಿರ್ಣೀತನಾದಾಗ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಎರಡನೇ ಸಲ ಅಥವಾ ಆ ತರುವಾಯ ಅಪರಾಧಿಯೆಂದು ನಿರ್ಣೀತನಾದಾಗ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**296. ಅಶ್ಲೀಲ ಕೃತ್ಯಗಳು ಮತ್ತು ಹಾಡುಗಳು.-** ಯಾರೇ ವ್ಯಕ್ತಿಯು, ಇತರರಿಗೆ ಕಿರಿಕಿರಿವುಂಟಾಗುವ ಹಾಗೆ,-

(ಎ) ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಅಶ್ಲೀಲ ಕೃತ್ಯವನ್ನು ಮಾಡಿದರೆ; ಅಥವಾ

(ಬಿ) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಯಾವುದೇ ಅಶ್ಲೀಲ ಹಾಡುಗಳನ್ನು, ಲಾವಣಿಗಳನ್ನು ಅಥವಾ ಪದಗಳನ್ನು ಹಾಡಿದರೆ, ಹೇಳಿದರೆ ಅಥವಾ ಉಚ್ಚರಿಸಿದರೆ

- ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**297. ಲಾಟರಿ ಕಾರ್ಯಾಲಯವನ್ನು ಇಟ್ಟುಕೊಂಡಿರುವುದು.-** (1) ಯಾರೇ ವ್ಯಕ್ತಿಯು, ರಾಜ್ಯ ಲಾಟರಿಯಲ್ಲದ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತವಾಗಿರದಂಥ ಯಾವುದೇ ಲಾಟರಿಯನ್ನು ನಡೆಸುವ ಉದ್ದೇಶದಿಂದ ಯಾವುದೇ ಲಾಟರಿ ಕಾರ್ಯಾಲಯವನ್ನು ಅಥವಾ ಸ್ಥಳವನ್ನು ಇಟ್ಟುಕೊಂಡಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಅಂಥ ಯಾವುದೇ ಲಾಟರಿಯಲ್ಲಿ, ಯಾವುದೇ ಟಿಕೇಟನ್ನು, ಚೀಟಿಯನ್ನು, ಸಂಖ್ಯೆಯನ್ನು ಅಥವಾ ಚಿತ್ರವನ್ನು ಎತ್ತುವುದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನ್ವಯವಾಗುವ ಯಾವುದೇ ಸಂದರ್ಭ ಅಥವಾ ಪರಿಸ್ಥಿತಿಯು ಉಂಟಾದಲ್ಲಿ ಯಾವುದೇ ಮೊತ್ತವನ್ನು ಸಂದಾಯ ಮಾಡಲು ಅಥವಾ ಯಾವುದೇ ಸರಕುಗಳನ್ನು ಬಟವಾಡೆ ಮಾಡಲು ಅಥವಾ ಯಾರೇ ವ್ಯಕ್ತಿಯ ಪ್ರಯೋಜನಕ್ಕಾಗಿ ಯಾವುದೇ ಕೃತ್ಯವನ್ನು ಮಾಡಲು ಅಥವಾ ಮಾಡದೇ ಇರಲು ಯಾವುದೇ ಪ್ರಸ್ತಾವವನ್ನು ಪ್ರಕಟಿಸಿದರೆ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ XV

## ಧರ್ಮಕ್ಕೆ ಸಂಬಂಧಿಸಿದ ಅಪರಾಧಗಳು

**298. ಯಾವುದೇ ವರ್ಗದವರ ಧರ್ಮಕ್ಕೆ ಅಪಮಾನ ಮಾಡುವ ಉದ್ದೇಶದಿಂದ ಪೂಜಾಸ್ಥಳಕ್ಕೆ ಹಾನಿಯುಂಟು ಮಾಡುವುದು ಅಥವಾ ಅದನ್ನು ಅಪವಿತ್ರಗೊಳಿಸುವುದು.-** ಯಾರೇ ವ್ಯಕ್ತಿಯು, ಯಾವುದೇ ವರ್ಗಗಳ ವ್ಯಕ್ತಿಗಳ ಧರ್ಮಕ್ಕೆ ಅಪಮಾನ ಮಾಡುವ ಉದ್ದೇಶದಿಂದ, ಯಾವುದೇ ಪೂಜಾ ಸ್ಥಳವನ್ನು ಅಥವಾ ಅವರು ಪವಿತ್ರವೆಂದು ಭಾವಿಸಿರುವ ಯಾವುದೇ ವಸ್ತುವನ್ನು ನಾಶಪಡಿಸಿದರೆ, ವಸ್ತುವಿಗೆ ಹಾನಿ ಉಂಟುಮಾಡಿದರೆ ಅಥವಾ ಅಪವಿತ್ರಗೊಳಿಸಿದರೆ ಅಥವಾ ಹಾಗೆ ನಾಶಮಾಡಿರುವುದು, ಹಾನಿ ಉಂಟುಮಾಡಿರುವುದು ಅಥವಾ ಅಪವಿತ್ರಗೊಳಿಸಿರುವುದು ತಮ್ಮ ಧರ್ಮಕ್ಕೆ ಅಪಮಾನಕರವೆಂದು ಆ ವ್ಯಕ್ತಿಗಳ ವರ್ಗವು ಪರಿಗಣಿಸುವ ಸಂಭವವಿದೆಯೆಂದು ಗೊತ್ತಿದ್ದರೂ ಹಾಗೆ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**299. ಯಾವುದೇ ಜನವರ್ಗದ ಧರ್ಮವನ್ನು ಅಥವಾ ಧಾರ್ಮಿಕ ನಂಬಿಕೆಗಳನ್ನು ಅಪಮಾನಗೊಳಿಸಿ ಅವರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ಮತ್ತು ದ್ವೇಷ ಭಾವನೆಯಿಂದ ಮಾಡಿದ ಕೃತ್ಯಗಳು.-** ಯಾರೇ ವ್ಯಕ್ತಿಯು, ಭಾರತದ ಯಾವುದೇ ನಾಗರಿಕ ವರ್ಗದ ಧಾರ್ಮಿಕ ಭಾವನೆಗಳಿಗೆ ಬುದ್ಧಿಪೂರ್ವಕವಾಗಿ ಮತ್ತು ದ್ವೇಷಭಾವನೆಯಿಂದ ಧಕ್ಕೆಯನ್ನುಂಟುಮಾಡುವ ಉದ್ದೇಶದಿಂದ, ಮೌಖಿಕ ಅಥವಾ ಲಿಖಿತ ಶಬ್ದಗಳಿಂದ ಅಥವಾ ಚಿಹ್ನೆಗಳಿಂದ ಅಥವಾ ದೃಶ್ಯ ನಿರೂಪಣೆಗಳಿಂದ ಅಥವಾ ವಿದ್ಯುನ್ಮಾನ ವಿಧಾನಗಳ ಮೂಲಕ ಅಥವಾ ಅನ್ಯಥಾ ಆ ವರ್ಗದ ಧರ್ಮಕ್ಕೆ ಅಥವಾ ಧಾರ್ಮಿಕ ನಂಬಿಕೆಗಳಿಗೆ ಅಪಮಾನ ಮಾಡಿದರೆ ಅಥವಾ ಅಪಮಾನ ಮಾಡಲು ಪ್ರಯತ್ನಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**300. ಧಾರ್ಮಿಕ ಕೂಟಕ್ಕೆ (assembly) ಅಡಚಣೆಯುಂಟು ಮಾಡುವುದು.-** ಧಾರ್ಮಿಕ ಪೂಜೆಯಲ್ಲಿ ಅಥವಾ ಧಾರ್ಮಿಕ ಆಚರಣೆಗಳಲ್ಲಿ ಕಾನೂನುಬದ್ಧವಾಗಿ ನಿರತವಾದ ಯಾವುದೇ ಕೂಟಕ್ಕೆ, ಯಾರೇ ವ್ಯಕ್ತಿಯು ಸ್ವಯಿಚ್ಛೆಯಿಂದ ಅಡಚಣೆಯುಂಟು ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**301. ಸ್ಮಶಾನ, ಮುಂತಾದವುಗಳಲ್ಲಿ ಅತಿಕ್ರಮಣ ಪ್ರವೇಶ.-** ಯಾರೇ ವ್ಯಕ್ತಿಯ ಭಾವನೆಗಳನ್ನು ನೋಯಿಸುವ ಅಥವಾ ಯಾರೇ ವ್ಯಕ್ತಿಯ ಧರ್ಮವನ್ನು ಅಪಮಾನಗೊಳಿಸುವ ಉದ್ದೇಶದಿಂದ ಅಥವಾ ಆ ಮೂಲಕ ಯಾರೇ ವ್ಯಕ್ತಿಯ ಭಾವನೆಗಳಿಗೆ ನೋವುಂಟಾಗುವ ಅಥವಾ ಯಾರೇ ವ್ಯಕ್ತಿಯ ಧರ್ಮಕ್ಕೆ ಅಪಮಾನವಾಗುವ ಸಂಭವವಿದೆಯೆಂಬುದು ಗೊತ್ತಿದ್ದರೂ, ಯಾರೇ ವ್ಯಕ್ತಿಯು ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಸ್ಮಶಾನದಲ್ಲಿ ಅಥವಾ ಶವಸಂಸ್ಕಾರಗಳಿಗಾಗಿ ಅಥವಾ ಮೃತನ ಅವಶೇಷಗಳನ್ನು ಇಡುವುದಕ್ಕಾಗಿ ಪ್ರತ್ಯೇಕವಾಗಿಟ್ಟ ಯಾವುದೇ ಸ್ಥಳದಲ್ಲಿ ಯಾವುದೇ ಅತಿಕ್ರಮಣ ಪ್ರವೇಶ ಮಾಡಿದರೆ ಅಥವಾ ಯಾವುದೇ ಮಾನವ ಮೃತದೇಹಕ್ಕೆ ಅವಮರ್ಯಾದೆ ಮಾಡಿದರೆ ಅಥವಾ ಶವಸಂಸ್ಕಾರಗಳನ್ನು ಮಾಡಲು ಸೇರಿದ ವ್ಯಕ್ತಿಗಳಿಗೆ ಅಡಚಣೆಯನ್ನು ಉಂಟುಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**302. ಯಾರೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ಬುದ್ಧಿಪೂರ್ವಕವಾಗಿ ನೋವುಂಟು ಮಾಡುವ ಉದ್ದೇಶದಿಂದ ಪದಗಳು, ಇತ್ಯಾದಿಗಳನ್ನು ಉಚ್ಚರಿಸುವುದು.-** ಯಾರೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ಬುದ್ಧಿಪೂರ್ವಕವಾಗಿ ನೋವುಂಟುಮಾಡುವ ಉದ್ದೇಶದಿಂದ, ಆ ವ್ಯಕ್ತಿಗೆ ಕೇಳಿಸುವ ಹಾಗೆ, ಯಾರೇ ವ್ಯಕ್ತಿಯು ಯಾವುದೇ ಪದವನ್ನು ಉಚ್ಚರಿಸಿದರೆ ಅಥವಾ ಯಾವುದೇ ಶಬ್ದವನ್ನು ಮಾಡಿದರೆ ಅಥವಾ ಅವನಿಗೆ ಕಾಣುವಂತೆ ಯಾವುದೇ ಅಂಗ ಸಂಜ್ಞೆಯನ್ನು ಮಾಡಿದರೆ ಅಥವಾ ಅವನಿಗೆ ಕಾಣುವಂತೆ ಯಾವುದೇ ವಸ್ತುವನ್ನು ಇಟ್ಟರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ XVII

## ಸ್ವತ್ತಿಗೆ ಸಂಬಂಧಪಡುವ ಅಪರಾಧಗಳು

### *ಕಳವು*

**303. ಕಳವು.-** ಯಾರೇ ವ್ಯಕ್ತಿಯ ಸ್ವಾಧೀನದಿಂದ, ಆ ವ್ಯಕ್ತಿಯ ಸಮ್ಮತಿ ಇಲ್ಲದೆಯೇ ಯಾರೇ ವ್ಯಕ್ತಿಯು ಯಾವುದೇ ಚರ ಸ್ವತ್ತನ್ನು ಅಪ್ರಾಮಾಣಿಕವಾಗಿ ತೆಗೆದುಕೊಳ್ಳಲು ಉದ್ದೇಶಿಸಿ, ಹಾಗೆ ತೆಗೆದುಕೊಳ್ಳುವುದಕ್ಕಾಗಿ ಆ ಸ್ವತ್ತನ್ನು ಸಾಗಿಸಿದರೆ, ಆ ಯಾರೇ ವ್ಯಕ್ತಿಯು ಕಳವು ಮಾಡಿರುವನೆಂದು ಹೇಳಲಾಗುತ್ತದೆ.

*ವಿವರಣೆ 1.-* ಚರ ಸ್ವತ್ತಲ್ಲದ ವಸ್ತುವು ಅದು ಭೂಮಿಗೆ ಹೊಂದಿಕೊಂಡೇ ಇರುವವರೆಗೆ ಕಳವಿನ ವಸ್ತು ವಿಷಯವಾಗುವುದಿಲ್ಲ; ಆದರೆ ಅದನ್ನು ಭೂಮಿಯಿಂದ ಬೇರ್ಪಡಿಸಿದ ಕೂಡಲೇ ಅದು ಕಳವಿನ ವಸ್ತು ವಿಷಯವಾಗುವ ಸಾಧ್ಯತೆ ಇರುತ್ತದೆ.

*ವಿವರಣೆ 2.-* ಬೇರ್ಪಡಿಸುವ ಅದೇ ಕೃತ್ಯದಿಂದ ಸ್ಥಳಾಂತರವಾಗುವುದೂ ಕಳವು ಎಂದಾಗಬಹುದು.

*ವಿವರಣೆ 3.-* ಒಬ್ಬ ವ್ಯಕ್ತಿಯು, ವಸ್ತುವು ಸ್ಥಳಾಂತರವಾಗದಂತೆ ಹಾಕಿರುವ ತಡೆಯನ್ನು ತೆಗೆದುಹಾಕಿದರೆ ಅಥವಾ ಅದನ್ನು ಇತರ ಯಾವುದೇ ವಸ್ತುವಿನಿಂದ ಪ್ರತ್ಯೇಕಿಸಿದರೆ ಮತ್ತು ವಾಸ್ತವಿಕವಾಗಿ ಅದನ್ನು ಸ್ಥಳಾಂತರ ಮಾಡಿದರೆ ಅವನು ಆ ವಸ್ತುವು ಸ್ಥಳಾಂತರವಾಗುವಂತೆ ಮಾಡಿದನೆಂದು ಹೇಳಲಾಗುತ್ತದೆ.

*ವಿವರಣೆ 4.-* ಒಬ್ಬ ವ್ಯಕ್ತಿಯು, ಯಾವುದೇ ಸಾಧನದಿಂದ ಪ್ರಾಣಿಯು ಸ್ಥಳಾಂತರವಾಗುವಂತೆ ಮಾಡಿದರೆ, ಅವನು ಆ ಪ್ರಾಣಿಯನ್ನು ಸ್ಥಳಾಂತರಿಸಿದನೆಂದು ಮತ್ತು ಹಾಗೆ ಮಾಡಿದ ಸ್ಥಳಾಂತರದ ಪರಿಣಾಮವಾಗಿ ಆ ಪ್ರಾಣಿಯು ಸ್ಥಳಾಂತರಿಸುವ ಪ್ರತಿಯೊಂದು ವಸ್ತುವನ್ನು ಅವನೇ ಸ್ಥಳಾಂತರಿಸಿದನೆಂದು ಹೇಳಲಾಗುತ್ತದೆ.

*ವಿವರಣೆ 5.-* ಪರಿಭಾಷೆಯಲ್ಲಿ ಹೇಳಿರುವಂಥ ಸಮ್ಮತಿಯು ವ್ಯಕ್ತವಾಗಿರಬಹುದು ಅಥವಾ ಸೂಚ್ಯವಾಗಿರಬಹುದು ಮತ್ತು ಸ್ವಾಧೀನ ಹೊಂದಿರುವ ವ್ಯಕ್ತಿಯಾಗಲಿ ಅಥವಾ ಆ ಉದ್ದೇಶಕ್ಕಾಗಿ ವ್ಯಕ್ತ ಅಥವಾ ಸೂಚ್ಯವಾಗಿ ಅಧಿಕಾರವನ್ನು ಹೊಂದಿರುವ ಯಾರೇ ವ್ಯಕ್ತಿಯಾಗಲಿ ಅಂಥ ಸಮ್ಮತಿಯನ್ನು ಕೊಡಬಹುದು.

### *ದೃಷ್ಟಾಂತಗಳು*

(ಎ) 'ಜೆಡ್'ನ ಸ್ವಾಧೀನದಲ್ಲಿದ್ದ ಮರವನ್ನು 'ಜೆಡ್'ನ ಸಮ್ಮತಿಯಿಲ್ಲದೆ, ಅಪ್ರಾಮಾಣಿಕತೆಯಿಂದ ತೆಗೆದುಕೊಳ್ಳುವ ಉದ್ದೇಶದಿಂದ 'ಜೆಡ್'ನ ಭೂಮಿಯಲ್ಲಿದ್ದ ಮರವನ್ನು 'ಎ'ನು ಕಡಿಯುತ್ತಾನೆ. ಇಲ್ಲಿ ಹಾಗೆ ತೆಗೆದುಕೊಳ್ಳುವುದಕ್ಕಾಗಿ 'ಎ'ನು ಮರವನ್ನು ಕಡಿದೊಡನೆಯೆ, ಅವನು ಅದನ್ನು ಕಳವು ಮಾಡಿದನೆಂದಾಗುತ್ತದೆ.

(ಬಿ) ನಾಯಿಗಳು ತಿನ್ನುವಂಥ ಆಹಾರ ಪದಾರ್ಥವನ್ನು 'ಎ'ನು ತನ್ನ ಜೇಬಿನಲ್ಲಿ ಇಟ್ಟುಕೊಳ್ಳುತ್ತಾನೆ. ಹಾಗೆ ಮಾಡಿ 'ಜೆಡ್'ನ ನಾಯಿಯು ಅವನನ್ನು ಹಿಂಬಾಲಿಸುವಂತೆ ಪ್ರೇರೇಪಿಸುತ್ತಾನೆ. ಇಲ್ಲಿ 'ಜೆಡ್'ನ ಸ್ವಾಧೀನತೆಯಿಂದ 'ಜೆಡ್'ನ ಸಮ್ಮತಿ ಇಲ್ಲದೆಯೆ, 'ಎ'ನು ನಾಯಿಯನ್ನು ಅಪ್ರಾಮಾಣಿಕತೆಯಿಂದ ತೆಗೆದುಕೊಳ್ಳಲು ಉದ್ದೇಶಿಸಿದ್ದರೆ, 'ಎ'ನನ್ನು 'ಜೆಡ್'ನ ನಾಯಿಯು ಹಿಂಬಾಲಿಸಲು ತೊಡಗಿದೊಡನೆಯೆ 'ಎ'ನು ನಾಯಿಯನ್ನು ಕಳವು ಮಾಡಿದನೆಂದಾಗುತ್ತದೆ.

(ಸಿ) ಸಂಪತ್ತು ತುಂಬಿದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗುತ್ತಿರುವ ಎತ್ತನ್ನು 'ಎ'ನು ಸಂಧಿಸುತ್ತಾನೆ. ಅವನು ಆ ಸಂಪತ್ತನ್ನು ಅಪ್ರಾಮಾಣಿಕವಾಗಿ ತೆಗೆದುಕೊಂಡು ಹೋಗುವ ಉದ್ದೇಶದಿಂದ ಒಂದು ನಿಶ್ಚಿತ ದಿಕ್ಕಿಗೆ ಆ ಎತ್ತನ್ನು ತಿರುಗಿಸಿಕೊಂಡು ಹೋಗುತ್ತಾನೆ. ಆ ಎತ್ತು ಚಲಿಸಲು ಪ್ರಾರಂಭವಾದೊಡನೆಯೆ, 'ಎ'ನು ಆ ಸಂಪತ್ತನ್ನು ಕಳವು ಮಾಡಿದನೆಂದಾಗುತ್ತದೆ.

(ಡಿ) 'ಎ'ನು 'ಜೆಡ್'ನ ಸೇವಕನಾಗಿದ್ದಾನೆ ಮತ್ತು 'ಜೆಡ್'ನ ತಟ್ಟೆಯನ್ನು ನೋಡಿಕೊಳ್ಳುವುದನ್ನು 'ಎ'ನಿಗೆ ವಹಿಸಲಾಗಿದೆ. ಅವನು 'ಜೆಡ್'ನ ಸಮ್ಮತಿಯಿಲ್ಲದೆ ತಟ್ಟೆಯೊಂದಿಗೆ ಅಪ್ರಾಮಾಣಿಕವಾಗಿ ಓಡಿಹೋಗುತ್ತಾನೆ. ಇಲ್ಲಿ 'ಎ'ನು ಕಳವು ಮಾಡಿದನೆಂದಾಗುತ್ತದೆ.

(ಇ) ಪ್ರವಾಸ ಹೋಗುವ 'ಜೆಡ್'ನು ತನ್ನ ತಟ್ಟೆಯನ್ನು ಉಗ್ರಾಣ ಪಾಲಕನಾದ 'ಎ'ನ ಬಳಿ ತಾನು ಬರುವವರೆಗೆ ಇಟ್ಟುಕೊಂಡಿರುವಂತೆ ಆತನಿಗೆ ವಹಿಸಿಕೊಟ್ಟಿರುತ್ತಾನೆ. 'ಎ'ನು ಅದನ್ನು ತೆಗೆದುಕೊಂಡು ಹೋಗಿ ಅಕ್ಕಸಾಲಿಗನಿಗೆ ಮಾರಾಟ ಮಾಡುತ್ತಾನೆ. ತಟ್ಟೆಯು 'ಜೆಡ್'ನ ಸ್ವಾಧೀನದಲ್ಲಿರುವುದಿಲ್ಲ. ಆದ್ದರಿಂದ ಅದನ್ನು 'ಜೆಡ್'ನ ಸ್ವಾಧೀನದಿಂದ ತೆಗೆದುಕೊಂಡು ಹೋಗಿದ್ದಾನೆಂದಾಗುವುದಿಲ್ಲ ಮತ್ತು 'ಎ'ನು ಆಪರಾಧಿಕ ನಂಬಿಕೆ ದ್ರೋಹ ಎಸಗಿರಬಹುದಾದರೂ ಕೂಡ, ಅವನು ಕಳವು ಮಾಡಿದನೆಂದಾಗುವುದಿಲ್ಲ.

(ಎಫ್) 'ಜೆಡ್'ನ ಅಧಿಭೋಗದಲ್ಲಿರುವ ಮನೆಯಲ್ಲಿ ಮೇಜಿನ ಮೇಲೆ 'ಜೆಡ್'ನ ಉಂಗುರವನ್ನು 'ಎ'ನು ನೋಡುತ್ತಾನೆ. ಉಂಗುರವು 'ಜೆಡ್'ನ ಸ್ವಾಧೀನದಲ್ಲಿರುತ್ತದೆ. 'ಎ'ನು ಉಂಗುರವನ್ನು ಅಪ್ರಾಮಾಣಿಕವಾಗಿ ಸ್ಥಳಾಂತರಿಸಿದರೆ, 'ಎ'ನು ಉಂಗುರವನ್ನು ಕಳವು ಮಾಡಿದನೆಂದಾಗುತ್ತದೆ.

(ಜಿ) ಯಾವ ವ್ಯಕ್ತಿಯ ಸ್ವಾಧೀನದಲ್ಲಿದೆಯೆಂಬುದು ಗೊತ್ತಿರದ, ಹೆದ್ದಾರಿಯಲ್ಲಿ ಬಿದ್ದಿರುವ ಉಂಗುರವನ್ನು 'ಎ'ನು ನೋಡುತ್ತಾನೆ. 'ಎ'ನು ಉಂಗುರವನ್ನು ತೆಗೆದುಕೊಂಡು ಅದನ್ನು ಆಪರಾಧಿಕ ದುರ್ವಿನಿಯೋಗವನ್ನು ಮಾಡಬಹುದಾದರೂ, ಅವನು ಕಳವು ಮಾಡಿದನೆಂದಾಗುವುದಿಲ್ಲ.

(ಹೆಚ್) 'ಜೆಡ್'ನ ಮನೆಯಲ್ಲಿ, ಮೇಜಿನ ಮೇಲಿರುವ 'ಜೆಡ್'ನ ಉಂಗುರವನ್ನು 'ಎ'ನು ನೋಡುತ್ತಾನೆ. ಶೋಧನೆ ಮಾಡಲಾಗುತ್ತದೆ ಮತ್ತು ಪತ್ತೆ ಮಾಡಲಾಗುತ್ತದೆ ಎಂಬ ಭಯದಿಂದ ಕೂಡಲೇ ಆ ಉಂಗುರದ ದುರ್ವಿನಿಯೋಗಕ್ಕೆ ಧೈರ್ಯ ಮಾಡುವುದಿಲ್ಲ. ಆ ಉಂಗುರ ಕಾಣದಿರುವುದು ಮರೆತುಹೋದಾಗ ಆ ಉಂಗುರವನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವ ಉದ್ದೇಶದಿಂದ, 'ಜೆಡ್'ನು ಯಾವಾಗಲೂ ಪತ್ತೆ ಮಾಡಲಾಗದಂಥ ಸ್ಥಳದಲ್ಲಿ 'ಎ'ನು ಉಂಗುರವನ್ನು ಬಚ್ಚಿಡುತ್ತಾನೆ. ಇಲ್ಲಿ 'ಎ'ನು ಉಂಗುರವನ್ನು ಮೊದಲ ಸಲ ಸ್ಥಳಾಂತರಿಸಿದಾಗಲೇ ಕಳವು ಮಾಡಿದನೆಂದಾಗುತ್ತದೆ.

(ಐ) 'ಎ'ನು ತನ್ನ ಕೈಗಡಿಯಾರವನ್ನು ಆಭರಣ ವ್ಯಾಪಾರಿಯಾದ 'ಜೆಡ್'ನಿಗೆ ಅದು ಸರಿಯಾಗಿ ನಡೆಯುವಂತೆ ಮಾಡಿಕೊಡಲು ಅದನ್ನು ಕೊಡುತ್ತಾನೆ. 'ಜೆಡ್'ನು ಅದನ್ನು ತನ್ನ ಅಂಗಡಿಗೆ ಒಯ್ಯುತ್ತಾನೆ. ಆಭರಣ ವ್ಯಾಪಾರಿಯು ಆ ಕೈಗಡಿಯಾರವನ್ನು ಭದ್ರತೆಗಾಗಿ ಕಾನೂನುಬದ್ಧವಾಗಿ ಇಟ್ಟುಕೊಳ್ಳುವಂಥ ಯಾವುದೇ ಹೊಣೆಗೆ 'ಎ'ನು 'ಜೆಡ್'ನಿಗೆ ಬದ್ಧನಾಗಿರಬೇಕಾಗಿರಲಿಲ್ಲ. 'ಎ'ನು ಅಂಗಡಿಯನ್ನು ಸಲೀಸಾಗಿ ಪ್ರವೇಶಿಸಿ 'ಜೆಡ್'ನ ಕೈಯಿಂದ ಕೈಗಡಿಯಾರವನ್ನು ಬಲವಂತದಿಂದ ತೆಗೆದುಕೊಂಡು ಹೋಗುತ್ತಾನೆ. ಇಲ್ಲಿ 'ಎ'ನು ಆಪರಾಧಿಕ ಅತಿಕ್ರಮಣ ಪ್ರವೇಶ ಮತ್ತು ಹಲ್ಲೆಯನ್ನು ಮಾಡಿರಬಹುದಾದರೂ, ಅವನು ಕಳವು ಮಾಡಿದನೆಂದಾಗುವುದಿಲ್ಲ. ಏಕೆಂದರೆ ಅವನು ಮೋಸದಿಂದೇನೂ ಹಾಗೆ ಮಾಡಲಿಲ್ಲ.

(ಜೆ) ಕೈಗಡಿಯಾರವನ್ನು ದುರಸ್ತಿ ಮಾಡಿದುದಕ್ಕಾಗಿ ‘ಜೆಡ್’ನಿಗೆ ‘ಎ’ನು ಹಣವನ್ನು ಕೊಡಬೇಕಾಗಿದ್ದರೆ ಮತ್ತು ಆ ಹೊಣೆಗೆ ಭದ್ರತೆಯಾಗಿ ಕಾನೂನುಸಮ್ಮತವಾಗಿ ಕೈಗಡಿಯಾರವನ್ನು ‘ಜೆಡ್’ನು ಇಟ್ಟುಕೊಂಡರೆ ಮತ್ತು ‘ಜೆಡ್’ನು ತನ್ನ ಹೊಣೆಗೆ ಭದ್ರತೆಯಾಗಿ ಇಟ್ಟುಕೊಂಡ ಸ್ವತ್ತನ್ನು ‘ಜೆಡ್’ನಿಗಿಲ್ಲದಂತೆ ಮಾಡುವ ಉದ್ದೇಶದಿಂದ ‘ಎ’ನು ‘ಜೆಡ್’ನಿಂದ ಕೈಗಡಿಯಾರವನ್ನು ಕಿತ್ತುಕೊಂಡರೆ, ‘ಎ’ನು ಕೈಗಡಿಯಾರವನ್ನು ಅಪ್ರಾಮಾಣಿಕತೆಯಿಂದ ತೆಗೆದುಕೊಂಡಿದ್ದರಿಂದ ‘ಎ’ನು ಕಳವು ಮಾಡಿದನೆಂದಾಗುತ್ತದೆ.

(ಕೆ) ಪುನಃ ‘ಎ’ನು ‘ಜೆಡ್’ನ ಬಳಿ ಕೈಗಡಿಯಾರವನ್ನು ಗಿರವಿ ಇಟ್ಟು ತಾನು ಅದರ ಮೇಲೆ ಪಡೆದ ಹಣವನ್ನು ಸಂದಾಯ ಮಾಡದೆಯೆ ‘ಜೆಡ್’ನ ಸಮ್ಮತಿ ಇಲ್ಲದೆ ‘ಜೆಡ್’ನ ಸ್ವಾಧೀನದಲ್ಲಿರುವ ಕೈಗಡಿಯಾರವನ್ನು ತೆಗೆದುಕೊಳ್ಳುತ್ತಾನೆ. ಕೈಗಡಿಯಾರವು ‘ಎ’ನ ಸ್ವಂತ ಸ್ವತ್ತಾಗಿದ್ದರೂ, ಅಪ್ರಾಮಾಣಿಕತೆಯಿಂದ ಅದನ್ನು ತೆಗೆದುಕೊಂಡಿದ್ದರಿಂದ ‘ಎ’ನು ಕಳವು ಮಾಡಿದನೆಂದಾಗುತ್ತದೆ.

(ಎಲ್) ‘ಜೆಡ್’ನಿಗೆ ಸೇರಿದ ವಸ್ತುವೊಂದನ್ನು ಆ ವಸ್ತುವನ್ನು ವಾಪಸ್ಸು ಕೊಡುವುದಕ್ಕೆ ಪ್ರತಿಫಲವಾಗಿ ‘ಜೆಡ್’ನಿಂದ ತಾನು ಹಣವನ್ನು ಪಡೆಯುವವರೆಗೆ ಅದನ್ನು ಇಟ್ಟುಕೊಳ್ಳುವ ಉದ್ದೇಶದಿಂದ, ‘ಎ’ನು ‘ಜೆಡ್’ನ ಸಮ್ಮತಿಯಿಲ್ಲದೆ ‘ಜೆಡ್’ನ ಸ್ವಾಧೀನದಿಂದ ತೆಗೆದುಕೊಳ್ಳುತ್ತಾನೆ. ಇಲ್ಲಿ ‘ಎ’ನು ಆ ವಸ್ತುವನ್ನು ಅಪ್ರಾಮಾಣಿಕತೆಯಿಂದ ತೆಗೆದುಕೊಳ್ಳುತ್ತಾನೆ. ಆದ್ದರಿಂದ ‘ಎ’ನು ಕಳವು ಮಾಡಿದನೆಂದಾಗುತ್ತದೆ.

(ಎಂ) ‘ಎ’ ಹಾಗೂ ‘ಜೆಡ್’ ಇಬ್ಬರೂ ಸ್ನೇಹಪರರಾಗಿದ್ದು, ‘ಜೆಡ್’ನು ಇಲ್ಲದಿದ್ದಾಗ ‘ಜೆಡ್’ನ ಗ್ರಂಥಾಲಯಕ್ಕೆ ಹೋಗುತ್ತಾನೆ. ಅಲ್ಲಿಂದ ಒಂದು ಪುಸ್ತಕವನ್ನು ಕೇವಲ ಓದುವ ಮತ್ತು ಅದನ್ನು ಹಿಂದಿರುಗಿಸುವ ಉದ್ದೇಶದಿಂದ ‘ಜೆಡ್’ನ ವ್ಯಕ್ತ ಸಮ್ಮತಿಯಿಲ್ಲದೆಯೆ ತೆಗೆದುಕೊಂಡು ಹೋಗುತ್ತಾನೆ. ಇಲ್ಲಿ ‘ಎ’ನು ‘ಜೆಡ್’ನ ಪುಸ್ತಕವನ್ನು ಉಪಯೋಗಿಸಲು ‘ಜೆಡ್’ನ ಸೂಚಕ ಸಮ್ಮತಿ ಇದೆ ಎಂದು ಊಹಿಸುವುದು ಸಂಭಾವ್ಯ. ಇದು ‘ಎ’ನ ಭಾವನೆಯಾಗಿದ್ದರೆ, ‘ಎ’ನು ಕಳವು ಮಾಡಿಲ್ಲವೆಂದಾಗುತ್ತದೆ.

(ಎನ್) ‘ಎ’ನು ‘ಜೆಡ್’ನ ಹೆಂಡತಿಯಿಂದ ಕೊಡುಗೈ (charity) ನೆರವನ್ನು ಕೇಳುತ್ತಾನೆ. ಅವಳು ‘ಎ’ನಿಗೆ ಹಣ, ಆಹಾರ ಮತ್ತು ಉಡುಪುಗಳನ್ನು ಕೊಡುತ್ತಾಳೆ. ಇದು, ಅವಳ ಗಂಡ ‘ಜೆಡ್’ನವುಗಳೆಂದು ‘ಎ’ನಿಗೆ ಗೊತ್ತಿರುತ್ತದೆ. ಇಲ್ಲಿ ನೆರವನ್ನು ಕೊಡಲು ‘ಜೆಡ್’ನ ಹೆಂಡತಿಗೆ ಅಧಿಕಾರ ಇದೆಯೆಂದು ‘ಎ’ನು ಊಹಿಸಿರುವುದು ಸಂಭವನೀಯ. ಇದು ‘ಎ’ನ ಭಾವನೆಯಾಗಿದ್ದರೆ, ‘ಎ’ನು ಕಳವು ಮಾಡಿಲ್ಲವೆಂದಾಗುತ್ತದೆ.

(ಒ) ‘ಎ’ನು ‘ಜೆಡ್’ನ ಹೆಂಡತಿಯ ಪ್ರಿಯಕರ. ಅವಳು ಅವನಿಗೆ ಬೆಲೆಯುಳ್ಳ ಸ್ವತ್ತನ್ನು ಕೊಡುತ್ತಾಳೆ. ಆ ಸ್ವತ್ತು ಅವಳ ಗಂಡ ‘ಜೆಡ್’ನದೆಂದು ಮತ್ತು ಅದನ್ನು ಕೊಡಲು ಅವಳಿಗೆ ‘ಜೆಡ್’ನು ಅಧಿಕಾರ ಕೊಟ್ಟಿಲ್ಲವೆಂಬುದೂ ‘ಎ’ನಿಗೆ ಗೊತ್ತಿರುತ್ತದೆ. ‘ಎ’ನು ಸ್ವತ್ತನ್ನು ಅಪ್ರಾಮಾಣಿಕತೆಯಿಂದ ತೆಗೆದುಕೊಂಡಿದ್ದರೆ, ‘ಎ’ನು ಕಳವು ಮಾಡಿದನೆಂದಾಗುತ್ತದೆ.

(ಪಿ) ‘ಜೆಡ್’ನಿಗೆ ಸೇರಿರುವ ಸ್ವತ್ತು ತನ್ನ ಸ್ವಂತ ಸ್ವತ್ತೆಂದು ‘ಎ’ನು ಸದ್ಭಾವನೆಯಿಂದ ನಂಬಿ ‘ಬಿ’ನ ಸ್ವಾಧೀನದಿಂದ ಆ ಸ್ವತ್ತನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ‘ಎ’ನು ಮೋಸದಿಂದ ಅದನ್ನು ತೆಗೆದುಕೊಂಡಿಲ್ಲದಿರುವುದರಿಂದ, ಅವನು ಕಳವು ಮಾಡಿಲ್ಲವೆಂದಾಗುತ್ತದೆ.

(2) ಕಳವು ಮಾಡುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು, ಎರಡನೇ ಅಥವಾ ತರುವಾಯದ ಅಪರಾಧ ನಿರ್ಣೀತನಾಗಿದ್ದ ಸಂದರ್ಭದಲ್ಲಿ, ಅವನು ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಕಳುವಾದ ಸ್ವತ್ತಿನ ಮೌಲ್ಯವು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರುವ ಮತ್ತು ಮೊದಲ ಬಾರಿಗೆ ಒಬ್ಬ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದ ಕಳವು ಪ್ರಕರಣಗಳಲ್ಲಿ, ಕಳುವಾದ ಸ್ವತ್ತಿನ ಮೌಲ್ಯವನ್ನು ಹಿಂದಿರುಗಿಸಿದ ಅಥವಾ ಕಳುವಾದ ಸ್ವತ್ತನ್ನು ವಾಪಸ್ಸು ನೀಡಿದ ತರುವಾಯ, ಆತನು ಸಮುದಾಯ ಸೇವೆಯಿಂದ ದಂಡಿತನಾಗತಕ್ಕದ್ದು.

**304. ಕಸಿದುಕೊಳ್ಳುವುದು.-** (1) ಅಪರಾಧಿಯು ಕಳವು ಮಾಡುವಲ್ಲಿ, ಯಾರೇ ವ್ಯಕ್ತಿಯಿಂದ ಅಥವಾ ಅವನ ಸ್ವಾಧೀನದಲ್ಲಿರುವ ಯಾವುದೇ ಚರ ಸ್ವತ್ತನ್ನು ಹಠಾತ್ತನೆ ಅಥವಾ ತ್ವರಿತವಾಗಿ ಅಥವಾ ಬಲವಂತವಾಗಿ ವಶಪಡಿಸಿಕೊಂಡರೆ ಅಥವಾ ಕಸಿದುಕೊಂಡರೆ ಅಥವಾ ದೋಚಿದರೆ ಅಥವಾ ಕಿತ್ತುಕೊಂಡು ಹೋದರೆ, ಅದು ಕಸಿದುಕೊಳ್ಳುವುದು ಕಳವು ಎಂದಾಗುತ್ತದೆ.

(2) ಯಾರೇ ವ್ಯಕ್ತಿಯು ಕಸಿದುಕೊಳ್ಳುವ ಕೃತ್ಯವನ್ನು ಎಸಗಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**305. ವಾಸದ ಮನೆ ಅಥವಾ ಸಾರಿಗೆ ಸಾಧನಗಳ ಅಥವಾ ಪೂಜಾ ಸ್ಥಳ, ಇತ್ಯಾದಿಗಳಲ್ಲಿ ಕಳವು.-** ಯಾರೇ ವ್ಯಕ್ತಿಯು,-

(ಎ) ಮನುಷ್ಯನ ವಾಸಕ್ಕಾಗಿ ಬಳಸುವ ಅಥವಾ ಸ್ವತ್ತಿನ ಅಭಿರಕ್ಷೆಗಾಗಿ ಬಳಸುವ ಯಾವುದೇ ಕಟ್ಟಡದಲ್ಲಿ, ಡೇರೆಯಲ್ಲಿ ಅಥವಾ ಹಡಗಿನಲ್ಲಿ ಕಳವು ಮಾಡಿದರೆ; ಅಥವಾ

(ಬಿ) ಸರಕು ಅಥವಾ ಪ್ರಯಾಣಿಕರ ಸಾಗಾಣಿಕೆಗೆ ಬಳಸುವ ಯಾವುದೇ ಸಾರಿಗೆ ಸಾಧನಗಳಲ್ಲಿ ಕಳವು ಮಾಡಿದರೆ; ಅಥವಾ

(ಸಿ) ಸರಕು ಅಥವಾ ಪ್ರಯಾಣಿಕರ ಸಾಗಾಣಿಕೆಗೆ ಬಳಸುವ ಯಾವುದೇ ಸಾರಿಗೆ ಸಾಧನಗಳಿಂದ ಯಾವುದೇ ವಸ್ತು ಅಥವಾ ಸರಕುಗಳನ್ನು ಕಳವು ಮಾಡಿದರೆ; ಅಥವಾ

(ಡಿ) ಯಾವುದೇ ಪೂಜಾ ಸ್ಥಳದಲ್ಲಿನ ವಿಗ್ರಹ ಅಥವಾ ಮೂರ್ತಿಯನ್ನು ಕಳವು ಮಾಡಿದರೆ; ಅಥವಾ

(ಇ) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಯಾವುದೇ ಸ್ವತ್ತನ್ನು ಕಳವು ಮಾಡಿದರೆ

- ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**306. ಗುಮಾಸ್ತ ಅಥವಾ ಸೇವಕನಿಂದ ಯಜಮಾನನ ಸ್ವಾಧೀನದಲ್ಲಿರುವ ಸ್ವತ್ತಿನ ಕಳವು.-** ಗುಮಾಸ್ತನಾಗಿದ್ದು ಅಥವಾ ಸೇವಕನಾಗಿದ್ದು ಅಥವಾ ಗುಮಾಸ್ತನೆಂದು ಅಥವಾ ಸೇವಕನೆಂದು ನಿಯೋಜಿತನಾಗಿದ್ದು, ತನ್ನ ಯಜಮಾನನ ಅಥವಾ ನಿಯೋಜಕನ ಸ್ವಾಧೀನದಲ್ಲಿರುವ ಯಾವುದೇ ಸ್ವತ್ತನ್ನು ಕಳವು ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**307. ಕಳವು ಮಾಡುವುದಕ್ಕಾಗಿ ಮರಣ, ಗಾಯ ಅಥವಾ ಪ್ರತಿಬಂಧಿಸಲು ಸಿದ್ಧತೆಗಳನ್ನು ಮಾಡಿಕೊಂಡ ತರುವಾಯ ಕಳವು.-** ಕಳವು ಮಾಡುವುದಕ್ಕಾಗಿ ಅಥವಾ ಅಂಥ ಕಳವನ್ನು ಮಾಡಿದ ಅನಂತರ ತಾನು ತಪ್ಪಿಸಿಕೊಂಡು ಹೋಗಲು ಅನುಕೂಲವಾಗುವಂತೆ ಅಥವಾ ಅಂಥ ಕಳವಿನಿಂದ ಪಡೆದ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕಾಗಿ ಯಾರೇ ವ್ಯಕ್ತಿಗೆ ಮರಣವನ್ನು ಅಥವಾ ಗಾಯವನ್ನು ಅಥವಾ ಪ್ರತಿಬಂಧವನ್ನು ಉಂಟು ಮಾಡುವುದಕ್ಕಾಗಿ ಅಥವಾ ಮರಣದ ಅಥವಾ ಗಾಯದ ಅಥವಾ ಪ್ರತಿಬಂಧದ ಭಯವನ್ನು ಉಂಟು ಮಾಡುವುದಕ್ಕಾಗಿ ಸಿದ್ಧತೆಯನ್ನು ಮಾಡಿಕೊಂಡು ಕಳವು ಮಾಡುವ ಯಾರೇ ವ್ಯಕ್ತಿಯು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

## *ದೃಷ್ಟಾಂತಗಳು*

(ಎ) 'ಎ'ನು 'ಜೆಡ್'ನ ಸ್ವಾಧೀನದಲ್ಲಿರುವ ಸ್ವತ್ತನ್ನು ಕಳವು ಮಾಡುತ್ತಾನೆ. ಕಳವು ಮಾಡುವಾಗ, ಅವನ ಉಡುಪಿನಲ್ಲಿ ಗುಂಡು ತುಂಬಿದ ಪಿಸ್ತೂಲು ಇರುತ್ತದೆ. 'ಜೆಡ್'ನು ಪ್ರತಿಭಟಿಸಲೇನಾದರೂ ಬಂದಾಗ 'ಜೆಡ್'ನನ್ನು ಗಾಯಗೊಳಿಸುವ ಉದ್ದೇಶಕ್ಕಾಗಿ ಈ ಪಿಸ್ತೂಲು ಇರುತ್ತದೆ. ಆದ್ದರಿಂದ, 'ಎ'ನು ಈ ಪ್ರಕರಣದಲ್ಲಿ ವಿವರಿಸಿರುವ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಎ'ನು 'ಜೆಡ್'ನ ಜೇಬಿನಿಂದ ಕದಿಯುತ್ತಾನೆ. ಹಾಗೆ ಮಾಡುವುದಕ್ಕೂ ಮುಂಚೆ, ಏನು ನಡೆಯುತ್ತಿದೆಯೆಂಬುದನ್ನು 'ಜೆಡ್'ನು ನೋಡಿ ಅದನ್ನು ಪ್ರತಿಭಟಿಸಿದರೆ ಅಥವಾ 'ಎ'ನನ್ನು ಹಿಡಿಯಲು ಪ್ರಯತ್ನಿಸಿದರೆ, ಅವನನ್ನು ಪ್ರತಿರೋಧಿಸುವುದಕ್ಕಾಗಿ 'ಎ'ನು ತನ್ನ

ಅನೇಕ ಸಂಗಡಿಗರನ್ನು ಜೆಡ್‌ನ ಸುತ್ತ ನಿಲ್ಲಿಸುತ್ತಾನೆ. ಆದ್ದರಿಂದ ಏನು ಈ ಪ್ರಕರಣದಲ್ಲಿ ಪರಿಭಾಷಿಸಲಾದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

***ಬಲಾದ್ಗ್ರಹಣದ ಕುರಿತು***

**308. ಬಲಾದ್ಗ್ರಹಣ.-** (1) ಯಾರೇ ಒಬ್ಬ ವ್ಯಕ್ತಿಯು, ಯಾರೇ ವ್ಯಕ್ತಿಗೆ ಅಥವಾ ಇತರ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ಯಾವುದೇ ಕ್ಷತಿಯನ್ನುಂಟು ಮಾಡುವನೆಂದು ಭಯವನ್ನು ಉಂಟುಮಾಡಿ, ಆ ಮೂಲಕ ಹಾಗೆ ಭಯಕ್ಕೊಳಗಾದ ವ್ಯಕ್ತಿಯು, ಯಾರೇ ವ್ಯಕ್ತಿಗೆ ಯಾವುದೇ ಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತಾಪತ್ರವನ್ನು ಅಥವಾ ಬೆಲೆಯುಳ್ಳ ಭದ್ರತಾಪತ್ರವನ್ನಾಗಿ ಪರಿವರ್ತಿಸಬಹುದಾದ, ಸಹಿ ಮಾಡಿದ ಅಥವಾ ಮೊಹರು ಮಾಡಿದ ಯಾವುದೇ ವಸ್ತುವನ್ನು ಕೊಡಲು ಅಪ್ರಾಮಾಣಿಕತೆಯಿಂದ ಪ್ರೇರೇಪಿಸಿದರೆ ಆ ಯಾರೇ ವ್ಯಕ್ತಿಯು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

*ದೃಷ್ಟಾಂತಗಳು*

(ಎ) ಜೆಡ್‌ನು ಹಣ ಕೊಡದಿದ್ದರೆ ತಾನು, ಜೆಡ್‌ನಿಗೆ ಸಂಬಂಧಿಸಿದಂತೆ ಮಾನಹಾನಿಕರ ಲೇಖನವನ್ನು ಪ್ರಕಟಿಸುವುದಾಗಿ ಏನು ಹೆದರಿಸುತ್ತಾನೆ. ಹೀಗೆ ಅವನು ತನಗೆ ಹಣ ಕೊಡುವಂತೆ ಜೆಡ್‌ನನ್ನು ಪ್ರೇರೇಪಿಸುತ್ತಾನೆ. ಇಲ್ಲಿ ಏನು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

(ಬಿ) ಏನಿಗೆ ನಿರ್ದಿಷ್ಟ ಮೊತ್ತದ ಹಣವನ್ನು ಸಂದಾಯ ಮಾಡಲು ಜೆಡ್‌ನನ್ನು ಕಟ್ಟು ಬೀಳಿಸುವ ಪ್ರಾಮಿಸರಿ ನೋಟನ್ನು ಜೆಡ್‌ನು ಸಹಿ ಮಾಡಿ ಏನಿಗೆ ಕೊಟ್ಟ ಹೊರತು ಜೆಡ್‌ನ ಮಗುವನ್ನು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳುವುದಾಗಿ ಏನು ಜೆಡ್‌ನನ್ನು ಹೆದರಿಸುತ್ತಾನೆ. ಜೆಡ್‌ನು ಆ ಪ್ರಾಮಿಸರಿ ನೋಟಿಗೆ ಸಹಿ ಮಾಡಿ ಕೊಡುತ್ತಾನೆ. ಹೀಗಾಗಿ ಏನು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

(ಸಿ) ಬಿನಿಗೆ ನಿರ್ದಿಷ್ಟ ಪ್ರಮಾಣದ ಉತ್ಪನ್ನವನ್ನು ಕೊಡುವುದಾಗಿ ಮತ್ತು ಹಾಗೆ ಕೊಡದಿದ್ದರೆ ದಂಡ ಸಹಿತ ಕೊಡುವುದಾಗಿ ಕಟ್ಟು ಬೀಳಿಸಿರುವ ಬಂಧಪತ್ರವನ್ನು ಸಹಿ ಮಾಡಿ ತನಗೆ ಕೊಟ್ಟ ಹೊರತು, ಜೆಡ್‌ನ ಹೊಲವನ್ನು ಉಳುಮೆ ಮಾಡಲು ಕೆಲವು ದೊಣ್ಣೆಯಾಳುಗಳನ್ನು ಕಳುಹಿಸುವುದಾಗಿ ಏನು ಬಿಗೆ ಹೆದರಿಸುತ್ತಾನೆ ಮತ್ತು ಆ ಮೂಲಕ ಬಂಧಪತ್ರವನ್ನು ಸಹಿ ಮಾಡಿಕೊಡುವಂತೆ ಜೆಡ್‌ನನ್ನು ಪ್ರೇರೇಪಿಸುತ್ತಾನೆ. ಇಲ್ಲಿ ಏನು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

(ಡಿ) ಏನು ಬಿನಿಗೆ ತೀವ್ರ ಗಾಯವನ್ನುಂಟು ಮಾಡುವುದಾಗಿ ಬೆದರಿಕೆ ಹಾಕಿ ಖಾಲಿ ಕಾಗದಕ್ಕೆ ಸಹಿ ಮಾಡಿ ಅಥವಾ ಅದಕ್ಕೆ ತನ್ನ ಮೊಹರನ್ನು ಹಾಕಿ ಅದನ್ನು ತನಗೆ ಕೊಡಬೇಕೆಂದು ಏನು ಜೆಡ್‌ನನ್ನು ಅಪ್ರಾಮಾಣಿಕತೆಯಿಂದ ಪ್ರೇರೇಪಿಸುತ್ತಾನೆ. ಜೆಡ್‌ನು ಕಾಗದಕ್ಕೆ ಸಹಿ ಮಾಡಿ ಏನಿಗೆ ಕೊಡುತ್ತಾನೆ. ಇಲ್ಲಿ ಹಾಗೆ ಸಹಿ ಮಾಡಿದ ಕಾಗದವನ್ನು ಬೆಲೆಯುಳ್ಳ ಭದ್ರತಾಪತ್ರವನ್ನಾಗಿ ಪರಿವರ್ತಿಸಬಹುದಾಗಿರುವುದರಿಂದ ಏನು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

(ಇ) 'ಏನು 'ಜೆಡ್'ನಿಗೆ ವಿದ್ಯುನ್ಮಾನ ಸಾಧನದ ಮೂಲಕ ಸಂದೇಶ ಕಳುಹಿಸಿ ï"ನಿನ್ನ ಮಗು ನನ್ನ ವಶದಲ್ಲಿದೆ, ನೀನು ಒಂದು ಲಕ್ಷ ರೂಪಾಯಿಯನ್ನು ಕೊಡದಿದ್ದರೆ ನಿನ್ನ ಮಗುವನ್ನು ಕೊಲ್ಲುತ್ತೇನೆ" ಎಂದು ಬೆದರಿಕೆ ಒಡ್ಡುತ್ತಾನೆ. ಹಾಗಾಗಿ ಏನು ತನಗೆ ಹಣ ನೀಡುವಂತೆ 'ಜೆಡ್'ಗೆ ಪ್ರೇರೇಪಿಸಿದಂತಾಗುತ್ತದೆ. ಇಲ್ಲಿ ಏನು ಬಲಾದ್ಗ್ರಹಣ ಮಾಡಿದ್ದಾನೆಂದಾಗುತ್ತದೆ.

(2) ಬಲಾದ್ಗ್ರಹಣ ಮಾಡುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಬಲಾದ್ಗ್ರಹಣ ಮಾಡುವ ಸಲುವಾಗಿ ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡುವುದಾಗಿ ಆ ವ್ಯಕ್ತಿಯನ್ನು ಭಯಪಡಿಸುವ ಅಥವಾ ಯಾರೇ ವ್ಯಕ್ತಿಯನ್ನು ಕ್ಷತಿಯುಂಟು ಮಾಡುವುದಾಗಿ ಆ ವ್ಯಕ್ತಿಯನ್ನು ಭಯಪಡಿಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಬಲಾದ್ಗ್ರಹಣ ಮಾಡುವುದಕ್ಕಾಗಿ ವ್ಯಕ್ತಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡುವುದಾಗಿ ಆ ವ್ಯಕ್ತಿಯನ್ನು ಭಯಪಡಿಸುವ ಅಥವಾ ಭಯಪಡಿಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಯಾರೇ ಒಬ್ಬ ವ್ಯಕ್ತಿಯು, ಯಾರೇ ವ್ಯಕ್ತಿಗೆ ಅಥವಾ ಇತರ ಯಾರೇ ವ್ಯಕ್ತಿಗೆ, ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡುವುದಾಗಿ ಭಯಪಡಿಸುವ ಮೂಲಕ ಬಲಾದ್ಗ್ರಹಣ ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಬಲಾದ್ಗ್ರಹಣ ಮಾಡುವ ಸಲುವಾಗಿ, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಯಾವುದೇ ಅಪರಾಧವನ್ನು ಮಾಡಿರುವನೆಂದು ಅಥವಾ ಮಾಡಲು ಪ್ರಯತ್ನಿಸಿರುವನೆಂದು ಆ ಯಾರೇ ವ್ಯಕ್ತಿಯ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಆಪಾದನೆ ಮಾಡುವುದಾಗಿ ಭಯಪಡಿಸುವ ಅಥವಾ ಭಯಪಡಿಸಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(7) ಬಲಾದ್ಗ್ರಹಣ ಮಾಡುವ ಸಲುವಾಗಿ, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಯಾವುದೇ ಅಪರಾಧವನ್ನು ಮಾಡಿರುವನೆಂದು ಅಥವಾ ಮಾಡಲು ಪ್ರಯತ್ನಿಸಿದನೆಂದು ಅಥವಾ ಅಂಥ ಅಪರಾಧವನ್ನು ಮಾಡಲು ಇತರ ಯಾರೇ ವ್ಯಕ್ತಿಗೆ ಪ್ರೇರೇಪಣೆ ನೀಡಲು ಪ್ರಯತ್ನಿಸಿದನೆಂದು, ಆ ಯಾರೇ ವ್ಯಕ್ತಿಯ ವಿರುದ್ಧ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಆಪಾದನೆ ಮಾಡುವುದಾಗಿ ಭಯಪಡಿಸುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

***ಸುಲಿಗೆ ಮತ್ತು ದರೋಡೆ***

**309. ಸುಲಿಗೆ.-** (1) ಎಲ್ಲ ಸುಲಿಗೆಯಲ್ಲೂ ಕಳವು ಅಥವಾ ಬಲಾದ್ಗ್ರಹಣ ಇದ್ದೇ ಇರುತ್ತದೆ.

(2) ಕಳವು ಮಾಡುವುದಕ್ಕಾಗಿ ಅಥವಾ ಕಳವು ಮಾಡುವಾಗ ಅಥವಾ ಕಳವು ಮಾಡಿ ತೆಗೆದುಕೊಂಡ ಸ್ವತ್ತನ್ನು ಒಯ್ಯುವಾಗ ಅಥವಾ ಒಯ್ಯಲು ಪ್ರಯತ್ನಿಸುವಾಗ, ಅಪರಾಧಿಯು, ಆ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಗೆ ಮರಣವನ್ನು ಅಥವಾ ಗಾಯವನ್ನು ಉಂಟುಮಾಡಿದರೆ ಅಥವಾ ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಪ್ರತಿಬಂಧಿಸಿದರೆ ಅಥವಾ ತತ್‌ಕ್ಷಣ ಮರಣದ ಅಥವಾ ತತ್‌ಕ್ಷಣ ಗಾಯದ ಅಥವಾ ತತ್‌ಕ್ಷಣ ಅಕ್ರಮವಾಗಿ ಪ್ರತಿಬಂಧಿಸುವ ಭಯವನ್ನು ಸ್ವಯಿಚ್ಛೆಯಿಂದ ಉಂಟು ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅಂಥ ಕಳವು ಸುಲಿಗೆಯೆಂದಾಗುತ್ತದೆ.

(3) ಬಲಾದ್ಗ್ರಹಣ ಮಾಡುವ ಸಮಯದಲ್ಲಿ ಅಪರಾಧಿಯು ಭಯಕ್ಕೊಳಗಾದ ವ್ಯಕ್ತಿಯ ಸಮ್ಮುಖದಲ್ಲಿರುವಾಗ, ಆ ವ್ಯಕ್ತಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ತತ್‌ಕ್ಷಣ ಮರಣದ ಅಥವಾ ತತ್‌ಕ್ಷಣ ಗಾಯದ ಅಥವಾ ತತ್‌ಕ್ಷಣ ಅಕ್ರಮವಾಗಿ ಪ್ರತಿಬಂಧಿಸುವ ಭಯವನ್ನು ಉಂಟುಮಾಡಿದರೆ ಮತ್ತು ಹಾಗೆ ಭಯಪಡಿಸಿ ಯಾವ ವಸ್ತುವನ್ನು ಬಲಾದ್ಗ್ರಹಣದಿಂದ ಕೊಡುವಂತೆ ಮಾಡಲಾಯಿತೋ, ಆ ವಸ್ತುವನ್ನು ಅಂಥ ಭಯಕ್ಕೊಳಗಾದ ವ್ಯಕ್ತಿಯು ಆಗಲೇ ಮತ್ತು ಅಲ್ಲಿಯೇ ಕೊಟ್ಟುಬಿಡುವಂತೆ ಭಯಕ್ಕೊಳಗಾದ ಆ ವ್ಯಕ್ತಿಗೆ ಪ್ರೇರೇಪಣೆ ಮಾಡಿದರೆ, ಹಾಗೆ ಬಲಾದ್ಗ್ರಹಣ ಮಾಡಿರುವುದು ಸುಲಿಗೆಯೆನಿಸುತ್ತದೆ.

*ವಿವರಣೆ.-* ಅಪರಾಧಿಯು, ಇತರ ವ್ಯಕ್ತಿಗೆ ತತ್‌ಕ್ಷಣ ಮರಣದ ಅಥವಾ ತತ್‌ಕ್ಷಣ ಗಾಯದ ಅಥವಾ ತತ್‌ಕ್ಷಣ ಅಕ್ರಮವಾಗಿ ಪ್ರತಿಬಂಧಿಸುವ ಭಯವನ್ನುಂಟು ಮಾಡುವಷ್ಟು ಸಮೀಪವಿದ್ದರೆ ಅಪರಾಧಿಯು ಸಾಕಷ್ಟು ಸಮೀಪದಲ್ಲಿದ್ದನೆಂದು ಹೇಳಲಾಗುತ್ತದೆ.

## ದೃಷ್ಟಾಂತಗಳು

(ಎ) ಟಿಎನು ಜೆಡ್‌ನನ್ನು ಕೆಳಗೆ ಕೆಡವುತ್ತಾನೆ ಮತ್ತು ಜೆಡ್‌ನ ಸಮ್ಮತಿಯಿಲ್ಲದೆಯೇ ಜೆಡ್‌ನ ಹಣವನ್ನು ಮತ್ತು ಅಭರಣಗಳನ್ನು ಮೋಸದಿಂದ ತೆಗೆದುಕೊಳ್ಳುತ್ತಾನೆ. ಇಲ್ಲಿ 'ಎನು ಕಳವು ಮಾಡಿದ್ದಾನೆಂದಾಗುತ್ತದೆ ಮತ್ತು ಹಾಗೆ ಕಳವು ಮಾಡುವುದಕ್ಕಾಗಿ ಜೆಡ್‌ನನ್ನು ಸ್ವಯಿಚ್ಛೆಯಿಂದ ಅಕ್ರಮವಾಗಿ ಪ್ರತಿಬಂಧಿಸುತ್ತಾನೆ. ಹೀಗಾಗಿ ಟಿಎನು ಸುಲಿಗೆ ಮಾಡಿದ್ದಾನೆಂದಾಗುತ್ತದೆ.

(ಬಿ) ಟಿಎನು ಜೆಡ್‌ನನ್ನು ಹೆದ್ದಾರಿಯಲ್ಲಿ ಸಂಧಿಸಿ ಪಿಸ್ತೂಲು ತೋರಿಸುತ್ತಾನೆ ಮತ್ತು ಜೆಡ್‌ನ ಹಣದ ಚೀಲವನ್ನು ಕೇಳುತ್ತಾನೆ. ಪರಿಣಾಮವಾಗಿ ಜೆಡ್‌ನು ತನ್ನ ಹಣದ ಚೀಲವನ್ನು ಒಪ್ಪಿಸುತ್ತಾನೆ. ಇಲ್ಲಿ ಟಿಎನು ಜೆಡ್‌ನಿಗೆ ತತ್‌ಕ್ಷಣ ಗಾಯಗೊಳಿಸುವ ಭಯವನ್ನುಂಟುಮಾಡಿ ಮತ್ತು ಬಲಾದ್ಗ್ರಹಣ ಮಾಡುವ ಸಮಯದಲ್ಲಿ ಅವನ ಸಮ್ಮುಖದಲ್ಲೇ ಇದ್ದು ಅವನಿಂದ ಹಣದ ಚೀಲವನ್ನು ಬಲಾದ್ಗ್ರಹಣದಿಂದ ತೆಗೆದುಕೊಂಡಿದ್ದಾನೆ. ಹೀಗಾಗಿ ಟಿಎನು ಸುಲಿಗೆ ಮಾಡಿದ್ದಾನೆಂದಾಗುತ್ತದೆ.

(ಸಿ) ಟಿಎನು ಜೆಡ್‌ನನ್ನು ಮತ್ತು ಜೆಡ್‌ನ ಮಗುವನ್ನು ಹೆದ್ದಾರಿಯಲ್ಲಿ ಸಂಧಿಸುತ್ತಾನೆ. ಟಿಎನು ಮಗುವನ್ನು ಎತ್ತಿಕೊಳ್ಳುತ್ತಾನೆ. ಜೆಡ್‌ನು ಅವನ ಹಣದ ಚೀಲವನ್ನು ಕೊಡದಿದ್ದರೆ ಮಗುವನ್ನು ಪ್ರಪಾತಕ್ಕೆ ಎಸೆದುಬಿಡುವುದಾಗಿ ಹೆದರಿಸುತ್ತಾನೆ. ಪರಿಣಾಮವಾಗಿ ಜೆಡ್‌ನು ತನ್ನ ಹಣದ ಚೀಲವನ್ನು ಕೊಡುತ್ತಾನೆ. ಇಲ್ಲಿ ಟಿಎನು ಅಲ್ಲಿರುವ ಜೆಡ್‌ನ ಮಗುವಿಗೆ ತತ್‌ಕ್ಷಣ ಗಾಯವನ್ನುಂಟು ಮಾಡುವುದಾಗಿ ಜೆಡ್‌ನಿಗೆ ಭಯಪಡಿಸಿ ಜೆಡ್‌ನಿಂದ ಹಣದ ಚೀಲವನ್ನು ಬಲಾದ್ಗ್ರಹಣ ಮಾಡುತ್ತಾನೆ. ಹೀಗಾಗಿ ಟಿಎನು ಜೆಡ್‌ನನ್ನು ಸುಲಿಗೆ ಮಾಡಿದ್ದಾನೆಂದಾಗುತ್ತದೆ.

(ಡಿ) "ನಿನ್ನ ಮಗು ನನ್ನ ಗುಂಪಿನವರ ಕೈಯಲ್ಲಿದೆ, ನೀನು ನಮಗೆ ಹತ್ತು ಸಾವಿರ ರೂಪಾಯಿ ಕಳುಹಿಸಿ ಕೊಡದಿದ್ದರೆ, ಅದನ್ನು ಕೊಲ್ಲುತ್ತೇವೆ" ಎಂದು ಹೇಳಿ ಟಿಎನು ಜೆಡ್‌ನಿಂದ ಸ್ವತ್ತನ್ನು ಪಡೆಯುತ್ತಾನೆ. ಇದು ಬಲಾದ್ಗ್ರಹಣ ಮಾಡಿದಂತಾಗುತ್ತದೆ. ಆ ಪ್ರಕಾರ ದಂಡನೀಯವಾಗುತ್ತದೆ. ಆದರೆ, 'ಎನು ಮಗುವಿಗೆ ತತ್‌ಕ್ಷಣ ಮರಣವನ್ನುಂಟು ಮಾಡುವುದಾಗಿ ಜೆಡ್‌ನನ್ನು ಭಯಪಡಿಸಿದ್ದ ಹೊರತು ಅದು ಸುಲಿಗೆಯೆನಿಸುವುದಿಲ್ಲ.

(4) ಸುಲಿಗೆಯನ್ನು ಮಾಡುವ ಯಾರೇ ವ್ಯಕ್ತಿಯು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು; ಮತ್ತು ಸೂರ್ಯಾಸ್ತ ಮತ್ತು ಸೂರ್ಯೋದಯದ ಮಧ್ಯೆ ಹೆದ್ದಾರಿಯಲ್ಲಿ ಸುಲಿಗೆ ನಡೆದಿದ್ದರೆ ಆ ಕಾರಾವಾಸವನ್ನು ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದು.

(5) ಸುಲಿಗೆ ಮಾಡಲು ಪ್ರಯತ್ನಿಸುವ ಯಾರೇ ವ್ಯಕ್ತಿಯು, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಸುಲಿಗೆ ಮಾಡುವಾಗ ಅಥವಾ ಮಾಡಲು ಪ್ರಯತ್ನಿಸುವಾಗ ಯಾರೇ ವ್ಯಕ್ತಿಯು ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದರೆ ಅಂಥ ವ್ಯಕ್ತಿಯು ಮತ್ತು ಅಂಥ ಸುಲಿಗೆಯನ್ನು ಮಾಡುವಾಗ ಅಥವಾ ಮಾಡಲು ಪ್ರಯತ್ನಿಸುವಾಗ ಅವನ ಜೊತೆಗೂಡಿದ ಸಂಬಂಧಪಟ್ಟ ಇತರ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**310. ದರೋಡೆ.-** (1) ಐದು ಅಥವಾ ಹೆಚ್ಚು ಜನರು ಒಟ್ಟುಗೂಡಿ ಸುಲಿಗೆ ಮಾಡಿದಾಗ ಅಥವಾ ಮಾಡಲು ಪ್ರಯತ್ನಿಸಿದಾಗ ಅಥವಾ ಸುಲಿಗೆಯನ್ನು ಮಾಡುವ ಅಥವಾ ಮಾಡಲು ಪ್ರಯತ್ನಿಸುವ ವ್ಯಕ್ತಿಗಳ ಮತ್ತು ಅಂಥ ಸುಲಿಗೆಯನ್ನು ಮಾಡುವಾಗ ಅಥವಾ ಮಾಡಲು ಪ್ರಯತ್ನಿಸುವಾಗ ಹಾಜರಿದ್ದು, ಅದಕ್ಕೆ ಸಹಾಯ ಮಾಡುವ ವ್ಯಕ್ತಿಗಳ ಒಟ್ಟು ಸಂಖ್ಯೆಯು ಐದಾಗಿದ್ದರೆ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ, ಹಾಗೆ ಮಾಡುವ, ಮಾಡಲು ಪ್ರಯತ್ನಿಸುವ ಅಥವಾ ಸಹಾಯ ಮಾಡುವ ಪ್ರತಿಯೊಬ್ಬ ವ್ಯಕ್ತಿಯು "ದರೋಡೆ" ಮಾಡಿದನೆಂದು ಹೇಳಲಾಗುತ್ತದೆ.

(2) ದರೋಡೆಯನ್ನು ಮಾಡುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಒಟ್ಟುಗೂಡಿ ದರೋಡೆ ಮಾಡುವ ಐದು ಜನರಲ್ಲಿ ಅಥವಾ ಹೆಚ್ಚು ಜನರಲ್ಲಿ ಯಾರಾದರೊಬ್ಬರು ಹಾಗೆ ದರೋಡೆ ಮಾಡುವಾಗ ಕೊಲೆ ಮಾಡಿದರೆ, ಅವರಲ್ಲಿ ಪ್ರತಿಯೊಬ್ಬನು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಯಾರೇ ವ್ಯಕ್ತಿಯು ದರೋಡೆ ಮಾಡುವುದಕ್ಕಾಗಿ ಯಾವುದೇ ಸಿದ್ಧತೆಯನ್ನು ಮಾಡಿಕೊಂಡಿದ್ದರೆ ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಯಾರೇ ವ್ಯಕ್ತಿಯು ದರೋಡೆ ಮಾಡುವ ಉದ್ದೇಶಕ್ಕಾಗಿ ಐದು ಅಥವಾ ಹೆಚ್ಚು ವ್ಯಕ್ತಿಗಳಲ್ಲಿ ಒಬ್ಬನಾಗಿದ್ದರೆ ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಯಾರೇ ವ್ಯಕ್ತಿಯು ರೂಢಿಗತವಾಗಿ ದರೋಡೆ ಮಾಡುವ ಉದ್ದೇಶಕ್ಕಾಗಿ ಜೊತೆಗೂಡಿದ ವ್ಯಕ್ತಿಗಳ ಗುಂಪಿಗೆ ಸೇರಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**311. ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡಲು ಪ್ರಯತ್ನಿಸಿ ಸುಲಿಗೆ ಅಥವಾ ದರೋಡೆ ಮಾಡುವುದು.-** ಸುಲಿಗೆ ಅಥವಾ ದರೋಡೆ ಮಾಡುವ ಸಮಯದಲ್ಲಿ ಅಪರಾಧಿಯು ಮಾರಕ ಆಯುಧವನ್ನು ಬಳಸಿದರೆ ಅಥವಾ ಯಾರೇ ವ್ಯಕ್ತಿಗೆ ತೀವ್ರ ಗಾಯವನ್ನುಂಟು ಮಾಡಿದರೆ ಅಥವಾ ಯಾರೇ ವ್ಯಕ್ತಿಗೆ ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡಲು ಪ್ರಯತ್ನಿಸಿದರೆ, ಅವನಿಗೆ ದಂಡನೀಯ ಕಾರಾವಾಸವು ಏಳು ವರ್ಷಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

**312. ಮಾರಕ ಆಯುಧದಿಂದ ಸಜ್ಜಿತನಾಗಿರುವಾಗ ಸುಲಿಗೆ ಅಥವಾ ದರೋಡೆ ಮಾಡಲು ಪ್ರಯತ್ನಿಸುವುದು.-** ಸುಲಿಗೆ ಅಥವಾ ದರೋಡೆ ಮಾಡಲು ಪ್ರಯತ್ನಿಸುವ ಸಮಯದಲ್ಲಿ ಅಪರಾಧಿಯು ಯಾವುದೇ ಮಾರಕ ಆಯುಧದಿಂದ ಸಜ್ಜಿತನಾಗಿದ್ದರೆ, ಅವನಿಗೆ ದಂಡನೀಯ ಕಾರಾವಾಸವು ಏಳು ವರ್ಷಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

**313. ಸುಲಿಗೆಕೋರರ ಗುಂಪಿಗೆ ಸೇರಿರುವುದಕ್ಕಾಗಿ ದಂಡನೆ.- ಯಾರೇ** ವ್ಯಕ್ತಿಯು, ರೂಢಿಗತವಾಗಿ ಕಳವು ಅಥವಾ ಸುಲಿಗೆ ಮಾಡುವ ಉದ್ದೇಶಕ್ಕಾಗಿ ದರೋಡೆಕೋರರ ಗುಂಪಲ್ಲದ, ಇತರ ಯಾರೇ ವ್ಯಕ್ತಿಗಳ ಗುಂಪಿಗೆ ಸೇರಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

### *ಸ್ವತ್ತಿನ ಆಪರಾಧಿಕ ದುರ್ವಿನಿಯೋಗ*

**314. ಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗ.-** ಯಾರೇ ವ್ಯಕ್ತಿಯು ಯಾವುದೇ ಚರ ಸ್ವತ್ತನ್ನು ಅಪ್ರಾಮಾಣಿಕವಾಗಿ ಅಥವಾ ತನ್ನ ಸ್ವಂತ ಉಪಯೋಗಕ್ಕೆ ದುರ್ವಿನಿಯೋಗ ಮಾಡಿಕೊಂಡರೆ, ಅವನು ಆರು ತಿಂಗಳಿಗೆ ಕಡಿಮೆಯಿಲ್ಲದ ಆದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) ‘ಎ’ನು ‘ಜೆಡ್’ನಿಗೆ ಸೇರಿದ ಸ್ವತ್ತನ್ನು ತೆಗೆದುಕೊಳ್ಳುವ ಸಮಯದಲ್ಲಿ ಅದು ತನಗೆ ಸೇರಿದ ಸ್ವತ್ತೆಂದು ಸದ್ಭಾವನೆಯಿಂದ ನಂಬಿ ‘ಜೆಡ್’ನ ಸ್ವಾಧೀನದಿಂದ ಅದನ್ನು ತೆಗೆದುಕೊಳ್ಳುತ್ತಾನೆ. ‘ಎ’ನು ಕಳವಿನ ತಪ್ಪಿತಸ್ಥನಲ್ಲ; ಆದರೆ ‘ಎ’ನು ತನ್ನ ತಪ್ಪನ್ನು ತಿಳಿದ ಅನಂತರವೂ, ಆ ಸ್ವತ್ತನ್ನು ತನ್ನ ಸ್ವಂತ ಬಳಕೆಗೆ ಅಪ್ರಾಮಾಣಿಕವಾಗಿ ದುರ್ವಿನಿಯೋಗಪಡಿಸಿಕೊಂಡರೆ, ಅವನು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನಾಗುತ್ತಾನೆ.

(ಬಿ) ‘ಎ’ನು ‘ಜೆಡ್’ನೊಡನೆ ಸ್ನೇಹದಿಂದಿದ್ದು, ‘ಜೆಡ್’ನ ಗ್ರಂಥಾಲಯಕ್ಕೆ ಅವನಿಲ್ಲದಿರುವಾಗ ಹೋಗಿ ‘ಜೆಡ್’ನ ವ್ಯಕ್ತ ಸಮ್ಮತಿಯಿಲ್ಲದೆಯೆ ಪುಸ್ತಕವನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ಆ ಪುಸ್ತಕವನ್ನು ಓದುವ ಉದ್ದೇಶಕ್ಕಾಗಿ ತೆಗೆದುಕೊಳ್ಳಲು ‘ಜೆಡ್’ನ ಸೂಚ್ಯ ಸಮ್ಮತಿ ಇತ್ತೆಂದು ‘ಎ’ನ ಭಾವನೆಯಾಗಿದ್ದರೆ, ‘ಎ’ನು ಕಳವು ಮಾಡಿದನೆಂದಾಗುವುದಿಲ್ಲ. ಆದರೆ, ‘ಎ’ನು ಆ ತರುವಾಯ ಪುಸ್ತಕವನ್ನು ತನ್ನ ಸ್ವಂತ ಪ್ರಯೋಜನಕ್ಕಾಗಿ ಮಾರಾಟ ಮಾಡಿಕೊಂಡರೆ ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗುತ್ತಾನೆ.

(ಸಿ) ‘ಎ’ ಮತ್ತು ‘ಬಿ’ ಒಂದು ಕುದುರೆಯ ಜಂಟಿ ಮಾಲೀಕರಾಗಿದ್ದು, ಅದನ್ನು ಬಳಸುವ ಉದ್ದೇಶದಿಂದ ‘ಎ’ನು ‘ಬಿ’ಯ ಸ್ವಾಧೀನದಿಂದ ಆ ಕುದುರೆಯನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ‘ಎ’ನಿಗೆ ಆ ಕುದುರೆಯನ್ನು ಬಳಸುವ ಅಧಿಕಾರವಿರುವುದರಿಂದ ಅವನು ಅದನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗ ಮಾಡಿಕೊಳ್ಳುವಂತಿಲ್ಲ. ಆದರೆ ‘ಎ’ನು ಆ ಕುದುರೆಯನ್ನು ಮಾರಾಟ ಮಾಡಿದರೆ, ಅದರ ಸಂಪೂರ್ಣ ಉತ್ಪತ್ತಿಯನ್ನು ತನ್ನ ಸ್ವಂತ ಉಪಯೋಗಕ್ಕೆ ವಿನಿಯೋಗಿಸಿಕೊಂಡರೆ ಅವನು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನಾಗುತ್ತಾನೆ.

*ವಿವರಣೆ 1.-* ಕೇವಲ ಸ್ವಲ್ಪ ಸಮಯಕ್ಕಾಗಿ ಮಾಡಿದ ಅಪ್ರಾಮಾಣಿಕ ದುರ್ವಿನಿಯೋಗವೂ ಸಹ ಈ ಪ್ರಕರಣದ ಅರ್ಥದಲ್ಲಿ ದುರ್ವಿನಿಯೋಗವೆಂದಾಗುತ್ತದೆ.

*ದೃಷ್ಟಾಂತ*

‘ಜೆಡ್’ನಿಗೆ ಸೇರಿದ ಖಾಲಿ ಹಿಂಬರಹವುಳ್ಳ ಸರ್ಕಾರಿ ಪ್ರಾಮಿಸರಿ ನೋಟು ‘ಎ’ನಿಗೆ ಸಿಗುತ್ತದೆ. ‘ಎ’ನು ಆ ಪ್ರಾಮಿಸರಿ ನೋಟು ‘ಜೆಡ್’ನದೆಂದು ಗೊತ್ತಿದ್ದೂ ಮುಂದೆ ಅದನ್ನು ‘ಜೆಡ್’ನಿಗೆ ಹಿಂದಿರುಗಿಸಿದರಾಯಿತೆಂದು ಉದ್ದೇಶಿಸಿ, ಸಾಲದ ಭದ್ರತೆಗಾಗಿ ಬ್ಯಾಂಕರ್‌ನಲ್ಲಿ ಅದನ್ನು ಗಿರವಿ ಇಡುತ್ತಾನೆ. ‘ಎ’ನು ಈ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

*ವಿವರಣೆ 2.-* ಯಾರೇ ಇತರ ವ್ಯಕ್ತಿಯ ಸ್ವಾಧೀನದಲ್ಲಿ ಇರದ ಸ್ವತ್ತು ಒಬ್ಬ ವ್ಯಕ್ತಿಗೆ ಸಿಗುತ್ತದೆ ಮತ್ತು ಅವನು ಅದನ್ನು ರಕ್ಷಿಸುವ ಅಥವಾ ಅದನ್ನು ಅದರ ಮಾಲೀಕನಿಗೆ ಹಿಂದಿರುಗಿಸುವ ಉದ್ದೇಶದಿಂದ ಅಂಥ ಸ್ವತ್ತನ್ನು ತೆಗೆದುಕೊಂಡರೆ ಅದನ್ನು ಅವನು ಅಪ್ರಾಮಾಣಿಕವಾಗಿ ತೆಗೆದುಕೊಂಡಂತಾಗುವುದಿಲ್ಲ ಅಥವಾ ದುರ್ವಿನಿಯೋಗ ಮಾಡಿದಂತಾಗುವುದಿಲ್ಲ ಮತ್ತು ಅಪರಾಧದ ತಪ್ಪಿತಸ್ಥನೆಂದಾಗುವುದಿಲ್ಲ. ಆದರೆ ಮಾಲೀಕನಿರುವನೆಂದು ಗೊತ್ತಿದ್ದೂ ಅಥವಾ ಮಾಲೀಕನನ್ನು ಹುಡುಕುವ ಅವಕಾಶಗಳು ಅವನಲ್ಲಿದ್ದು ಅಥವಾ ಮಾಲೀಕನನ್ನು ಕಂಡುಹಿಡಿಯುವ ಮತ್ತು ಅವನ ಗಮನಕ್ಕೆ ತರುವ ಎಲ್ಲ ಸಮಂಜಸ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ಮುಂಚೆಯೇ ಮತ್ತು ಮಾಲೀಕನು ಅದನ್ನು ಕ್ಲೇಮು ಮಾಡಲು ಅನುಕೂಲವಾಗುವಂತೆ ಸಮಂಜಸ ಕಾಲದವರೆಗೆ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕೂ ಮುಂಚೆಯೇ, ಅವನು ಅದನ್ನು ಸ್ವಂತ ಉಪಯೋಗಕ್ಕೆ ವಿನಿಯೋಗಿಸಿಕೊಂಡರೆ ಅವನು ಮೇಲೆ ಪರಿಭಾಷಿಸಿದ ಅಪರಾಧದ ಬಗ್ಗೆ ತಪ್ಪಿತಸ್ಥನೆಂದಾಗುತ್ತದೆ.

ಇಂಥ ಸಂದರ್ಭದಲ್ಲಿ ಸಮಂಜಸ ಅವಕಾಶಗಳಾವುವು ಅಥವಾ ಸೂಕ್ತ ಕಾಲ ಯಾವುದು ಎಂಬುದು ಸಂಗತಿಯ ಪ್ರಶ್ನೆ.

ವಸ್ತು ಸಿಕ್ಕಿದವನು ಆ ಸ್ವತ್ತಿನ ಮಾಲೀಕನಾರು ಅಥವಾ ಯಾರೇ ನಿರ್ದಿಷ್ಟ ವ್ಯಕ್ತಿಯು ಅದರ ಮಾಲೀಕನು ಎಂದು ತಿಳಿದಿರಬೇಕಾದ ಅವಶ್ಯಕತೆಯಿಲ್ಲ. ಅದನ್ನು ವಿನಿಯೋಗಿಸುವ ಸಮಯದಲ್ಲಿ ಅದು ತನ್ನ ಸ್ವಂತ ಸ್ವತ್ತೆಂದು ನಂಬದಿದ್ದರೆ ಅಥವಾ ನಿಜವಾದ ಮಾಲೀಕನನ್ನು ಹುಡುಕಲು ಸಾಧ್ಯವಿಲ್ಲವೆಂದು ಸದ್ಭಾವನೆಯಿಂದ ನಂಬಿದ್ದರೆ ಸಾಕು.

*ದೃಷ್ಟಾಂತಗಳು*

(ಎ) ಜ಼ಡ್‌ನಿಗೆ ಹೆದ್ದಾರಿಯಲ್ಲಿ ಒಂದು ರೂಪಾಯಿಯು ಸಿಗುತ್ತದೆ. ಆ ರೂಪಾಯಿ ಯಾರದ್ದೆಂದು ಜ಼ಡ್‌ನಿಗೆ ಗೊತ್ತಿರುವುದಿಲ್ಲ. ಜ಼ಡ್‌ನು ಆ ರೂಪಾಯಿಯನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ಜ಼ಡ್‌ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿಲ್ಲವೆಂದಾಗುತ್ತದೆ.

(ಬಿ) ಬ್ಯಾಂಕ್-ನೋಟಿನ ಸಮೇತ ಇರುವ ಒಂದು ಪತ್ರವು ಜ಼ಡ್‌ನಿಗೆ ರಸ್ತೆಯಲ್ಲಿ ಸಿಗುತ್ತದೆ. ಆ ಪತ್ರದ ನಿರ್ದೇಶನ ಮತ್ತು ಒಳಾಂಶಗಳಿಂದ ಆ ನೋಟು ಯಾರದೆಂಬುದು ಅವನಿಗೆ ಗೊತ್ತಾಗುತ್ತದೆ. ಅವನು ಆ ನೋಟನ್ನು ವಿನಿಯೋಗಿಸುತ್ತಾನೆ. ಅವನು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನೆಂದಾಗುತ್ತದೆ.

(ಸಿ) ಚೆಕ್ ಧಾರಕನಿಗೆ ಸಂದಾಯ ಮಾಡಬೇಕೆಂದಿರುವ ಚೆಕ್ ಜ಼ಡ್‌ನಿಗೆ ಸಿಗುತ್ತದೆ. ಚೆಕ್ ಅನ್ನು ಯಾರು ಕಳೆದುಕೊಂಡಿದ್ದಾರೆಂಬುದನ್ನು ಅವನು ಊಹಿಸಲಾಗುವುದಿಲ್ಲ. ಆದರೆ, ಚೆಕ್ ಬರೆದು ಕೊಟ್ಟವನ ಹೆಸರು ಗೊತ್ತಾಗುತ್ತದೆ. ಚೆಕ್ ಬರೆದುಕೊಟ್ಟಿರುವ ವ್ಯಕ್ತಿಯು, ಯಾರ ಹೆಸರಿಗೆ ಚೆಕ್ ಅನ್ನು ಬರೆಯಲಾಗಿದೆಯೋ ಆ ವ್ಯಕ್ತಿಯನ್ನು ತೋರಿಸಬಹುದೆಂಬುದು ಜ಼ಡ್‌ನಿಗೆ ತಿಳಿದಿದೆ. ಮಾಲೀಕನನ್ನು ಪತ್ತೆ ಹಚ್ಚುವ ಪ್ರಯತ್ನ ಮಾಡದೆಯೆ ಚೆಕ್ ಅನ್ನು ಜ಼ಡ್‌ನು ವಿನಿಯೋಗಿಸುತ್ತಾನೆ. ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನೆಂದಾಗುತ್ತಾನೆ.

(ಡಿ) ಜೆಡ್‌ನು ಹಣವಿರುವ ತನ್ನ ಚೀಲವನ್ನು ಕೆಳಗೆ ಬೀಳಿಸುವುದನ್ನು ಜ಼ಡ್‌ನು ನೋಡುತ್ತಾನೆ. ಅದನ್ನು ಜೆಡ್‌ನಿಗೆ ಹಿಂದಿರುಗಿಸುವ ಉದ್ದೇಶದಿಂದ 'ಎ'ನು ಆ ಹಣದ ಚೀಲವನ್ನು ಎತ್ತಿಕೊಳ್ಳುತ್ತಾನೆ. ಆದರೆ ಅನಂತರ ಅದನ್ನು ತನ್ನ ಸ್ವಂತ ಉಪಯೋಗಕ್ಕಾಗಿ ವಿನಿಯೋಗಿಸಿಕೊಳ್ಳುತ್ತಾನೆ. 'ಎ'ನು ಈ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಇ) ಜ಼ಡ್‌ನಿಗೆ ಹಣವಿರುವ ಒಂದು ಚೀಲವು ಸಿಗುತ್ತದೆ. ಅದು ಯಾರದೆಂಬುದು ಅವನಿಗೆ ಗೊತ್ತಿರುವುದಿಲ್ಲ. ಅನಂತರ, ಅದು ಜೆಡ್‌ನದು ಎಂಬುದನ್ನು ಕಂಡುಹಿಡಿಯುತ್ತಾನೆ ಮತ್ತು ಅದನ್ನು ತನ್ನ ಸ್ವಂತ ಉಪಯೋಗಕ್ಕೆ ವಿನಿಯೋಗಿಸಿಕೊಳ್ಳುತ್ತಾನೆ. ಜ಼ಡ್‌ನು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನೆಂದಾಗುತ್ತದೆ.

(ಎಫ್) ಜ಼ಡ್‌ನಿಗೆ ಬೆಲೆಯುಳ್ಳ ಒಂದು ಉಂಗುರ ಸಿಗುತ್ತದೆ. ಅದು ಯಾರದೆಂಬುದು ಅವನಿಗೆ ಗೊತ್ತಿರುವುದಿಲ್ಲ. ಮಾಲೀಕನನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡದೆಯೇ ಜ಼ಡ್‌ನು ಕೂಡಲೇ ಅದನ್ನು ಮಾರಾಟ ಮಾಡುತ್ತಾನೆ; 'ಎ'ನು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನೆಂದಾಗುತ್ತದೆ.

**315. ಮರಣದ ಸಮಯದಲ್ಲಿ ಮೃತ ವ್ಯಕ್ತಿಯ ಸ್ವಾಧೀನದಲ್ಲಿದ್ದ ಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗ.-** ಸ್ವತ್ತು, ಮೃತನ ಮರಣ ಸಮಯದಲ್ಲಿ ಆ ಮೃತ ವ್ಯಕ್ತಿಯ ಸ್ವಾಧೀನದಲ್ಲಿತ್ತೆಂದೂ ಮತ್ತು ಅದು ಅಲ್ಲಿಂದೀಚೆಗೆ ಅಂಥ ಸ್ವಾಧೀನಕ್ಕೆ ಕಾನೂನುಸಮ್ಮತ ಹಕ್ಕುಳ್ಳ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರಲಿಲ್ಲವೆಂದು ಗೊತ್ತಿದ್ದರೂ ಯಾರೇ ವ್ಯಕ್ತಿಯು, ಆ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸಿದರೆ ಅಥವಾ ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಅಪರಾಧಿಯು ಅಂಥ ವ್ಯಕ್ತಿಯ ಮರಣದ ಸಮಯದಲ್ಲಿ ಅವನಿಂದ ಗುಮಾಸ್ತನೆಂದು ಅಥವಾ ಸೇವಕನೆಂದು ನಿಯೋಜಿತನಾಗಿದ್ದಲ್ಲಿ, ಆ ಕಾರಾವಾಸವನ್ನು ಏಳು ವರ್ಷಗಳವರೆಗೆ ವಿಸ್ತರಿಸಬಹುದು.

*ದೃಷ್ಟಾಂತ*

ಪೀಠೋಪಕರಣದ ಮತ್ತು ಹಣದ ಸ್ವಾಧೀನದಲ್ಲಿದ್ದ ಜೆಡ್‌ನು ಮರಣ ಹೊಂದುತ್ತಾನೆ. ಅವನ ಸೇವಕನಾದ ಜ಼ಡ್‌ನು, ಆ ಹಣದ ಸ್ವಾಧೀನಕ್ಕೆ ಹಕ್ಕುಳ್ಳ ಯಾರೇ ವ್ಯಕ್ತಿಯ ಸ್ವಾಧೀನಕ್ಕೆ ಅದು ಸೇರುವುದಕ್ಕೂ ಮುಂಚೆಯೇ, ಅದನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸುತ್ತಾನೆ ಜ಼ಡ್‌ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

***ಆಪರಾಧಿಕ ನಂಬಿಕೆ ದ್ರೋಹ***

**316.** ***ಆಪರಾಧಿಕ ನಂಬಿಕೆ ದ್ರೋಹ.-*** (1) ಯಾವುದೇ ರೀತಿಯಲ್ಲಿ ಸ್ವತ್ತನ್ನು ಅಥವಾ ಸ್ವತ್ತಿನ ಮೇಲಿನ ಸ್ವಾಮ್ಯದ ಹಕ್ಕನ್ನು ಯಾರಿಗೆ ವಹಿಸಲಾಗಿದೆಯೋ, ಆ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸುವ ಅಥವಾ ತನ್ನ ಸ್ವಂತ ಉಪಯೋಗಕ್ಕೆ

ಬಳಸಿಕೊಳ್ಳುವ ಅಥವಾ ಅಂಥ ನಂಬಿಕೆಯನ್ನು ಯಾವ ರೀತಿಯಲ್ಲಿ ನಿರ್ವಹಣೆ ಮಾಡತಕ್ಕದ್ದೆಂಬ ವಿಧಾನವನ್ನು ಗೊತ್ತುಪಡಿಸಿರುವ ಕಾನೂನಿನ ಯಾವುದೇ ನಿರ್ದೇಶನವನ್ನು ಅಥವಾ ಅಂಥ ನಂಬಿಕೆಯ ನಿರ್ವಹಣೆಗೆ ಸಂಬಂಧಿಸಿದಂತೆ ಅವನು ಮಾಡಿಕೊಂಡ ಯಾವುದೇ ವ್ಯಕ್ತ ಅಥವಾ ಸೂಚ್ಯವಾದ ಕಾನೂನುಸಮ್ಮತ ಕರಾರನ್ನು ಉಲ್ಲಂಘಿಸಿ, ಆ ಸ್ವತ್ತನ್ನು ಅಪ್ರಾಮಾಣಿಕವಾಗಿ ಉಪಯೋಗಿಸಿಕೊಳ್ಳುವ ಅಥವಾ ವಿಲೆ ಮಾಡುವ ಅಥವಾ ಹಾಗೆ ಮಾಡಲು ಇತರ ಯಾರೇ ವ್ಯಕ್ತಿಗೆ ಬುದ್ಧಿಪೂರ್ವಕವಾಗಿ ಅವಕಾಶ ಮಾಡಿಕೊಡುವ ವ್ಯಕ್ತಿಯು "ಆಪರಾಧಿಕ ನಂಬಿಕೆ ದ್ರೋಹ"ವನ್ನು ಮಾಡುತ್ತಾನೆಂದಾಗುತ್ತದೆ.

*ವಿವರಣೆ 1.-* ನೌಕರರ ಭವಿಷ್ಯ ನಿಧಿಗಳು ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952 ರ 19)ರ 17ನೇ ಪ್ರಕರಣದ ಮೇರೆಗೆ ವಿನಾಯಿತಿ ಪಡೆದಿರುವ ಅಥವಾ ವಿನಾಯಿತಿ ಪಡೆದಿರದ ಕಾರ್ಯಸಂಸ್ಥೆಯ ನಿಯೋಜಕನಾಗಿರುವ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ಸ್ಥಾಪಿತವಾದ ಭವಿಷ್ಯ ನಿಧಿಗೆ ಅಥವಾ ಕುಟುಂಬ ಪಿಂಚಣಿ ನಿಧಿಗಳಿಗೆ ಜಮಾ ಮಾಡುವುದಕ್ಕಾಗಿ ನೌಕರನ ವಂತಿಗೆಯನ್ನು, ನೌಕರನಿಗೆ ಸಂದಾಯ ಮಾಡುವ ವೇತನದಿಂದ ಹಿಡಿದುಕೊಳ್ಳುವ ವ್ಯಕ್ತಿಗೆ, ಹಾಗೆ ಅವನು ಹಿಡಿದುಕೊಂಡ ವಂತಿಗೆಯ ಮೊಬಲಗನ್ನು ವಹಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಸದರಿ ಕಾನೂನನ್ನು ಉಲ್ಲಂಘಿಸಿ, ಆ ವ್ಯಕ್ತಿಯು ಅಂಥ ವಂತಿಗೆಯನ್ನು ಸದರಿ ನಿಧಿಗೆ ಸಂದಾಯ ಮಾಡಲು ತಪ್ಪಿದರೆ, ಮೇಲೆ ಹೇಳಿದಂತೆ ಕಾನೂನಿನ ನಿರ್ದೇಶನವನ್ನು ಉಲ್ಲಂಘಿಸಿ ಸದರಿ ವಂತಿಗೆಯ ಮೊಬಲಗನ್ನು ಅಪ್ರಾಮಾಣಿಕವಾಗಿ ಬಳಸಿಕೊಂಡಿರುವನೆಂದು ಭಾವಿಸತಕ್ಕದ್ದು.

*ವಿವರಣೆ 2.-* ನಿಯೋಜಕನಾಗಿದ್ದು, ನೌಕರರ ರಾಜ್ಯ ವಿಮಾ ಅಧಿನಿಯಮ, 1948 (1948 ರ 34)ರ ಅಡಿಯಲ್ಲಿ ಸ್ಥಾಪಿತವಾಗಿರುವ ನೌಕರರ ರಾಜ್ಯ ವಿಮಾ ನಿಗಮವು ಹೊಂದಿರುವ ಮತ್ತು ನಿರ್ವಹಿಸುತ್ತಿರುವ ನೌಕರರ ರಾಜ್ಯ ವಿಮಾ ನಿಧಿಗೆ ಜಮಾ ಮಾಡುವುದಕ್ಕಾಗಿ ನೌಕರನ ವಂತಿಗೆಯನ್ನು, ನೌಕರನಿಗೆ ಸಂದಾಯ ಮಾಡುವ ವೇತನದಿಂದ ಹಿಡಿದುಕೊಳ್ಳುವ ವ್ಯಕ್ತಿಗೆ, ಹಾಗೆ ಅವನು ಹಿಡಿದುಕೊಂಡ ವಂತಿಗೆಯ ಮೊಬಲಗನ್ನು ವಹಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಸದರಿ ಅಧಿನಿಯಮವನ್ನು ಉಲ್ಲಂಘಿಸಿ, ಆ ವ್ಯಕ್ತಿಯು ಅಂಥ ವಂತಿಗೆಯನ್ನು ಸದರಿ ನಿಧಿಗೆ ಸಂದಾಯ ಮಾಡಲು ತಪ್ಪಿದರೆ, ಮೇಲೆ ಹೇಳಿದಂತೆ ಕಾನೂನಿನ ನಿರ್ದೇಶನವನ್ನು ಉಲ್ಲಂಘಿಸಿ ಸದರಿ ವಂತಿಗೆಯ ಮೊಬಲಗನ್ನು ಅಪ್ರಾಮಾಣಿಕವಾಗಿ ಬಳಸಿಕೊಂಡಿರುವನೆಂದು ಭಾವಿಸತಕ್ಕದ್ದು.

## *ದೃಷ್ಟಾಂತಗಳು*

(ಎ) ಮೃತ ವ್ಯಕ್ತಿಯ ಮರಣಶಾಸನ ನಿರ್ವಾಹಕನಾದ 'ಎ'ನು ಮರಣಶಾಸನಕ್ಕೆ ಅನುಸಾರವಾಗಿ ಸ್ವತ್ತನ್ನು ಭಾಗ ಮಾಡಿಕೊಡಲು ಅವನಿಗೆ ನಿರ್ದೇಶಿಸುವ ಕಾನೂನನ್ನು ಅಪ್ರಾಮಾಣಿಕವಾಗಿ ಉಲ್ಲಂಘಿಸುತ್ತಾನೆ ಮತ್ತು ಅದನ್ನು ತನ್ನ ಸ್ವಂತ ಉಪಯೋಗಕ್ಕೆ ವಿನಿಯೋಗಿಸಿಕೊಳ್ಳುತ್ತಾನೆ. ಇಲ್ಲಿ 'ಎ'ನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಎ'ನು ಉಗ್ರಾಣಪಾಲಕ. ಪ್ರಯಾಣಕ್ಕೆ ಹೊರಟಿರುವ 'ಜೆಡ್'ನು ಉಗ್ರಾಣದ ಕೊಠಡಿಗಾಗಿ ಗೊತ್ತುಮಾಡಿದ ಮೊಬಲಗನ್ನು ಸಂದಾಯ ಮಾಡಿದ ಮೇಲೆ ತನ್ನ ಪೀಠೋಪಕರಣಗಳನ್ನು ಹಿಂದಿರುಗಿಸತಕ್ಕದ್ದೆಂಬ ಕರಾರಿನ ಮೇರೆಗೆ, 'ಎ'ನಿಗೆ ಅವುಗಳನ್ನು ವಹಿಸಿಕೊಡುತ್ತಾನೆ. 'ಎ'ನು ಆ ಸರಕುಗಳನ್ನು ಅಪ್ರಾಮಾಣಿಕತೆಯಿಂದ ಮಾರಾಟ ಮಾಡುತ್ತಾನೆ. ಇಲ್ಲಿ 'ಎ'ನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದ್ದಾನೆಂದಾಗುತ್ತದೆ.

(ಸಿ) ಕೋಲ್ಕತ್ತಾದಲ್ಲಿ ವಾಸಿಸುವ 'ಎ'ನು ದೆಹಲಿಯಲ್ಲಿ ವಾಸವಾಗಿರುವ 'ಜೆಡ್'ನ ಏಜೆಂಟ್. 'ಜೆಡ್'ನು 'ಎ'ನಿಗೆ ಕಳುಹಿಸಿದ ಎಲ್ಲ ಮೊಬಲಗನ್ನು 'ಎ'ನು 'ಜೆಡ್'ನು ನಿರ್ದೇಶಿಸಿದ ವ್ಯವಹಾರದಲ್ಲಿ ತೊಡಗಿಸತಕ್ಕದ್ದೆಂದು 'ಎ' ಮತ್ತು 'ಜೆಡ್'ನ ನಡುವೆ ವ್ಯಕ್ತ ಅಥವಾ ಸೂಚ್ಯವಾದ ಕರಾರು ಆಗಿರುತ್ತದೆ. 'ಜೆಡ್'ನು 'ಎ'ನಿಗೆ ಒಂದು ಲಕ್ಷ ರೂಪಾಯಿಗಳನ್ನು ಕಳುಹಿಸಿ ಅದನ್ನು ಕಂಪನಿ ಷೇರುಗಳಲ್ಲಿ ತೊಡಗಿಸಲು 'ಎ'ನಿಗೆ ನಿರ್ದೇಶನ ನೀಡುತ್ತಾನೆ. 'ಎ'ನು ಅಪ್ರಾಮಾಣಿಕತೆಯಿಂದ ಆ ನಿರ್ದೇಶನವನ್ನು ಉಲ್ಲಂಘಿಸುತ್ತಾನೆ ಮತ್ತು ಆ ಹಣವನ್ನು ತನ್ನ ಸ್ವಂತ ವ್ಯವಹಾರದಲ್ಲಿ ತೊಡಗಿಸುತ್ತಾನೆ. ಇಲ್ಲಿ 'ಎ'ನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದ್ದಾನೆಂದಾಗುತ್ತದೆ.

(ಡಿ) ಆದರೆ, ಹಿಂದಿನ ದೃಷ್ಟಾಂತದಂತೆ, ಬಂಗಾಳ ಬ್ಯಾಂಕಿನಲ್ಲಿ ಷೇರುಗಳನ್ನು ಹೊಂದಿರುವುದು 'ಜೆಡ್'ನಿಗೆ ಹೆಚ್ಚು ಲಾಭಕರವೆಂದು 'ಎ'ನು ಅಪ್ರಾಮಾಣಿಕತೆಯಿಂದಲ್ಲದೆ ಸದ್ಭಾವನೆಯಿಂದ ನಂಬಿ 'ಜೆಡ್'ನ ನಿರ್ದೇಶನಗಳನ್ನು ಉಲ್ಲಂಘಿಸುತ್ತಾನೆ ಮತ್ತು

ಕಂಪನಿ ಷೇರನ್ನು ಕೊಂಡುಕೊಳ್ಳುವ ಬದಲಾಗಿ ಜೆಡ್‌ನಿಗಾಗಿ ಬಂಗಾಳ ಬ್ಯಾಂಕಿನಲ್ಲಿ ಷೇರುಗಳನ್ನು ಕೊಂಡುಕೊಳ್ಳುತ್ತಾನೆ. ಇಲ್ಲಿ ಜೆಡ್‌ನಿಗೆ ನಷ್ಟವಾದರೂ ಮತ್ತು ಆ ನಷ್ಟದ ನಿಮಿತ್ತ ಟಿ‌ನ ವಿರುದ್ಧ ಸಿವಿಲ್ ದಾವೆಯನ್ನು ಹೂಡಲು ಜೆಡ್‌ನು ಹಕ್ಕುಳ್ಳವನಾಗಿದ್ದರೂ, 'ಏನು ಅಪ್ರಾಮಾಣಿಕವಾಗಿ ವರ್ತಿಸಿಲ್ಲವಾದುದರಿಂದ, ಅವನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿಲ್ಲವೆಂದಾಗುತ್ತದೆ.

(ಇ) ಟಿನು ರೆವಿನ್ಯೂ ಅಧಿಕಾರಿ. ಅವನಿಗೆ ಸರ್ಕಾರಿ ಹಣವನ್ನು ವಹಿಸಿಕೊಡಲಾಗಿದೆ ಮತ್ತು ಅವನ ಬಳಿ ಇರುವ ಎಲ್ಲ ಸರ್ಕಾರಿ ಹಣವನ್ನು ಒಂದು ನಿರ್ದಿಷ್ಟ ಖಜಾನೆಗೆ ಸಂದಾಯ ಮಾಡಲು ಕಾನೂನಿನ ಮೂಲಕ ನಿರ್ದೇಶಿಸಲಾಗಿದೆ ಅಥವಾ ಹಾಗೆ ಮಾಡಲು ಅವನು ಸರ್ಕಾರದೊಂದಿಗೆ ಮಾಡಿಕೊಂಡ ವ್ಯಕ್ತ ಅಥವಾ ಸೂಚ್ಯವಾದ ಕರಾರಿನಂತೆ ಬದ್ಧನಾಗಿರುತ್ತಾನೆ. ಟಿನು ಅಪ್ರಾಮಾಣಿಕವಾಗಿ ಹಣವನ್ನು ವಿನಿಯೋಗಿಸುತ್ತಾನೆ. ಇಲ್ಲಿ ಟಿನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದ್ದಾನೆಂದಾಗುತ್ತದೆ.

(ಎಫ್) ಟಿನು ಸಾಗಣೆದಾರ. ಅವನಿಗೆ ಭೂಮಿಯ ಅಥವಾ ನೀರಿನ ಮೂಲಕ ಸಾಗಿಸತಕ್ಕದ್ದೆಂದು ಜೆಡ್‌ನು ಸ್ವತ್ತನ್ನು ವಹಿಸಿಕೊಟ್ಟಿರುತ್ತಾನೆ. 'ಏನು ಸ್ವತ್ತನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸುತ್ತಾನೆ. ಇಲ್ಲಿ ಟಿನು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯು ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾರಿಗಾದರೂ ಸಾಗಣೆದಾರನೆಂಬಂತೆ, ಬಂದರು ಕಟ್ಟೆಯ ಯಜಮಾನನೆಂಬಂತೆ ಅಥವಾ ಉಗ್ರಾಣಕಾರನೆಂಬಂತೆ ಸ್ವತ್ತನ್ನು ವಹಿಸಿದ್ದರೆ ಆ ಯಾರೇ ವ್ಯಕ್ತಿಯು, ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಗುಮಾಸ್ತನಾಗಿರುವ ಅಥವಾ ಸೇವಕನಾಗಿರುವ ಅಥವಾ ಗುಮಾಸ್ತನಾಗಿ ಅಥವಾ ಸೇವಕನಾಗಿ ನಿಯೋಜಿತನಾಗಿರುವ ಮತ್ತು ಅಂಥ ಸ್ಥಾನದ ಕಾರಣದಿಂದಾಗಿ ಆ ಯಾರಿಗಾದರೂ ಯಾವುದೇ ರೀತಿಯಲ್ಲಿ ಸ್ವತ್ತನ್ನು ಅಥವಾ ಸ್ವತ್ತಿನ ಮೇಲಿನ ಅಧಿಕಾರವನ್ನು ವಹಿಸಿಕೊಟ್ಟಿದ್ದರೆ ಆ ಯಾರೇ ವ್ಯಕ್ತಿಯು, ಆ ಸ್ವತ್ತಿಗೆ ಸಂಬಂಧಿಸಿದಂತೆ ಆಪರಾಧಿಕ ನಂಬಿಕೆ ದ್ರೋಹ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಲೋಕ ನೌಕರನಾಗಿ ಅಥವಾ ಬ್ಯಾಂಕರ್‌ನಾಗಿ, ವ್ಯಾಪಾರಿಯಾಗಿ, ದಳ್ಳಾಳಿ ವರ್ತಕನಾಗಿ, ದಳ್ಳಾಳಿಯಾಗಿ, ಅಟಾರ್ನಿಯಾಗಿ ಅಥವಾ ಏಜೆಂಟನಾಗಿ ತನ್ನ ವ್ಯವಹಾರವನ್ನು ನಿರ್ವಹಿಸುತ್ತಿರುವಾಗ ಯಾವುದೇ ರೀತಿಯಲ್ಲಿ ಸ್ವತ್ತನ್ನು ಅಥವಾ ಆ ಸ್ವತ್ತಿನ ಮೇಲಿನ ಯಾವುದೇ ಅಧಿಕಾರವನ್ನು ಯಾರಿಗೆ ವಹಿಸಲಾಗಿದೆಯೋ ಆ ಯಾರೇ ವ್ಯಕ್ತಿಯು, ಆ ಸ್ವತ್ತಿಗೆ ಸಂಬಂಧಿಸಿದಂತೆ ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

### *ಕಳವು ಮಾಡಿದ ಸ್ವತ್ತನ್ನು ಸ್ವೀಕರಿಸುವುದು*

**317.** ***ಕಳವು ಮಾಡಿದ ಸ್ವತ್ತು.-*** (1) ಕಳವು ಮಾಡಿ ಅಥವಾ ಬಲಾದ್ಗ್ರಹಣ ಮಾಡಿ ಅಥವಾ ಸುಲಿಗೆ ಮಾಡಿ ಯಾವ ಸ್ವತ್ತಿನ ಸ್ವಾಧೀನವನ್ನು ವರ್ಗಾಯಿಸಲಾಗಿದೆಯೋ ಆ ಸ್ವತ್ತನ್ನು ಮತ್ತು ಯಾವ ಸ್ವತ್ತನ್ನು ಆಪರಾಧಿಕ ದುರ್ವಿನಿಯೋಗ ಮಾಡಿಕೊಳ್ಳಲಾಗಿದೆಯೋ ಅಥವಾ ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆಪರಾಧಿಕ ನಂಬಿಕೆ ದ್ರೋಹವನ್ನು ಮಾಡಲಾಗಿದೆಯೋ ಆ ಸ್ವತ್ತನ್ನು, ಅದರ ವರ್ಗಾವಣೆಯನ್ನು ಅಥವಾ ದುರ್ವಿನಿಯೋಗವನ್ನು ಭಾರತದೊಳಗೆ ಅಥವಾ ಭಾರತದ ಹೊರಗೆ ಮಾಡಿರಲಿ, ಅದನ್ನು "ಕಳವು ಮಾಡಿದ ಸ್ವತ್ತು" ಎಂದು ಕರೆಯಲಾಗುತ್ತದೆ. ಆದರೆ, ಆ ತರುವಾಯ ಅಂಥ ಸ್ವತ್ತು ಅದರ ಸ್ವಾಧೀನಕ್ಕೆ ಕಾನೂನುಸಮ್ಮತವಾಗಿ ಹಕ್ಕುಳ್ಳ ವ್ಯಕ್ತಿಯ ಸ್ವಾಧೀನಕ್ಕೆ ಬಂದರೆ ಆಗ ಅದು ಕಳವು ಮಾಡಿದ ಸ್ವತ್ತು ಎಂದೆನಿಸಿಕೊಳ್ಳುವುದಿಲ್ಲ.

(2) ಯಾರೇ ವ್ಯಕ್ತಿಯು, ಯಾವುದೇ ಕಳವು ಮಾಡಿದ ಸ್ವತ್ತನ್ನು, ಅದು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅಥವಾ ಅದು ಕಳವು ಮಾಡಿದ ಸ್ವತ್ತೆಂದು ನಂಬಲು ಕಾರಣಗಳಿದ್ದರೂ, ಅಪ್ರಾಮಾಣಿಕವಾಗಿ ಸ್ವೀಕರಿಸಿದರೆ ಅಥವಾ ಇಟ್ಟುಕೊಂಡರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ದರೋಡೆ ಮಾಡಿ ಯಾವುದೇ ಕಳವು ಮಾಡಿದ ಸ್ವತ್ತಿನ ಸ್ವಾಧೀನವನ್ನು ಯಾರಿಗಾದರೂ ವರ್ಗಾಯಿಸಲಾಗಿದೆಯೆಂದು ಗೊತ್ತಿದ್ದರೂ ಅಥವಾ ಹಾಗೆಂದು ನಂಬಲು ಕಾರಣವಿದ್ದರೂ, ಆ ಯಾರೇ ವ್ಯಕ್ತಿಯು ಅದನ್ನು ಅಪ್ರಾಮಾಣಿಕವಾಗಿ ಸ್ವೀಕರಿಸಿದರೆ ಅಥವಾ ಇಟ್ಟುಕೊಂಡರೆ ಅಥವಾ ಅಂಥ ಸ್ವತ್ತು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅಥವಾ ಹಾಗೆಂದು ನಂಬಲು ಕಾರಣವಿದ್ದರೂ ಅಥವಾ ಅವನು ದರೋಡೆಕೋರರ ಗುಂಪಿನವನೆಂದು ಅಥವಾ ಗುಂಪಿಗೆ ಸೇರಿದ್ದವನೆಂದು ತನಗೆ ಗೊತ್ತಿದ್ದರೂ ಅಥವಾ ಹಾಗೆ ನಂಬಲು ಕಾರಣವಿದ್ದರೂ ಅಂಥ ವ್ಯಕ್ತಿಯಿಂದ ಅಪ್ರಾಮಾಣಿಕವಾಗಿ ಸ್ವೀಕರಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಸ್ವತ್ತು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅಥವಾ ಹಾಗೆಂದು ನಂಬಲು ಕಾರಣವಿದ್ದರೂ, ರೂಢಿಗತವಾಗಿ ಅದನ್ನು ಸ್ವೀಕರಿಸಿದರೆ ಅಥವಾ ಅದರ ಬಗ್ಗೆ ವ್ಯವಹರಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5) ಯಾರೇ ವ್ಯಕ್ತಿಯು, ಸ್ವತ್ತು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅಥವಾ ಹಾಗೆಂದು ನಂಬಲು ಕಾರಣವಿದ್ದರೂ, ಸ್ವಯಿಚ್ಛೆಯಿಂದ ಅದನ್ನು ಬಚ್ಚಿಡಲು ಅಥವಾ ವಿಲೆ ಮಾಡಲು ಅಥವಾ ಸ್ಥಳಾಂತರಿಸಲು ಸಹಾಯ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

### *ವಂಚನೆ*

**318. ವಂಚಿಸುವುದು.-** (1) ಯಾರೇ ವ್ಯಕ್ತಿಯು, ಒಬ್ಬ ವ್ಯಕ್ತಿಯನ್ನು ಕಪಟದಿಂದ, ಹಾಗೆ ಕಪಟಕ್ಕೊಳಗಾದ ವ್ಯಕ್ತಿಯನ್ನು, ಯಾರೇ ವ್ಯಕ್ತಿಗೆ ಯಾವುದೇ ಸ್ವತ್ತನ್ನು ಕೊಡುವಂತೆ ಅಥವಾ ಯಾರೇ ವ್ಯಕ್ತಿಯ ಯಾವುದೇ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕೆ ಸಮ್ಮತಿಸುವಂತೆ ಮೋಸದಿಂದ ಅಥವಾ ಅಪ್ರಾಮಾಣಿಕತೆಯಿಂದ ಪ್ರೇರೇಪಿಸಿದರೆ ಅಥವಾ ಹಾಗೆ ಕಪಟಕ್ಕೊಳಗಾದ ವ್ಯಕ್ತಿಯನ್ನು, ಅವನು ಹಾಗೆ ಕಪಟಕ್ಕೊಳಗಾಗದಿದ್ದರೆ, ಯಾವ ಕೃತ್ಯವನ್ನು ಮಾಡುತ್ತಿರಲಿಲ್ಲವೋ ಅಥವಾ ಮಾಡಲು ತಪ್ಪುತ್ತಿರಲಿಲ್ಲವೋ ಆ ಕೃತ್ಯವು ಅಥವಾ ಲೋಪವು ಆ ವ್ಯಕ್ತಿಯ ದೇಹಕ್ಕೆ, ಮನಸ್ಸಿಗೆ, ಖ್ಯಾತಿಗೆ ಅಥವಾ ಸ್ವತ್ತಿಗೆ ನಷ್ಟವನ್ನು ಅಥವಾ ಹಾನಿಯನ್ನು ಉಂಟುಮಾಡುವುದಾಗಿದ್ದರೆ ಅಥವಾ ಉಂಟುಮಾಡುವ ಸಂಭವವಿದ್ದರೆ, ಅದನ್ನು ಮಾಡುವಂತೆ ಅಥವಾ ಮಾಡದಿರುವಂತೆ ಆ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿ ಪ್ರೇರೇಪಿಸಿದರೆ, ಆ ವ್ಯಕ್ತಿಯು "ವಂಚನೆ ಮಾಡಿದ್ದಾನೆ" ಎಂದು ಹೇಳಲಾಗುತ್ತದೆ.

*ವಿವರಣೆ.-* ಸಂಗತಿಗಳನ್ನು ಅಪ್ರಾಮಾಣಿಕವಾಗಿ ಬಚ್ಚಿಡುವುದು ಈ ಪ್ರಕರಣದ ಅರ್ಥದಲ್ಲಿ ವಂಚನೆಯಾಗುತ್ತದೆ.

### *ದೃಷ್ಟಾಂತಗಳು*

(ಎ) ಓ'ನು ತಾನು ಸಿವಿಲ್ ಸೇವೆಯಲ್ಲಿರುವುದಾಗಿ ಸುಳ್ಳು ನಟನೆ ಮಾಡಿ ಉದ್ದೇಶಪೂರ್ವಕವಾಗಿ ಜೆಡ್'ನನ್ನು ಮೋಸಗೊಳಿಸುತ್ತಾನೆ. ಸರಕುಗಳನ್ನು ಸಾಲದ ಮೇಲೆ ಕೊಡುವಂತೆ ಜೆಡ್'ನನ್ನು ಹೀಗೆ ಅಪ್ರಾಮಾಣಿಕತೆಯಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ಹಣ ಸಂದಾಯ ಮಾಡುವ ಉದ್ದೇಶ ಓ'ನಿಗೆ ಇರುವುದಿಲ್ಲ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಬಿ) 'ಎನು ಒಂದು ವಸ್ತುವಿನ ಮೇಲೆ ಖೋಟಾ ಗುರುತು ಹಾಕಿ ಆ ವಸ್ತುವು ಪ್ರಖ್ಯಾತ ತಯಾರಿಕೆದಾರನಿಂದ ಮಾಡಲಾಗಿದೆಯೆಂದು ಜೆಡ್'ನು ನಂಬುವಂತೆ ಉದ್ದೇಶಪೂರ್ವಕವಾಗಿ ಮೋಸಗೊಳಿಸುತ್ತಾನೆ ಮತ್ತು ಹೀಗೆ ವಸ್ತುವನ್ನು ಕೊಂಡುಕೊಳ್ಳಲು ಮತ್ತು ಅದಕ್ಕೆ ಬೆಲೆಯನ್ನು ಸಂದಾಯ ಮಾಡಲು ಜೆಡ್'ನನ್ನು ಪ್ರೇರೇಪಿಸುತ್ತಾನೆ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಸಿ) ಓ'ನು ಜೆಡ್'ನಿಗೆ ಒಂದು ವಸ್ತುವಿನ ಸುಳ್ಳು ಮಾದರಿಯನ್ನು ತೋರಿಸಿ, ಆ ವಸ್ತುವು ಮಾದರಿಗನುಸಾರವಾಗಿದೆಯೆಂದು ಜೆಡ್'ನು ನಂಬುವಂತೆ ಉದ್ದೇಶಪೂರ್ವಕವಾಗಿ ಮೋಸ ಮಾಡುತ್ತಾನೆ ಮತ್ತು ಹೀಗೆ ವಸ್ತುವನ್ನು ಕೊಂಡುಕೊಳ್ಳುವಂತೆ ಮತ್ತು ಬೆಲೆಯನ್ನು ಸಂದಾಯ ಮಾಡುವಂತೆ ಜೆಡ್'ನನ್ನು ಅಪ್ರಾಮಾಣಿಕತೆಯಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಡಿ) ಓ'ನು ಒಂದು ವಸ್ತುವಿನ ಬೆಲೆಯನ್ನು ಸಂದಾಯ ಮಾಡುವುದಕ್ಕಾಗಿ, ತಾನು ಹಣವಿಟ್ಟಿರುವಂಥ ವ್ಯಾಪಾರ ಸಂಸ್ಥೆಗೆ ಬಿಲ್ ಅನ್ನು ಬರೆಯುತ್ತಾನೆ. ಬರೆದ ಬಿಲ್ ನಿರಾಕರಿಸಲಾಗುವುದೆಂದು ಓ'ನು ನಿರೀಕ್ಷಿಸಿರುತ್ತಾನೆ. ಹೀಗೆ ಜೆಡ್'ನನ್ನು ಉದ್ದೇಶಪೂರ್ವಕವಾಗಿ ಮೋಸಗೊಳಿಸುತ್ತಾನೆ ಮತ್ತು ಅದನ್ನು ಕೊಡುವಂತೆ ಜೆಡ್'ನನ್ನು ಅಪ್ರಾಮಾಣಿಕತೆಯಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ವಸ್ತುವಿಗೆ ಬೆಲೆಯನ್ನು ಸಂದಾಯ ಮಾಡುವ ಉದ್ದೇಶ ಓ'ನಿಗೆ ಇರುವುದಿಲ್ಲ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಇ) ವಜ್ರಗಳಲ್ಲವೆಂದು ಗೊತ್ತಿದ್ದರೂ ಕೆಲವು ವಸ್ತುಗಳನ್ನು ವಜ್ರಗಳೆಂಬುದಾಗಿ ಓ'ನು ಒತ್ತೆಯಿಟ್ಟು ಜೆಡ್'ನನ್ನು ಉದ್ದೇಶಪೂರ್ವಕವಾಗಿ ಮೋಸಗೊಳಿಸುತ್ತಾನೆ ಮತ್ತು ಹಾಗೆ ಮಾಡಿ, ಹಣ ಸಾಲ ಕೊಡಲು ಜೆಡ್'ನನ್ನು ಕಪಟದಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಎಫ್) ತನಗೆ ಜೆಡ್'ನು ಸಾಲವಾಗಿ ಕೊಡಬಹುದಾದ ಹಣವನ್ನು ಮರು ಸಂದಾಯ ಮಾಡುವುದಾಗಿ ಜೆಡ್'ನು ನಂಬುವಂತೆ ಓ'ನು ಉದ್ದೇಶಪೂರ್ವಕವಾಗಿ ಅವನನ್ನು ಮೋಸಗೊಳಿಸುತ್ತಾನೆ ಮತ್ತು ಹಾಗೆ ಮಾಡಿ ಜೆಡ್'ನು ತನಗೆ ಹಣವನ್ನು ಸಾಲ ಕೊಡುವಂತೆ ಅವನನ್ನು ಕಪಟದಿಂದ ಪ್ರೇರೇಪಣೆ ಮಾಡುತ್ತಾನೆ. ಓ'ನಿಗೆ ಹಣವನ್ನು ಮರುಸಂದಾಯ ಮಾಡುವ ಉದ್ದೇಶವೇ ಇರುವುದಿಲ್ಲ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಜಿ) 'ಎನು ಕೆಲವೊಂದು ಪ್ರಮಾಣದಲ್ಲಿ ಇಂಡಿಗೊ ಸಸಿಯನ್ನು ಜೆಡ್'ನಿಗೆ ಕೊಡುವ ಉದ್ದೇಶವಿಲ್ಲದಿದ್ದರೂ ಓ'ನು ಕೊಡುತ್ತಾನೆಂಬುದಾಗಿ ಜೆಡ್'ನು ನಂಬುವಂತೆ ಉದ್ದೇಶಪೂರ್ವಕವಾಗಿ ಮೋಸಗೊಳಿಸುತ್ತಾನೆ ಮತ್ತು ಹಾಗೆ ಅವುಗಳನ್ನು ಕೊಡುತ್ತೇನೆಂಬ ವಿಶ್ವಾಸದ ಮೇಲೆ ಹಣವನ್ನು ಕೊಡುವಂತೆ ಜೆಡ್'ನನ್ನು ಕಪಟದಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ. ಆದರೆ, 'ಎನಿಗೆ ಹಣ ಪಡೆಯುವ ಸಮಯದಲ್ಲಿ ಇಂಡಿಗೊ ಸಸಿಯನ್ನು ಕೊಡುವ ಉದ್ದೇಶವಿದ್ದಿದ್ದರೆ ಮತ್ತು ಅನಂತರ ತನ್ನ ಕರಾರನ್ನು ಭಂಗ ಮಾಡಿ ಅದನ್ನು ಕೊಡದಿದ್ದರೆ ಅವನು ವಂಚಿಸಿದಂತಾಗುವುದಿಲ್ಲ; ಆದರೆ ಕರಾರಿನ ಭಂಗಕ್ಕಾಗಿ ಸಿವಿಲ್ ದಾವೆಗೆ ಮಾತ್ರ ಓ'ನು ಗುರಿಯಾಗುತ್ತಾನೆ.

(ಹೆಚ್) ಜೆಡ್'ನೊಂದಿಗೆ ಮಾಡಿಕೊಂಡ ಕರಾರಿನಲ್ಲಿನ ತನ್ನ ಭಾಗವನ್ನು ತಾನು ನೆರವೇರಿಸದಿದ್ದರೂ, ನೆರವೇರಿಸಿರುವುದಾಗಿ ಜೆಡ್'ನನ್ನು ನಂಬುವಂತೆ ಮಾಡಿ ಉದ್ದೇಶಪೂರ್ವಕವಾಗಿ ಓ'ನು ಜೆಡ್'ನನ್ನು ಮೋಸಗೊಳಿಸುತ್ತಾನೆ ಮತ್ತು ಹಾಗೆ ಮಾಡಿ, ಹಣ ಸಂದಾಯ ಮಾಡುವಂತೆ ಜೆಡ್'ನನ್ನು ಕಪಟದಿಂದ ಪ್ರೇರೇಪಣೆ ಮಾಡುತ್ತಾನೆ. ಇಲ್ಲಿ ಓ'ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(ಐ) ಓ'ನು ಬಿ'ನಿಗೆ ಒಂದು ಎಸ್ಟೇಟನ್ನು ಮಾರಾಟ ಮಾಡುತ್ತಾನೆ ಮತ್ತು ಹಸ್ತಾಂತರಿಸುತ್ತಾನೆ. ಹಾಗೆ ಮಾರಾಟ ಮಾಡಿದ ನಂತರ ಆ ಸ್ವತ್ತಿನ ಮೇಲೆ ತನಗೆ ಅಧಿಕಾರ ಇಲ್ಲವೆಂದು ಗೊತ್ತಿದ್ದರೂ, ಬಿ'ನಿಗೆ ಹಿಂದೆ ಅದನ್ನು ಮಾರಾಟ ಮಾಡಿದ ಮತ್ತು

ಹಸ್ತಾಂತರಿಸಿದ ಸಂಗತಿಯನ್ನು ಬಹಿರಂಗಪಡಿಸದೆಯೇ ಅದೇ ಸ್ವತ್ತನ್ನು ಜೆಡ್‍ನಿಗೆ ಮಾರಾಟ ಮಾಡುತ್ತಾನೆ ಅಥವಾ ಅಡಮಾನ ಮಾಡುತ್ತಾನೆ ಮತ್ತು ಜೆಡ್‍ನಿಂದ ಖರೀದಿಯ ಅಥವಾ ಅಡಮಾನದ ಹಣವನ್ನು ಸ್ವೀಕರಿಸುತ್ತಾನೆ. ಇಲ್ಲಿ ಎ ನು ವಂಚನೆ ಮಾಡಿದ್ದಾನೆಂದಾಗುತ್ತದೆ.

(2) ವಂಚಿಸುವ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ವಂಚನೆಯು ಯಾವ ವ್ಯವಹಾರಕ್ಕೆ ಸಂಬಂಧಿಸಿರುವುದೋ ಆ ವ್ಯವಹಾರದಲ್ಲಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡಲು ಕಾನೂನಿನ ಮೂಲಕ ಅಥವಾ ಕಾನೂನುಸಮ್ಮತ ಕರಾರಿನ ಮೂಲಕ ಬದ್ಧನಾಗಿರುವ ಯಾರೇ ವ್ಯಕ್ತಿಯು, ಆ ವ್ಯಕ್ತಿಗೆ ತಾನು ಆ ಮೂಲಕ ಅಕ್ರಮ ನಷ್ಟ ಉಂಟುಮಾಡುವ ಸಂಭವವಿದೆಯೆಂದು ಗೊತ್ತಿದ್ದೂ ವಂಚಿಸಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು ವಂಚಿಸಿದರೆ ಮತ್ತು ಹಾಗೆ ವಂಚಿತನಾದ ವ್ಯಕ್ತಿಯನ್ನು ಆ ಮೂಲಕ ಯಾವುದೇ ಸ್ವತ್ತನ್ನು ಯಾರೇ ವ್ಯಕ್ತಿಗೆ ಕೊಡುವಂತೆ ಅಥವಾ ಬೆಲೆಯುಳ್ಳ ಭದ್ರತೆಯನ್ನು ಮತ್ತು ಬೆಲೆಯುಳ್ಳ ಭದ್ರತೆಯನ್ನಾಗಿ ಪರಿವರ್ತಿಸಬಹುದಾದ ಸಹಿ ಮಾಡಿದ ಅಥವಾ ಮೊಹರು ಹಾಕಿದ ಯಾವುದೇ ವಸ್ತುವನ್ನು ಸಂಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ರಚಿಸಲು, ವ್ಯತ್ಯಸ್ತಗೊಳಿಸಲು ಅಥವಾ ನಾಶಪಡಿಸಲು ಅಪ್ರಾಮಾಣಿಕವಾಗಿ ಪ್ರೇರೇಪಣೆ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**319. ಮತ್ತೊಬ್ಬನಂತೆ ವರ್ತಿಸಿ ವಂಚಿಸುವುದು.-** (1) ವ್ಯಕ್ತಿಯು, ತಾನು ಬೇರೆ ವ್ಯಕ್ತಿಯೆಂಬಂತೆ ವರ್ತಿಸಿದರೆ ಅಥವಾ ಆ ವ್ಯಕ್ತಿಯ ಬದಲಿಗೆ ಬೇರೊಬ್ಬ ವ್ಯಕ್ತಿಯೆಂಬಂತೆ ತಿಳಿದೂ-ತಿಳಿದೂ ವರ್ತಿಸುವಂತೆ ಮಾಡಿದರೆ ಅಥವಾ ತಾನು ಅಥವಾ ಇತರ ಯಾರೇ ವ್ಯಕ್ತಿಯು ನಿಜವಾಗಿಯೂ ತಾನಲ್ಲವೆಂದು ಅಥವಾ ಇತರ ಯಾರೇ ವ್ಯಕ್ತಿಯಲ್ಲವೆಂದು ತೋರ್ಪಡಿಸಿಕೊಂಡು ವಂಚಿಸಿದರೆ, ಆ ವ್ಯಕ್ತಿಯು "ಮತ್ತೊಬ್ಬನಂತೆ ವರ್ತಿಸಿ ವಂಚಿಸಿದ್ದಾನೆ" ಎಂದು ಹೇಳಲಾಗುತ್ತದೆ.

*ವಿವರಣೆ.-* ವ್ಯಕ್ತಿಯು, ಯಾರಂತೆ ವರ್ತಿಸಿದನೋ ಆ ವ್ಯಕ್ತಿಯು ನಿಜವಾದ ವ್ಯಕ್ತಿಯಾಗಿರಲಿ ಅಥವಾ ಕಾಲ್ಪನಿಕ ವ್ಯಕ್ತಿಯಾಗಿರಲಿ, ಅವನು ಅಪರಾಧ ಮಾಡಿದ್ದಾನೆಂದಾಗುತ್ತದೆ.

*ದೃಷ್ಟಾಂತಗಳು*

(ಎ) 'ಎ'ನು ಅದೇ ಹೆಸರಿನ ಒಬ್ಬ ಶ್ರೀಮಂತ ಬ್ಯಾಂಕರನೆಂದು ವರ್ತಿಸಿ ವಂಚಿಸುತ್ತಾನೆ. ಇಲ್ಲಿ ಎ ನು ಮತ್ತೊಬ್ಬನಂತೆ ವರ್ತಿಸಿದ್ದರಿಂದ ವಂಚಿಸಿದ್ದಾನೆಂದಾಗುತ್ತದೆ.

(ಬಿ) ಬಿ ನು ಮೃತನಾಗಿದ್ದರೂ ಎ ನು ಬಿ ಯೇ ತಾನೆಂದು ವರ್ತಿಸಿ ವಂಚಿಸುತ್ತಾನೆ. ಇಲ್ಲಿ ಎ ನು ಮತ್ತೊಬ್ಬನಂತೆ ವರ್ತಿಸಿದ್ದರಿಂದ ವಂಚಿಸಿದ್ದಾನೆಂದಾಗುತ್ತದೆ.

(2) ಮತ್ತೊಬ್ಬನಂತೆ ವರ್ತಿಸಿ ವಂಚಿಸುವ ವ್ಯಕ್ತಿಯು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

***ಮೋಸದ ಪತ್ರಗಳು ಮತ್ತು ಸ್ವತ್ತಿನ ವಿಲೇವಾರಿ***

**320. ಸಾಲದಾತರಲ್ಲಿ ಸ್ವತ್ತು ಹಂಚಿಕೆಯಾಗುವುದನ್ನು ತಪ್ಪಿಸಲು ಅದನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು.-** ಯಾರೇ ವ್ಯಕ್ತಿಯು, ತನ್ನ ಸಾಲದಾತರಲ್ಲಿ ಅಥವಾ ಇತರ ಯಾರೇ ವ್ಯಕ್ತಿಯ ಸಾಲದಾತರಲ್ಲಿ ಕಾನೂನಿಗನುಸಾರವಾಗಿ ಸ್ವತ್ತು ಹಂಚಿಕೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಅಥವಾ ತಾನು ಅದನ್ನು ತಪ್ಪಿಸುವ

ಸಂಭವವಿರುವುದೆಂಬುದು ಗೊತ್ತಿದ್ದರೂ, ಆ ಯಾವುದೇ ಸ್ವತ್ತನ್ನು ಸಾಕಷ್ಟು ಪ್ರತಿಫಲವಿಲ್ಲದೆಯೇ, ಅಪ್ರಾಮಾಣಿಕತೆಯಿಂದ ಅಥವಾ ಮೋಸದಿಂದ ಸಾಗಿಸಿದರೆ, ಬಚ್ಚಿಟ್ಟರೆ ಅಥವಾ ಯಾರೇ ವ್ಯಕ್ತಿಗೆ ಕೊಟ್ಟರೆ ಅಥವಾ ಯಾರೇ ವ್ಯಕ್ತಿಗೆ ವರ್ಗಾಯಿಸಿದರೆ ಅಥವಾ ವರ್ಗಾವಣೆಯಾಗುವಂತೆ ಮಾಡಿದರೆ, ಅವನು ಆರು ತಿಂಗಳುಗಳಿಗೆ ಕಡಿಮೆಯಿರದ, ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**321. ಸಾಲದಾತರಿಗೆ ದೊರೆಯಬೇಕಾದ ಸಾಲದ ಹಣವನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ತಪ್ಪಿಸುವುದು.-** ಸಾಲದಾತನಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ಕಾನೂನಿಗನುಸಾರವಾಗಿ ದೊರೆಯಬೇಕಾದ ಸಾಲದ ಹಣವನ್ನು ಅಥವಾ ತಗಾದೆ ಹಣವನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ತಪ್ಪಿಸುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**322. ಪ್ರತಿಫಲದ ಬಗ್ಗೆ ಸುಳ್ಳು ಹೇಳಿಕೆಯನ್ನೊಳಗೊಂಡ ವರ್ಗಾವಣೆಯ ಪತ್ರವನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಬರೆದುಕೊಡುವುದು.-** ಯಾರೇ ವ್ಯಕ್ತಿಯು, ಯಾವುದೇ ಸ್ವತ್ತನ್ನು ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯನ್ನು ವರ್ಗಾವಣೆ ಮಾಡುವುದೆಂದು ಅಥವಾ ಯಾವುದೇ ಋಣಭಾರಕ್ಕೊಳಪಡಿಸುವುದೆಂದು ತಾತ್ಪರ್ಯವಾಗುವ ಮತ್ತು ಅಂಥ ವರ್ಗಾವಣೆಯ ಅಥವಾ ಋಣಭಾರದ ಪ್ರತಿಫಲಕ್ಕೆ ಸಂಬಂಧಪಟ್ಟಂತೆ ಅಥವಾ ಯಾರ ಬಳಕೆಗಾಗಿ ಅಥವಾ ಪ್ರಯೋಜನಕ್ಕಾಗಿ ಅದು ನಿಜವಾಗಿಯೂ ಕಾರ್ಯಗತವಾಗಬೇಕೆಂದು ಉದ್ದೇಶಿಸಲಾಗಿದೆಯೋ, ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಸುಳ್ಳು ಹೇಳಿಕೆಯನ್ನೊಳಗೊಂಡ ಯಾವುದೇ ಪತ್ರಕ್ಕೆ ಅಥವಾ ಲಿಖಿತಕ್ಕೆ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಸಹಿ ಮಾಡಿದರೆ, ಅದನ್ನು ಬರೆದುಕೊಟ್ಟರೆ ಅಥವಾ ಅದಕ್ಕೆ ಪಕ್ಷಕಾರನಾದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**323. ಸ್ವತ್ತನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು.-** ಯಾರೇ ವ್ಯಕ್ತಿಯು, ತನ್ನ ಅಥವಾ ಇತರ ಯಾರೇ ವ್ಯಕ್ತಿಯ ಯಾವುದೇ ಸ್ವತ್ತನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಬಚ್ಚಿಟ್ಟರೆ ಅಥವಾ ಸಾಗಿಸಿದರೆ ಅಥವಾ ಅದನ್ನು ಬಚ್ಚಿಡಲು ಅಥವಾ ಸಾಗಿಸಲು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಸಹಾಯ ಮಾಡಿದರೆ ಅಥವಾ ತನಗೆ ಹಕ್ಕುಳ್ಳ ಯಾವುದೇ ತಗಾದೆಯನ್ನು ಅಥವಾ ಕ್ಲೇಮನ್ನು ಅಪ್ರಾಮಾಣಿಕವಾಗಿ ಬಿಟ್ಟುಕೊಟ್ಟರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

### *ಕೇಡು*

**324. ಕೇಡು.-** (1) ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಅಕ್ರಮವಾಗಿ ನಷ್ಟ ಅಥವಾ ಹಾನಿಯನ್ನುಂಟು ಮಾಡುವ ಉದ್ದೇಶದಿಂದ ಅಥವಾ ತಾನು ಹಾಗೆ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಯಾವುದೇ ಸ್ವತ್ತನ್ನು ನಾಶಗೊಳಿಸುವ ಅಥವಾ ಸ್ವತ್ತಿನ ಬೆಲೆಯನ್ನು ಅಥವಾ ಉಪಯುಕ್ತತೆಯನ್ನು ನಾಶಗೊಳಿಸುವಂತೆ ಅಥವಾ ಕಡಿಮೆ ಮಾಡುವಂತೆ ಅಥವಾ ಅದರ ಮೇಲೆ ಕ್ಷತಿಕಾರಕ ಪರಿಣಾಮವುಂಟಾಗುವಂತೆ ಆ ಸ್ವತ್ತನ್ನು ಅಥವಾ ಅದರ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡುವ ಯಾರೇ ವ್ಯಕ್ತಿಯು "ಕೇಡು" ಉಂಟುಮಾಡಿದ್ದಾನೆಂದು ಹೇಳಲಾಗುತ್ತದೆ.

*ವಿವರಣೆ 1.-* ಕೇಡಿನ ಅಪರಾಧವಾಗಲು ಕ್ಷತಿಗೊಳಗಾದ ಅಥವಾ ನಾಶವಾದ ಸ್ವತ್ತಿನ ಮಾಲೀಕರಿಗೆ ನಷ್ಟ ಅಥವಾ ಹಾನಿಯನ್ನುಂಟು ಮಾಡಲು ಅಪರಾಧಿಯು ಉದ್ದೇಶಿಸಿರಬೇಕೆನ್ನುವುದು ಅವಶ್ಯಕವಲ್ಲ. ಆ ಸ್ವತ್ತು ಆ ವ್ಯಕ್ತಿಗೆ ಸೇರಿರಲಿ, ಇಲ್ಲದಿರಲಿ, ಅದಕ್ಕೆ ಕ್ಷತಿಯುಂಟು ಮಾಡುವುದರಿಂದ ಆ ಯಾರೇ ವ್ಯಕ್ತಿಗೆ ಅಕ್ರಮವಾಗಿ ನಷ್ಟ ಅಥವಾ ಹಾನಿಯುಂಟು ಮಾಡಲು ಅವನು ಉದ್ದೇಶಿಸಿದ್ದರೆ ಅಥವಾ ಉಂಟುಮಾಡುವ ಸಂಭವವಿದೆಯೆಂದು ತಿಳಿದಿದ್ದರೆ ಸಾಕು.

*ವಿವರಣೆ 2.-* ಕೃತ್ಯವನ್ನು ಮಾಡುವ ವ್ಯಕ್ತಿಗೆ ಅಥವಾ ಜಂಟಿಯಾಗಿ ಆ ವ್ಯಕ್ತಿಗೆ ಮತ್ತು ಇತರರಿಗೆ ಸೇರಿದ ಸ್ವತ್ತಿನ ಮೇಲೆ ಪರಿಣಾಮವನ್ನುಂಟು ಮಾಡುವ ಕೃತ್ಯದಿಂದ ಕೇಡನ್ನು ಉಂಟುಮಾಡಬಹುದು.

*ದೃಷ್ಟಾಂತಗಳು*

(ಎ) ಜೆಡ್‌ನಿಗೆ ಅಕ್ರಮವಾಗಿ ನಷ್ಟವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಜೆಡ್‌ನಲ್ಲಿರುವ ಬೆಲೆಯುಳ್ಳ ಭದ್ರತಾಪತ್ರವನ್ನು ಎ‌ನು ಸ್ವಯಿಚ್ಛೆಯಿಂದ ಸುಡುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಬಿ) ಜೆಡ್‌ನಿಗೆ ಅಕ್ರಮವಾಗಿ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಜೆಡ್‌ನ ಶೀತಾಗಾರಕ್ಕೆ ಎ‌ನು ನೀರನ್ನು ಹರಿಯಬಿಟ್ಟು ಮಂಜುಗಡ್ಡೆಯು ಕರಗುವಂತೆ ಮಾಡುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಸಿ) ಜೆಡ್‌ನಿಗೆ ಅಕ್ರಮವಾಗಿ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಜೆಡ್‌ನ ಉಂಗುರವನ್ನು ಎ‌ನು ಸ್ವಯಿಚ್ಛೆಯಿಂದ ನದಿಗೆ ಎಸೆಯುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಡಿ) ಜೆಡ್‌ನಿಗೆ ತಾನು ತೀರಿಸಬೇಕಾಗಿರುವ ಋಣವನ್ನು ತೀರಿಸುವುದಕ್ಕಾಗಿ ಅಮಲ್ಜಾರಿಯ ಮೂಲಕ ತನ್ನ ಚರ ಆಸ್ತಿಗಳನ್ನು ತೆಗೆದುಕೊಳ್ಳಲಾಗುತ್ತದೆಂಬುದು ಎ‌ನಿಗೆ ಗೊತ್ತಾಗಿ ಜೆಡ್‌ನು ಋಣವನ್ನು ವಸೂಲು ಮಾಡಿಕೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಆ ಚರ ಆಸ್ತಿಗಳನ್ನು ನಾಶ ಮಾಡುತ್ತಾನೆ ಮತ್ತು ಆ ಮೂಲಕ ಜೆಡ್‌ನಿಗೆ ನಷ್ಟವನ್ನುಂಟು ಮಾಡುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಇ) ಎ‌ನು ಹಡಗಿಗೆ ವಿಮೆ ಮಾಡಿಸಿ, ಆ ನೌಕಾ ವಿಮಾ ವ್ಯಾಪಾರಿಗೆ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಸ್ವಯಿಚ್ಛೆಯಿಂದ ಆ ಹಡಗು ಒಡೆದು ಹೋಗುವಂತೆ ಮಾಡುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಎಫ್) ಹಡಗಿನ ಆಧಾರದ ಮೇಲೆ ಸಾಲ ಕೊಟ್ಟಿರುವ ಜೆಡ್‌ನಿಗೆ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಎ‌ನು ಹಡಗು ಒಡೆದು ಹೋಗುವಂತೆ ಮಾಡುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಜಿ) ಜೆಡ್‌ನೊಡನೆ ಒಂದು ಕುದುರೆಯ ಜಂಟಿ ಮಾಲೀಕನಾಗಿರುವ ಎ‌ನು ಜೆಡ್‌ನಿಗೆ ಅಕ್ರಮವಾಗಿ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಆ ಕುದುರೆಗೆ ಗುಂಡಿಕ್ಕುತ್ತಾನೆ. ಇಲ್ಲಿ ಎ‌ನು ಕೇಡುಂಟು ಮಾಡಿದ್ದಾನೆಂದಾಗುತ್ತದೆ.

(ಹೆಚ್) ಜೆಡ್‌ನ ಬೆಳೆಯನ್ನು ಹಾಳು ಮಾಡಬೇಕೆಂದು ಉದ್ದೇಶಿಸಿ ಮತ್ತು ತಾನು ಹಾಗೆ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದರೂ ಜೆಡ್‌ನ ಹೊಲಕ್ಕೆ ಎ‌ನು ದನಗಳನ್ನು ನುಗ್ಗಿಸುತ್ತಾನೆ. ಇಲ್ಲಿ ಎ‌ನು ಕೇಡು ಮಾಡಿದ್ದಾನೆಂದಾಗುತ್ತದೆ.

(2) ಕೇಡು ಮಾಡಿದ ಯಾರೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು ಕೇಡು ಉಂಟುಮಾಡಿ ಅದರಿಂದ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಸ್ವತ್ತೂ ಸೇರಿದಂತೆ ಯಾವುದೇ ಸ್ವತ್ತಿಗೆ ನಷ್ಟ ಅಥವಾ ಹಾನಿ ಉಂಟುಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು ಕೇಡು ಉಂಟುಮಾಡಿ ಅದರಿಂದ ಇಪ್ಪತ್ತು ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಆದರೆ, ಒಂದು ಲಕ್ಷಕ್ಕಿಂತ ಕಡಿಮೆಯದಾದ ಮೊತ್ತಕ್ಕೆ ನಷ್ಟ ಅಥವಾ ಹಾನಿ ಉಂಟುಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(5) ಯಾರೇ ವ್ಯಕ್ತಿಯು ಕೇಡು ಉಂಟುಮಾಡಿ ಅದರಿಂದ ಒಂದು ಲಕ್ಷ ರೂಪಾಯಿ ಅಥವಾ ಅದಕ್ಕೆ ಮೇಲ್ಪಟ್ಟ ಮೊತ್ತಕ್ಕೆ ನಷ್ಟ ಅಥವಾ ಹಾನಿ ಉಂಟುಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(6) ಯಾರೇ ವ್ಯಕ್ತಿಯು ಯಾರೇ ಇನ್ನೊಬ್ಬ ವ್ಯಕ್ತಿಗೆ ಮರಣದ ಅಥವಾ ಗಾಯದ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಅಥವಾ ಮರಣದ ಅಥವಾ ಗಾಯದ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಭಯವನ್ನುಂಟು ಮಾಡುವ ಸಿದ್ಧತೆ ನಡೆಸಿ ಕೇಡು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**325. ಪ್ರಾಣಿಯನ್ನು ಕೊಂದು ಅಥವಾ ಅಂಗವಿಕಲಗೊಳಿಸಿ ಮಾಡಿದ ಕೇಡು.**- ಯಾರೇ ವ್ಯಕ್ತಿಯು, ಯಾವುದೇ ಪ್ರಾಣಿಯನ್ನು ಕೊಂದು, ವಿಷ ಹಾಕಿ, ಅಂಗವಿಕಲಗೊಳಿಸಿ ಅಥವಾ ಅನುಪಯುಕ್ತಗೊಳಿಸಿ ಕೇಡು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**326. ಕ್ಷತಿ, ಜಲಪ್ರವಾಹ, ಬೆಂಕಿ ಅಥವಾ ಸ್ಫೋಟಕ ಪದಾರ್ಥಗಳು, ಇತ್ಯಾದಿಗಳಿಂದ ಉಂಟುಮಾಡಿದ ಕೇಡು.-** ಯಾರೇ ವ್ಯಕ್ತಿಯು,-

(ಎ) ಬೇಸಾಯದ ಉದ್ದೇಶಗಳಿಗಾಗಿ ಅಥವಾ ಮಾನವರಿಗೆ ಅಥವಾ ಅವರ ಸ್ವತ್ತಾಗಿರುವ ಪ್ರಾಣಿಗಳಿಗೆ ಆಹಾರಕ್ಕಾಗಿ ಅಥವಾ ಕುಡಿಯುವುದಕ್ಕಾಗಿ ಅಥವಾ ಸ್ವಚ್ಛತೆಗಾಗಿ ಅಥವಾ ಯಾವುದೇ ಸರಕು ತಯಾರಿಕೆಗಾಗಿ ಇರುವ ನೀರಿನ ಸರಬರಾಜನ್ನು ಅಕ್ರಮವಾಗಿ ಕಡಿಮೆ ಮಾಡುವುದಕ್ಕಾಗಿ ಅಥವಾ ತಾನು ಕಡಿಮೆ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ ಯಾವುದೇ ಕೃತ್ಯವನ್ನು ಎಸಗಿ ಕೇಡು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಯಾವುದೇ ಸಾರ್ವಜನಿಕ ರಸ್ತೆಯನ್ನು, ಸೇತುವೆಯನ್ನು ಅಥವಾ ನೈಸರ್ಗಿಕವಾದ ಅಥವಾ ಕೃತಕವಾದ ಸಂಚಾರ ಯೋಗ್ಯ ನದಿಯನ್ನು ಅಥವಾ ಸಂಚಾರ ಯೋಗ್ಯ ಕಾಲುವೆಯನ್ನು ಪ್ರಯಾಣ ಮಾಡಲು ಆಗದಂತೆ ಅಥವಾ ಸ್ವತ್ತನ್ನು ಸಾಗಿಸಲು ಆಗದಂತೆ ಅಥವಾ ಅದರ ಸುರಕ್ಷತೆ ಕಡಿಮೆಯಾಗುವಂತೆ ಮಾಡುವ ಅಥವಾ ಹಾಗಾಗುವ ಸಂಭವವಿದೆಯೆಂಬುದು ಗೊತ್ತಿದ್ದೂ ಮಾಡುವ ಯಾವುದೇ ಕೃತ್ಯವನ್ನು ಎಸಗಿ ಕೇಡು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಸಿ) ಯಾವುದೇ ಸಾರ್ವಜನಿಕ ಚರಂಡಿಗೆ ಹಾನಿ ಅಥವಾ ನಷ್ಟ ಉಂಟಾಗುವಂತೆ ಮಾಡಲು ತುಂಬಾ ನೀರು ಹರಿಸುವುದು ಅಥವಾ ಅಡ್ಡಿ ಉಂಟುಮಾಡುವುದು ಅಥವಾ ಹಾಗಾಗುವ ಸಂಭವವಿದೆಯೆಂಬುದು ಗೊತ್ತಿದ್ದೂ ಯಾವುದೇ ಕೃತ್ಯವನ್ನು ಎಸಗಿ ಕೇಡು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಡಿ) ಯಾವುದೇ ದೀಪ ಗೃಹವನ್ನು ಅಥವಾ ಸಮುದ್ರ-ಗುರುತುಚಿಹ್ನೆಯಂತೆ ಬಳಸಿದ ಇತರ ದೀಪವನ್ನು ಅಥವಾ ನಾವಿಕರಿಗೆ ಮಾರ್ಗದರ್ಶನ ಮಾಡಲು ಇಟ್ಟಿರುವ ಯಾವುದೇ ಸಮುದ್ರ-ಗುರುತುಚಿಹ್ನೆಯನ್ನು ಅಥವಾ ತೇಲುಬುರುಡೆಯನ್ನು ಅಥವಾ ಇತರ ವಸ್ತುವನ್ನು ನಾಶಮಾಡುವ ಅಥವಾ ಕದಲಿಸುವ ಅಥವಾ ನಾವಿಕರಿಗೆ ಮಾರ್ಗದರ್ಶನ ಮಾಡುವ ಅಂಥ ದೀಪ ಗೃಹದ ಅಥವಾ ಸಮುದ್ರ-ಗುರುತುಚಿಹ್ನೆಯ ಅಥವಾ ತೇಲುಬುರುಡೆಯ ಅಥವಾ ವಸ್ತುವಿನ ಉಪಯುಕ್ತತೆಯನ್ನು ಕಡಿಮೆ ಮಾಡುವ ಯಾವುದೇ ಕೃತ್ಯವನ್ನು ಎಸಗಿ ಕೇಡು ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಇ) ಲೋಕ ನೌಕರನ ಅಧಿಕಾರದಂತೆ ನೆಟ್ಟ ಯಾವುದೇ ಭೂಮಿ ಗುರುತನ್ನು ನಾಶಪಡಿಸುವ ಅಥವಾ ಕದಲಿಸುವ ಅಥವಾ ಅಂಥ ಭೂಮಿ ಗುರುತಿನ ಉಪಯುಕ್ತತೆಯನ್ನು ಕಡಿಮೆ ಮಾಡುವ ಯಾವುದೇ ಕೃತ್ಯವನ್ನು ಎಸಗಿ ಕೇಡು ಮಾಡಿದರೆ,

ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಎಫ್) ಕೃಷಿ ಉತ್ಪನ್ನವನ್ನೂ ಒಳಗೊಂಡಂತೆ ಯಾವುದೇ ಸ್ವತ್ತಿಗೆ ಹಾನಿ ಉಂಟುಮಾಡಲು ಉದ್ದೇಶಿಸಿ ಅಥವಾ ಹಾಗೆ ಮಾಡುವುದರಿಂದ ಹಾನಿ ಉಂಟಾಗುವ ಸಂಭವವಿದೆಯೆಂಬುದು ಗೊತ್ತಿದ್ದೂ ಬೆಂಕಿ ಅಥವಾ ಯಾವುದೇ ಸ್ಫೋಟಕ ಪದಾರ್ಥವನ್ನು ಬಳಸಿ ಕೇಡು ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಜಿ) ಯಾರೇ ವ್ಯಕ್ತಿಯು, ಪೂಜಾ ಸ್ಥಳವೆಂದು ಅಥವಾ ಮಾನವ ವಸತಿ ಸ್ಥಳವೆಂದು ಅಥವಾ ಸ್ವತ್ತಿನ ಅಭಿರಕ್ಷೆಯ ಸ್ಥಳವೆಂದು ಸಾಮಾನ್ಯವಾಗಿ ಬಳಸುವ ಯಾವುದೇ ಕಟ್ಟಡವನ್ನು, ಬೆಂಕಿ ಅಥವಾ ಯಾವುದೇ ಸ್ಫೋಟಕ ಪದಾರ್ಥವನ್ನು ಬಳಸಿ ನಾಶಮಾಡಲು ಉದ್ದೇಶಿಸಿ ಅಥವಾ ತಾನು ಅದರಿಂದ ಹಾಗೆ ಉಂಟುಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ ಕೇಡು ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**327. ಯಾವುದೇ ರೈಲು, ವಿಮಾನ, ಅಂತಸ್ತುಳ್ಳ ನೌಕೆ ಅಥವಾ ಇಪ್ಪತ್ತು ಟನ್ನುಗಳ ಹೊರೆಯ ನೌಕೆಯನ್ನು ನಾಶಪಡಿಸುವ ಅಥವಾ ಅಭದ್ರ ಮಾಡುವ ಉದ್ದೇಶದಿಂದ ಮಾಡಿದ ಕೇಡು.-** (1) ಯಾರೇ ವ್ಯಕ್ತಿಯು, ಯಾವುದೇ ರೈಲು, ವಿಮಾನ ಅಥವಾ ಅಂತಸ್ತುಳ್ಳ ಯಾವುದೇ ನೌಕೆಯನ್ನು ಅಥವಾ ಇಪ್ಪತ್ತು ಅಥವಾ ಅದಕ್ಕೂ ಮೇಲ್ಪಟ್ಟ ಟನ್ನುಗಳ ಹೊರೆಯ ಯಾವುದೇ ನೌಕೆಯನ್ನು ನಾಶಪಡಿಸುವ ಅಥವಾ ಅಭದ್ರ ಮಾಡುವ ಉದ್ದೇಶದಿಂದ ತಾನು ಆ ರೈಲು, ವಿಮಾನ ಅಥವಾ ನೌಕೆಯನ್ನು ನಾಶಪಡಿಸುವ ಅಥವಾ ಅಭದ್ರ ಮಾಡುವ ಸಂಭವವಿದೆಯೆಂಬುದು ಗೊತ್ತಿದ್ದೂ ಅದಕ್ಕೆ ಕೇಡು ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ವಿವರಿಸಿರುವ ಕೇಡನ್ನು, ಬೆಂಕಿಯನ್ನು ಬಳಸಿ ಅಥವಾ ಯಾವುದೇ ಸ್ಫೋಟಕ ಪದಾರ್ಥವನ್ನು ಬಳಸಿ ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**328. ಕಳವು, ಇತ್ಯಾದಿಗಳನ್ನು ಮಾಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ನೌಕೆಯನ್ನು ನೆಲಕ್ಕೆ ಅಥವಾ ತೀರಕ್ಕೆ ನಡೆಸಿದರೆ ದಂಡನೆ.-** ಯಾರೇ ವ್ಯಕ್ತಿಯು, ನೌಕೆಯಲ್ಲಿರುವ ಯಾವುದೇ ಸ್ವತ್ತನ್ನು ಕಳವು ಮಾಡುವ ಅಥವಾ ಅಂಥ ಯಾವುದೇ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗಿಸುವ ಉದ್ದೇಶದಿಂದ ಅಥವಾ ಅಂಥ ಸ್ವತ್ತನ್ನು ಕಳವು ಅಥವಾ ದುರ್ವಿನಿಯೋಗ ಮಾಡಬಹುದೆಂಬ ಉದ್ದೇಶದಿಂದ ಯಾವುದೇ ನೌಕೆಯನ್ನು ಉದ್ದೇಶಪೂರ್ವಕವಾಗಿ ನೆಲಕ್ಕೆ ಅಥವಾ ತೀರಕ್ಕೆ ಚಲಾಯಿಸಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

### *ಆಪರಾಧಿಕ ಅತಿಕ್ರಮಣ ಪ್ರವೇಶ*

**329. ಆಪರಾಧಿಕ ಅತಿಕ್ರಮಣ ಪ್ರವೇಶ ಮತ್ತು ಮನೆ-ಅತಿಕ್ರಮಣ ಪ್ರವೇಶ.-** (1) ಯಾರೇ ವ್ಯಕ್ತಿಯು, ಅಪರಾಧ ಮಾಡುವ ಉದ್ದೇಶದಿಂದ ಇನ್ನೊಬ್ಬನ ಸ್ವಾಧೀನದಲ್ಲಿರುವ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ, ಅಂಥ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಯಾರೇ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶಕ್ಕಾಗಿ ಪ್ರವೇಶಿಸಿದರೆ ಅಥವಾ ಕಾನೂನುಬದ್ಧವಾಗಿ ಅಂಥ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ ಪ್ರವೇಶಿಸಿ ಕಾನೂನುಬಾಹಿರವಾಗಿ ಅಂಥ ಯಾರೇ ವ್ಯಕ್ತಿಯನ್ನು

ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶದಿಂದ ಅಥವಾ ಅಪರಾಧ ಮಾಡುವ ಉದ್ದೇಶದಿಂದ ಅಲ್ಲೇ ಉಳಿದರೆ, ಅವನು "ಆಪರಾಧಿಕ ಅತಿಕ್ರಮಣ ಪ್ರವೇಶ" ಮಾಡಿದ್ದಾನೆಂದು ಹೇಳಲಾಗುತ್ತದೆ.

(2) ಯಾರೇ ವ್ಯಕ್ತಿಯು, ಮಾನವ ವಸತಿ ಸ್ಥಳದಂತೆ ಬಳಸುವ ಯಾವುದೇ ಕಟ್ಟಡವನ್ನು, ಡೇರೆಯನ್ನು ಅಥವಾ ನೌಕೆಯನ್ನು ಅಥವಾ ಪೂಜಾಸ್ಥಳದಂತೆ ಅಥವಾ ಸ್ವತ್ತಿನ ಅಭಿರಕ್ಷೆಗಾಗಿ ಇರುವ ಸ್ಥಳದಂತೆ ಬಳಸುವ ಯಾವುದೇ ಕಟ್ಟಡವನ್ನು ಪ್ರವೇಶಿಸುವ ಅಥವಾ ಆ ಸ್ಥಳದಲ್ಲೇ ಉಳಿಯುವ ಮೂಲಕ ಆಪರಾಧಿಕ ಅತಿಕ್ರಮಣ ಪ್ರವೇಶ ಮಾಡಿದರೆ, ಅವನು "ಮನೆ-ಅತಿಕ್ರಮಣ ಪ್ರವೇಶ" ಮಾಡಿದ್ದಾನೆಂದು ಹೇಳಲಾಗುತ್ತದೆ.

*ವಿವರಣೆ.-* ಆಪರಾಧಿಕ ಅತಿಕ್ರಮಣ ಪ್ರವೇಶ ಮಾಡುವವನ ದೇಹದ ಯಾವುದೇ ಭಾಗ ಪ್ರವೇಶವಾದರೆ ಅದು, ಮನೆ-ಅತಿಕ್ರಮಣ ಪ್ರವೇಶವೆನಿಸುತ್ತದೆ.

(3) ಯಾರೇ ವ್ಯಕ್ತಿಯು ಆಪರಾಧಿಕ ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**330. ಮನೆ-ಅತಿಕ್ರಮಣ ಪ್ರವೇಶ ಮಾಡುವುದು ಮತ್ತು ಮನೆಗೆ ಕನ್ನ ಹಾಕುವುದು.-** (1) ಯಾರೇ ವ್ಯಕ್ತಿಯು, ಯಾವ ಕಟ್ಟಡಕ್ಕೆ, ಡೇರೆಗೆ ಅಥವಾ ನೌಕೆಗೆ ಅತಿಕ್ರಮಣ ಪ್ರವೇಶ ಆಗಿದೆಯೋ ಆ ಕಟ್ಟಡದಿಂದ, ಡೇರೆಯಿಂದ ಅಥವಾ ನೌಕೆಯಿಂದ ಅತಿಕ್ರಮಣ ಪ್ರವೇಶ ಮಾಡಿರುವವನನ್ನು ಹೊರಗಿರಿಸುವ ಅಥವಾ ಹೊರದೂಡುವ ಹಕ್ಕುಳ್ಳ ವ್ಯಕ್ತಿಯು ಮನೆ-ಅತಿಕ್ರಮಣ ಪ್ರವೇಶವಾಗಿರುವುದನ್ನು ಮರೆಮಾಚಲು ಉಪಾಯ ಮಾಡಿಕೊಂಡು ಆಪರಾಧಿಕ ಅತಿಕ್ರಮಣ ಪ್ರವೇಶ ಮಾಡಿದರೆ, ಅವನು "ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ" ಮಾಡಿದ್ದಾನೆಂದು ಹೇಳಲಾಗುತ್ತದೆ.

(2) ಮನೆ-ಅತಿಕ್ರಮಣ ಪ್ರವೇಶ ಮಾಡಿದ ಯಾರೇ ವ್ಯಕ್ತಿಯು, ಈ ಮುಂದೆ ವಿವರಿಸಿರುವ ಆರು ವಿಧಗಳ ಪೈಕಿ ಯಾವುದಾದರೊಂದು ವಿಧದಿಂದ ಮನೆಯ ಒಳಗೆ ಅಥವಾ ಮನೆಯ ಯಾವುದೇ ಭಾಗಕ್ಕೆ ತಾನು ಪ್ರವೇಶಿಸಿದರೆ ಅಥವಾ ಅಪರಾಧ ಮಾಡುವ ಉದ್ದೇಶದಿಂದ ಮನೆಯಲ್ಲಿ ಅಥವಾ ಮನೆಯ ಯಾವುದೇ ಭಾಗದಲ್ಲಿ ಇದ್ದು ಅಥವಾ ಅಲ್ಲಿ ಅಪರಾಧ ಮಾಡಿ ಮನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಈ ಮುಂದಿನ ಯಾವುದಾದರೂ ಒಂದು ವಿಧದಲ್ಲಿ ಬಿಟ್ಟು ಹೊರಗೆ ಹೋದರೆ, ಅವನು 'ಮನೆಗೆ ಕನ್ನ ಹಾಕಿದ್ದಾನೆಂದು' ಹೇಳಲಾಗುತ್ತದೆ, ಎಂದರೆ:-

(ಎ) ಮನೆ-ಅತಿಕ್ರಮಣ ಪ್ರವೇಶ ಮಾಡಲು ತಾನೇ ಮಾಡಿದ ಅಥವಾ ಮನೆ-ಅತಿಕ್ರಮಣ ಪ್ರವೇಶಕ್ಕಾಗಿ ಯಾರೇ ದುಷ್ಪ್ರೇರಕನು ಮಾಡಿದ ಹಾದಿಯ ಮೂಲಕ ಅವನು ಪ್ರವೇಶಿಸಿದರೆ ಅಥವಾ ಹೊರಹೋದರೆ;

(ಬಿ) ತಾನು ಅಥವಾ ಅಪರಾಧದ ದುಷ್ಪ್ರೇರಕನಲ್ಲದೆ, ಮಾನವ ಪ್ರವೇಶಕ್ಕಾಗಿ ಇತರ ಯಾರೇ ವ್ಯಕ್ತಿಯು ಉದ್ದೇಶಿಸದ ಯಾವುದೇ ದಾರಿಯ ಮೂಲಕ ಅಥವಾ ಯಾವುದೇ ಗೋಡೆಯನ್ನು ಅಥವಾ ಕಟ್ಟಡವನ್ನು ಹತ್ತುವ ಅಥವಾ ಇಳಿಯುವ ಮೂಲಕ ತಾನು ಪ್ರವೇಶಿಸಲು ಅವಕಾಶವಾದ ದಾರಿಯಿಂದ ಅವನು ಪ್ರವೇಶಿಸಿದರೆ ಅಥವಾ ಹೊರಹೋದರೆ;

(ಸಿ) ಮನೆಯಲ್ಲಿ ಅಧಿಭೋಗದಾರನು ಆ ದಾರಿಯನ್ನು ಯಾವ ವಿಧಾನಗಳಿಂದ ತೆರೆದಿಡಲು ಉದ್ದೇಶಿಸಿರಲಿಲ್ಲವೋ ಆ ಯಾವುದೇ ವಿಧಾನದಿಂದ ಮನೆ-ಅತಿಕ್ರಮಣ ಪ್ರವೇಶ ಮಾಡಲು ತಾನು ಅಥವಾ ಮನೆ-ಅತಿಕ್ರಮಣ ಪ್ರವೇಶಕ್ಕಾಗಿ ಯಾರೇ ದುಷ್ಪ್ರೇರಕನು ತೆರೆದ ದಾರಿಯಿಂದ ತಾನು ಪ್ರವೇಶಿಸಿದರೆ ಅಥವಾ ಹೊರಹೋದರೆ;

(ಡಿ) ಮನೆ-ಅತಿಕ್ರಮಣ ಪ್ರವೇಶ ಮಾಡಲು ಅಥವಾ ಮನೆ-ಅತಿಕ್ರಮಣ ಪ್ರವೇಶ ಮಾಡಿದ ಅನಂತರ ಮನೆಯಿಂದ ಹೊರಹೋಗಲು ಯಾವುದೇ ಬೀಗವನ್ನು ತೆಗೆದು ಅವನು ಪ್ರವೇಶಿಸಿದರೆ ಅಥವಾ ಹೊರಹೋದರೆ;

(ಇ) ಆಪರಾಧಿಕ ಬಲಪ್ರಯೋಗ ಮಾಡಿ ಅಥವಾ ಹಲ್ಲೆ ಮಾಡಿ ಅಥವಾ ಯಾರೇ ವ್ಯಕ್ತಿಗೆ ಹಲ್ಲೆ ಮಾಡುವ ಬೆದರಿಕೆ ಹಾಕಿ ಅವನು ಪ್ರವೇಶಿಸಿದರೆ ಅಥವಾ ನಿರ್ಗಮಿಸಿದರೆ;

(ಎಫ್) ಅಂಥ ಪ್ರವೇಶಕ್ಕೆ ಅಥವಾ ನಿರ್ಗಮನಕ್ಕೆ ಆ ದಾರಿಯನ್ನು ಮುಚ್ಚಲಾಗಿದೆಯೆಂದು ಮತ್ತು ತನ್ನಿಂದ ಅಥವಾ ಮನೆ-ಅತಿಕ್ರಮಣ ಪ್ರವೇಶಕ್ಕಾಗಿ ದುಷ್ಪ್ರೇರಕನಿಂದ ತೆರೆಯಲಾಗಿದೆಯೆಂದು ತನಗೆ ಗೊತ್ತಿರುವ ಯಾವುದೇ ದಾರಿಯಿಂದ ಅವನು ಪ್ರವೇಶಿಸಿದರೆ ಅಥವಾ ಹೊರಹೋದರೆ

- ಮನೆಗೆ ಕನ್ನ ಹಾಕಿದ್ದಾನೆಂದು ಹೇಳಲಾಗುತ್ತದೆ.

*ವಿವರಣೆ.-* ಅಲ್ಲದೆ ಸ್ವಾಧೀನದಲ್ಲಿಟ್ಟುಕೊಂಡಿರುವ ಹೊರಮನೆಯ ಅಥವಾ ಕಟ್ಟಡದ ಮತ್ತು ಆ ಮನೆಯ ನಡುವೆ ನಿಕಟ ಒಳಸಂಪರ್ಕವಿದ್ದರೆ ಆ ಹೊರಮನೆಯು ಅಥವಾ ಕಟ್ಟಡವು ಈ ಪ್ರಕರಣದ ಅರ್ಥದಲ್ಲಿ ಆ ಮನೆಯ ಒಂದು ಭಾಗವೆಂದಾಗುತ್ತದೆ.

*ದೃಷ್ಟಾಂತಗಳು*

(ಎ) ಜೆಡ್‍ನ ಮನೆಯ ಗೋಡೆಯಲ್ಲಿ ಒಂದು ಕಿಂಡಿ ಮಾಡಿ, ಆ ಕಿಂಡಿಯ ಮೂಲಕ ಕೈಯನ್ನು ಹಾಕಿ ಎನು ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಬಿ) ಹಡಗಿನ ಅಂತಸ್ತುಗಳ ನಡುವೆಯಿರುವ ಒಂದು ತೆರಪು-ಗುಂಡಿಯಿಂದ ತೆವಳಿಕೊಂಡು ಹಡಗಿನ ಒಳಗಡೆಗೆ ಬಂದು ಎನು ಹಡಗಿನ ಒಳಗಡೆಗೆ ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಹಡಗಿಗೆ ಕನ್ನ ಹಾಕುವುದೆಂದಾಗುತ್ತದೆ.

(ಸಿ) ಒಂದು ಕಿಟಕಿಯಿಂದ ಎನು ಜೆಡ್‍ನ ಮನೆಯೊಳಕ್ಕೆ ಪ್ರವೇಶಿಸಿ ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಡಿ) ಮುಚ್ಚಿದ್ದ ಬಾಗಿಲನ್ನು ತೆಗೆದು, ಅದರ ಮಾರ್ಗವಾಗಿ ಜೆಡ್‍ನ ಮನೆಯೊಳಗೆ ಪ್ರವೇಶಿಸಿ ಎನು ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಇ) ಬಾಗಿಲಿನ ಒಂದು ರಂಧ್ರದಲ್ಲಿ ಒಂದು ತಂತಿ ಹಾಕಿ ಬಾಗಿಲಿನ ಅಗಳಿ ತೆಗೆದು ಎನು ಜೆಡ್‍ನ ಮನೆಯನ್ನು ಪ್ರವೇಶಿಸಿ ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಎಫ್) ಜೆಡ್‍ನು ಮನೆಯ ಬೀಗದ ಕೈ ಕಳೆದುಕೊಂಡಿರುತ್ತಾನೆ. ಜೆಡ್‍ನ ಮನೆಯ ಆ ಬೀಗದ ಕೈ ಎನಿಗೆ ಸಿಗುತ್ತದೆ ಮತ್ತು ಆ ಬೀಗದ ಕೈಯಿಂದ ಅವನು ಬಾಗಿಲನ್ನು ತೆಗೆದು ಜೆಡ್‍ನ ಮನೆಯನ್ನು ಪ್ರವೇಶಿಸಿ ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಜಿ) ಜೆಡ್‍ನು ತನ್ನ ಮನೆಯ ಬಾಗಿಲಲ್ಲಿ ನಿಂತಿದ್ದಾನೆ. ಎನು ಜೆಡ್‍ನನ್ನು ಕೆಳಕ್ಕೆ ತಳ್ಳಿ ದಾರಿ ಮಾಡಿಕೊಂಡು ಮನೆಯನ್ನು ಪ್ರವೇಶಿಸಿ ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

(ಹೆಚ್) ವೈನ ಮನೆ ಬಾಗಿಲನ್ನು ಕಾಯುವ ಜೆಡ್‍ನು ವೈನ ಮನೆ ಬಾಗಿಲಲ್ಲಿ ನಿಂತಿದ್ದಾನೆ. ತನಗೆ ಅಡ್ಡಿಯುಂಟು ಮಾಡದಂತೆ ಜೆಡ್‍ನಿಗೆ ಹೊಡೆಯುವ ಬೆದರಿಕೆ ಹಾಕಿ ಎನು ಮನೆ-ಅತಿಕ್ರಮಣ ಪ್ರವೇಶ ಮಾಡುತ್ತಾನೆ. ಇದು ಮನೆಗೆ ಕನ್ನ ಹಾಕುವುದೆಂದಾಗುತ್ತದೆ.

**331. ಮನೆ-ಅತಿಕ್ರಮಣ ಪ್ರವೇಶ ಮಾಡಿದ್ದಕ್ಕೆ ಅಥವಾ ಮನೆಗೆ ಕನ್ನ ಹಾಕಿದ್ದಕ್ಕೆ ದಂಡನೆ.-** (1) ಯಾರೇ ವ್ಯಕ್ತಿಯು, ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ ಅಥವಾ ಮನೆಗೆ ಕನ್ನ ಹಾಕಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, **ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು** ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ ಅಥವಾ ಮನೆಗೆ ಕನ್ನ ಹಾಕಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಯಾವುದೇ ಅಪರಾಧ ಮಾಡಲು ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಮಾಡಲು ಉದ್ದೇಶಿಸಿದ ಅಪರಾಧವು ಕಳವಿನ ಅಪರಾಧವಾಗಿದ್ದರೆ ಕಾರಾವಾಸದ ಅವಧಿಯನ್ನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದು.

(4) ಯಾರೇ ವ್ಯಕ್ತಿಯು, ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಯಾವುದೇ ಅಪರಾಧ ಮಾಡಲು **ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು** ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ ಅಥವಾ ಮನೆಗೆ ಕನ್ನ ಹಾಕಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಮಾಡಲು ಉದ್ದೇಶಿಸಿದ ಅಪರಾಧವು ಕಳವಿನ ಅಪರಾಧವಾಗಿದ್ದರೆ ಕಾರಾವಾಸದ ಅವಧಿಯನ್ನು ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದು.

(5) ಯಾರೇ ವ್ಯಕ್ತಿಯು, ಯಾರೇ ವ್ಯಕ್ತಿಗೆ ಗಾಯ ಮಾಡಲು ಅಥವಾ ಯಾರೇ ವ್ಯಕ್ತಿಯ ಮೇಲೆ ಹಲ್ಲೆ ಮಾಡಲು ಅಥವಾ ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಪ್ರತಿಬಂಧಿಸಲು ಅಥವಾ ಯಾರೇ ವ್ಯಕ್ತಿಗೆ ಗಾಯದ ಅಥವಾ ಹಲ್ಲೆಯ ಅಥವಾ ಅಕ್ರಮವಾಗಿ ಪ್ರತಿಬಂಧಿಸುವುದಾಗಿ ಬೆದರಿಕೆ ಹಾಕುವ ಸಿದ್ಧತೆ ಮಾಡಿಕೊಂಡ ಮೇಲೆ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(6) ಯಾರೇ ವ್ಯಕ್ತಿಯು, ಯಾರೇ ವ್ಯಕ್ತಿಗೆ ಗಾಯ ಮಾಡಲು ಅಥವಾ ಯಾರೇ ವ್ಯಕ್ತಿಯ ಮೇಲೆ ಹಲ್ಲೆ ಮಾಡಲು ಅಥವಾ ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಪ್ರತಿಬಂಧಿಸಲು ಅಥವಾ ಯಾರೇ ವ್ಯಕ್ತಿಗೆ ಗಾಯದ ಅಥವಾ ಹಲ್ಲೆಯ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಬೆದರಿಕೆ ಹಾಕಲು ಸಿದ್ಧತೆ ಮಾಡಿಕೊಂಡ ಮೇಲೆ **ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು** ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ ಅಥವಾ ಮನೆಗೆ ಕನ್ನ ಹಾಕಿದರೆ, ಅವನು ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(7) ಯಾರೇ ವ್ಯಕ್ತಿಯು, ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡುವಾಗ ಅಥವಾ ಮನೆಗೆ ಕನ್ನ ಹಾಕುವಾಗ ಯಾರೇ ಇನ್ನೊಬ್ಬ ವ್ಯಕ್ತಿಗೆ ತೀವ್ರ ಗಾಯವನ್ನುಂಟು ಮಾಡಿದರೆ ಅಥವಾ ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡಲು ಪ್ರಯತ್ನಿಸಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(8) **ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು** ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡುವಾಗ ಅಥವಾ ಮನೆಗೆ ಕನ್ನ ಹಾಕುವಾಗ ಅಂಥ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವ ಯಾರೇ ವ್ಯಕ್ತಿಯು ಯಾರೇ ಇನ್ನೊಬ್ಬ ವ್ಯಕ್ತಿಗೆ ಸ್ವಯಿಚ್ಛೆಯಿಂದ ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡಿದರೆ ಅಥವಾ ಉಂಟು ಮಾಡಲು ಪ್ರಯತ್ನಿಸಿದರೆ, **ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯದ ಮೊದಲು** ಹೊಂಚು ಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡುವ ಅಥವಾ ರಾತ್ರಿಯಲ್ಲಿ ಮನೆಗೆ ಕನ್ನ ಹಾಕುವ ಅಂಥ ಅಪರಾಧಕ್ಕೆ ಸಂಬಂಧಿಸಿದ ಪ್ರತಿಯೊಬ್ಬನೂ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ

ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**332. ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ.- ಯಾರೇ ವ್ಯಕ್ತಿಯು,-**

(ಎ) ಮರಣ ದಂಡನೀಯವಾದ ಯಾವುದೇ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳಿಗೆ ಮೀರದ ಅವಧಿಯ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಬಿ) ಆಜೀವ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಹತ್ತು ವರ್ಷಗಳಿಗೆ ಮೀರದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(ಸಿ) ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ಅಪರಾಧವು ಕಳ್ಳತನವನ್ನು ಮಾಡುವ ಉದ್ದೇಶವನ್ನು ಹೊಂದಿರುವ ಅಪರಾಧವಾಗಿದ್ದರೆ, ಕಾರಾವಾಸದ ಅವಧಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾಗಿದೆ.

**333. ಗಾಯ ಮಾಡಲು, ಹಲ್ಲೆ ಮಾಡಲು ಅಥವಾ ಅಕ್ರಮವಾಗಿ ಪ್ರತಿಬಂಧಿಸಲು ಸಿದ್ಧತೆ ಮಾಡಿಕೊಂಡ ಮೇಲೆ ಮನೆ-ಅತಿಕ್ರಮಣ ಪ್ರವೇಶ ಮಾಡುವುದು.-** ಯಾರೇ ವ್ಯಕ್ತಿಗೆ ಗಾಯ ಮಾಡಲು ಅಥವಾ ಯಾರೇ ವ್ಯಕ್ತಿಯ ಮೇಲೆ ಹಲ್ಲೆ ಮಾಡಲು ಅಥವಾ ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಪ್ರತಿಬಂಧಿಸಲು ಅಥವಾ ಯಾರೇ ವ್ಯಕ್ತಿಗೆ ಗಾಯದ ಅಥವಾ ಹಲ್ಲೆಯ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಬೆದರಿಕೆ ಹಾಕಲು ಸಿದ್ಧತೆ ಮಾಡಿಕೊಂಡ ಮೇಲೆ ಮನೆ-ಅತಿಕ್ರಮಣ ಪ್ರವೇಶ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**334. ಸ್ವತ್ತನ್ನು ಇಡಲಾಗಿರುವ ಧಾರಕವನ್ನು ಅಪ್ರಾಮಾಣಿಕವಾಗಿ ಒಡೆದು ತೆರೆಯುವುದು.-** (1) ಯಾರೇ ವ್ಯಕ್ತಿಯು, ಸ್ವತ್ತನ್ನು ಇಟ್ಟಿರುವ ಅಥವಾ ಇಟ್ಟಿರುವುದಾಗಿ ತಾನು ನಂಬಿರುವ ಯಾವುದೇ ಮುಚ್ಚಿದ ಧಾರಕವನ್ನು ಅಪ್ರಾಮಾಣಿಕವಾಗಿ ಅಥವಾ ಕೇಡುಂಟು ಮಾಡುವ ಉದ್ದೇಶದಿಂದ ಒಡೆದು ತೆರೆದರೆ ಅಥವಾ ಬಿಚ್ಚಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಸ್ವತ್ತನ್ನು ಇಟ್ಟಿರುವ ಅಥವಾ ಇಟ್ಟಿರುವುದಾಗಿ ತಾನು ನಂಬಿರುವ ಯಾವುದೇ ಮುಚ್ಚಿದ ಧಾರಕವನ್ನು ತನಗೆ ವಹಿಸಲಾಗಿದ್ದು ಅದನ್ನು ತೆರೆಯುವುದಕ್ಕೆ ಅಧಿಕಾರವಿಲ್ಲದೆ ಅಪ್ರಾಮಾಣಿಕವಾಗಿ ಅಥವಾ ಕೇಡುಂಟು ಮಾಡುವ ಉದ್ದೇಶದಿಂದ ಆ ಧಾರಕವನ್ನು ಒಡೆದು ತೆರೆದರೆ ಅಥವಾ ಬಿಚ್ಚಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ XVIII

## ದಸ್ತಾವೇಜುಗಳಿಗೆ ಮತ್ತು ಸ್ವತ್ತಿನ ಗುರುತುಗಳಿಗೆ ಸಂಬಂಧಿಸಿದ ಅಪರಾಧಗಳು

**335. ಸುಳ್ಳು ದಸ್ತಾವೇಜಿನ ರಚನೆ.-** ಯಾವ ವ್ಯಕ್ತಿಯು,-

(ಎ) ಯಾವುದೇ ದಸ್ತಾವೇಜನ್ನು ಅಥವಾ ಅದರ ಭಾಗವನ್ನು, ವಿದ್ಯುನ್ಮಾನ ದಾಖಲೆಯನ್ನು ಅಥವಾ ವಿದ್ಯುನ್ಮಾನ ಸಹಿಯನ್ನು, ಯಾವ ವ್ಯಕ್ತಿಯು ಅಥವಾ ಆ ವ್ಯಕ್ತಿಯು ಅಧಿಕಾರ ನೀಡಿರದಿದ್ದರಿಂದ ರಚಿಸಿಲ್ಲವೆಂದು, ಸಹಿ ಹಾಕಿಲ್ಲವೆಂದು,

ಮೊಹರು ಮಾಡಿಲ್ಲವೆಂದು, ಬರೆದುಕೊಟ್ಟಿಲ್ಲವೆಂದು ಅಥವಾ ಅಂಟಿಸಿಲ್ಲವೆಂದು ತನಗೆ ಗೊತ್ತಿದೆಯೋ ಆ ವ್ಯಕ್ತಿಯೇ ಅಥವಾ ಆ ವ್ಯಕ್ತಿಯೇ ಅಧಿಕಾರ ನೀಡಿದ್ದರಿಂದ ಅದನ್ನು ರಚಿಸಲಾಗಿದೆ, ಅದಕ್ಕೆ ಸಹಿ ಹಾಕಲಾಗಿದೆ, ಅದಕ್ಕೆ ಮೊಹರು ಮಾಡಲಾಗಿದೆ, ಅದನ್ನು ಬರೆದುಕೊಡಲಾಗಿದೆ, ಅದನ್ನು ರವಾನಿಸಲಾಗಿದೆ ಅಥವಾ ಅಂಟಿಸಲಾಗಿದೆಯೆಂದು ನಂಬಿಸುವಂತೆ ಮಾಡುವ ಉದ್ದೇಶದಿಂದ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ,-

(i) ದಸ್ತಾವೇಜನ್ನು ಅಥವಾ ಅದರ ಭಾಗವನ್ನು ರಚಿಸುವನೋ, ಸಹಿ ಹಾಕುವನೋ, ಮೊಹರು ಮಾಡುವನೋ ಅಥವಾ ಬರೆದುಕೊಡುವನೋ;

(ii) ಯಾವುದೇ ವಿದ್ಯುನ್ಮಾನ ದಾಖಲೆಯನ್ನು ಅಥವಾ ಯಾವುದೇ ವಿದ್ಯುನ್ಮಾನ ದಾಖಲೆಯ ಭಾಗವನ್ನು ರಚಿಸುವನೋ ಅಥವಾ ರವಾನಿಸುವನೋ;

(iii) ಯಾವುದೇ ವಿದ್ಯುನ್ಮಾನ ದಾಖಲೆಯ ಮೇಲೆ ಯಾವುದೇ ವಿದ್ಯುನ್ಮಾನ ಸಹಿಯನ್ನು ಹಾಕುವನೋ;

(iv) ದಸ್ತಾವೇಜನ್ನು ಬರೆದುಕೊಡಲಾಗಿದೆಯೆಂಬುದನ್ನು ಅಥವಾ ವಿದ್ಯುನ್ಮಾನ ಸಹಿಯು ದೃಢೀಕೃತವಾಗಿರುವುದನ್ನು ಸೂಚಿಸುವ ಯಾವುದೇ ಗುರುತನ್ನು ಮಾಡುವನೋ; ಅಥವಾ

(ಬಿ) ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ತಾನೇ ಅಥವಾ ಇತರ ಯಾರೇ ವ್ಯಕ್ತಿಯು ಸೃಜಿಸಿದ ಅಥವಾ ಬರೆದುಕೊಟ್ಟ ಅಥವಾ ವಿದ್ಯುನ್ಮಾನ ಸಹಿಯನ್ನು ಮಾಡಿದ ನಂತರ ಕಾನೂನುಬದ್ಧವಾದ ಅಧಿಕಾರವಿಲ್ಲದೆ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಅದನ್ನು ರದ್ದು ಮಾಡಿ ಅಥವಾ ಅನ್ಯಥಾ ಆ ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯನ್ನು, ಅದರ ಯಾವುದೇ ಮುಖ್ಯ ಭಾಗವನ್ನು ವ್ಯತ್ಯಾಸಗೊಳಿಸುವ ಕಾಲದಲ್ಲಿ ಆ ಇತರ ವ್ಯಕ್ತಿಯು ಬದುಕಿರಲಿ ಅಥವಾ ಸತ್ತಿರಲಿ ವ್ಯತ್ಯಾಸಗೊಳಿಸುವನೋ; ಅಥವಾ

(ಸಿ) ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ಒಳಾಂಶಗಳು ಅಥವಾ ವ್ಯತ್ಯಾಸದ ಸ್ವರೂಪ ಯಾವ ವ್ಯಕ್ತಿಗೆ ತನ್ನ ಅಸ್ವಸ್ಥಚಿತ್ತದ ಅಥವಾ ಅಮಲಿನ ಕಾರಣದಿಂದಾಗಿ ತಿಳಿಯಲಾಗದೆಂದು ಅಥವಾ ಅವನಿಗೆ ವಂಚನೆ ಮಾಡಿರುವ ಕಾರಣದಿಂದ ಅವನಿಗೆ ಗೊತ್ತಾಗದೆಂದು ಗೊತ್ತಿದ್ದರೂ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಅದೇ ವ್ಯಕ್ತಿಯು ಆ ದಸ್ತಾವೇಜಿಗೆ ಅಥವಾ ವಿದ್ಯುನ್ಮಾನ ದಾಖಲೆಗೆ ವಿದ್ಯುನ್ಮಾನ ಸಹಿ ಹಾಕುವಂತೆ ಅಥವಾ ವಿದ್ಯುನ್ಮಾನ ದಾಖಲೆಗೆ ತನ್ನ ಸಹಿ ಹಾಕುವಂತೆ, ಮೊಹರು ಹಾಕುವಂತೆ, ಅದನ್ನು ಬರೆದುಕೊಡುವಂತೆ ಅಥವಾ ವ್ಯತ್ಯಸ್ಥಗೊಳಿಸುವಂತೆ ಮಾಡುವನೋ

- ಆ ವ್ಯಕ್ತಿಯು ಸುಳ್ಳು ದಸ್ತಾವೇಜನ್ನು ಅಥವಾ ಸುಳ್ಳು ವಿದ್ಯುನ್ಮಾನ ದಾಖಲೆಯನ್ನು ಸೃಷ್ಟಿಸಿದ್ದಾನೆಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) 'ಜೆಡ್'ನು 'ಬಿ'ಗೆ ಬರೆದುಕೊಟ್ಟ 10,000 ರೂಪಾಯಿಗಳ ಲೆಟರ್ ಆಫ್ ಕ್ರೆಡಿಟ್ 'ಎ'ನ ಬಳಿ ಇದೆ. 'ಬಿ'ಗೆ ಮೋಸ ಮಾಡುವುದಕ್ಕಾಗಿ ಮತ್ತು 'ಜೆಡ್'ನೇ ಹಾಗೆ ಪತ್ರವನ್ನು ಬರೆದಿದ್ದಾನೆಂದು 'ಬಿ'ನು ನಂಬಲೆಂಬ ಉದ್ದೇಶದಿಂದ 'ಎ'ನು 10,000 ಅಂಕಿಗೆ ಒಂದು ಸೊನ್ನೆಯನ್ನು ಸೇರಿಸಿ ಆ ಹಣದ ಮೊತ್ತವನ್ನು 1,00,000 ಅಂತ ಮಾಡುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಬಿ) 'ಜೆಡ್'ನಿಂದ 'ಎ'ನಿಗೆ ಎಸ್ಟೇಟು ವರ್ಗಾವಣೆಯಾಗಿದೆಯೆಂದು ತಾತ್ಪರ್ಯವಾಗುವ ದಸ್ತಾವೇಜಿಗೆ, ಆ ಎಸ್ಟೇಟನ್ನು 'ಬಿ'ನಿಗೆ ಮಾರಾಟ ಮಾಡಿ 'ಬಿ'ನಿಂದ ಖರೀದಿ ಹಣವನ್ನು ಪಡೆಯುವ ಉದ್ದೇಶದಿಂದ 'ಎ'ನು 'ಜೆಡ್'ನಿಂದ ಅಧಿಕಾರ ಪಡೆಯದೆಯೇ 'ಜೆಡ್'ನ ಮೊಹರನ್ನು ಹಾಕುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಸಿ) ವಾಹಕನಿಗೆ ಸಂದಾಯ ಮಾಡಬೇಕಾಗಿರುವ, 'ಬಿ'ನು ಸಹಿ ಮಾಡಿರುವ ಚೆಕ್ ಬ್ಯಾಂಕರನ ಬಳಿ ಇದ್ದು, ಆ ಚೆಕ್ಕನ್ನು 'ಎ'ನು ಎತ್ತಿಕೊಳ್ಳುತ್ತಾನೆ. ಆದರೆ ಆ ಚೆಕ್ಕಿನಲ್ಲಿ ಯಾವ ಮೊಬಲಗನ್ನೂ ನಮೂದಿಸಿರಲಿಲ್ಲ. 'ಎ'ನು ಮೋಸದಿಂದ ಆ ಚೆಕ್ಕಿನಲ್ಲಿ ಹತ್ತು ಸಾವಿರ ರೂಪಾಯಿ ಅಂಕಿಯನ್ನು ನಮೂದಿಸುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಡಿ) ಸಂದಾಯವಾಗಬೇಕಾಗಿರುವ ಮೊಬಲಗನ್ನು ನಮೂದಿಸದಿರುವ, ಬ್ಯಾಂಕರನ ಬಳಿ ಇರುವ ಚೆಕ್ಕೊಂದಕ್ಕೆ ಏನು ಸಹಿ ಮಾಡಿ ತನ್ನ ಏಜೆಂಟನಾದ ಬಿನಿಗೆ ಕೊಡುತ್ತಾನೆ ಮತ್ತು ಕೆಲವು ಸಂದಾಯಗಳನ್ನು ಮಾಡುವ ಉದ್ದೇಶದಿಂದ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಮೊಬಲಗನ್ನು ಚೆಕ್ಕಿನಲ್ಲಿ ನಮೂದಿಸಲು ಬಿನಿಗೆ ಅಧಿಕಾರ ಕೊಡುತ್ತಾನೆ. ಬಿನು ಮೋಸದಿಂದ ಚೆಕ್ಕಿನಲ್ಲಿ ಇಪ್ಪತ್ತು ಸಾವಿರ ರೂಪಾಯಿ ಮೊಬಲಗನ್ನು ನಮೂದಿಸುತ್ತಾನೆ. ಇಲ್ಲಿ ಬಿನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಇ) ಏನು ಬಿನಿಂದ ಅಧಿಕಾರ ಪಡೆಯದೆಯೇ ತನ್ನ ಹೆಸರಿಗೆ ಬಿನ ಹೆಸರಿನಲ್ಲಿ ವಿನಿಮಯ ಪತ್ರವನ್ನು ಅದು ನಿಜವಾದ ವಿನಿಮಯ ಪತ್ರವೆಂಬಂತೆ ಬ್ಯಾಂಕರ್‌ನಲ್ಲಿ ಮುಂಗಡವಾಗಿ ಮುರಿಸಲು ಮತ್ತು ಅದರ ಕಾಲಾವಧಿ ಮುಗಿದು ಸಂದಾಯಕ್ಕೆ ಸಿದ್ಧವಾದ ಮೇಲೆ ತೆಗೆದುಕೊಳ್ಳಲು ಉದ್ದೇಶಿಸಿ ಬರೆಯುತ್ತಾನೆ. ಇಲ್ಲಿ ಏನು ತನಗೆ ಬಿನ ಖಾತರಿಯಿದೆಯೆಂದು ಬ್ಯಾಂಕರನು ಭಾವಿಸುವಂತೆ ಮಾಡಿ ಅವನನ್ನು ವಂಚಿಸುವ ಉದ್ದೇಶದಿಂದ ವಿನಿಮಯ ಪತ್ರವನ್ನು ಬರೆಯುತ್ತಾನೆ. ಇಲ್ಲಿ ಏನು ಸುಳ್ಳು ಸೃಷ್ಟನೆಯ ಬಗ್ಗೆ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

(ಎಫ್) ಜೆಡ್‌ನ ಮರಣಶಾಸನದಲ್ಲಿ ಈ ಮಾತುಗಳಿವೆ. "ನನ್ನಲ್ಲಿ ಉಳಿದಿರುವ ಎಲ್ಲ ಸ್ವತ್ತನ್ನು ಏಗೆ, ಬಿಗೆ ಮತ್ತು ಸಿಗೆ ಸಮಾನವಾಗಿ ಹಂಚಬೇಕೆಂದು ನಾನು ಹೇಳುತ್ತಿದ್ದೇನೆ." ತನಗೆ ಮತ್ತು ಸಿಗೆ ಎಲ್ಲ ಸ್ವತ್ತನ್ನು ಬಿಟ್ಟುಕೊಡಲಾಗಿದೆಯೆಂದು ನಂಬಲೆಂಬ ಉದ್ದೇಶದಿಂದ ಏನು ಅಪ್ರಾಮಾಣಿಕತೆಯಿಂದ ಬಿನ ಹೆಸರನ್ನು ಕೆರೆದು ಹಾಕುತ್ತಾನೆ. ಇಲ್ಲಿ ಏನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಜಿ) "ಜೆಡ್‌ನಿಗೆ ಅಥವಾ ಅವನ ಆದೇಶದ ಮೇರೆಗೆ ಸಂದಾಯ ಮಾಡತಕ್ಕದ್ದು" ಎಂಬ ಪದಗಳನ್ನು ಸರ್ಕಾರಿ ಪ್ರಾಮಿಸರಿ ನೋಟಿನ ಮೇಲೆ ಬರೆದು ಏನು ಅದರ ಮೇಲೆ ಹಿಂಬರಹ ಮಾಡಿ ಅದಕ್ಕೆ ಸಹಿ ಹಾಕುತ್ತಾನೆ. "ಜೆಡ್‌ನಿಗೆ ಅಥವಾ ಅವನ ಆದೇಶದ ಮೇರೆಗೆ ಸಂದಾಯ ಮಾಡತಕ್ಕದ್ದು" ಎಂಬ ಪದಗಳನ್ನು ಅಪ್ರಾಮಾಣಿಕತೆಯಿಂದ ಬಿನು ಅಳಿಸಿ ಹಾಕುತ್ತಾನೆ ಮತ್ತು ಹಾಗೆ ಮಾಡಿ ಆ ವಿಶೇಷ ಹಿಂಬರಹವನ್ನು ಖಾಲಿ ಹಿಂಬರಹವನ್ನಾಗಿ ಪರಿವರ್ತಿಸುತ್ತಾನೆ. ಇಲ್ಲಿ ಬಿನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಹೆಚ್) ಏನು ಒಂದು ಎಸ್ಟೇಟನ್ನು ಜೆಡ್‌ನಿಗೆ ಮಾರಾಟ ಮಾಡಿದರೆ ವರ್ಗಾವಣೆ ಮಾಡುತ್ತಾನೆ. ಅನಂತರ ಜೆಡ್‌ನಿಗೆ ತನ್ನ ಎಸ್ಟೇಟು ದಕ್ಕದಂತೆ ವಂಚನೆ ಮಾಡಲು, ತಾನು ಜೆಡ್‌ನಿಗೆ ಅದನ್ನು ವರ್ಗಾಯಿಸುವುದಕ್ಕೂ ಮುಂಚೆ ಬಿನಿಗೆ ತಾನು ಅದನ್ನು ವರ್ಗಾಯಿಸಿರುವನೆಂದು ನಂಬುವಂತೆ ಮಾಡುವ ಉದ್ದೇಶದಿಂದ ಜೆಡ್‌ನಿಗೆ ಅದನ್ನು ವರ್ಗಾಯಿಸಿದ ದಿನಾಂಕಕ್ಕೆ ಆರು ತಿಂಗಳ ಹಿಂದಿನ ದಿನಾಂಕವನ್ನು ಹಾಕಿ ಬಿನಿಗೆ ಅದೇ ಎಸ್ಟೇಟಿನ ಬಗ್ಗೆ ವರ್ಗಾವಣೆ ಪತ್ರವನ್ನು ಬರೆದುಕೊಡುತ್ತಾನೆ. ಇಲ್ಲಿ ಏನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಐ) ಜೆಡ್‌ನು ತನ್ನ ಮರಣಶಾಸನವನ್ನು ಏನಿಗೆ ಹೇಳಿ ಬರೆಸುತ್ತಾನೆ. ಜೆಡ್‌ನು ಬರೆಯಲು ಹೇಳಿದ ಮರಣಶಾಸನದ ಆಸ್ತಿದಾರನ ಹೆಸರಿನ ಬದಲು ಏನು ಉದ್ದೇಶಪೂರ್ವಕವಾಗಿ ಬೇರೊಬ್ಬನ ಹೆಸರನ್ನು ಉತ್ತರಾಧಿಕಾರಿಯೆಂದು ಬರೆಯುತ್ತಾನೆ ಮತ್ತು ಜೆಡ್‌ನು ಹೇಳಿದಂತೆಯೇ ಮರಣಶಾಸನವನ್ನು ತಾನು ಬರೆದಿದ್ದೇನೆಂದು ಹೇಳಿ ಆ ಮರಣಶಾಸನಕ್ಕೆ ಸಹಿ ಹಾಕುವಂತೆ ಏನು ಜೆಡ್‌ನನ್ನು ಪ್ರೇರೇಪಿಸುತ್ತಾನೆ. ಇಲ್ಲಿ ಏನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಜೆ) ಏನು ಉತ್ತಮ ನಡತೆಯುಳ್ಳ ವ್ಯಕ್ತಿಯೆಂದು ಮತ್ತು ಅನಿರೀಕ್ಷಿತ ಆಪತ್ತಿನಿಂದಾಗಿ ಅವನು ಕಷ್ಟ ಪರಿಸ್ಥಿತಿಗೊಳಗಾಗಿದ್ದಾನೆಂದು ಪ್ರಮಾಣಗೊಳಿಸುವ ಪತ್ರವನ್ನು ಏನೇ ಬರೆದುಕೊಂಡು ಬಿನಿಂದ ಅಧಿಕಾರ ಪಡೆಯದೆಯೇ ಬಿ ಹೆಸರಿನಲ್ಲಿ ಸಹಿ ಹಾಕುತ್ತಾನೆ. ಅಂಥ ಪತ್ರದ ಮುಖಾಂತರ ಜೆಡ್‌ನಿಂದ ಮತ್ತು ಇತರರಿಂದ ದಾನ ಧರ್ಮದ ಉದ್ದೇಶದಿಂದ ಏನು ಹೀಗೆ ಮಾಡುತ್ತಾನೆ. ಇಲ್ಲಿ ಜೆಡ್‌ನು ಸ್ವತ್ತನ್ನು ಕೊಡುವಂತೆ ಪ್ರೇರೇಪಿಸುವುದಕ್ಕಾಗಿ ಏನು ಸುಳ್ಳು ದಸ್ತಾವೇಜನ್ನು ರಚಿಸಿದ್ದಾನೆ. ಆದ್ದರಿಂದ ಏನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಕೆ) ಏನು ಉತ್ತಮ ನಡತೆಯುಳ್ಳವನೆಂದು ಪ್ರಮಾಣೀಕರಿಸುವ ಪತ್ರವನ್ನು ಏನು ಬಿನಿಂದ ಅಧಿಕಾರ ಪಡೆಯದೆಯೆ ಬರೆದುಕೊಂಡು ಬಿನ ಹೆಸರಿನಲ್ಲಿ ಸಹಿ ಹಾಕುತ್ತಾನೆ. ಆ ಮೂಲಕ ಜೆಡ್‌ನ ಬಳಿ ಉದ್ಯೋಗ ದೊರಕಿಸಿಕೊಳ್ಳುವುದು ಏನ ಉದ್ದೇಶ.

ಸುಳ್ಳು ಸೃಷ್ಟನೆಯ ಪ್ರಮಾಣಪತ್ರದ ಮೂಲಕ 'ಜೆಡ್'ನನ್ನು ವಂಚಿಸಲು ಉದ್ದೇಶಿಸಿದ್ದರಿಂದ ಮತ್ತು ಆ ಮೂಲಕ ಉದ್ಯೋಗದ ಬಗ್ಗೆ ವ್ಯಕ್ತ ಅಥವಾ ಸೂಚ್ಯ ಕರಾರನ್ನು ಮಾಡಿಕೊಳ್ಳುವಂತೆ 'ಜೆಡ್'ನನ್ನು ಪ್ರೇರೇಪಿಸಿದ್ದರಿಂದ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

*ವಿವರಣೆ 1.*- ಒಬ್ಬ ವ್ಯಕ್ತಿಯ ತನ್ನದೇ ಹೆಸರಿನ ಸಹಿಯೂ ಸುಳ್ಳು ಸೃಷ್ಟನೆಯೆಂದಾಗಬಹುದು.

*ದೃಷ್ಟಾಂತಗಳು*

(ಎ) ತನ್ನ ಹೆಸರಿನ ಬೇರೊಬ್ಬ ವ್ಯಕ್ತಿಯು ವಿನಿಮಯ ಪತ್ರವನ್ನು ಬರೆದಿರುವನೆಂದು ನಂಬಲೆಂಬ ಉದ್ದೇಶದಿಂದ 'ಎ'ನು ಅದಕ್ಕೆ ತನ್ನ ಹೆಸರಿನ ಸಹಿ ಮಾಡುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಬಿ) "ಅಂಗೀಕರಿಸಲಾಗಿದೆ" ಎಂದು ಒಂದು ಕಾಗದದ ಚೂರಿನ ಮೇಲೆ 'ಎ'ನು ಬರೆದುಕೊಂಡು 'ಜೆಡ್'ನ ಹೆಸರಿನಲ್ಲಿ ಸಹಿ ಹಾಕುತ್ತಾನೆ. ಅನಂತರ ಅದರ ಮೇಲೆ 'ಬಿ'ನು 'ಜೆಡ್'ನಿಗಾಗಿ ವಿನಿಮಯ ಪತ್ರವನ್ನು ಬರೆಯಬಹುದೆಂಬ ಮತ್ತು 'ಜೆಡ್'ನು ಅದನ್ನು ಅಂಗೀಕರಿಸಿದ್ದಾನೆಂಬಂತೆ ಅದನ್ನು ವರ್ಗಾವಣೆ ಮಾಡಬಹುದೆಂಬ ದೃಷ್ಟಿಯಿಂದ ಹಾಗೆ ಮಾಡಿದ್ದಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆಯ ತಪ್ಪಿತಸ್ಥನಾಗಿದ್ದಾನೆ ಮತ್ತು 'ಎ'ನ ಉದ್ದೇಶಕ್ಕನುಸಾರವಾಗಿ, ಸಂಗತಿಯನ್ನು ತಿಳಿದಿದ್ದರೂ 'ಬಿ'ನು ವಿನಿಮಯ ಪತ್ರವನ್ನು ಬರೆದರೆ 'ಬಿ'ನು ಸಹ ಸುಳ್ಳು ಸೃಷ್ಟನೆಯ ಬಗ್ಗೆ ತಪ್ಪಿತಸ್ಥನಾಗುತ್ತಾನೆ.

(ಸಿ) 'ಎ'ನು ತನ್ನ ಹೆಸರಿನ ಬೇರೆ ವ್ಯಕ್ತಿಯ ಆದೇಶದ ಮೇರೆಗೆ ಸಂದಾಯವಾಗಬೇಕಿರುವ ವಿನಿಮಯ ಪತ್ರವನ್ನು ಎತ್ತಿಕೊಳ್ಳುತ್ತಾನೆ. ಅದು ಯಾರ ಆದೇಶದ ಮೇರೆಗೆ ಸಂದಾಯವಾಗಬೇಕಿರುವುದೋ ಆ ಬೇರೆ ವ್ಯಕ್ತಿಯೇ ಹಿಂಬರಹ ಬರೆದಿದ್ದಾನೆಂದು ನಂಬಿಸುವ ಉದ್ದೇಶದಿಂದ 'ಎ'ನು ವಿನಿಮಯ ಪತ್ರಕ್ಕೆ ತನ್ನ ಹೆಸರಿನಲ್ಲೇ ಹಿಂಬರಹ ಮಾಡುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಡಿ) 'ಬಿ'ನಿಗೆ ವಿರುದ್ಧವಾಗಿ ಆದ ಡಿಕ್ರಿಯ ಅಮಲ್ಜಾರಿಯಲ್ಲಿ ಮಾರಾಟವಾದ ಎಸ್ಟೇಟನ್ನು 'ಎ'ನು ಕೊಂಡುಕೊಳ್ಳುತ್ತಾನೆ. ಎಸ್ಟೇಟನ್ನು ವಶಕ್ಕೆ ತೆಗೆದುಕೊಂಡ ಅನಂತರ 'ಬಿ'ನು 'ಜೆಡ್'ನೊಂದಿಗೆ ಒಳಸಂಚು ಮಾಡಿ 'ಎ'ನಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ಹಾಗೆ ವಶಕ್ಕೆ ತೆಗೆದುಕೊಳ್ಳುವುದಕ್ಕೂ ಮೊದಲೇ ಅದನ್ನು ಗುತ್ತಿಗೆಗೆ ಕೊಡಲಾಗಿತ್ತೆಂದು ನಂಬಿಸುವ ಉದ್ದೇಶದಿಂದ ನಾಮ ಮಾತ್ರದ ಗುತ್ತಿಗೆಗಾಗಿ ದೀರ್ಘಾವಧಿಯ ಗುತ್ತಿಗೆ ಪತ್ರವನ್ನು ಬರೆದುಕೊಡುತ್ತಾನೆ ಮತ್ತು ಆ ಗುತ್ತಿಗೆ ಪತ್ರಕ್ಕೆ, ವಶಕ್ಕೆ ತೆಗೆದುಕೊಂಡ ಆರು ತಿಂಗಳ ಹಿಂದಿನ ದಿನಾಂಕವನ್ನು ಹಾಕುತ್ತಾನೆ. ಇಲ್ಲಿ 'ಬಿ'ನು ತನ್ನದೇ ಹೆಸರಿನಲ್ಲಿ ಗುತ್ತಿಗೆ ಪತ್ರವನ್ನು ಬರೆದಿದ್ದರೂ ಅದಕ್ಕೆ ಹಿಂದಿನ ದಿನಾಂಕ ಹಾಕಿದ್ದರಿಂದ 'ಬಿ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(ಇ) ದಿವಾಳಿಯಾಗುವನೆಂದು ನಿರೀಕ್ಷಿಸಿರುವ 'ಎ' ಎಂಬ ವ್ಯಾಪಾರಿಯು ತನ್ನ ಸರಕುಗಳನ್ನು ತನ್ನ ಪ್ರಯೋಜನಕ್ಕಾಗಿ ಮತ್ತು ತನ್ನ ಸಾಲದಾತರಿಗೆ ಮೋಸ ಮಾಡುವ ಉದ್ದೇಶದಿಂದ 'ಬಿ'ನ ಹತ್ತಿರ ಇಡುತ್ತಾನೆ ಮತ್ತು ಈ ವ್ಯವಹಾರ ನಿಜವಾದುದೆಂಬ ಅರ್ಥ ಬರುವಂತಾಗಲು, ತಾನು 'ಬಿ'ನಿಂದ ಪಡೆದಿರುವ ಪ್ರತಿಫಲಕ್ಕಾಗಿ 'ಬಿ'ನಿಗೆ ಹಣವನ್ನು ಸಂದಾಯ ಮಾಡಲು ತಾನು ಬದ್ಧನಾಗಿರುವನೆಂದು 'ಎ' ಪ್ರಾಮಿಸರಿ ನೋಟನ್ನು ಬರೆದುಕೊಡುತ್ತಾನೆ ಮತ್ತು 'ಎ'ನು ದಿವಾಳಿಯಾಗುವ ಸಮಯಕ್ಕೆ ಮುಂಚೆ ಆ ಪ್ರಾಮಿಸರಿ ನೋಟನ್ನು ಬರೆದುಕೊಡಲಾಗಿದೆಯೆಂದು ನಂಬಲೆಂಬ ಉದ್ದೇಶದಿಂದ ಅದಕ್ಕೆ ಹಿಂದಿನ ದಿನಾಂಕವನ್ನು ಹಾಕುತ್ತಾನೆ. ಪರಿಭಾಷೆಯ ಮೊದಲನೇ ಶೀರ್ಷಿಕೆಯ ಮೇರೆಗೆ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

*ವಿವರಣೆ 2.*- ದಸ್ತಾವೇಜನ್ನು ನಿಜವಾದ ವ್ಯಕ್ತಿಯೇ ಮಾಡಿದ್ದಾನೆಂದು ನಂಬಲೆಂಬ ಉದ್ದೇಶದಿಂದ ಕಾಲ್ಪನಿಕ ವ್ಯಕ್ತಿಯ ಹೆಸರಿನಲ್ಲಿ ಅಥವಾ ಮೃತ ವ್ಯಕ್ತಿಯು ತಾನು ಜೀವಿಸಿದ್ದ ಕಾಲದಲ್ಲಿ ದಸ್ತಾವೇಜನ್ನು ಮಾಡಿದ್ದಾನೆಂದು ನಂಬಲೆಂಬ ಉದ್ದೇಶದಿಂದ ಆ ಮೃತ ವ್ಯಕ್ತಿಯ ಹೆಸರಿನಲ್ಲಿ ಸುಳ್ಳು ದಸ್ತಾವೇಜನ್ನು ರಚಿಸುವುದು ಸುಳ್ಳು ಸೃಷ್ಟನೆಯೆಂದಾಗಬಹುದು.

*ದೃಷ್ಟಾಂತ*

'ಎ'ನು ಒಬ್ಬ ಕಾಲ್ಪನಿಕ ವ್ಯಕ್ತಿಯ ಹೆಸರಿನಲ್ಲಿ ವಿನಿಮಯ ಪತ್ರವನ್ನು ಬರೆಯುತ್ತಾನೆ ಮತ್ತು ಅದನ್ನು ವರ್ಗಾವಣೆ ಮಾಡುವ ಉದ್ದೇಶದಿಂದ ಅಂಥ ಕಾಲ್ಪನಿಕ ವ್ಯಕ್ತಿಯ ಹೆಸರಿನಲ್ಲಿ ಅದನ್ನು ಮೋಸದಿಂದ ಅಂಗೀಕರಿಸುತ್ತಾನೆ. ಇಲ್ಲಿ 'ಎ'ನು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

*ವಿವರಣೆ 3.*- ಈ ಪ್ರಕರಣದ ಉದ್ದೇಶಗಳಿಗಾಗಿ, "ವಿದ್ಯುನ್ಮಾನ ಸಹಿಯನ್ನು ಮಾಡುವುದು" ಎಂಬ ಪದಾವಳಿಗೆ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000 ದ 21)ದ 2ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಹೊಂದಿರತಕ್ಕದ್ದು.

**336. ಸುಳ್ಳು ಸೃಷ್ಟನೆ.-** (1) ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಹಾನಿಯನ್ನು ಅಥವಾ ಕ್ಷತಿಯನ್ನುಂಟು ಮಾಡುವ ಅಥವಾ ಯಾವುದೇ ಕ್ಲೇಮನ್ನು ಅಥವಾ ಹಕ್ಕನ್ನು ಬೆಂಬಲಿಸುವ ಅಥವಾ ಯಾರೇ ವ್ಯಕ್ತಿಯು ಸ್ವತ್ತನ್ನು ಬಿಟ್ಟುಕೊಡುವಂತೆ ಮಾಡುವ ಅಥವಾ ಅವನು ವ್ಯಕ್ತ ಅಥವಾ ಸೂಚ್ಯ ಕರಾರನ್ನು ಮಾಡಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಅಥವಾ ಮೋಸ ಮಾಡುವ ಅಥವಾ ಆ ಮೋಸವನ್ನು ಮಾಡಬಹುದೆಂಬ ಉದ್ದೇಶದಿಂದ ಯಾವುದೇ ಸುಳ್ಳು ದಸ್ತಾವೇಜನ್ನು ಅಥವಾ ಸುಳ್ಳು ವಿದ್ಯುನ್ಮಾನ ದಾಖಲೆಯನ್ನು ಅಥವಾ ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ಯಾವುದೇ ಭಾಗವನ್ನು ರಚಿಸಿದರೆ ಆ ವ್ಯಕ್ತಿಯು ಸುಳ್ಳು ಸೃಷ್ಟನೆ ಮಾಡಿದ್ದಾನೆಂದಾಗುತ್ತದೆ.

(2) ಸುಳ್ಳು ಸೃಷ್ಟನೆ ಮಾಡುವ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಸೃಷ್ಟನೆಯ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಬಳಸಬೇಕೆಂದು ಉದ್ದೇಶಿಸಿ ಸುಳ್ಳು ಸೃಷ್ಟನೆ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಯಾರೇ ವ್ಯಕ್ತಿಯು ಮಾಡಿದ, ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ಸುಳ್ಳು ಸೃಷ್ಟನೆಯು, ಯಾರೇ ವ್ಯಕ್ತಿಯ ಖ್ಯಾತಿಗೆ ಕುಂದು ತರಲೆಂಬ ಉದ್ದೇಶದಿಂದ ಅಥವಾ ಆ ಉದ್ದೇಶಕ್ಕಾಗಿ ಅದನ್ನು ಬಳಸುವ ಸಂಭವವಿದೆಯೆಂದು ಗೊತ್ತಿದ್ದರೂ ಹಾಗೆ ಸುಳ್ಳು ಸೃಷ್ಟನೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**337. ನ್ಯಾಯಾಲಯದ ದಾಖಲೆ ಅಥವಾ ಸಾರ್ವಜನಿಕ ರಿಜಿಸ್ಟರ್, ಇತ್ಯಾದಿಗಳ ಸುಳ್ಳು ಸೃಷ್ಟನೆ.-** ಯಾರೇ ವ್ಯಕ್ತಿಯು, ನ್ಯಾಯಾಲಯದ ಅಥವಾ ನ್ಯಾಯಾಲಯದಲ್ಲಿನ ದಾಖಲೆಯೆಂದು ಅಥವಾ ವ್ಯವಹರಣೆಯೆಂದು ತಾತ್ಪರ್ಯವಾಗುವ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಸೇರಿದಂತೆ ಸರ್ಕಾರವು ನೀಡಿದ ಯಾವುದೇ ಗುರುತಿನ ದಸ್ತಾವೇಜು ಅಥವಾ ಜನನ, ವಿವಾಹ ಅಥವಾ ಶವಸಂಸ್ಕಾರದ ರಿಜಿಸ್ಟರನ್ನು ಅಥವಾ ಹಾಗೆ ಲೋಕ ನೌಕರನು ಇಟ್ಟಿರುವ ರಿಜಿಸ್ಟರನ್ನು ಅಥವಾ ಲೋಕ ನೌಕರನು ತನ್ನ ಸ್ಥಾನದ ಅಧಿಕಾರದಿಂದ ಕೊಟ್ಟಿರುವನೆಂದು ತಾತ್ಪರ್ಯವಾಗುವ ಪ್ರಮಾಣಪತ್ರ ಅಥವಾ ಮಾಡಿರುವ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಅಥವಾ ದಾವೆಯನ್ನು ಹೂಡುವ ಅಥವಾ ಪ್ರತಿವಾದಿಸುವ ಅಥವಾ ಅದರಲ್ಲಿರುವ ಯಾವುದೇ ವ್ಯವಹರಣೆಗಳನ್ನು ನಡೆಸುವುದಕ್ಕಾಗಿ ಅಥವಾ ತೀರ್ಪಿಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳುವುದಕ್ಕಾಗಿ ಇರುವ ಅಧಿಕಾರವನ್ನು ಅಥವಾ ಅಧಿಕಾರ ಪತ್ರವನ್ನು ಸುಳ್ಳು ಸೃಷ್ಟನೆ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ವಿವರಣೆ.*- ಈ ಪ್ರಕರಣದ ಉದ್ದೇಶಗಳಿಗಾಗಿ "ರಿಜಿಸ್ಟರ್" ಎಂಬುದರಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000 ದ 21)ದ 2ನೇ ಪ್ರಕರಣದ (1)ನೇ ಉಪಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿರುವಂತೆ ವಿದ್ಯುನ್ಮಾನ ನಮೂನೆಯಲ್ಲಿ ಇಟ್ಟಿರುವ ಯಾವುದೇ ನಮೂದನೆಗಳ ಯಾವುದೇ ಪಟ್ಟಿ, ದತ್ತಾಂಶ ಅಥವಾ ದಾಖಲೆಯು ಒಳಗೊಳ್ಳುತ್ತದೆ.

**338. ಬೆಲೆಯುಳ್ಳ ಭದ್ರತಾಪತ್ರ, ಮರಣಶಾಸನ, ಇತ್ಯಾದಿಗಳ ಸುಳ್ಳು ಸೃಷ್ಟನೆ.-** ಯಾರೇ ವ್ಯಕ್ತಿಯು, ಭದ್ರತಾಪತ್ರವೆಂದು ಅಥವಾ ಮರಣಶಾಸನ ಎಂದು ಅಥವಾ ಮಗನನ್ನು ದತ್ತು ತೆಗೆದುಕೊಳ್ಳಲು ಅಧಿಕಾರ ಪತ್ರವೆಂದು ತಾತ್ಪರ್ಯವಾಗುವ ಅಥವಾ ಯಾವುದೇ ಬೆಲೆಯುಳ್ಳ ಭದ್ರತಾಪತ್ರವನ್ನು ರಚಿಸಲು ಅಥವಾ ವರ್ಗಾಯಿಸಲು ಅಥವಾ ಅದರ ಮೇಲೆ ಅಸಲು, ಬಡ್ಡಿ ಅಥವಾ ಲಾಭಾಂಶಗಳನ್ನು ಸ್ವೀಕರಿಸಲು ಅಥವಾ ಯಾವುದೇ ಹಣವನ್ನು, ಚರಸ್ವತ್ತನ್ನು ಅಥವಾ ಬೆಲೆಯುಳ್ಳ ಭದ್ರತಾಪತ್ರವನ್ನು ಸ್ವೀಕರಿಸಲು ಅಥವಾ ಕೊಡಲು ಯಾರೇ ವ್ಯಕ್ತಿಗೆ ಅಧಿಕಾರ ಕೊಡುವುದೆಂದು ತಾತ್ಪರ್ಯವಾಗುವ ಯಾವುವೇ ದಸ್ತಾವೇಜನ್ನು ಅಥವಾ ಹಣ ಸಂದಾಯದ ಬಗ್ಗೆ ತೀರುವಳಿ ಚೀಟಿಯೆಂದು ಅಥವಾ ರಸೀದಿಯೆಂದು ಅಥವಾ ಯಾವುದೇ ಚರ ಸ್ವತ್ತಿನ ಅಥವಾ ಬೆಲೆಯುಳ್ಳ ಭದ್ರತಾಪತ್ರದ ತೀರುವಳಿ ಚೀಟಿಯೆಂದು ಅಥವಾ ರಸೀದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಅಥವಾ ಹಣ ಸಂದಾಯದ ಬಗ್ಗೆ ತೀರುವಳಿ ಚೀಟಿಯೆಂದು ಅಥವಾ ರಸೀದಿಯೆಂದು ಅಥವಾ ಯಾವುದೇ ಚರ ಸ್ವತ್ತಿನ ಅಥವಾ ಬೆಲೆಯುಳ್ಳ ಭದ್ರತಾಪತ್ರದ ತೀರುವಳಿ ಚೀಟಿ ಅಥವಾ ರಸೀದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಸುಳ್ಳು ಸೃಷ್ಟನೆ ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**339. ಪ್ರಕರಣ 337ರಲ್ಲಿ ಅಥವಾ ಪ್ರಕರಣ 338ರಲ್ಲಿ ವಿವರಿಸಿರುವಂಥ ದಸ್ತಾವೇಜನ್ನು ಅದು ಸುಳ್ಳು ಸೃಷ್ಟನೆ ಎಂಬುದು ಗೊತ್ತಿದ್ದರೂ ಮತ್ತು ಅದನ್ನು ನೈಜವೆಂದು ಬಳಸುವ ಉದ್ದೇಶದಿಂದ ಇಟ್ಟುಕೊಂಡಿರುವುದು.-** ಯಾರೇ ವ್ಯಕ್ತಿಯು, ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಯು ಸುಳ್ಳು ಸೃಷ್ಟನೆ ಎಂಬುದು ಗೊತ್ತಿದ್ದರೂ ಮತ್ತು ಅದನ್ನು ನೈಜ ಎಂದು ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಬಳಸುವ ಉದ್ದೇಶದಿಂದ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ ಆ ವ್ಯಕ್ತಿಯು, ಆ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಯು ಈ ಸಂಹಿತೆಯ 337ನೇ ಪ್ರಕರಣದಲ್ಲಿ ವಿವರಿಸಿದವುಗಳಲ್ಲಿ ಒಂದಾಗಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು ಆ ದಸ್ತಾವೇಜು 338ನೇ ಪ್ರಕರಣದಲ್ಲಿ ವಿವರಿಸಿದವುಗಳಲ್ಲಿ ಒಂದಾಗಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**340. ಸುಳ್ಳು ಸೃಷ್ಟನೆಯ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ ಮತ್ತು ನೈಜವೆಂದು ಬಳಸುವುದು.-** (1) ಸುಳ್ಳು ಸೃಷ್ಟನೆಯಿಂದ ಪೂರ್ಣವಾಗಿ ಅಥವಾ ಭಾಗಶಃ ಸೃಷ್ಟನೆ ಮಾಡಲಾದ ಸುಳ್ಳು ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು "ಸುಳ್ಳು ಸೃಷ್ಟನೆಯ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂದು ಕರೆಯಲಾಗುತ್ತದೆ.

(2) ಯಾರೇ ವ್ಯಕ್ತಿಯು, ಸುಳ್ಳು ಸೃಷ್ಟನೆಯ ದಸ್ತಾವೇಜೆಂದು ಅಥವಾ ವಿದ್ಯುನ್ಮಾನ ದಾಖಲೆಯೆಂದು ತನಗೆ ಗೊತ್ತಿರುವ ಅಥವಾ ಹಾಗೆ ನಂಬಲು ಕಾರಣವಿರುವ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ನೈಜವಾದುದೆಂದು ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಬಳಸಿದರೆ ಆ ವ್ಯಕ್ತಿಯು, ಅಂಥ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಸುಳ್ಳು ಸೃಷ್ಟನೆ ಮಾಡಿದ್ದಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಹಾಗೆಯೇ ದಂಡಿತನಾಗತಕ್ಕದ್ದು.

**341. ಪ್ರಕರಣ 338ರ ಮೇರೆಗೆ ದಂಡನೀಯವಾದ ಸುಳ್ಳು ಸೃಷ್ಟನೆ ಮಾಡುವ ಉದ್ದೇಶದಿಂದ ಖೋಟಾ ಮೊಹರು, ಮುಂತಾದವುಗಳನ್ನು ಮಾಡುವುದು ಅಥವಾ ಇಟ್ಟುಕೊಂಡಿರುವುದು.-** (1) ಈ ಸಂಹಿತೆಯ 338ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಸುಳ್ಳು ಸೃಷ್ಟನೆ ಮಾಡುವ ಸಲುವಾಗಿ ಅದನ್ನು ಬಳಸಬೇಕೆಂಬ ಉದ್ದೇಶದಿಂದ ಗುರುತು ಮಾಡುವುದಕ್ಕಾಗಿ ಯಾವುದೇ ಮೊಹರನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣಗಳನ್ನು ನಿರ್ಮಿಸುವ ಅಥವಾ ಖೋಟಾ ತಯಾರಿಕೆ ಮಾಡುವ ಅಥವಾ ಅಂಥ ಉದ್ದೇಶದಿಂದ ಅಂಥ ಯಾವುದೇ ಮೊಹರನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣಗಳನ್ನು, ಅವು ಖೋಟಾ ಎಂದು ಗೊತ್ತಿದ್ದರೂ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದ ವ್ಯಕ್ತಿಯು, ಆಜೀವ ಕಾರಾವಾಸದಿಂದ

ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, 338ನೇ ಪ್ರಕರಣದಿಂದಲ್ಲದೆ ಈ ಅಧ್ಯಾಯದ ಯಾವುದೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಸುಳ್ಳು ಸೃಷ್ಟನೆ ಮಾಡುವ ಸಲುವಾಗಿ ಅದನ್ನು ಬಳಸಬೇಕೆಂಬ ಉದ್ದೇಶದಿಂದ ಗುರುತು ಮಾಡುವುದಕ್ಕಾಗಿ ಯಾವುದೇ ಮೊಹರನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣಗಳನ್ನು ನಿರ್ಮಿಸುವ ಅಥವಾ ಖೋಟಾ ತಯಾರಿಕೆ ಮಾಡುವ ಅಥವಾ ಅಂಥ ಉದ್ದೇಶದಿಂದ ಅಂಥ ಯಾವುದೇ ಮೊಹರನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣಗಳನ್ನು, ಅವು ಖೋಟಾ ಎಂಬುದು ಗೊತ್ತಿದ್ದರೂ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ನಕಲಿ ಎಂದು ತಿಳಿದೂ ತಿಳಿದೂ ಯಾವುದೇ ಮೊಹರು, ಪಟ್ಟಿಕೆ ಅಥವಾ ಇತರ ಉಪಕರಣವನ್ನು ಹೊಂದಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ವಂಚನೆಯಿಂದ ಅಥವಾ ಅಪ್ರಾಮಾಣಿಕತೆಯಿಂದ ಯಾವುದೇ ಮೊಹರು, ಪಟ್ಟಿಕೆ ಅಥವಾ ಇತರ ಉಪಕರಣವನ್ನು ನಕಲಿ ಎಂದು ತಿಳಿದೂ ತಿಳಿದೂ ಅಥವಾ ನಕಲಿ ಎಂದು ನಂಬಲು ಕಾರಣಗಳಿದ್ದೂ ಅದನ್ನು ನೈಜವೆಂಬುದಾಗಿ ಬಳಸಿದರೆ, ಅವನು ಅಂಥ ಮೊಹರು, ಪಟ್ಟಿಕೆ ಅಥವಾ ಇತರ ಉಪಕರಣವನ್ನು ತಯಾರಿಸಿದ್ದರೆ ಅಥವಾ ನಕಲು ಮಾಡಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

**342. ಪ್ರಕರಣ 338ರಲ್ಲಿ ವಿವರಿಸಿರುವಂಥ ದಸ್ತಾವೇಜುಗಳನ್ನು ಅಧಿಪ್ರಮಾಣನಗೊಳಿಸುವುದಕ್ಕಾಗಿ ಬಳಸುವ ಸಾಧನ ಅಥವಾ ಚಿಹ್ನೆಯ ಖೋಟಾ ತಯಾರಿಕೆ ಅಥವಾ ಖೋಟಾ ಚಿಹ್ನೆ ಇರುವ ವಸ್ತುವನ್ನು ಇಟ್ಟುಕೊಂಡಿರುವುದು.-** (1) ಈ ಸಂಹಿತೆಯ 338ನೇ ಪ್ರಕರಣದಲ್ಲಿ ವಿವರಿಸಿರುವಂಥ ಯಾವುದೇ ದಸ್ತಾವೇಜನ್ನು ಅಧಿಪ್ರಮಾಣನಗೊಳಿಸುವ ಉದ್ದೇಶಕ್ಕಾಗಿ ಬಳಸುವ ಯಾವುದೇ ಸಾಧನವನ್ನು ಅಥವಾ ಚಿಹ್ನೆಯನ್ನು ಹಿಂದೆ ಸುಳ್ಳು ಸೃಷ್ಟನೆ ಮಾಡಿದ ಅಥವಾ ಅನಂತರ ಸುಳ್ಳು ಸೃಷ್ಟನೆ ಮಾಡಲಿರುವ ದಸ್ತಾವೇಜಿಗೆ ಅಧಿಪ್ರಮಾಣಿತ ರೂಪವನ್ನು ಕೊಡುವುದಕ್ಕಾಗಿ ಅಂಥ ಸಾಧನವನ್ನು ಅಥವಾ ಚಿಹ್ನೆಯನ್ನು ಬಳಸುವ ಉದ್ದೇಶದಿಂದ, ಯಾವುದೇ ವಸ್ತುವಿನ ಮೇಲೆ ಅಥವಾ ಅದರ ಮುಖ್ಯ ಭಾಗದಲ್ಲಿ ಖೋಟಾ ನಮೂದನೆ ಮಾಡುವ ಅಥವಾ ಯಾವುದೇ ಅಂಥ ಸಾಧನವನ್ನು ಅಥವಾ ಚಿಹ್ನೆಯನ್ನು ಅದರ ಮೇಲೆ ಅಥವಾ ಅದರ ಮುಖ್ಯ ಭಾಗದಲ್ಲಿ ಖೋಟಾ ನಮೂದನೆ ಮಾಡಿರುವ ಯಾವುದೇ ವಸ್ತುವನ್ನು ಅಂಥ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಸಂಹಿತೆಯ 338ನೇ ಪ್ರಕರಣದಲ್ಲಿ ವಿವರಿಸಿದ ದಸ್ತಾವೇಜುಗಳಲ್ಲದ ಇತರ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಅಧಿಪ್ರಮಾಣನಗೊಳಿಸುವ ಉದ್ದೇಶಕ್ಕಾಗಿ ಬಳಸುವ ಯಾವುದೇ ಸಾಧನವನ್ನು ಅಥವಾ ಚಿಹ್ನೆಯನ್ನು ಹಿಂದೆ ಸುಳ್ಳು ಸೃಷ್ಟನೆ ಮಾಡಿದ ಅಥವಾ ಅನಂತರ ಸುಳ್ಳು ಸೃಷ್ಟನೆ ಮಾಡಲಿರುವ ದಸ್ತಾವೇಜಿಗೆ ಅಥವಾ ವಿದ್ಯುನ್ಮಾನ ದಾಖಲೆಗೆ ಅಧಿಪ್ರಮಾಣಿತ ರೂಪವನ್ನು ಕೊಡುವುದಕ್ಕಾಗಿ ಅಂಥ ಸಾಧನವನ್ನು ಅಥವಾ ಚಿಹ್ನೆಯನ್ನು ಬಳಸುವ ಉದ್ದೇಶದಿಂದ, ಯಾವುದೇ ವಸ್ತುವಿನ ಮೇಲೆ ಅಥವಾ ಅದರ ಮುಖ್ಯ ಭಾಗದಲ್ಲಿ ಖೋಟಾ ನಮೂದನೆ ಮಾಡುವ ಅಥವಾ ಯಾವುದೇ ಅಂಥ ಸಾಧನವನ್ನು ಅಥವಾ ಚಿಹ್ನೆಯನ್ನು ಅದರ ಮೇಲೆ ಅಥವಾ ಅದರ ಮುಖ್ಯ ಭಾಗದಲ್ಲಿ ಖೋಟಾ ನಮೂದನೆ ಮಾಡಿರುವ ಯಾವುದೇ ವಸ್ತುವನ್ನು ಅಂಥ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಏಳು ವರ್ಷಗಳವರೆಗೆ

ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**343. ಮರಣಶಾಸನವನ್ನು ಮತ್ತು ದತ್ತಕ ಅಧಿಕಾರ ಪತ್ರವನ್ನು ಅಥವಾ ಬೆಲೆಯುಳ್ಳ ಭದ್ರತಾಪತ್ರವನ್ನು ಮೋಸದಿಂದ ರದ್ದು ಮಾಡುವುದು, ನಾಶಪಡಿಸುವುದು, ಇತ್ಯಾದಿ.-** ಯಾರೇ ವ್ಯಕ್ತಿಯು, ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಅಥವಾ ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಹಾನಿ ಅಥವಾ ಕ್ಷತಿಯನ್ನುಂಟು ಮಾಡುವ ಉದ್ದೇಶದಿಂದ ಮರಣಶಾಸನವನ್ನು ಅಥವಾ ಮಗನನ್ನು ದತ್ತು ತೆಗೆದುಕೊಳ್ಳುವ ಅಧಿಕಾರ ಪತ್ರವನ್ನು ಅಥವಾ ಯಾವುದೇ ಬೆಲೆಯುಳ್ಳ ಭದ್ರತಾಪತ್ರವಾಗಿರುವ ಅಥವಾ ಹಾಗೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ರದ್ದು ಮಾಡಿದರೆ, ನಾಶಪಡಿಸಿದರೆ ಅಥವಾ ವಿರೂಪಗೊಳಿಸಲು ಅಥವಾ ರದ್ದು ಮಾಡಲು, ನಾಶಪಡಿಸಲು ಅಥವಾ ವಿರೂಪಗೊಳಿಸಲು ಪ್ರಯತ್ನಿಸಿದರೆ ಅಥವಾ ಬಚ್ಚಿಟ್ಟರೆ ಅಥವಾ ಬಚ್ಚಿಡಲು ಪ್ರಯತ್ನಿಸಿದರೆ ಅಥವಾ ಅಂಥ ದಸ್ತಾವೇಜಿನ ಸಂಬಂಧವಾಗಿ ಕೇಡುಂಟು ಮಾಡಿದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**344. ಸುಳ್ಳು ಲೆಕ್ಕಪತ್ರಗಳನ್ನು ಬರೆಯುವುದು.-** ಗುಮಾಸ್ತನಾಗಿರುವ, ಅಧಿಕಾರಿಯಾಗಿರುವ ಅಥವಾ ನೌಕರನಾಗಿರುವ ಅಥವಾ ಗುಮಾಸ್ತನಾಗಿ, ಅಧಿಕಾರಿಯಾಗಿ ಅಥವಾ ನೌಕರನಾಗಿ ನಿಯೋಜಿತನಾಗಿರುವ ಅಥವಾ ಹಾಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ತನ್ನ ನಿಯೋಜಕನಿಗೆ ಸೇರಿದ ಅಥವಾ ಅವನ ಸ್ವಾಧೀನದಲ್ಲಿರುವ ಅಥವಾ ತನ್ನ ನಿಯೋಜಕನಿಗಾಗಿ ಅಥವಾ ತನ್ನ ನಿಯೋಜಕನ ಪರವಾಗಿ ತಾನು ಸ್ವೀಕರಿಸಿದ ಯಾವುದೇ ಪುಸ್ತಕವನ್ನು, ವಿದ್ಯುನ್ಮಾನ ದಾಖಲೆಯನ್ನು, ಕಾಗದವನ್ನು, ಬರಹವನ್ನು, ಬೆಲೆಯುಳ್ಳ ಭದ್ರತಾಪತ್ರವನ್ನು ಅಥವಾ ಲೆಕ್ಕಪತ್ರವನ್ನು ಉದ್ದೇಶಪೂರ್ವಕವಾಗಿ ಮತ್ತು ಮೋಸ ಮಾಡುವ ಉದ್ದೇಶದಿಂದ ನಾಶಪಡಿಸಿದರೆ, ವ್ಯತ್ಯಾಸಗೊಳಿಸಿದರೆ, ವಿರೂಪಗೊಳಿಸಿದರೆ ಅಥವಾ ಅದರಲ್ಲಿ ಸುಳ್ಳು ಬರೆದರೆ ಅಥವಾ ಯಾವುದೇ ಅಂಥ ಪುಸ್ತಕದಲ್ಲಿ, ವಿದ್ಯುನ್ಮಾನ ದಾಖಲೆಯಲ್ಲಿ, ಕಾಗದದಲ್ಲಿ, ಬರಹದಲ್ಲಿ, ಬೆಲೆಯುಳ್ಳ ಭದ್ರತಾಪತ್ರದಲ್ಲಿ ಅಥವಾ ಲೆಕ್ಕಪತ್ರದಲ್ಲಿ ಉದ್ದೇಶಪೂರ್ವಕವಾಗಿ ಮತ್ತು ಮೋಸ ಮಾಡುವ ಉದ್ದೇಶದಿಂದ ಯಾವುದೇ ಸುಳ್ಳು ನಮೂದನೆ ಮಾಡಿದರೆ ಅಥವಾ ಮಾಡುವಂತೆ ದುಷ್ಪ್ರೇರಣೆ ಮಾಡಿದರೆ ಅಥವಾ ಅದರಿಂದ ಅಥವಾ ಅದರಲ್ಲಿ ಯಾವುದೇ ಮುಖ್ಯಾಂಶವನ್ನು ಬಿಟ್ಟುಬಿಟ್ಟರೆ ಅಥವಾ ವ್ಯತ್ಯಾಸಗೊಳಿಸಿದರೆ ಅಥವಾ ಹಾಗೆ ಬಿಟ್ಟುಬಿಡಲು ಅಥವಾ ವ್ಯತ್ಯಾಸಗೊಳಿಸಲು ದುಷ್ಪ್ರೇರಣೆ ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ವಿವರಣೆ.-* ಈ ಪ್ರಕರಣದ ಮೇರೆಗಿನ ಯಾವುದೇ ಆರೋಪದಲ್ಲಿ, ಯಾರಿಗೆ ಮೋಸಗೊಳಿಸಬೇಕೆಂದು ಉದ್ದೇಶಿಸಲಾಗಿದೆಯೋ ಆ ಯಾರೇ ನಿರ್ದಿಷ್ಟ ವ್ಯಕ್ತಿಯ ಹೆಸರನ್ನು ಹೇಳದೆ ಅಥವಾ ಯಾವ ಮೊತ್ತವನ್ನು ಮೋಸ ಮಾಡಿ ಪಡೆಯಬೇಕೆಂದು ಉದ್ದೇಶಿಸಲಾಗಿದೆಯೋ ಆ ಯಾವುದೇ ನಿರ್ದಿಷ್ಟ ಮೊತ್ತವನ್ನು ನಿರ್ದಿಷ್ಟಪಡಿಸದೆ ಅಥವಾ ಅಪರಾಧವು ಯಾವ ದಿನದಂದು ನಡೆಯಿತೋ ಆ ಯಾವುದೇ ನಿರ್ದಿಷ್ಟ ದಿನವನ್ನು ನಮೂದಿಸದೆ ಮೋಸಗೊಳಿಸುವ ಸಾಮಾನ್ಯ ಉದ್ದೇಶವನ್ನು ಆಪಾದಿಸಿದರೆ ಸಾಕು.

## *ಸ್ವತ್ತು ಗುರುತುಗಳು*

**345. ಸ್ವತ್ತು ಗುರುತು.-** (1) ಚರ ಸ್ವತ್ತು, ನಿರ್ದಿಷ್ಟ ವ್ಯಕ್ತಿಯದೆಂಬುದನ್ನು ತೋರಿಸಲು ಬಳಸಿದ ಗುರುತನ್ನು ಸ್ವತ್ತಿನ ಗುರುತು ಎಂದು ಹೇಳಲಾಗುತ್ತದೆ.

(2) ಯಾರೇ ವ್ಯಕ್ತಿಯು, ಗುರುತು ಹಾಕಿದ ಸ್ವತ್ತು ಅಥವಾ ಸರಕು ಅಥವಾ ಹಾಗೆ ಗುರುತು ಹಾಕಿದ ಯಾವುದೇ ಅಂಥ ಧಾರಕದಲ್ಲಿರುವ ಯಾವುದೇ ಸ್ವತ್ತು ಅಥವಾ ಸರಕು ಯಾವ ವ್ಯಕ್ತಿಯದ್ದಲ್ಲವೋ ಆ ವ್ಯಕ್ತಿಗೆ ಸಂಬಂಧಿಸಿದವುಗಳೆಂದು ನಂಬಿಸಲು ಯುಕ್ತವಾಗಿ ಆಲೋಚಿಸಿರುವ ರೀತಿಯಲ್ಲಿ ಯಾವುದೇ ಚರ ಸ್ವತ್ತಿಗೆ ಅಥವಾ ಸರಕಿಗೆ ಅಥವಾ ಚರಸ್ವತ್ತನ್ನು ಅಥವಾ ಸರಕನ್ನು ಒಳಗೊಂಡಿರುವ ಯಾವುದೇ ಪೆಟ್ಟಿಗೆಗೆ, ಭಾಂಗಿಗೆ ಅಥವಾ ಇತರ ಧಾರಕಕ್ಕೆ ಗುರುತು ಹಾಕಿದರೆ ಅಥವಾ ಗುರುತು ಹಾಕಿದ ಯಾವುದೇ

ಪೆಟ್ಟಿಗೆಯನ್ನು, ಭಾಂಗಿಯನ್ನು ಅಥವಾ ಇತರ ಧಾರಕವನ್ನು ಬಳಸುವ ವ್ಯಕ್ತಿಯು, ಸುಳ್ಳು ಸ್ವತ್ತು ಗುರುತನ್ನು ಬಳಸುತ್ತಾನೆಂದು ಹೇಳಲಾಗುತ್ತದೆ.

(3) ಯಾರೇ ವ್ಯಕ್ತಿಯು ಸುಳ್ಳು ಸ್ವತ್ತು ಗುರುತನ್ನು ಬಳಸಿದರೆ ಆ ವ್ಯಕ್ತಿಯು, ಮೋಸ ಮಾಡಬೇಕೆಂಬ ಉದ್ದೇಶವಿಲ್ಲದೆ ತಾನು ಹಾಗೆ ಮಾಡಿದೆನೆಂದು ಸಾಬೀತು ಮಾಡಿದ್ದ ಹೊರತು, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**346. ಕ್ಷತಿಯನ್ನುಂಟು ಮಾಡುವ ಉದ್ದೇಶದಿಂದ ಸ್ವತ್ತು ಗುರುತನ್ನು ಅಕ್ರಮವಾಗಿ ತಿದ್ದುವುದು.-** ಯಾರೇ ವ್ಯಕ್ತಿಯು ಬೇರೊಬ್ಬ ವ್ಯಕ್ತಿಗೆ ಕ್ಷತಿಯನ್ನುಂಟು ಮಾಡಬಹುದೆಂಬ ಉದ್ದೇಶದಿಂದ ಅಥವಾ ಕ್ಷತಿಯುಂಟಾಗುವ ಸಂಭವವಿದೆಯೆಂದು ಗೊತ್ತಿದ್ದರೂ, ಯಾವುದೇ ಸ್ವತ್ತು ಗುರುತನ್ನು ತೆಗೆದುಹಾಕಿದರೆ, ನಾಶಪಡಿಸಿದರೆ, ವಿರೂಪಗೊಳಿಸಿದರೆ ಅಥವಾ ಅದಕ್ಕೆ ಏನಾದರೂ ಸೇರಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**347. ಸ್ವತ್ತು ಗುರುತಿನ ಖೋಟಾ ತಯಾರಿಕೆ.-** (1) ಯಾರೇ ವ್ಯಕ್ತಿಯು, ಬೇರೊಬ್ಬ ವ್ಯಕ್ತಿಯು ಬಳಸುವ ಯಾವುದೇ ಸ್ವತ್ತು ಗುರುತನ್ನು ಖೋಟಾ ತಯಾರಿಕೆ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಲೋಕ ನೌಕರನು ಬಳಸುವ ಯಾವುದೇ ಸ್ವತ್ತು ಗುರುತನ್ನು ಅಥವಾ ಯಾರೇ ನಿರ್ದಿಷ್ಟ ವ್ಯಕ್ತಿಯು ತಯಾರಿಸಿದ್ದಾನೆಂದು ಅಥವಾ ನಿರ್ದಿಷ್ಟ ಕಾಲದಲ್ಲಿ ಅಥವಾ ಸ್ಥಳದಲ್ಲಿ ಸ್ವತ್ತು ತಯಾರಾಗಿದೆಯೆಂದು ಅಥವಾ ಅದು ನಿರ್ದಿಷ್ಟ ಗುಣವುಳ್ಳ ಸ್ವತ್ತೆಂದು ಅಥವಾ ಅದು ನಿರ್ದಿಷ್ಟ ಕಚೇರಿಯಿಂದ ಬಂದಿದೆಯೆಂದು ಅಥವಾ ಅದು ಯಾವುದೇ ವಿನಾಯಿತಿಗೆ ಅರ್ಹವಾಗಿದೆಯೆಂದು ನಮೂದಿಸಲು ಲೋಕ ನೌಕರನು ಬಳಸಿದ ಯಾವುದೇ ಗುರುತನ್ನು ಖೋಟಾ ತಯಾರಿಕೆ ಮಾಡಿದರೆ ಅಥವಾ ಅದು ಖೋಟಾ ತಯಾರಿಕೆಯೆಂದು ಗೊತ್ತಿದ್ದರೂ ಯಾವುದೇ ಅಂಥ ಗುರುತನ್ನು ನೈಜವೆಂದು ಬಳಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**348. ಸ್ವತ್ತು ಗುರುತಿನ ಖೋಟಾ ತಯಾರಿಕೆಗಾಗಿ ಯಾವುದೇ ಉಪಕರಣವನ್ನು ನಿರ್ಮಿಸುವುದು ಅಥವಾ ಇಟ್ಟುಕೊಂಡಿರುವುದು.-** ಯಾರೇ ವ್ಯಕ್ತಿಯು, ಸ್ವತ್ತು ಗುರುತಿನ ಖೋಟಾ ತಯಾರಿಕೆ ಮಾಡಲು ಯಾವುದೇ ಅಚ್ಚನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣವನ್ನು ನಿರ್ಮಿಸುವ ಅಥವಾ ಸ್ವಾಧೀನದಲ್ಲಿಟ್ಟುಕೊಂಡಿರುವ ಅಥವಾ ಸರಕುಗಳು ಯಾವ ವ್ಯಕ್ತಿಯಲ್ಲವೋ ಆ ಸರಕುಗಳು ಆ ವ್ಯಕ್ತಿಯವುಗಳೆಂದು ನಮೂದಿಸುವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**349. ಖೋಟಾ ಸ್ವತ್ತು ಗುರುತು ಹಾಕಿದ ಸರಕುಗಳ ಮಾರಾಟ.-** ಖೋಟಾ ಸ್ವತ್ತು ಗುರುತನ್ನು ಅಂಟಿಸಿದ ಅಥವಾ ಒತ್ತಿದ ಯಾವುವೇ ಸರಕುಗಳನ್ನು ಅಥವಾ ವಸ್ತುಗಳನ್ನು ಅಥವಾ ಅಂಥ ಸರಕುಗಳನ್ನು ಒಳಗೊಂಡ ಯಾವುದೇ ಪೆಟ್ಟಿಗೆಯನ್ನು, ಭಾಂಗಿಯನ್ನು ಅಥವಾ ಇತರ ಧಾರಕವನ್ನು ಮತ್ತು ಯಾವ ಪೆಟ್ಟಿಗೆಗೆ, ಭಾಂಗಿಗೆ ಅಥವಾ ಧಾರಕಕ್ಕೆ ಖೋಟಾ ಸ್ವತ್ತು ಗುರುತನ್ನು ಅಂಟಿಸಲಾಗಿದೆಯೋ ಅಥವಾ ಒತ್ತಲಾಗಿದೆಯೋ ಆ ಯಾವುದೇ ಪೆಟ್ಟಿಗೆಯನ್ನು, ಭಾಂಗಿಯನ್ನು ಅಥವಾ ಇತರ ಧಾರಕವನ್ನು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ತೆರೆದಿಟ್ಟಿದ್ದರೆ ಅಥವಾ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ ಆ ವ್ಯಕ್ತಿಯು,-

(ಎ) ಈ ಪ್ರಕರಣದ ವಿರುದ್ಧ ಅಪರಾಧವನ್ನು ಮಾಡದ ಹಾಗೆ ಎಲ್ಲ ಯುಕ್ತ ಮುನ್ನೆಚ್ಚರಿಕೆಗಳನ್ನು ತಾನು ತೆಗೆದುಕೊಂಡಿದ್ದೇನೆಂದು, ಆಪಾದಿಸಿರುವ ಅಪರಾಧವನ್ನು ಮಾಡುವ ಸಮಯದಲ್ಲಿ ಆ ಗುರುತಿನ ನೈಜತೆಯ ಬಗ್ಗೆ ಶಂಕಿಸಲು ತನಗೆ ಕಾರಣವಿರಲಿಲ್ಲವೆಂದು; ಮತ್ತು

(ಬಿ) ಪ್ರಾಸಿಕ್ಯೂಟರನು ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು ಕೇಳಿದ ಮೇಲೆ, ತಾನು ಅಂಥ ಸರಕುಗಳನ್ನು ಅಥವಾ ವಸ್ತುಗಳನ್ನು ಯಾರಿಂದ ಪಡೆದನೋ ಆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ತನಗೆ ತಿಳಿದ ಮಟ್ಟಿಗೆ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆಂದು; ಅಥವಾ

(ಸಿ) ತಾನು ಅನ್ಯಥಾ ಏನು ಗೊತ್ತಿಲ್ಲದಿದ್ದುದರಿಂದ ಹಾಗೆ ಮಾಡಿದ್ದೇನೆಂದು

- ರುಜುವಾತುಪಡಿಸಿದ ಹೊರತು, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**350. ಸರಕುಗಳನ್ನು ಒಳಗೊಂಡಿರುವ ಯಾವುದೇ ಧಾರಕದ ಮೇಲೆ ಸುಳ್ಳು ಗುರುತನ್ನು ಹಾಕುವುದು.-** (1) ಯಾರೇ ವ್ಯಕ್ತಿಯು, ಸರಕುಗಳನ್ನು ಒಳಗೊಂಡಿರುವ ಯಾವುದೇ ಪೆಟ್ಟಿಗೆಯ, ಭಾಂಗಿಯ ಅಥವಾ ಇತರ ಧಾರಕದ ಮೇಲೆ, ಅಂಥ ಧಾರಕದಲ್ಲಿ ಯಾವ ಸರಕುಗಳು ಇಲ್ಲವೋ ಅಂಥ ಸರಕುಗಳನ್ನು ಒಳಗೊಂಡಿದೆಯೆಂದು ಅಥವಾ ಅದರಲ್ಲಿ ಯಾವ ಸರಕುಗಳು ಇರಬೇಕಿತ್ತೋ, ಅಂಥ ಸರಕುಗಳನ್ನು ಅದು ಒಳಗೊಂಡಿಲ್ಲವೆಂದು ಅಥವಾ ಅಂಥ ಧಾರಕದಲ್ಲಿರುವ ಸರಕುಗಳು ಯಾವ ನಿಜವಾದ ಸ್ವರೂಪದವಾಗಿರಬೇಕಿತ್ತೋ ಅಥವಾ ಗುಣಮಟ್ಟದವಾಗಿರಬೇಕಿತ್ತೋ ಅದಕ್ಕಿಂತ ಭಿನ್ನವಾದ ಸ್ವರೂಪದವುಗಳೆಂದು ಅಥವಾ ಗುಣಮಟ್ಟದವುಗಳೆಂದು ಯಾರೇ ಲೋಕ ನೌಕರನಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ನಂಬಿಸುವಂತೆ ಆಲೋಚಿಸಿರುವಂಥ ಯುಕ್ತ ರೀತಿಯಲ್ಲಿ ಯಾವುದೇ ಸುಳ್ಳು ಗುರುತನ್ನು ಹಾಕಿದರೆ ಆ ವ್ಯಕ್ತಿಯು ಮೋಸ ಮಾಡುವ ಉದ್ದೇಶ ತನಗಿರಲಿಲ್ಲವಾದ್ದರಿಂದ ಹಾಗೆ ಮಾಡಿದ್ದೇನೆಂದು ರುಜುವಾತುಪಡಿಸಿದ ಹೊರತು, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಈ (1)ನೇ ಉಪಪ್ರಕರಣದ ಮೇರೆಗೆ ನಿಷೇಧಿಸಿದ ಯಾವುದೇ ಸುಳ್ಳು ಗುರುತನ್ನು ಯಾವುದೇ ರೀತಿಯಲ್ಲಿ ಬಳಸಿದರೆ, ತನಗೆ ಮೋಸ ಮಾಡುವ ಉದ್ದೇಶವಿರಲಿಲ್ಲವಾದ್ದರಿಂದ ಹಾಗೆ ಮಾಡಿದ್ದಾಗಿ ರುಜುವಾತುಪಡಿಸಿದ ಹೊರತು, (1)ನೇ ಉಪಪ್ರಕರಣದ ಅಡಿ ಅಪರಾಧವನ್ನು ಮಾಡಿದ್ದರೆ ಹೇಗೋ ಹಾಗೆ ದಂಡಿತನಾಗತಕ್ಕದ್ದು.

## ಅಧ್ಯಾಯ XIX

## ಆಪರಾಧಿಕ ಭಯೋತ್ಪಾದನೆ, ಅವಮಾನ, ಕಿರುಕುಳ, ಮಾನಹಾನಿ, ಇತ್ಯಾದಿ

**351. ಆಪರಾಧಿಕ ಭಯೋತ್ಪಾದನೆ.-** (1) ಯಾರೇ ವ್ಯಕ್ತಿಯು, ಇನ್ನೊಬ್ಬ ವ್ಯಕ್ತಿಗೆ ಯಾವುದೇ ರೀತಿಯಲ್ಲಿ ಆತನ ದೇಹಕ್ಕೆ, ಖ್ಯಾತಿಗೆ ಅಥವಾ ಸ್ವತ್ತಿಗೆ ಯಾವುದೇ ಕ್ಷತಿ ಉಂಟುಮಾಡುವುದಾಗಿ ಬೆದರಿಕೆ ಹಾಕಿದರೆ ಅಥವಾ ಯಾರೇ ವ್ಯಕ್ತಿಗೆ ಅಪಾಯದ ಭೀತಿ ಹುಟ್ಟಿಸುವ ಉದ್ದೇಶದಿಂದ ಅಥವಾ ಆ ವ್ಯಕ್ತಿಯು ಯಾವ ವ್ಯಕ್ತಿಯಲ್ಲಿ ಹಿತಾಸಕ್ತಿ ಹೊಂದಿರುವನೋ ಆ ಯಾರೇ ವ್ಯಕ್ತಿಯ ದೇಹಕ್ಕೆ ಅಥವಾ ಖ್ಯಾತಿಗೆ ಕ್ಷತಿ ಉಂಟುಮಾಡುವುದಾಗಿ ಬೆದರಿಕೆ ಹಾಕಿದರೆ ಅಥವಾ ಅಂಥ ಬೆದರಿಕೆಯನ್ನು ಕಾರ್ಯಗತಗೊಳಿಸುವುದನ್ನು ತಪ್ಪಿಸುವುದಕ್ಕಾಗಿ ಅಥವಾ ಆ ವ್ಯಕ್ತಿಯು ಯಾವ ಕೃತ್ಯವನ್ನು ಕಾನೂನುಸಮ್ಮತವಾಗಿ ಮಾಡಲು ಬದ್ಧನಾಗಿಲ್ಲವೋ ಆ ಯಾವುದೇ ಕೃತ್ಯವನ್ನು ಮಾಡುವಂತೆ ಮಾಡಿದರೆ ಅಥವಾ ಆ ವ್ಯಕ್ತಿಯು ಯಾವ ಕೃತ್ಯವನ್ನು ಕಾನೂನುಸಮ್ಮತವಾಗಿ ಮಾಡಲು ಹಕ್ಕುಳ್ಳವನಾಗಿರುವನೋ ಆ ಯಾವುದೇ ಕೃತ್ಯವನ್ನು ಮಾಡದ ಹಾಗೆ ಮಾಡಿದರೆ ಆ ವ್ಯಕ್ತಿಯು ಆಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿದ್ದಾನೆಂದಾಗುತ್ತದೆ.

*ವಿವರಣೆ.-* ಬೆದರಿಕೆಗೆ ಒಳಗಾದ ವ್ಯಕ್ತಿಯು ಯಾವ ಮೃತ ವ್ಯಕ್ತಿಯಲ್ಲಿ ಹಿತಾಸಕ್ತಿ ಹೊಂದಿರುವನೋ ಆ ಯಾರೇ ಮೃತ ವ್ಯಕ್ತಿಯ ಖ್ಯಾತಿಗೆ ಹಾನಿ ಉಂಟುಮಾಡುವ ಬೆದರಿಕೆ ಹಾಕುವುದು ಈ ಪ್ರಕರಣದ ವ್ಯಾಪ್ತಿಗೆ ಒಳಪಡುತ್ತದೆ.

*ದೃಷ್ಟಾಂತ*

'ಬಿ'ಯು ಸಿವಿಲ್ ದಾವೆಯನ್ನು ಮುಂದುವರಿಸದ ಹಾಗೆ ಮಾಡುವ ಉದ್ದೇಶದಿಂದ 'ಎ'ಯು 'ಬಿ'ಯ ಮನೆಯನ್ನು ಸುಟ್ಟು ಹಾಕುವುದಾಗಿ ಬೆದರಿಕೆ ಹಾಕುತ್ತಾನೆ. ಇಲ್ಲಿ 'ಎ'ಯು ಆಪರಾಧಿಕ ಭಯೋತ್ಪಾದನೆಯ ತಪ್ಪಿತಸ್ಥನಾಗಿದ್ದಾನೆಂದಾಗುತ್ತದೆ.

(2) ಯಾರೇ ವ್ಯಕ್ತಿಯು, ಆಪರಾಧಿಕ ಭಯೋತ್ಪಾದನೆಯ ಅಪರಾಧವನ್ನು ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮರಣ ಅಥವಾ ತೀವ್ರವಾದ ಗಾಯ ಉಂಟುಮಾಡುವ ಬೆದರಿಕೆ ಹಾಕುವ ಮೂಲಕ ಅಥವಾ ಯಾವುದೇ ಸ್ವತ್ತನ್ನು ಬೆಂಕಿ ಹಚ್ಚುವ ಮೂಲಕ ನಾಶಮಾಡುವ ಅಥವಾ ಮರಣದಂಡನೆ ಅಥವಾ ಆಜೀವ ಕಾರವಾಸದಿಂದ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಕಾರಾವಾಸದಿಂದ ದಂಡನೀಯವಾಗಬಹುದಾದ ಅಪರಾಧವನ್ನು ಮಾಡುವ ಅಥವಾ ಮಹಿಳೆಗೆ ಶೀಲಭ್ರಷ್ಟತೆಯನ್ನು ಆರೋಪಿಸುವ ಬೆದರಿಕೆ ಒಡ್ಡುವ ಮೂಲಕ ಆಪರಾಧಿಕ ಭಯೋತ್ಪಾದನೆಯ ಅಪರಾಧವನ್ನು ಮಾಡಿದರೆ, ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಅನಾಮಧೇಯ ಸಂವಹನದ ಮೂಲಕ ಅಥವಾ ಯಾರಿಂದ ಬೆದರಿಕೆ ಬಂದಿದೆಯೋ ಆ ವ್ಯಕ್ತಿಯ ಹೆಸರು ಅಥವಾ ವಾಸಸ್ಥಳವನ್ನು ಮರೆಮಾಚಲು ಮುನ್ನೆಚ್ಚರಿಕೆ ವಹಿಸುವ ಆಪರಾಧಿಕ ಭಯೋತ್ಪಾದನೆಯ ಅಪರಾಧವನ್ನು ಮಾಡಿದರೆ, ಅವನು (1)ನೇ ಉಪಪ್ರಕರಣದ ಮೇರೆಗೆ ಅಪರಾಧಕ್ಕಾಗಿ ನೀಡಲಾದ ದಂಡನೆಯ ಜೊತೆಗೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**352. ಶಾಂತಿ ಭಂಗವನ್ನು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕ ಅವಮಾನ.-** ಯಾರೇ ವ್ಯಕ್ತಿಯು, ಯಾರೇ ಬೇರೊಬ್ಬ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ಅವಮಾನ ಮಾಡಿ ಆ ಮೂಲಕ ಆ ವ್ಯಕ್ತಿಗೆ ಉದ್ರೇಕವನ್ನುಂಟು ಮಾಡಿದರೆ ಅಂಥ ಉದ್ರೇಕದಿಂದ ಅವನು ಶಾಂತಿ ಭಂಗವನ್ನು ಉಂಟುಮಾಡಲೆಂಬ ಅಥವಾ ಇತರ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೆ ಶಾಂತಿ ಭಂಗವಾಗುವ ಸಂಭವವಿದೆಯೆಂಬುದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಆ ವ್ಯಕ್ತಿಯನ್ನು ಅವಮಾನ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**353. ಸಾರ್ವಜನಿಕ ಕೇಡಿಗೆ ಕಾರಣವಾಗುವ ಹೇಳಿಕೆಗಳು.-** (1) ಯಾರೇ ವ್ಯಕ್ತಿಯು,-

(ಎ) ಭಾರತದ ಭೂ ಸೇನೆ, ನೌಕಾ ಸೇನೆ ಅಥವಾ ವಾಯು ಸೇನೆಯ ಯಾರೇ ಅಧಿಕಾರಿಯು, ಸೈನಿಕನು ಅಥವಾ ವೈಮಾನಿಕನು ದಂಗೆಯೇಳುವಂತೆ ಅಥವಾ ಅನ್ಯಥಾ ತನ್ನ ಕರ್ತವ್ಯವನ್ನು ಕಡೆಗಣಿಸುವಂತೆ ಅಥವಾ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪುವಂತೆ ಮಾಡುವ ಉದ್ದೇಶದಿಂದ ಅಥವಾ ಅಂಥ ಸನ್ನಿವೇಶ ಸೃಷ್ಟಿಸುವುದಕ್ಕೆ ಅನುವು ಮಾಡಿಕೊಡುವ; ಅಥವಾ

(ಬಿ) ಸಾರ್ವಜನಿಕರಿಗೆ ಅಥವಾ ಸಾರ್ವಜನಿಕರ ಯಾವುದೇ ವರ್ಗಕ್ಕೆ ಅಪಾಯ ಅಥವಾ ಭೀತಿಯನ್ನು ಹುಟ್ಟಿಸಿ ಅದರಿಂದ ಯಾರೇ ವ್ಯಕ್ತಿಯು ಸರ್ಕಾರದ ವಿರುದ್ಧ ಅಥವಾ ಸಾರ್ವಜನಿಕ ನೆಮ್ಮದಿಯ ವಿರುದ್ಧ ಅಪರಾಧವೆಸಗುವಂತೆ ಮಾಡುವ ಉದ್ದೇಶದಿಂದ ಅಥವಾ ಹಾಗೆ ಆಗುವುದಕ್ಕೆ ಅನುವು ಮಾಡಿಕೊಡುವ; ಅಥವಾ

(ಸಿ) ಯಾವುದೇ ವರ್ಗವು ಅಥವಾ ವ್ಯಕ್ತಿಗಳ ಸಮುದಾಯವು, ಯಾವುದೇ ಇತರ ವರ್ಗದ ಅಥವಾ ವ್ಯಕ್ತಿಗಳ ಸಮುದಾಯದ ವಿರುದ್ಧ ಯಾವುದೇ ಅಪರಾಧವನ್ನು ಮಾಡುವಂತೆ ಪ್ರಚೋದಿಸುವ ಉದ್ದೇಶದಿಂದ ಅಥವಾ ಹಾಗೆ ಆಗುವುದಕ್ಕೆ ಅನುವು ಮಾಡಿಕೊಡುವ

- ಯಾವುದೇ ಹೇಳಿಕೆಯನ್ನು, ಸುಳ್ಳು ಮಾಹಿತಿಯನ್ನು, ವದಂತಿಯನ್ನು ಅಥವಾ ವರದಿಯನ್ನು, ವಿದ್ಯುನ್ಮಾನ ಸಾಧನಗಳೂ ಸೇರಿದಂತೆ ಬೇರೆ ಯಾವುದಾದರೂ ಸಾಧನಗಳ ಮೂಲಕ ಕೊಟ್ಟರೆ, ಪ್ರಕಟಿಸಿದರೆ ಅಥವಾ ಪ್ರಸಾರ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಬೇರೆ ಬೇರೆ ಧರ್ಮದ, ಜನಾಂಗದ, ಭಾಷೆಯ ಅಥವಾ ಪ್ರಾದೇಶಿಕ ಗುಂಪುಗಳ ಅಥವಾ ಜಾತಿಗಳ ಅಥವಾ ಸಮುದಾಯಗಳ ನಡುವೆ ಧಾರ್ಮಿಕ, ಜನಾಂಗೀಯ, ಜನ್ಮ ಸ್ಥಳದ, ವಾಸಸ್ಥಳದ, ಭಾಷೆಯ, ಜಾತಿಯ ಅಥವಾ ಸಮುದಾಯದ ಆಧಾರದ ಮೇಲೆ ಅಥವಾ ಯಾವುದೇ ಇತರ ಬಗೆಯ ಆಧಾರದ ಮೇಲೆ ವೈರ, ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಉಂಟುಮಾಡಿದರೆ ಅಥವಾ ಬೆಳೆಸಿದರೆ ಅಥವಾ ಉಂಟುಮಾಡುವ ಅಥವಾ ಬೆಳೆಸುವ ಸಂಭವವಿರುವ ಸುಳ್ಳು ಮಾಹಿತಿ, ವದಂತಿ ಅಥವಾ ಅಪಾಯದ ಭೀತಿಯನ್ನು ಹುಟ್ಟಿಸುವ ಸುದ್ದಿಯನ್ನು ಒಳಗೊಂಡ ಯಾವುದೇ ಹೇಳಿಕೆಯನ್ನು ಅಥವಾ ವರದಿಯನ್ನು, ವಿದ್ಯುನ್ಮಾನ ಸಾಧನಗಳೂ ಸೇರಿದಂತೆ ಬೇರೆ ಯಾವುದೇ ಸಾಧನಗಳ ಮೂಲಕ ಕೊಟ್ಟರೆ, ಪ್ರಕಟಿಸಿದರೆ ಅಥವಾ ಪ್ರಸಾರ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಯಾವುದೇ ಪೂಜಾಸ್ಥಳದಲ್ಲಿ ಅಥವಾ ಧಾರ್ಮಿಕ ಪೂಜೆಯಲ್ಲಿ ಅಥವಾ ಧಾರ್ಮಿಕ ಆಚರಣೆಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಮಾಡಿದರೆ, ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

*ಅಪವಾದ.-* ಅಂಥ ಯಾವುದೇ ಹೇಳಿಕೆಯನ್ನು, ಸುಳ್ಳು ಮಾಹಿತಿಯನ್ನು ಕೊಡುವ, ವದಂತಿಯನ್ನು ಅಥವಾ ವರದಿಯನ್ನು ಮಾಡುವ, ಪ್ರಕಟಿಸುವ ಅಥವಾ ಪ್ರಸಾರ ಮಾಡುವ ವ್ಯಕ್ತಿಗೆ ಅಂಥ ಹೇಳಿಕೆಯು, ಸುಳ್ಳು ಮಾಹಿತಿಯು, ವದಂತಿಯು ಅಥವಾ ವರದಿಯು, ನಿಜವೆಂದು ನಂಬಲು ಸಮಂಜಸ ಆಧಾರಗಳಿದ್ದರೆ ಮತ್ತು ಅವನು ಅದನ್ನು ಮೇಲೆ ಹೇಳಿದಂಥ ಯಾವುದೇ ಉದ್ದೇಶವಿಲ್ಲದೆ ಸದ್ಭಾವನೆಯಿಂದ ಕೊಟ್ಟಿದ್ದರೆ, ಪ್ರಕಟಿಸಿದ್ದರೆ ಅಥವಾ ಪ್ರಸಾರ ಮಾಡಿದ್ದರೆ, ಆ ಕೃತ್ಯವು ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅಪರಾಧವೆನಿಸುವುದಿಲ್ಲ.

**354. ದೈವೀ ಅವಕೃಪೆಗೆ ಗುರಿಯಾಗುವನೆಂದು ವ್ಯಕ್ತಿಯು ನಂಬುವಂತೆ ಮಾಡಿ ಮಾಡಿದ ಕೃತ್ಯ.-** ಯಾರೇ ವ್ಯಕ್ತಿಯು, ಸ್ವಯಿಚ್ಛೆಯಿಂದ ಯಾವ ವ್ಯಕ್ತಿಯಿಂದ ಯಾವ ಕೃತ್ಯವನ್ನು ಮಾಡಿಸಬೇಕೆಂದು ಅಪರಾಧಿಯು ಉದ್ದೇಶಿಸಿರುವನೋ, ಆ ಕೃತ್ಯವನ್ನು ಆ ವ್ಯಕ್ತಿಯು ಮಾಡದೆ ಹೋದರೆ ಅಥವಾ ಯಾವ ಕೃತ್ಯವನ್ನು ಆ ವ್ಯಕ್ತಿಯಿಂದ ಮಾಡಿಸಕೂಡದೆಂದು ಅಪರಾಧಿಯು ಉದ್ದೇಶಿಸಿರುವನೋ ಆ ಕೃತ್ಯವನ್ನು ಆ ವ್ಯಕ್ತಿಯು ಮಾಡಿದರೆ ಅವನು ಅಥವಾ ಅವನಲ್ಲಿ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಯು ಅಂಥ ಅಪರಾಧಿಯ ಯಾವುದೇ ಕೃತ್ಯದಿಂದಾಗಿ ದೈವೀ ಅವಕೃಪೆಗೆ ಗುರಿಯಾಗುವನೆಂದು ಅಥವಾ ಗುರಿಪಡಿಸಲಾಗುವುದೆಂದು ಆ ವ್ಯಕ್ತಿಯು ನಂಬುವಂತೆ ಮಾಡುವ ಮೂಲಕ ಅಥವಾ ನಂಬುವಂತೆ ಮಾಡಲು ಪ್ರಯತ್ನಿಸುವ ಮೂಲಕ ಅದರಿಂದ ಆ ಯಾರೇ ವ್ಯಕ್ತಿಯು ತಾನು ಕಾನೂನುಸಮ್ಮತವಾಗಿ ಮಾಡಲು ಬದ್ಧನಾಗಿರದ ಯಾವುದೇ ಕೃತ್ಯವನ್ನು ಮಾಡುವಂತೆ ಅಥವಾ ಅವನು ಕಾನೂನುಸಮ್ಮತವಾಗಿ ಮಾಡಲು ಹಕ್ಕುಳ್ಳ ಯಾವುದೇ ಕೃತ್ಯವನ್ನು ಮಾಡದಂತೆ ಮಾಡಿದರೆ ಅಥವಾ ಮಾಡಿಸಲು ಪ್ರಯತ್ನಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

*ದೃಷ್ಟಾಂತಗಳು*

(ಎ) 'ಎ'ನು 'ಜೆಡ್'ನ ಮನೆಯ ಬಾಗಿಲಲ್ಲಿ ಧರಣಿ ಕುಳಿತಿದ್ದಾನೆ. ಅದರಿಂದ, 'ಜೆಡ್'ನು ದೈವೀ ಅವಕೃಪೆಗೆ ಗುರಿಯಾಗುತ್ತಾನೆಂಬ ನಂಬಿಕೆ 'ಜೆಡ್'ನಲ್ಲಿ ಮೂಡಬೇಕೆಂಬುದುಂಟು ಮಾಡುವುದು 'ಎ'ನ ಉದ್ದೇಶ. ಇಲ್ಲಿ 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

(ಬಿ) 'ಎ'ನು ತಾನು ಹೇಳಿದ ಕೃತ್ಯವನ್ನು 'ಜೆಡ್'ನು ಮಾಡದಿದ್ದರೆ, ತಾನು ತನ್ನ ಮಕ್ಕಳಲ್ಲಿ ಒಬ್ಬನನ್ನು ಕೊಲ್ಲುತ್ತೇನೆಂದು ಹೇಳಿ, ಹಾಗೆ ಮಾಡಿದರೆ 'ಜೆಡ್'ನು ದೈವೀ ಅವಕೃಪೆಗೆ ಗುರಿಯಾಗುವನೆಂದು ನಂಬಿಸಿ ಬೆದರಿಕೆ ಹಾಕುತ್ತಾನೆ. ಇಲ್ಲಿ 'ಎ'ನು ಈ ಪ್ರಕರಣದಲ್ಲಿ ಪರಿಭಾಷಿಸಿದ ಅಪರಾಧವನ್ನು ಮಾಡಿದ್ದಾನೆಂದಾಗುತ್ತದೆ.

**355. ಸಾರ್ವಜನಿಕ ಸ್ಥಳದಲ್ಲಿ ಕುಡಿದು ಅಮಲೇರಿದ ವ್ಯಕ್ತಿಯ ದುರ್ವರ್ತನೆ.-** ಯಾರೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಯಾವ ಸ್ಥಳದಲ್ಲಿ ಪ್ರವೇಶ ಮಾಡುವುದು ಅತಿಕ್ರಮಣ ಪ್ರವೇಶವೆನಿಸಿಕೊಳ್ಳುತ್ತದೋ ಆ ಸ್ಥಳದಲ್ಲಿ ಪಾನಮತ್ತ ಸ್ಥಿತಿಯಲ್ಲಿ ಕಾಣಿಸಿಕೊಂಡರೆ ಮತ್ತು ಅಲ್ಲಿ ಯಾರೇ ವ್ಯಕ್ತಿಗೆ ಕಿರುಕುಳ ಕೊಡುವಂಥ ರೀತಿಯಲ್ಲಿ ನಡೆದುಕೊಂಡರೆ, ಅವನು ಇಪ್ಪತ್ತನಾಲ್ಕು ಗಂಟೆಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಸಮುದಾಯ ಸೇವೆಯಿಂದಲೂ ದಂಡಿತನಾಗತಕ್ಕದ್ದು.

***ಮಾನಹಾನಿ***

**356. ಮಾನಹಾನಿ.-** (1) ಯಾರೇ ವ್ಯಕ್ತಿಯು, ಉಚ್ಚರಿಸಿದ ಅಥವಾ ಓದಬೇಕೆಂಬ ಉದ್ದೇಶದಿಂದ ಪದಗಳ ಮೂಲಕ ಅಥವಾ ಸನ್ನೆಗಳ ಮೂಲಕ ಅಥವಾ ದೃಶ್ಯ ನಿರೂಪಣೆಗಳ ಮೂಲಕ ಯಾರೇ ಇನ್ನೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಆರೋಪಣೆಯನ್ನು ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟು ಮಾಡುವ ಉದ್ದೇಶದಿಂದ ಅಥವಾ ಅಂಥ ಆರೋಪಣೆ ಮಾಡಿದರೆ ಅದರಿಂದ ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟಾಗುವುದೆಂಬುದು ಗೊತ್ತಿದ್ದರೂ ಅಥವಾ ಹಾಗೆ ನಂಬಲು ಕಾರಣವಿದ್ದರೂ ಮಾಡಿದರೆ ಅಥವಾ ಪ್ರಕಟಿಸಿದರೆ, ಆ ವ್ಯಕ್ತಿಯು ಇಲ್ಲಿ ಇನ್ನು ಮುಂದೆ ಹೊರತುಪಡಿಸಿದ ಸಂದರ್ಭಗಳ ಹೊರತು, ಆ ವ್ಯಕ್ತಿಯ ಮಾನಹಾನಿ ಮಾಡುತ್ತಾನೆಂದು ಹೇಳಲಾಗುತ್ತದೆ.

*ವಿವರಣೆ 1.-* ಮೃತ ವ್ಯಕ್ತಿಯ ಮೇಲೆ ಯಾವುದೇ ಆರೋಪಣೆ ಮಾಡಿದಾಗ ಅಂಥ ಆರೋಪಣೆಯು ಆ ವ್ಯಕ್ತಿಯು ಜೀವಂತವಾಗಿದ್ದಿದ್ದರೆ, ಆ ವ್ಯಕ್ತಿಯ ಖ್ಯಾತಿಗೆ ಹಾನಿಯನ್ನುಂಟು ಮಾಡಬಹುದಾಗಿದ್ದಿದ್ದರೆ ಮತ್ತು ಆ ವ್ಯಕ್ತಿಯ ಕುಟುಂಬದ ಅಥವಾ ಹತ್ತಿರದ ಇತರ ಸಂಬಂಧಿಗಳ ಭಾವನೆಗಳಿಗೆ ನೋವುಂಟು ಮಾಡುವ ಉದ್ದೇಶವುಳ್ಳದ್ದಾಗಿದ್ದರೆ, ಅದು ಮಾನಹಾನಿಯೆಂದಾಗಬಹುದು.

*ವಿವರಣೆ 2.-* ಕಂಪನಿಗೆ ಅಥವಾ ಸಂಸ್ಥೆಗೆ ಅಥವಾ ವ್ಯಕ್ತಿಗಳ ಸಮುದಾಯಕ್ಕೆ ಸಂಬಂಧಿಸಿದಂತೆ ಮಾಡಿದ ಆರೋಪಣೆಯು ಮಾನಹಾನಿಯೆಂದಾಗಬಹುದು.

*ವಿವರಣೆ 3.-* ಪರ್ಯಾಯ ರೂಪದಲ್ಲಿ ಅಥವಾ ವ್ಯಂಗ್ಯವಾಗಿ ವ್ಯಕ್ತಪಡಿಸಿದ ಆರೋಪಣೆಯು ಮಾನಹಾನಿಯೆಂದಾಗಬಹುದು.

*ವಿವರಣೆ 4.-* ಯಾವುದೇ ಆರೋಪಣೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ವ್ಯಕ್ತಿಯ ಗೌರವ ಘನತೆಯನ್ನು ಆ ಆರೋಪಣೆಯು ಆ ವ್ಯಕ್ತಿಯ ನೈತಿಕ ಅಥವಾ ಬೌದ್ಧಿಕ ಚಾರಿತ್ರ್ಯವನ್ನು ಅಥವಾ ಆ ವ್ಯಕ್ತಿಯ ಜಾತಿಗೆ ಅಥವಾ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಆ ವ್ಯಕ್ತಿಯ ಚಾರಿತ್ರ್ಯವನ್ನು ಅಥವಾ ಆ ವ್ಯಕ್ತಿಯ ಗೌರವವನ್ನು ಕುಗ್ಗಿಸುತ್ತದೆಂದು ಇತರರು ಅಭಿಪ್ರಾಯಪಟ್ಟಿದ್ದ ಹೊರತು ಅಥವಾ ಆ ವ್ಯಕ್ತಿಯ ದೇಹವು ಅಸಹ್ಯಕರವಾದ ಸ್ಥಿತಿಯಲ್ಲಿದೆಯೆಂದು ಅಥವಾ ಆ ವ್ಯಕ್ತಿಯ ಚಹರೆಯು ಸಾಮಾನ್ಯವಾಗಿ ಅವಮಾನಕರವಾಗಿ ಕಾಣುವಂತಿದೆಯೆಂದು ನಂಬುವಂತೆ ಮಾಡಿದ್ದ ಹೊರತು, ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟು ಮಾಡುತ್ತದೆಂದು ಹೇಳಲಾಗುವುದಿಲ್ಲ.

*ದೃಷ್ಟಾಂತಗಳು*

(ಎ) 'ಜೆಡ್'ನು 'ಬಿ'ನ ಕೈಗಡಿಯಾರವನ್ನು ಖಂಡಿತವಾಗಿಯೂ ಕಳವು ಮಾಡಿದ್ದಾನೆಂದು ನಂಬಿಸುವ ಉದ್ದೇಶದಿಂದ " 'ಜೆಡ್'ನು ಪ್ರಾಮಾಣಿಕ ಮನುಷ್ಯ, ಅವನು 'ಬಿ'ನ ಕೈಗಡಿಯಾರವನ್ನು ಕಳವು ಮಾಡಿಯೇ ಇಲ್ಲ" ಎಂದು 'ಎ'ನು ಹೇಳುತ್ತಾನೆ. ಇದು ಈ ಕೆಳಕಂಡ ಅಪವಾದಗಳ ಪೈಕಿ ಒಂದರ ವ್ಯಾಪ್ತಿಗೆ ಬಾರದಿದ್ದರೆ ಮಾನಹಾನಿಯೆಂದಾಗುತ್ತದೆ.

(ಬಿ) 'ಬಿ'ನ ಕೈಗಡಿಯಾರವನ್ನು ಯಾರು ಕಳವು ಮಾಡಿದರು ಎಂದು 'ಎ'ನನ್ನು ಕೇಳಲಾಯಿತು. 'ಜೆಡ್'ನು 'ಬಿ'ನ ಕೈಗಡಿಯಾರವನ್ನು ಕಳವು ಮಾಡಿದ್ದಾನೆಂದು ನಂಬಿಸುವ ಉದ್ದೇಶದಿಂದ 'ಎ' ನು 'ಜೆಡ್'ನ ಕಡೆಗೆ ತೋರಿಸುತ್ತಾನೆ. ಇದು, ಈ ಕೆಳಕಂಡ ಅಪವಾದಗಳ ಪೈಕಿ ಒಂದರ ವ್ಯಾಪ್ತಿಗೆ ಬಾರದಿದ್ದರೆ ಮಾನಹಾನಿಯೆಂದಾಗುತ್ತದೆ.

(ಸಿ) 'ಬಿ'ನ ಕೈಗಡಿಯಾರವನ್ನು 'ಜೆಡ್'ನು ಕಳವು ಮಾಡಿದ್ದಾನೆಂದು ನಂಬಿಸುವ ಉದ್ದೇಶದಿಂದ 'ಜೆಡ್'ನು 'ಬಿ'ನ ಕೈಗಡಿಯಾರವನ್ನು ತೆಗೆದುಕೊಂಡು ಓಡಿ ಹೋಗುತ್ತಿರುವಂತೆ ಕಾಣುವ ಚಿತ್ರವನ್ನು 'ಎ'ನು ಬರೆಯುತ್ತಾನೆ. ಇದು ಈ ಕೆಳಕಂಡ ಅಪವಾದಗಳ ಪೈಕಿ ಒಂದರ ವ್ಯಾಪ್ತಿಗೆ ಬಾರದಿದ್ದರೆ, ಮಾನಹಾನಿಯೆಂದಾಗುತ್ತದೆ.

*ಅಪವಾದ 1.- ಸತ್ಯ ಸಂಗತಿ ಕುರಿತಂತೆ ಯಾವ ಆರೋಪಣೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುವುದು ಅಥವಾ ಪ್ರಕಟಿಸುವುದು ಅಗತ್ಯವೋ ಅಂಥ ಆರೋಪಣೆ.* ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಯಾವುದೇ ಸತ್ಯ ಸಂಗತಿಯನ್ನು ಬಯಲಿಗೆಳೆಯಲು ಆರೋಪಿಸುವುದು ಅಥವಾ ಆರೋಪವನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವಾಗಿದ್ದರೆ, ಹಾಗೆ ಆರೋಪಿಸುವುದು ಮಾನಹಾನಿಯೆನಿಸುವುದಿಲ್ಲ, ಹಾಗೆ ಮಾಡುವಾಗ ಸಾರ್ವಜನಿಕ ಹಿತದೃಷ್ಟಿಯುಂಟೇ ಅಥವಾ ಇಲ್ಲವೇ ಎಂಬುದು ಸಂಗತಿಯ ಪ್ರಶ್ನೆ.

*ಅಪವಾದ 2.- ಲೋಕ ನೌಕರರ ಬಹಿರಂಗ ವರ್ತನೆ.* ಸಾರ್ವಜನಿಕ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಲೋಕ ನೌಕರನ ನಡತೆಗೆ ಸಂಬಂಧಿಸಿದಂತೆ ಅಥವಾ ಆತನ ಚಾರಿತ್ರ್ಯವು ಆ ನಡತೆಯಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರವೇ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಆದರೆ ಅಷ್ಟನ್ನು ಮೀರದಂತೆ, ಯಾವುದೇ ಬಗೆಯ ಅಭಿಪ್ರಾಯವನ್ನು ಸದ್ಭಾವನೆಯಿಂದ ವ್ಯಕ್ತಪಡಿಸುವುದು ಮಾನಹಾನಿಯೆಂದಾಗುವುದಿಲ್ಲ.

*ಅಪವಾದ 3.- ಯಾವುದೇ ಸಾರ್ವಜನಿಕ ಪ್ರಶ್ನೆಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ನಡತೆ.* ಯಾವುದೇ ಸಾರ್ವಜನಿಕ ಪ್ರಶ್ನೆಯ ಬಗೆಗಿನ ಯಾರೇ ವ್ಯಕ್ತಿಯ ನಡತೆಗೆ ಸಂಬಂಧಿಸಿದಂತೆ ಮತ್ತು ಅವನ ಚಾರಿತ್ರ್ಯವು ಆ ನಡತೆಯಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರವೇ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ, ಆದರೆ ಅಷ್ಟನ್ನು ಮೀರದಂತೆ, ಯಾವುದೇ ಬಗೆಯ ಅಭಿಪ್ರಾಯವನ್ನು ಸದ್ಭಾವನೆಯಿಂದ ವ್ಯಕ್ತಪಡಿಸುವುದು ಮಾನಹಾನಿಯೆಂದಾಗುವುದಿಲ್ಲ.

### *ದೃಷ್ಟಾಂತ*

ಸಾರ್ವಜನಿಕ ಪ್ರಶ್ನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸುವಾಗ, ಸಾರ್ವಜನಿಕ ಪ್ರಶ್ನೆಗೆ ಸಂಬಂಧಿಸಿದಂತೆ ಸಭೆಯನ್ನು ಏರ್ಪಡಿಸುವ ಬಗ್ಗೆ ಹೊರಡಿಸಿದ ಕೋರಿಕೆಗೆ ಸಹಿ ಮಾಡುವಾಗ, ಅಂಥ ಸಭೆಯ ಅಧ್ಯಕ್ಷತೆ ವಹಿಸುವಾಗ ಅಥವಾ ಅಂಥ ಸಭೆಯಲ್ಲಿ ಉಪಸ್ಥಿತನಿರುವಾಗ, ಸಾರ್ವಜನಿಕ ಬೆಂಬಲವನ್ನು ಕೋರುವ ಯಾವುದೇ ಸಂಘವನ್ನು ರಚಿಸುವಾಗ ಅಥವಾ ಅಂಥ ಸಂಘಕ್ಕೆ ಸೇರುವಾಗ, ಯಾವ ಸ್ಥಾನದ ಕರ್ತವ್ಯಗಳ ದಕ್ಷ ನಿರ್ವಹಣೆ ಕುರಿತಂತೆ ಸಾರ್ವಜನಿಕರು ಹಿತಾಸಕ್ತಿ ಹೊಂದಿರುವರೋ ಅಂಥ ಸ್ಥಾನಕ್ಕಾಗಿ ಯಾರೇ ಅಭ್ಯರ್ಥಿಯ ಪರವಾಗಿ ಮತ ನೀಡುವಾಗ ಅಥವಾ ಪ್ರಚಾರ ಮಾಡುವಾಗ 'ಜೆಡ್'ನ ನಡತೆಗೆ ಸಂಬಂಧಿಸಿದಂತೆ ಯಾವುದೇ ಬಗೆಯ ಅಭಿಪ್ರಾಯವನ್ನು 'ಎ'ನು ಸದ್ಭಾವನೆಯಿಂದ ವ್ಯಕ್ತಪಡಿಸುವುದು ಮಾನಹಾನಿಯೆಂದಾಗುವುದಿಲ್ಲ.

*ಅಪವಾದ 4.- ನ್ಯಾಯಾಲಯದ ವ್ಯವಹರಣೆಗಳ ವರದಿಗಳ ಪ್ರಕಟಣೆ.* ನ್ಯಾಯಾಲಯದ ವ್ಯವಹರಣೆಗಳ ಬಗ್ಗೆ ಅಥವಾ ಅಂಥ ಯಾವುದೇ ವ್ಯವಹರಣೆಗಳ ಯಾವುದೇ ಪರಿಣಾಮದ ಬಗ್ಗೆ ಬಹುಮಟ್ಟಿಗೆ ಯಥಾರ್ಥವಾದ ವರದಿಯನ್ನು ಪ್ರಕಟಿಸುವುದು ಮಾನಹಾನಿಯೆಂದಾಗುವುದಿಲ್ಲ.

*ವಿವರಣೆ.-* ನ್ಯಾಯಾಲಯದಲ್ಲಿ ಅಧಿವಿಚಾರಣೆಯಾಗುವುದಕ್ಕೂ ಮುಂಚೆ ಬಹಿರಂಗ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಮ್ಯಾಜಿಸ್ಟ್ರೇಟ್ ಅಥವಾ ಇತರ ಅಧಿಕಾರಿಯನ್ನು ಮೇಲಿನ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ನ್ಯಾಯಾಲಯವೆಂದು ಪರಿಗಣಿಸಲಾಗುತ್ತದೆ.

*ಅಪವಾದ 5.- ನ್ಯಾಯಾಲಯದಲ್ಲಿ ತೀರ್ಮಾನವಾದ ಮೊಕದ್ದಮೆಗಳ ಗುಣಾವಗುಣಗಳು ಅಥವಾ ಸಾಕ್ಷಿಗಳ ಮತ್ತು ಸಂಬಂಧಪಟ್ಟ ಇತರರ ವರ್ತನೆ.* ನ್ಯಾಯಾಲಯವು ತೀರ್ಮಾನಿಸಿದ ಯಾವುದೇ ಸಿವಿಲ್ ಅಥವಾ ಆಪರಾಧಿಕ ಮೊಕದ್ದಮೆಯ ಗುಣಾವಗುಣಗಳಿಗೆ ಸಂಬಂಧಿಸಿದಂತೆ ಅಥವಾ ಅಂಥ ಯಾವುದೇ ಮೊಕದ್ದಮೆಯಲ್ಲಿ ಪಕ್ಷಕಾರ, ಸಾಕ್ಷಿ ಅಥವಾ ಏಜೆಂಟನಾಗಿರುವ ಯಾರೇ ವ್ಯಕ್ತಿಯ ವರ್ತನೆಗೆ ಸಂಬಂಧಿಸಿದಂತೆ ಅಥವಾ ಅಂಥ ವ್ಯಕ್ತಿಯ ಚಾರಿತ್ರ್ಯವು ಆ ವರ್ತನೆಯಲ್ಲಿ ಕಂಡುಬರುವಷ್ಟರ ಮಟ್ಟಿಗೆ ಮಾತ್ರವೇ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಆದರೆ ಅಷ್ಟನ್ನು ಮೀರದಂತೆ, ಸದ್ಭಾವನೆಯಿಂದ ಯಾವುದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಮಾನಹಾನಿಯೆಂದಾಗುವುದಿಲ್ಲ.

*ದೃಷ್ಟಾಂತಗಳು*

(ಎ) ಅಧಿವಿಚಾರಣೆಯಲ್ಲಿ ‘ಜೆಡ್'ನು ಕೊಟ್ಟ ಸಾಕ್ಷ್ಯವು “ಜೆಡ್'ನು ಹೆಡ್ಡ ಅಥವಾ ಅಪ್ರಾಮಾಣಿಕ ಎಂದೆನಿಸುವಷ್ಟರ ಮಟ್ಟಿಗೆ ಪರಸ್ಪರ ವಿರುದ್ಧವಾದುದಾಗಿತ್ತು ಎಂದು ನನಗನಿಸುತ್ತದೆ” ಎಂದು ‘ಎ'ನು ಹೇಳುತ್ತಾನೆ. ‘ಎ'ನು ಈ ಅಭಿಪ್ರಾಯವನ್ನು ಸದ್ಭಾವನೆಯಿಂದ ಹೇಳಿದ್ದರೆ, ಎಂದರೆ ಅವನ ಅಭಿಪ್ರಾಯವು ಸಾಕ್ಷಿಯಾಗಿ ‘ಜೆಡ್'ನ ವರ್ತನೆಯಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದ್ದು ಅಷ್ಟನ್ನು ಮೀರಿರದಿದ್ದಿದ್ದರೆ, ‘ಎ'ನು ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತಾನೆ.

(ಬಿ) ಆದರೆ “ಆ ಅಧಿವಿಚಾರಣೆಯಲ್ಲಿ ‘ಜೆಡ್'ನು ಹೇಳಿದ್ದನ್ನು ನಾನು ನಂಬುವುದಿಲ್ಲ, ಏಕೆಂದರೆ ‘ಜೆಡ್'ನು ನಿಜ ಹೇಳುವವನಲ್ಲ ಎಂದು ನನಗೆ ಗೊತ್ತು” ಎಂದು ‘ಎ'ನು ಹೇಳಿದರೆ, ಅವನು ಈ ಅಪವಾದದ ವ್ಯಾಪ್ತಿಗೆ ಒಳಪಡುವುದಿಲ್ಲ. ಏಕೆಂದರೆ ‘ಜೆಡ್'ನ ಚಾರಿತ್ರ್ಯವನ್ನು ಕುರಿತ ಅವನ ಅಭಿಪ್ರಾಯವು ಸಾಕ್ಷಿಯಾಗಿರುವ ‘ಜೆಡ್'ನ ವರ್ತನೆಯ ಮೇಲೆ ಆಧಾರಿತವಾದುದಾಗಿಲ್ಲ.

*ಅಪವಾದ 6.- ಸಾರ್ವಜನಿಕ ಪ್ರದರ್ಶನದ ಗುಣಾವಗುಣ.* ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಯಾವ ಪ್ರದರ್ಶನವನ್ನು ಪ್ರಸ್ತುತಪಡಿಸಲಾಯಿತೋ ಆ ಯಾವುದೇ ಪ್ರದರ್ಶನದ ಗುಣಾವಗುಣಗಳಿಗೆ ಸಂಬಂಧಿಸಿದಂತೆ ಅಥವಾ ಅಂಥ ಪ್ರದರ್ಶನದಲ್ಲಿ ಆ ಕರ್ತೃವಿನ ಚಾರಿತ್ರ್ಯವು ಕಂಡುಬರುವಷ್ಟು ಮಟ್ಟಿಗೆ ಮಾತ್ರ, ಆದರೆ ಅಷ್ಟನ್ನು ಮೀರದೆ, ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಸದ್ಭಾವನೆಯಿಂದ ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯವು ಮಾನಹಾನಿಯಾಗುವುದಿಲ್ಲವೆಂದಾಗುತ್ತದೆ.

*ವಿವರಣೆ.-* ಪ್ರದರ್ಶನವನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಸ್ಪಷ್ಟವಾಗಿ ಆಗಲಿ ಅಥವಾ ಹಾಗೆ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಸ್ತುತಪಡಿಸಲಾಗಿದೆಯೆಂದು ಕರ್ತೃವಿನ ಯಾವ ಕಾರ್ಯಗಳಿಂದ ಇಂಗಿತವಾಗುತ್ತದೋ ಆ ಕಾರ್ಯಗಳಿಂದಲೂ ಪ್ರಸ್ತುತಪಡಿಸಬಹುದು.

*ದೃಷ್ಟಾಂತಗಳು*

(ಎ) ಒಂದು ಪುಸ್ತಕವನ್ನು ಪ್ರಕಟಣೆ ಮಾಡುವ ವ್ಯಕ್ತಿಯು ಆ ಪುಸ್ತಕವನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಸ್ತುತಪಡಿಸುತ್ತಾನೆ.

(ಬಿ) ಸಾರ್ವಜನಿಕರ ಮುಂದೆ ಭಾಷಣ ಮಾಡುವ ವ್ಯಕ್ತಿಯು ತನ್ನ ಭಾಷಣವನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಸ್ತುತಪಡಿಸುತ್ತಾನೆ.

(ಸಿ) ಸಾರ್ವಜನಿಕ ರಂಗಸ್ಥಳದಲ್ಲಿ ಕಾಣಿಸಿಕೊಳ್ಳುವ ನಟನು ಅಥವಾ ಗಾಯಕನು ತನ್ನ ಅಭಿನಯವನ್ನು ಅಥವಾ ಗಾಯನವನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಸ್ತುತಪಡಿಸುತ್ತಾನೆ.

(ಡಿ) ‘ಜೆಡ್'ನು ಪ್ರಕಟಿಸಿದ ಪುಸ್ತಕವನ್ನು ಕುರಿತು ‘ಎ'ನು ಹೀಗೆ ಹೇಳುತ್ತಾನೆ. “ಜೆಡ್'ನ ಪುಸ್ತಕವು ಅರ್ಥಹೀನವಾಗಿದೆ. ‘ಜೆಡ್'ನು ದುರ್ಬಲ ಮನಸ್ಸಿನವನೆಂದೇ ಕಾಣುತ್ತದೆ. ‘ಜೆಡ್'ನ ಪುಸ್ತಕವು ಅಸಭ್ಯವಾದುದಾಗಿದೆ; ಅವನು ಕಲುಷಿತ ಮನಸ್ಸಿನವನೆಂದೇ ಕಾಣುತ್ತದೆ.” ‘ಎ'ನು ಈ ಅಭಿಪ್ರಾಯವನ್ನು ಸದ್ಭಾವನೆಯಿಂದ ಹೇಳಿದ್ದರೆ ಮತ್ತು ಅವನ ಅಭಿಪ್ರಾಯವು ‘ಜೆಡ್'ನ ಪುಸ್ತಕದಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರ, ಅಷ್ಟನ್ನು ಮೀರದೆ ‘ಜೆಡ್'ನ ಚಾರಿತ್ರ್ಯಕ್ಕೆ ಸಂಬಂಧಿಸಿದ್ದರೆ ‘ಎ'ನು ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತಾನೆ.

(ಇ) ಆದರೆ “ ‘ಎನು, ‘ಜೆಡ್‌ನ ಪುಸ್ತಕವು ಅರ್ಥಹೀನದ್ದು ಅಸಭ್ಯದ್ದಾಗಿರುವುದರಿಂದ ನನಗೆ ಸೋಜಿಗವನ್ನುಂಟು ಮಾಡುವುದಿಲ್ಲ. ಜೆಡ್‌ನು ದುರ್ಬಲ ಮನಸ್ಸಿನವನು ಮತ್ತು ಸ್ವೇಚ್ಛಾ ಪ್ರವೃತ್ತಿಯವನು” ಎಂದು ಹೇಳಿದರೆ ಎನು ಈ ಅಪವಾದದ ವ್ಯಾಪ್ತಿಗೆ ಒಳಪಡುವುದಿಲ್ಲ. ಏಕೆಂದರೆ ಜೆಡ್‌ನ ಚಾರಿತ್ರ್ಯವನ್ನು ಕುರಿತು ಅವನು ವ್ಯಕ್ತಪಡಿಸಿದ ಅಭಿಪ್ರಾಯವು ಜೆಡ್‌ನ ಪುಸ್ತಕದ ಮೇಲೆ ಆಧಾರಿತವಾಗಿಲ್ಲ.

*ಅಪವಾದ 7.- ಇನ್ನೊಬ್ಬನ ಮೇಲೆ ಕಾನೂನುಬದ್ಧ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಅವನನ್ನು ಕುರಿತು ಸದ್ಭಾವನೆಯಿಂದ ಮಾಡಿದ ಖಂಡನೆ.* ಇನ್ನೊಬ್ಬ ವ್ಯಕ್ತಿಯ ಮೇಲೆ ಕಾನೂನಿನಿಂದ ಪ್ರದತ್ತವಾದ ಅಥವಾ ಆ ಇನ್ನೊಬ್ಬನ ಜೊತೆ ಮಾಡಿಕೊಂಡ ಕಾನೂನುಬದ್ಧ ಕರಾರಿನಿಂದ ಉದ್ಭವಿಸಿದ ಯಾವುದೇ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಆ ಇನ್ನೊಬ್ಬ ವ್ಯಕ್ತಿಯ ವರ್ತನೆಯನ್ನು ಕುರಿತು ಅಂಥ ಕಾನೂನುಬದ್ಧ ಅಧಿಕಾರಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಸದ್ಭಾವನೆಯಿಂದ ಯಾವುದೇ ಖಂಡನೆಯನ್ನು ಮಾಡುವುದು ಮಾನಹಾನಿಯೆಂದಾಗುವುದಿಲ್ಲ.

## *ದೃಷ್ಟಾಂತ*

ಸಾಕ್ಷಿಯ ಅಥವಾ ನ್ಯಾಯಾಲಯದ ಅಧಿಕಾರಿಯ ವರ್ತನೆ ಕುರಿತು ನ್ಯಾಯಾಧೀಶರು ಸದ್ಭಾವನೆಯಿಂದ ಖಂಡಿಸುವುದು; ತನ್ನ ಆದೇಶಕ್ಕೆ ಅಧೀನರಾದವರನ್ನು ಕುರಿತು ಇಲಾಖಾ ಮುಖ್ಯಸ್ಥನು ಸದ್ಭಾವನೆಯಿಂದ ಖಂಡಿಸುವುದು; ಇತರ ಮಕ್ಕಳ ಎದುರು ತನ್ನ ಮಗುವನ್ನು ತಂದೆ ತಾಯಿಯು ಸದ್ಭಾವನೆಯಿಂದ ಖಂಡಿಸುವುದು; ತಂದೆ ತಾಯಿಯಿಂದ ಅಧಿಕಾರವನ್ನು ಪಡೆದಿರುವ ಉಪಾಧ್ಯಾಯನು ಇತರ ವಿದ್ಯಾರ್ಥಿಗಳ ಎದುರು ಆ ವಿದ್ಯಾರ್ಥಿಯನ್ನು ಸದ್ಭಾವನೆಯಿಂದ ಖಂಡಿಸುವುದು; ಸೇವೆಯಲ್ಲಿ ವ್ಯತ್ಯಯ ಉಂಟು ಮಾಡಿದ್ದಕ್ಕಾಗಿ ಯಜಮಾನನು ಸೇವಕನನ್ನು ಸದ್ಭಾವನೆಯಿಂದ ಖಂಡಿಸುವುದು; ತನ್ನ ಬ್ಯಾಂಕಿನ ಸರಾಫನನ್ನು ಸರಾಫನಾಗಿ ಅವನ ವರ್ತನೆಯ ಬಗ್ಗೆ ಬ್ಯಾಂಕರನು ಸದ್ಭಾವನೆಯಿಂದ ಖಂಡಿಸುವುದು ಇವೆಲ್ಲ ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತವೆ.

*ಅಪವಾದ 8.- ಅಧಿಕೃತ ವ್ಯಕ್ತಿಯ ಮುಂದೆ ಸದ್ಭಾವನೆಯಿಂದ ಆಪಾದನೆ ಮಾಡುವುದು.* ಯಾರೇ ವ್ಯಕ್ತಿಯ ವಿರುದ್ಧ ಆಪಾದನೆಯನ್ನು ಆ ಆಪಾದನೆಯ ವಿಷಯಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯ ಮೇಲೆ ಕಾನೂನುಬದ್ಧ ಅಧಿಕಾರ ಹೊಂದಿರುವ ಯಾರೇ ವ್ಯಕ್ತಿಯ ಮುಂದೆ ಸದ್ಭಾವನೆಯಿಂದ ಮಾಡುವುದು ಮಾನಹಾನಿಯೆನಿಸುವುದಿಲ್ಲ.

*ದೃಷ್ಟಾಂತ*

'ಎ'ನು ಮ್ಯಾಜಿಸ್ಟ್ರೇಟನ ಮುಂದೆ 'ಜೆಡ್'ನ ಬಗ್ಗೆ ಸದ್ಭಾವನೆಯಿಂದ ಆಪಾದನೆ ಮಾಡಿದರೆ; ಸೇವಕನಾಗಿರುವ 'ಜೆಡ್'ನ ವರ್ತನೆ ಕುರಿತು 'ಎ'ನು 'ಜೆಡ್'ನ ಯಜಮಾನನ ಮುಂದೆ ಸದ್ಭಾವನೆಯಿಂದ ದೂರಿದರೆ; ಮಗು 'ಜೆಡ್'ನ ವರ್ತನೆ ಕುರಿತು 'ಎ'ನು 'ಜೆಡ್'ನ ತಂದೆಗೆ ದೂರಿದರೆ, ಅವನು ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತಾನೆ.

*ಅಪವಾದ 9.- ಒಬ್ಬ ವ್ಯಕ್ತಿಯು ತನ್ನ ಅಥವಾ ಇತರರ ಹಿತಾಸಕ್ತಿಗಳ ರಕ್ಷಣೆಗಾಗಿ ಸದ್ಭಾವನೆಯಿಂದ ಮಾಡಿದ ಆರೋಪ.* ಇನ್ನೊಬ್ಬ ವ್ಯಕ್ತಿಯ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಮಾಡಿದ ಆರೋಪವು, ಆ ಆರೋಪವನ್ನು ಮಾಡುವ ವ್ಯಕ್ತಿಯ ಅಥವಾ ಯಾರೇ ಇತರ ವ್ಯಕ್ತಿಯ ಹಿತಾಸಕ್ತಿಯ ರಕ್ಷಣೆಗಾಗಿ ಅಥವಾ ಸಾರ್ವಜನಿಕ ಹಿತಕ್ಕಾಗಿ ಮಾಡಿದ್ದರೆ ಅದು ಮಾನಹಾನಿಯೆಂದಾಗುವುದಿಲ್ಲ.

*ದೃಷ್ಟಾಂತಗಳು*

(ಎ) ಅಂಗಡಿಯ ಮಾಲೀಕನಾದ 'ಎ'ನು ತನ್ನ ವ್ಯವಹಾರವನ್ನು ನೋಡಿಕೊಳ್ಳುವ 'ಬಿ'ನಿಗೆ ಹೀಗೆ ಹೇಳುತ್ತಾನೆ. "ಜೆಡ್'ನು ನಗದು ಹಣ ಕೊಟ್ಟ ಹೊರತು ಅವನಿಗೆ ಮಾರಾಟ ಮಾಡಬೇಡ. ಏಕೆಂದರೆ ಅವನ ಪ್ರಾಮಾಣಿಕತೆಯ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿಲ್ಲ." 'ಎ'ನು ತನ್ನ ಸ್ವಂತ ಹಿತಾಸಕ್ತಿಯ ರಕ್ಷಣೆಗಾಗಿ ಸದ್ಭಾವನೆಯಿಂದ 'ಜೆಡ್'ನ ಬಗ್ಗೆ ಈ ರೀತಿ ಆರೋಪ ಮಾಡಿದ್ದರೆ, 'ಎ'ನು ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತಾನೆ.

(ಬಿ) ತನ್ನ ವರಿಷ್ಠ ಅಧಿಕಾರಿಗೆ ವರದಿಯನ್ನು ಮಾಡುವಾಗ 'ಎ'ನೆಂಬ ಮ್ಯಾಜಿಸ್ಟ್ರೇಟನು 'ಜೆಡ್'ನ ಚಾರಿತ್ರ್ಯ ಕುರಿತು ಆರೋಪ ಮಾಡುತ್ತಾನೆ. ಇಲ್ಲಿ ಆ ಆರೋಪವನ್ನು ಸದ್ಭಾವನೆಯಿಂದ ಮತ್ತು ಸಾರ್ವಜನಿಕ ಒಳಿತಿಗಾಗಿ ಮಾಡಿದ್ದರೆ, 'ಎ'ನು ಈ ಅಪವಾದದ ವ್ಯಾಪ್ತಿಗೆ ಒಳಪಡುತ್ತಾನೆ.

*ಅಪವಾದ 10.- ಯಾರಿಗೆ ಎಚ್ಚರಿಕೆ ಕೊಡಲಾಗಿದೆಯೋ ಅವನ ಒಳಿತಿಗಾಗಿ ಅಥವಾ ಸಾರ್ವಜನಿಕ ಹಿತಕ್ಕೆಂದು ಉದ್ದೇಶಿಸಲಾದ ಎಚ್ಚರಿಕೆ.* ಒಬ್ಬ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯ ವಿರುದ್ಧ ಸದ್ಭಾವನೆಯಿಂದ ಎಚ್ಚರಿಕೆ ಕೊಡುವುದು ಮಾನಹಾನಿಯೆನಿಸುವುದಿಲ್ಲ: ಪರಂತು, ಹಾಗೆ ಯಾರಿಗೆ ಎಚ್ಚರಿಕೆ ಕೊಡಲಾಯಿತೋ ಆ ವ್ಯಕ್ತಿಯ ಹಿತವಾಗಲಿ ಅಥವಾ ಯಾರಲ್ಲಿ ಆ ವ್ಯಕ್ತಿಗೆ ಹಿತಾಸಕ್ತಿ ಇರುವುದೋ ಅವನ ಹಿತವಾಗಲಿ ಅಥವಾ ಸಾರ್ವಜನಿಕ ಹಿತವಾಗಲಿ ಅಂಥ ಎಚ್ಚರಿಕೆಯ ಉದ್ದೇಶವಾಗಿರಬೇಕು.

(2) ಇನ್ನೊಬ್ಬ ವ್ಯಕ್ತಿಗೆ ಮಾನಹಾನಿಯುಂಟು ಮಾಡುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಸಮುದಾಯ ಸೇವೆಯಿಂದಲೂ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಯಾರೇ ಬೇರೊಬ್ಬ ವ್ಯಕ್ತಿಗೆ ಮಾನಹಾನಿಕಾರಕವಾದುದೆಂದು ಗೊತ್ತಿದ್ದರೂ ಅಥವಾ ಹಾಗೆ ನಂಬಲು ಸರಿಯಾದ ಕಾರಣವಿದ್ದರೂ ಅಂಥ ಯಾವುದೇ ವಿಷಯವನ್ನು ಮುದ್ರಿಸಿದರೆ ಅಥವಾ ಕೆತ್ತಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಮಾನಹಾನಿಕಾರಕ ವಿಷಯವನ್ನು ಒಳಗೊಂಡ ಮುದ್ರಿತ ಅಥವಾ ಕೆತ್ತನೆಯ ಯಾವುದೇ ವಸ್ತುವನ್ನು, ಅದು ಅಂಥ ವಿಷಯವನ್ನು ಒಳಗೊಂಡಿದೆ ಎಂಬುದು ಗೊತ್ತಿದ್ದರೂ, ಮಾರಾಟ ಮಾಡುವ ಅಥವಾ ಮಾರಾಟಕ್ಕೆ ಇಡುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



*ಅಸಹಾಯಕ ಸ್ಥಿತಿಯಲ್ಲಿರುವ ವ್ಯಕ್ತಿಯ ಆರೈಕೆಗೆ ಅಥವಾ ಅವನ ಅಗತ್ಯಗಳನ್ನು ಪೂರೈಸಲು ಮಾಡಿಕೊಂಡ ಕರಾರಿನ ಭಂಗ*

**357. ಅಸಹಾಯಕ ಸ್ಥಿತಿಯಲ್ಲಿರುವ ವ್ಯಕ್ತಿಯ ಆರೈಕೆಗೆ ಅಥವಾ ಅವನ ಅಗತ್ಯಗಳನ್ನು ಪೂರೈಸಲು ಮಾಡಿಕೊಂಡ ಕರಾರಿನ ಭಂಗ.-** ಯಾರೇ ವ್ಯಕ್ತಿಯು, ಚಿಕ್ಕ ವಯಸ್ಸಿನ ಅಥವಾ ಅಸ್ವಸ್ಥಚಿತ್ತದ ಅಥವಾ ಕಾಯಿಲೆಯ ಅಥವಾ ದೈಹಿಕ ಅಶಕ್ತತೆಯ ಕಾರಣದಿಂದಾಗಿ ತನ್ನನ್ನು ತಾನೇ ರಕ್ಷಣೆ ಮಾಡಿಕೊಳ್ಳಲು ಅಥವಾ ತನ್ನದೇ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಅಸಹಾಯಕನಾಗಿರುವ ಅಥವಾ ಅಸಮರ್ಥನಾಗಿರುವ ಯಾರೇ ವ್ಯಕ್ತಿಗೆ ಆರೈಕೆ ಮಾಡಲು ಅಥವಾ ಅವನ ಅಗತ್ಯಗಳನ್ನು ಪೂರೈಸಲು ಕಾನೂನುಬದ್ಧವಾದ ಕರಾರಿನ ಮೂಲಕ ಬದ್ಧನಾಗಿದ್ದು, ಹಾಗೆ ಮಾಡಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ XX

### ನಿರಸನ ಮತ್ತು ಉಳಿಸುವಿಕೆ

**358. ನಿರಸನ ಮತ್ತು ಉಳಿಸುವಿಕೆ.-** (1) ಭಾರತ ದಂಡ ಸಂಹಿತೆ (1860ರ 45)ಯನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಸಂಹಿತೆಯ ನಿರಸನದಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಹಾಗೆ ನಿರಸನಗೊಂಡ ಸಂಹಿತೆಯ ಹಿಂದಿನ ಕಾರ್ಯಾಚರಣೆಗೆ ಅಥವಾ ಅದರ ಮೇರೆಗೆ ಯುಕ್ತವಾಗಿ ಮಾಡಲಾದ ಅಥವಾ ಬಾಧಿತಗೊಂಡ ಯಾವುದಾದರೂ ಒಂದರ ಹಿಂದಿನ ಕಾರ್ಯಾಚರಣೆಗೆ;

(ಬಿ) ಹಾಗೆ ನಿರಸನಗೊಂಡ ಸಂಹಿತೆಯ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಬಾಧ್ಯತೆ ಅಥವಾ ಹೊಣೆಗಾರಿಕೆಗೆ; ಅಥವಾ

(ಸಿ) ಹಾಗೆ ನಿರಸನಗೊಂಡ ಸಂಹಿತೆಯ ವಿರುದ್ಧ ಮಾಡಲಾದ ಯಾವುದೇ ಅಪರಾಧಗಳಿಗೆ ಸಂಬಂಧಿಸಿದಂತೆ ಗುರಿಯಾದ ಯಾವುದೇ ದಂಡನೆ ಅಥವಾ ಶಿಕ್ಷೆಗೆ; ಅಥವಾ

(ಡಿ) ಅಂಥ ದಂಡನೆ ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ ಅಥವಾ ಪರಿಹಾರಕ್ಕೆ; ಅಥವಾ

(ಇ) ಮೇಲೆ ಹೇಳಿದಂಥ ಯಾವುದೇ ದಂಡನೆ ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆ, ತನಿಖೆ ಅಥವಾ ಪರಿಹಾರಕ್ಕೆ ಮತ್ತು ಆ ಸಂಹಿತೆಯು ನಿರಸಿತವಾಗಿಲ್ಲದಿದ್ದರೆ ಹೇಗೋ ಹಾಗೆ ಹೂಡಬಹುದಾದ, ಮುಂದುವರಿಸಬಹುದಾದ ಅಥವಾ ಜಾರಿಗೊಳಿಸಬಹುದಾದ ಯಾವುದೇ ಅಂಥ ವ್ಯವಹರಣೆಗೆ ಅಥವಾ ಪರಿಹಾರಕ್ಕೆ ಮತ್ತು ವಿಧಿಸಬಹುದಾದ ಯಾವುದೇ ಅಂಥ ದಂಡನೆಗೆ

- ಬಾಧಕವಾಗತಕ್ಕದ್ದಲ್ಲ.

(3) ಅಂಥ ನಿರಸನ ಏನೇ ಇದ್ದರೂ, ಸದರಿ ಸಂಹಿತೆಯ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಸಂಹಿತೆಯ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(4) ಉಪಪ್ರಕರಣ (2)ರಲ್ಲಿರುವ ನಿರ್ದಿಷ್ಟ ವಿಷಯಗಳ ನಮೂದನೆಯು ನಿರಸನದ ಜಾರಿಗೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಅಥವಾ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

---

ಡಾ. ರಾಜೀವ್ ಮಣಿ

ಭಾರತ ಸರ್ಕಾರದ ಕಾರ್ಯದರ್ಶಿ

Dr. Rajiv Mani
Secretary to Government of India

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH